ಕಸ್ತೂರಿ

ಡಿಸೆಂಬರ್ 1988 ರೂ. 3-00




PHILIPS
ಜೊತೆಗಿರೆ
ಫಿಲಿಪ್ಸ್ ಸಾಧನ
ಸುಖಮಯ ಜೀವನ
ಫಿಲಿಪ್ಸ್ ಗೃಹೋಪಯೋಗಿ ಸಾಧನಗಳು
ನಿಮ್ಮ ಅನುಕೂಲತೆ ಹಾಗೂ ಸುಖಕ್ಕಾಗಿ ವಿಶೇಷವಾಗಿ ರಚಿತವಾದ, ವಿನ್ಯಾಸಪಡೆದ — ಫಿಲಿಪ್ಸ್ ಸಾಧನಗಳು ನಿಮ್ಮ ಕೆಲಸವನ್ನು ಉತ್ತಮಗೊಳಿಸುತ್ತವೆ, ತ್ವರಿತಗೊಳಿಸುತ್ತವೆ, ಇದರಿಂದ ನಿಮಗಾಗಿ ಮತ್ತು ನಿಮ್ಮ ಪರಿವಾರಕ್ಕಾಗಿ ಅಧಿಕ ಸಮಯ ಉಳಿಯುವುದು. ಫಿಲಿಪ್ಸ್ ಅಯರ್ನ್ ಬಟ್ಟೆಗಳನ್ನು ಇಸ್ತ್ರಿಮಾಡುವುದನ್ನು ಸುಖಮಯಗೊಳಿಸುತ್ತದೆ. ಫಿಲಿಪ್ಸ್ ಮಿಕ್ಸರ್ ಗ್ರೈಂಡರ್ ಮತ್ತು ಸಲಕರಣೆಗಳು ಅಡುಗೆ ಮಾಡುವುದನ್ನು ಆನಂದಕರ ಅನುಭವವನ್ನಾಗಿಸುತ್ತವೆ. ಫಿಲಿಪ್ಸ್ ಸಿಟ್ರಸ್ ಪ್ರೆಸ್‌ದಿಂದ ನಿಮಿಷಗಳಲ್ಲಿ ನೀವು ಹಣ್ಣಿನ ರಸ ಪಡೆಯಬಹುದು. ಅದರಿಂದ ಉತ್ತಮ ರುಚಿಯೊಡನೆ ಆರೋಗ್ಯಕ್ಕೂ ಲಾಭ. ಫಿಲಿಪ್ಸ್ ವಾಲ್ ಹಾಗೂ ಟೇಬಲ್ ಕ್ಲಾಕ್‌ಗಳು ಸಮಯವನ್ನು ಸುಂದರಗೊಳಿಸುತ್ತವೆ.
ಉತ್ತಮ ಜೀವನಕ್ಕಾಗಿ–ಫಿಲಿಪ್ಸ್‌ನಲ್ಲಿ ವಿಶ್ವಾಸವಿಡಿ.
CLARION/8/P/30

ಕಸ್ತೂರಿ

ಕನ್ನಡ ಡೈಜೆಸ್ಟ್

ವ್ಯವಸ್ಥಾಪಕ ಸಂಪಾದಕ:
ಕೆ. ಶಾಮರಾವ್

ಸಂಪಾದಕ:
ಆರ್.ಎ. ಉಪಾಧ್ಯ

ಸಹಸಂಪಾದಕ:
ಮಾಧವ ನಾ. ಮಹಿಷಿ

ಸಹಾಯಕ ಸಂಪಾದಕ:
ಎಸ್.ಕೆ. ಶಾಮಸುಂದರ

ಮುಖಪುಟ:
ಕಿತ್ತೂರು ರಾಣಿ ಚೆನ್ನಮ್ಮ

ಕಲೆ:
ಬಸವರಾಜ ಮುಗಳಿ

ಬೆಳಕಿಂಡಿ

● ಶುದ್ಧ ಹೃದಯರು ಧನ್ಯರು. ಏಕೆಂದರೆ ಅವರು ದೇವರನ್ನೇ ನೋಡುತ್ತಾರೆ.

- ಯೇಸು

● ಇತರರು ಏನನ್ನು ಶಾಸನಭಯದಿಂದ ಮಾಡುತ್ತಾರೋ ಅದನ್ನು ಯಾವ ಭಯ, ಬಲಾತ್ಕಾರವೂ ಇಲ್ಲದೆ ಮಾಡುವಂತೆ ವೇದಾಂತ ಕಲಿಸುತ್ತದೆ.

● ಮನುಷ್ಯನು ಹೆಚ್ಚು ಹೆಚ್ಚು ವಿಷಯಗಳ ಬಗ್ಗೆ ನಾಚಿಕೆಪಟ್ಟಂತೆಲ್ಲ ಹೆಚ್ಚು ಹೆಚ್ಚು ಗೌರವಶಾಲಿಯಾಗುತ್ತಾನೆ.

- ಬರ್ನಾರ್ಡ್ ಶಾ

● ರಾಷ್ಟ್ರದ ಸಂಪತ್ತು ಚಿನ್ನ, ಬೆಳ್ಳಿ ಅಲ್ಲ. ನಿರೋಗಿಗಳೂ, ದೃಢಕಾಯರೂ, ಹರ್ಷಚಿತ್ತರೂ ಆದ ಪ್ರಜೆಗಳೇ ನಿಜವಾದ ರಾಷ್ಟ್ರದ ಸಂಪತ್ತು.

- ರಸ್ಕಿನ್

● ಭಕ್ತನ ಮನಸ್ಸು ಜೇನುನೊಣದಂತೆ. ಅದು ಕೇವಲ ಹೂವಿನ ಮೇಲೆ ಮಾತ್ರ ಕುಳಿತು ಮಧು ಹೀರುತ್ತದೆ. ಲೌಕಿಕನ ಮನಸ್ಸು ನೊಣದಂತೆ ಸಿಕ್ಕ ಸಿಕ್ಕಲೆಲ್ಲ ಕೂಡುತ್ತದೆ.

- ರಾಮಕೃಷ್ಣ ಪರಮಹಂಸ

● ನಿರಾಸೆಪಡಬೇಡ. ಒಂದು ವೇಳೆ ನಿರಾಶನಾದರೂ ಮಾಡುವ ಕೆಲಸ ಬಿಡಬೇಡ.

- ಎಡ್ಮಂಡ್ ಬರ್ಕ್

ಚಂದಾ ದರಗಳು:

ಬಿಡಿ ಸಂಚಿಕೆ	...	3=00
1 ವರ್ಷಕ್ಕೆ	ಅಂಚೆಸೇರಿ	34=00
2 ವರ್ಷಕ್ಕೆ	...	65=00
3 ವರ್ಷಕ್ಕೆ	...	100=00

KASTURI, DECEMBER 1988

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ 1ನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳ 5ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಚೇರಿಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರ ವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಪ್ರತಿ ಚಿಂತನ

ಬಡತನದ ಅರ್ಥಕಾರಣ

ನವೆಂಬರ್ ಕಸ್ತೂರಿಯಲ್ಲಿ ಪ್ರಕಟಿಸಿರುವ ಶ್ರೀ ಎಸ್.ಪಿ. ಶ್ಯಾನಭಾಗ ರವರ 'ಬಡವನ ಮಾಡಯ್ಯಾ ತಂದೆ'- ಮೋಲ್ನೋಟಕ್ಕೆ ಹಾಸ್ಯ ಲೇಖನದಂತೆ ಕಂಡು ಬಂದರೂ, ಇಂದಿನ ಸಾಮಾಜಿಕ ವ್ಯವಸ್ಥೆ ರಾಜಕೀಯಕ್ಕೆ ಸಿಕ್ಕಿ ಹೇಗಾಗಿದೆಯೆಂದು ಗಾಢವಾಗಿ ಯೋಜಿಸುವಂತೆ ಮಾಡುತ್ತದೆ.

ಅವರು ಬರೆಯುತ್ತಾ "ಬಡವ, ಭೂಮಿಗೆ ಅವತರಿಸುವಾಗಲೇ ಅವನ ಅಮ್ಮನಿಗೆ ಹೆರಿಗೆ ಭತ್ಯ ಲಭ್ಯ" ಎಂದಿದ್ದಾರೆ. ಅದಕ್ಕೂ ಮೊದಲು 'ತಾಳೀ ಭಾಗ್ಯ' ಯೋಜನೆಯಡಿ ಪುಕ್ಕಟೆ ತಾಳಿ ಲಭ್ಯವಾಗಿರುವುದನ್ನು ಮರೆತ್ತಿದ್ದಾರೆ. ಇರಲಿ. ಉತ್ತಮ ಶೈಲಿಯ ಅವರ ಲೇಖನ ನನಗೆ ಬಹಳ ಮೆಚ್ಚಿಗೆಯಾಯ್ತು. ಅವರಿಗೂ ಲೇಖನವನ್ನು ಪ್ರಕಟಿಸಿದ ನಿಮಗೂ ಧನ್ಯವಾದಗಳು.

ಬಡವರ ಅಜ್ಞಾನವನ್ನು ದೂರಮಾಡಿ. ಅವರ ಕುಲಕಸುಬುಗಳನ್ನು ಪ್ರೋತ್ಸಾಹಿಸಿ, ಮಾರ್ಗ ದರ್ಶನ ಮಾಡುತ್ತಾ ಅವರ ಜೀವನ ಮಟ್ಟ ಸುಧಾರಿಸುವುದಕ್ಕೆ ಯತ್ನಿಸುವ ಬದಲು, ಅವರಿಗೆ ರಿಯಾಯಿತಿ ದರದಲ್ಲಿ ರೇಶನ್, ಬಟ್ಟೆ ಬರೆ ಇತರೇ ಭತ್ಯೆಗಳನ್ನು ಕೊಡುತ್ತಾ- ನಾನಾ ರೀತಿಯ ಸಾಲಗಳನ್ನು ಕೊಡುತ್ತಾ. ಅವರು ಸೋಮಾರಿಗಳಾಗಿ, ಸಾಲಗಾರರಾಗಿ, ಸಾಲ ತೀರಿಸದೆ ವಂಚಿಸುವುದರಲ್ಲಿ ಸಫಲರಾಗುವಂತೆ, ಎಂದಿಗೂ ಬಡವರಾಗೇ ಉಳಿಯುವಂತೆ ಮಾಡಿರುವ ಈ ಯೋಜನೆಗಳಿಂದ ಬಡವರ ಉದ್ಧಾರ ಕನಸಿನ ಮಾತು. ಇದಕ್ಕೆ ಯಾರು ಹೊಣೆ ಎಂದು ಪ್ರತ್ಯೇಕ ಹೇಳಬೇಕಾಗಿಲ್ಲ, ಅಲ್ಲವೇ?

ಮೈಸೂರು ಹೆಚ್.ಆರ್. ವಿಮಲಮ್ಮ

ಕಾಲಿಲ್ಲದಿದ್ದರೂ....

ಶ್ರೀ ಎಸ್.ಎಚ್. ಪ್ಯಾಟಿಯವರು ಬರೆದ 'ಕಾಲಿಲ್ಲದಿದ್ದರೂ ಊನವಲ್ಲ' ಲೇಖನ ಉತ್ತಮವಾಗಿದೆ. ಒಂದು ಕಾಲನ್ನು ಕಳೆದು ಕೊಂಡ ನಂತರವೂ ಮನಸ್ಸಿನ ಸ್ಥೈರ್ಯವನ್ನು ಎಳ್ಳಷ್ಟೂ ಬಿಟ್ಟು ಕೊಡದೆಯೇ ತಾನು ಸಾಮಾನ್ಯ ಮನುಷ್ಯನಂತೆಯೇ ಬಾಳಬಲ್ಲೆ ಎಂಬುದನ್ನು ಜಿತೇಂದ್ರಸಿಂಗ್ ಸಿದ್ಧಪಡಿಸಿದ್ದಾರೆ. ಅಂಗವಿಕಲರಿಗೆ ಸಹಾನುಭೂತಿ ನೀಡುವುದರ ಬದಲು ಸಕ್ರಿಯ ಪ್ರೋತ್ಸಾಹವೀಯಬೇಕು.

ಧಾರವಾಡ ರಮಾ ಸೀತೆಮನೆ

ನಾವೆಷ್ಟು ಹಿಂದುಳಿದಿದ್ದೇವೆ?

ಶಶಿಪ್ರಭಾರವರ 'ನಡೆ ಮುಂದೆ...ನಡೆ ಮುಂದೆ...'(ನವೆಂಬರ್ 'ಕಸ್ತೂರಿ') ಓದಿದಾಗ ನನಗೆ ತಾನೇ ಈ ಪ್ರಶ್ನೆ ಕೇಳಿಕೊಳ್ಳಬೇಕೆನಿಸಿತು. ಕಂದಾಚಾರಗಳ ಕೂಪದಿಂದ ಹೊರಬರಲು ಹಿಂಜರಿಯುತ್ತಿರುವ ಭಾರತೀಯ ಮುಸ್ಲಿಂ ಸಮಾಜ ನಿಜಕ್ಕೂ ಉದ್ಧಾರವಾಗಬೇಕಿದ್ದರೆ ಹಿತಾಯಾರಂತಹ ನೂರಾರು ಸಾವಿರಾರು ತರುಣ ತರುಣಿಯರು ಹುಟ್ಟಿ ಬರಬೇಕೇನೋ! ಈ ಶತಮಾನದ ಮೊದಲರ್ಧದಲ್ಲಿ ತುಕರಸ್ಥಾನವನ್ನುದ್ಧರಿಸಿದ ಕಮಾಲ್ ಪಾಶ ಪುನರ್ಜನ್ಮ ತಳೆದರೆ ಮಾತ್ರ ಈ ಸಮಾಜ ಸುಧಾರಿಸಬಹುದು. ನೀವೆಷ್ಟು ಮುಂದೆಳೆದರೂ ಹಿಂದಕ್ಕೆ ಜಗ್ಗುವ ಶಕ್ತಿಗಳಿಗಳಿಗೆ ನಮ್ಮಲ್ಲೇನೂ ಕೊರತೆಯಿಲ್ಲ.

ಗುಲ್ಬರ್ಗ ಮಹಮ್ಮದ ಹನೀಫ್ ಮಕನಾದಾರ

ಸೋವಾನ ಸೋದರಿ

ಶ್ರೀ ಎಂ.ಎಸ್. ಶ್ರೀರಾಮ್ ಅವರು ಅನುವಾದಿಸಿರುವ ಮೇರಿ ಪ್ರುಜ್ಮನೋವಾರ 'ಸೋವಾನ ಸೋದರಿ' ಕಥೆ ಜೀವನ, ಮರಣಗಳ ಕುರಿತು ಮಕ್ಕಳ ವಿಚಾರಗಳನ್ನು ದಾಖಲಿಸುತ್ತಾ, ಓದುಗರ ಹೃದಯವನ್ನು ತಟ್ಟುತ್ತದೆ.

ಹಂಪಸನದುರ್ಗ ಬಿ.ಆರ್. ತುಬಾಕಿ

ಬಂಗಾರದ ಹುಡುಗಿ

ಪ್ರಶಸ್ತಿ, ಕೀರ್ತಿ ಮತ್ತು ಅಪಾರ ಹಣವನ್ನು ಎಳೆಯವಯಸ್ಸಿನಲ್ಲೇ ತನ್ನದಾಗಿಸಿಕೊಂಡಿರುವ 'ಬಂಗಾರದ ಹುಡುಗಿ' ಸ್ಟೆಫಿಯ ಬಗೆಗಿನ ವಿವರಗಳು ಸಾಧನೆಯ ಬೆನ್ನು ಹತ್ತುವ ಕ್ರೀಡಾಪಟುಗಳಿಗೆ ಮಾರ್ಗದರ್ಶನವಾಗಬೇಕು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ವೇತ್ತಳಾದರೂ ಇನ್ನೂ ಕಲಿಯಬೇಕು, ಎಲ್ಲವನ್ನೂ ಕರಗತ ಮಾಡಿಕೊಳ್ಳಬೇಕು ಎಂಬ ಸ್ಟೆಫಿಯ ಹಂಬಲ ಅನುಕರಣೀಯ. ಇಂತಹ ಮನೋಧರ್ಮವನ್ನು ನಮ್ಮ ಯುವ ಆಟಗಾರರು ಏಕೆ ಬೆಳೆಸಿಕೊಳ್ಳುವುದಿಲ್ಲ?

ಶಿವಮೊಗ್ಗ ಪಿ.ಡಿ. ದೀಪಕ್

ಕೃಷಿ ವಿಜ್ಞಾನ

ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ|| ಜೆ.ಪಿ. ಗೌಡ ಅವರ ಸಂದರ್ಶನ ಲೇಖನ ಆಧುನಿಕ ವ್ಯವಸಾಯದಲ್ಲಿ ನಂಬಿಕೆ ಇಟ್ಟ ರೈತಾಪಿ ವರ್ಗಕ್ಕೆ ಅತ್ಯಂತ ಉಪಯುಕ್ತ ಮಾಹಿತಿಗಳನ್ನು ನೀಡುತ್ತದೆ.

ಕೃಷಿ ವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳನ್ನು ಸರಳಗನ್ನಡದಲ್ಲಿ ನಮ್ಮ ರೈತರಿಗೆ ಅರಿವು ಮಾಡಿಕೊಡುವ ಅವಶ್ಯಕತೆ ಇಂದು ಹೆಚ್ಚಾಗಿದೆ. ಪತ್ರಿಕೆಗಳು ಈ ದಿಸೆಯಲ್ಲಿ ಹೆಚ್ಚಿನ ಆಸಕ್ತಿ ವಹಿಸಬೇಕು. ಉತ್ತರ ಕರ್ನಾಟಕದ ಮಣ್ಣು, ನೀರು, ಹಾಗೂ ತತ್ಸಂಬಂಧವಾದ ವ್ಯವಸಾಯ ಪದ್ಧತಿಯ ಮೇಲೆ ಲೇಖನ ಬೆಳಕು ಚೆಲ್ಲಿದೆ. ಕೃಷಿ ವಿಶ್ವವಿದ್ಯಾಲಯದ ಸಂಶೋಧನೆಗಳು ಕುಲಪತಿಗಳ ಮಾರ್ಗದರ್ಶನದಲ್ಲಿ ಮೆತಳೆದು ರೈತರಿಗೆ ವರದಾನವಾಗಲಿ.

ಮಳ (ಗುಲ್ಬರ್ಗ) ವಿಜಯೇಂದ್ರ ಕುಲಕರ್ಣಿ

ಸೂರ್ಯ

ನವೆಂಬರ್ ಸಂಚಿಕೆಯಲ್ಲಿ ಪ್ರಕಟವಾದ "ಸೂರ್ಯನಿಗೆಂಬೆ ನಮೋ ನಮೋ" ಎಲ್ಲರಿಗೂ ತಿಳಿದಿರುವ ಅಪ್ಪಟ ವೈಜ್ಞಾನಿಕ ವಿಚಾರವಾದರೂ ಎ.ಪಿ. ರಾಧಾಕೃಷ್ಣರವರ ಕಾವ್ಯಮಯ ಶೈಲಿ, ವಿಷಯವನ್ನು ಅವರು ನಿರೂಪಿಸುವ ರೀತಿ ಸ್ಪಷ್ಟವಾಗಿತ್ತು. ಖಗೋಳ ಶಾಸ್ತ್ರಕ್ಕೆ ಸಂಬಂಧಿಸಿದ ಮತ್ತಷ್ಟು ವಿಚಾರಗಳು ಅವರ ಲೇಖನಿಯಿಂದ ಕಾವ್ಯಾತ್ಮಕವಾಗಿ ಮೂಡಿ ಬರಲೆಂದು ಆಶಿಸುತ್ತೇನೆ.

(ಅಮರಾವತಿಯ ಶ್ರೀ ಭಂಡಾರಕರ ಎಂಬುವವರು ಈ ಲೇಖನದಲ್ಲಿ ಸೂರ್ಯನ ವಯಸ್ಸಿಗೆ ಸಂಬಂಧಪಟ್ಟಂತೆ ಲೋಪವನ್ನು ಕಂಡಿದ್ದಾರೆ. 13ನೆಯ ಪುಟದ ಕೊನೆಯ ಪ್ಯಾರಾದಲ್ಲಿ "ಐವತ್ತು ಕೋಟಿ ವರ್ಷಗಳ ಹಿಂದೆ ಮೈದಾಳಿದ ನಮ್ಮ ಸೂರ್ಯನಿಗಿಂದು ನಡುವಯಸ್ಸು" ಎಂದು ಬರೆಯಲಾಗಿದೆ. ಅರ್ಥಾತ್ ನಮ್ಮ ಸೂರ್ಯ ಹುಟ್ಟಿ 50 ಕೋಟಿ ವರ್ಷಗಳಾಯಿತೆಂದು ಲೇಖಕರ ಅಭಿಪ್ರಾಯ. ಇದು ತಪ್ಪು ಸೂರ್ಯ ಹುಟ್ಟಿ 500 ಕೋಟಿ ವರ್ಷಗಳಾಯಿತು ಎಂದು ಭಾಂಡಾರಕರರವರು ಹೇಳುತ್ತಾರೆ. ಆದರೆ ಖ್ಯಾತ ವಿಜ್ಞಾನ ಲೇಖಕ ಜಾರ್ಜ್ ಗ್ಯಾಮೋನ್‌ರವರ THE BIRTH AND DEATH OF THE SUN ಎಂಬ ಪುಸ್ತಕದಲ್ಲಿ ಸೂರ್ಯನನ್ನೊಳಗೊಂಡು ಎಲ್ಲ ನಕ್ಷತ್ರಗಳೂ 200 ಕೋಟಿ ವರ್ಷಗಳ ಹಿಂದೆ ಜನ್ಮ ತಳೆದವು ಎಂದು ಹೇಳಲಾಗಿದೆ.)

-ಸಂಪಾದಕ

'ಕರಿಮೆಣಸಿನ ರಾಣಿ'

ನವೆಂಬರ್ 'ಕಸ್ತೂರಿ' ಯಲ್ಲಿ ಆರ್.ಬಿ. ಶ್ಯಾನಭಾಗ ಅವರು ಕ್ರಿ.ಶ. 1562-1606ರ ವರೆಗೆ ಗೇರುಸೊಪ್ಪೆಯನ್ನಾಳಿದ ಚೆನ್ನ ಭೈರಾದೇವಿಯ ವ್ಯಕ್ತಿತ್ವವನ್ನು ವರ್ಣಿಸಿರುವದು ಉತ್ತಮವಾಗಿದೆ. ಪೋರ್ಚುಗೀಸರನ್ನು ತನ್ನ ರಾಜ್ಯದಿಂದ ಓಡಿಸಲು ಸ್ಥಳೀಯರ ಬೆಂಬಲ ಗಳಿಸಿದುದು ಹಾಗೂ ಪೋರ್ಚುಗೀಸರನ್ನು ಕೇವಲ ವ್ಯಾಪಾರ ಕ್ಷೇತ್ರಕ್ಕೆ ಸೀಮಿತಗೊಳಿಸಿದುದು ಆಕೆಯ ರಾಷ್ಟ್ರ ಪ್ರಜ್ಞೆ ಮತ್ತು ಸ್ವಾತಂತ್ರ್ಯದ ಅರಿವನ್ನು ವ್ಯಕ್ತಪಡಿಸುತ್ತದೆ. ಒಟ್ಟಿನಲ್ಲಿ ರಾಷ್ಟ್ರದ ವೀರಾಂಗನೆಯರ ಸಾಲಿಗೆ ಸೇರಿರುವ ಈ ಮಹಿಳೆಯ ಪರಿಚಯ ಮಾಡಿಕೊಡುವ ಈ ಲೇಖನ ಸಾಹಸವಾಗಿದೆ.

(ಈ ಲೇಖನದ ಲೇಖಕರ ಹೆಸರು ಆರ್.ಬಿ. ಶ್ಯಾನಭಾಗ' ಎಂದು ಬರೆದಿರುವುದನ್ನು ದಯವಿಟ್ಟು 'ಆರ್.ಜಿ. ಶ್ಯಾನಭಾಗ' ಎಂದು ತಿದ್ದಿಕೊಂಡು ಓದಬೇಕು. ಈ ಮುದ್ರಣ ದೋಷಕ್ಕಾಗಿ ವಿಷಾದಿಸುತ್ತೇವೆ. -ಸಂ.)

ಮೈಸೂರು ಹೆಚ್.ಎಸ್. ಉಪಾಧ್ಯಾಯ

ಕಸ್ತೂರಿ

ವರ್ಷ ಡಿಸೆಂಬರ್ ೧೯೮೮ ಸಂಚಿಕೆ ೪

ಕಿತ್ತುಕೊಳ್ಳುವ ಹಕ್ಕು

ಡಯೋಜಿನೀಸ್ ಒಬ್ಬ ತತ್ತ್ವಜ್ಞಾನಿ. ತುಂಬ ಸರಳವಾದ ಜೀವನ ಅವನದು. ವಾಸ ಒಂದು ಹಳೆಯ ಪಿಪಾಯಿಯಲ್ಲಿ!

ಒಂದು ಸುಂದರವಾದ ಬೆಳಗು. ಹಿತಕರವಾದ ಬಿಸಿಲಿಗೆ ಮೈಯೊಡ್ಡಿ ಏಕಾಂತವಾಗಿ ತತ್ತ್ವ ಚಿಂತನೆ ಮಾಡುತ್ತ ಅವನು ಬಯಲಿನಲ್ಲಿ ಕುಳಿತಿದ್ದ. ಅದೇ ವೇಳೆಗೆ ಅವನ ಭೇಟಿಗೆಂದು ಅಲೆಕ್ಸಾಂಡರ್ ಅಲ್ಲಿಗೆ ಬಂದ.

ಆಗ ಅಲೆಕ್ಸಾಂಡರನ ಉತ್ಕರ್ಷದ ದಿನಗಳು. ಸಮರದ ಗೆಲುವುಗಳು ಅವನ ತಲೆಯನ್ನಾ ವರಿಸಿದ್ದವು. ಗ್ರೀಸಿನ ಶ್ರೇಷ್ಠ ತತ್ತ್ವಜ್ಞಾನಿಯ ಬಳಿ ಬಾಲ್ಯದಲ್ಲಿ ವಿದ್ಯಾರ್ಜನೆ ಮಾಡಿದ ಅವನಿಗೆ ತತ್ತ್ವಜ್ಞಾನಿಗಳ ಬಗ್ಗೆ ವಿಶೇಷ ಗೌರವವಿದ್ದಿತು. ಅವನು ಡಯೋಜಿನೀಸ್‌ನ ಬಗ್ಗೆ ಕೇಳಿ ತಿಳಿದಿದ್ದ. ಕುತೂಹಲದಿಂದ ಬಂದಿದ್ದ.

ಎಳೆ ಬಿಸಿಲಿನ ಸುಖೋಷ್ಣವನ್ನು ಆಸ್ವಾದಿಸುತ್ತ ಕುಳಿತಿದ್ದ ಡಯೋಜಿನೀಸ್‌ಗೆ ಅಲೆಕ್ಸಾಂಡರ್ ತನ್ನ ಬಳಿ ಬಂದು ನಿಂತಿದ್ದು ಗೊತ್ತಾಯಿತು. ಆದರೂ ಅವನು ವಿಚಲಿತನಾಗಲಿಲ್ಲ. ನಿರ್ವಿಕಾರಾವಾಗಿ ಕುಳಿತೇ ಇದ್ದ. ಎದ್ದು ನಿಂತು, ದೇಶದ ದೊರೆಗೆ ಸಲ್ಲಲೇಬೇಕಾಗಿದ್ದ ಗೌರವ ವನ್ನು ಸಲ್ಲಿಸಲಿಲ್ಲ. ಅಷ್ಟೇಅಲ್ಲ. ಅಲೆಕ್ಸಾಂಡರನತ್ತ ಗಮನವನ್ನೂ ಹರಿಸಲಿಲ್ಲ.

ಅಲೆಕ್ಸಾಂಡರನೇ ಮೌನವನ್ನು ಮುರಿದ.

"ಡಯೋಜಿನೀಸ್, ನಾನು ಅಲೆಕ್ಸಾಂಡರ. ಈ ದೇಶದ ದೊರೆ. ಗ್ರೀಸಿನ ಶ್ರೇಷ್ಠ ತತ್ತ್ವಜ್ಞಾನಿ ಗಳಲೊಬ್ಬರಾದ ಅರಿಸ್ಟಾಟಲ್ ನನಗೆ ವಿದ್ಯಾಗುರು. ಇದರಿಂದಾಗಿ ಎಲ್ಲ ತತ್ತ್ವಜ್ಞಾನಿಗಳೂ ನನಗೆ ಗುರು ಸ್ವರೂಪರೆ, ನಿಮ್ಮ ಬಗ್ಗೆ ಕೇಳಿ ಭೇಟಿಗೆಂದು ನಾನೇ ಸ್ವತಃ ನಿಮ್ಮ ಬಳಿಗೆ ಬಂದಿದ್ದೇನೆ. ತಮಗೇನು ಬೇಕೋ ಕೇಳಿ ಕೇಳಿದ್ದನ್ನು ಕೊಡುವ ಶಕ್ತಿ ಅಲೆಕ್ಸಾಂಡರನ ಬಳಿ ಇದೆ.

ಅಲೆಕ್ಸಾಂಡರನ ನುಡಿಗಳನ್ನು ಡಯೋಜಿನೀಸ್ ತಲೆ ತಗ್ಗಿಸಿಕೊಂಡೇ ಕೇಳುತ್ತಲಿದ್ದ ಅಲೆಕ್ಸಾಂಡರನ ನುಡಿಗಳಲ್ಲಿದ್ದ ನವಿರಾದ ಅಹಂಕಾರ ಅವನ ಗಮನಕ್ಕೆ ಬಂದಿತು.

ಅಲೆಕ್ಸಾಂಡರ್ ತನಗೇನು ಕೊಡಬಲ್ಲ? ಹೇರಳವಾಗಿ ಸಂಪತ್ತನ್ನು ನೀಡಬಹುದು. ಆದರೆ ಆ ಸಂಪತ್ತು ಕಷ್ಟದಿಂದ ಗಳಿಸಿದ್ದಲ್ಲ. ವೈರಿರಾಜರುಗಳಿಂದ ಕೊಳ್ಳೆಹೊಡೆದಿದ್ದು. ಅಂದಾಗ ಅಲೆಕ್ಸಾಂಡರನಿಗೂ ದರೋಡೆಖೋರನಿಗೂ ಭೇದವಿಲ್ಲ. ಹೀಗೆಂದು ಆಲೋಚಿಸಿದ ಡಯೋಜಿನೀಸ್ ಅಲೆಕ್ಸಾಂಡನ ಅಹಂಕಾರಕ್ಕೆ ಪೆಟ್ಟು ಕೊಡಲು ನಿರ್ಧರಿಸಿದ. ತಲೆ ಮೇಲೆತ್ತದೇ ಶಾಂತವಾಗಿ ನುಡಿದ.

"ಏನನ್ನು ಕೊಡುವ ಶಕ್ತಿ ನಿನಗಿಲ್ಲವೋ ಅದನ್ನು ಬೇರೆಯವರಿಂದ ಕಿತ್ತುಕೊಳ್ಳುವ ಹಕ್ಕು ಕೂಡ ನಿನಗಿಲ್ಲ. ಎಲ್ಲಿ ಸ್ವಲ್ಪ ಪಕ್ಕಕ್ಕೆ ಸರಿ. ಸೂರ್ಯ ನನಗೆ ಧಾರಾಳವಾಗಿ ನೀಡುತ್ತಿರುವ ಸುಖೋ ಷ್ಣವಾದ ಎಳೆ ಬಿಸಿಲಿಗೆ ಅಡ್ಡಿಯಾಗಬೇಡ!" ಅವಾಕ್ಕಾದ ಅಲೆಕ್ಸಾಂಡರ್ ಪಕ್ಕಕ್ಕೆ ಸರಿದು ನಿಂತ.

(ಆಧಾರಿತ)

ಲಕ್ಷ್ಮಣ ಆಳವಂಡಿ.

ಈಸಬೇಕು ಇದ್ದು ಜಯಿಸಬೇಕು

• ನಾಗರತ್ನ •

ಇತ್ತೀಚೆಗೆ ದಿನಪತ್ರಿಕೆಗಳಲ್ಲಿ ಆತ್ಮಹತ್ಯೆಯ ಅಂಕಿ-ಅಂಶ ಪ್ರಕಟವಾಯಿತು. ಅದರ ಪ್ರಕಾರ ಭಾರತದಲ್ಲಿ ಪ್ರತಿವರ್ಷ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆ 50,000. ಪ್ರತಿದಿನ ನೂರು ಮಂದಿ ಆತ್ಮಹತ್ಯೆ ಮಾಡಿಕೊಂಡರೆ ಪ್ರಪಂಚದಲ್ಲಿ ನಿತ್ಯ ಸಾವಿರ ಜನ ಈ ಪಿಡುಗಿಗೆ ಬಲಿಯಾಗುತ್ತಾರೆ. ಪೋಲೀಸ್ ಕೇಸ್ ಆದರೆ ವ್ಯಥಾ ಶ್ರಮ ಎಂಬ ಕಾರಣದಿಂದ ನಮ್ಮ ದೇಶದಲ್ಲಿ ಎಷ್ಟೋ ಬಾರಿ ಆತ್ಮಹತ್ಯೆ ಪ್ರಕರಣಗಳು ಬೆಳಕಿಗೆ ಬರುವುದೇ ಇಲ್ಲ. ಆದ್ದರಿಂದ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆ ಅಧಿಕೃತ ಅಂಕಿ-ಅಂಶಕ್ಕಿಂತ ಎರಡರಷ್ಟಾದರೂ ಇರುತ್ತದೆ. ಆತ್ಮಹತ್ಯೆಯ ಸಂಖ್ಯೆಯತ್ತ ಗಮನ ಹರಿಸಿದಾಗ ಅದೊಂದು ಸಾಮಾಜಿಕ ಪಿಡುಗು ಎಂಬುದು ಸ್ಪಷ್ಟ.

ಪ್ರಬಲವಾದ ಮಾನಸಿಕ ಆಘಾತವಾಗಿ ಮನೋದೌರ್ಬಲ್ಯಕ್ಕೆ ಒಳಗಾದ ವ್ಯಕ್ತಿಗಳು ಆತ್ಮಹತ್ಯೆಯ ಬಗ್ಗೆ ಯೋಚಿಸುತ್ತಾರೆ. ಅಂತಹ ವ್ಯಕ್ತಿಗಳಲ್ಲಿ ಆತ್ಮವಿಶ್ವಾಸದ ಕೊರತೆಯಿರುತ್ತದೆ, ವಿವೇಚನಾ ಶಕ್ತಿ ಕಡಿಮೆ ಯಿರುತ್ತದೆ. ಅವರು ದುಡುಕುವ ಪ್ರವೃತ್ತಿಯವರಾಗಿರುತ್ತಾರೆ. ನಿಕಟವರ್ತಿಗಳು ಅವರ ಅಸ್ವಾಭಾವಿಕ ನಡತೆಯಿಂದಲೇ ಅವರ ಮನಸ್ಸನ್ನು ಅರಿಯಬಹುದು. ಎಷ್ಟೋ ಬಾರಿ ನಿಕಟವರ್ತಿಗಳ ಔದಾಸೀನ್ಯದಿಂದ ಆತ್ಮಹತ್ಯೆ ಪ್ರಕರಣಗಳು ಸಂಭವಿಸುತ್ತವೆ. ಆತ್ಮಹತ್ಯೆಗೆ ಪ್ರಯತ್ನಿಸುವ ವ್ಯಕ್ತಿ ಆ ಸಮಯದಲ್ಲಿ ತೀರಾ ಭಾವುಕನಾಗಿರುತ್ತಾನೆ. ಏಕಾಕಿಯಾಗಿರಲು ಇಷ್ಟ ಪಡುತ್ತಾನೆ. ಮನ ಬಿಚ್ಚಿ ಯಾರೊಡನೆಯೂ ಮಾತನಾಡುವುದಿಲ್ಲ, ಆದರೆ ಕೆಲವು ವೇಳೆ ಆತನೇ ತನಗೆ ಏನೋ ಅನ್ಯಾಯವಾಗಿದೆ ಎಂದು ಕಲ್ಪಿಸಿಕೊಂಡು ಸಣ್ಣ ಸಣ್ಣ ಮಾತುಗಳಿಗೂ ಅಪಾರ್ಥ ಕಲ್ಪಿಸಿ ಸಿಟ್ಟಿಗೆದ್ದು ಕೂಗಾಡುತ್ತಾನೆ. ತಾನು ಸತ್ತೇ ಹೋಗುವುದು ಒಳ್ಳೆಯದು ಎಂಬ ಅಂತರಿಕ ಅನಿಸಿಕೆಯನ್ನು ಉದ್ವೇಗದ ಮೂಲಕ ತಿಳಿಯಪಡಿಸುತ್ತಾನೆ. ಸೂಕ್ಷ್ಮಮತಿಗಳಾದರೆ ಆತನ ಮಾನಸಿಕ ವ್ಯಥೆಯನ್ನು ಹೋಗಲಾಡಿಸಿ, ಆತ್ಮವಿಶ್ವಾಸ ತುಂಬಿ ಅವನ ಜೀವನವನ್ನು ಅರ್ಥಪೂರ್ಣವಾಗುವಂತೆ ಮಾಡಬಹುದು.

ಜೀವನವನ್ನು ಎದುರಿಸಲಾರದ ಹೇಡಿತನವೇ ಆತ್ಮಹತ್ಯೆಗೆ ಪ್ರಮುಖ ಕಾರಣ ಎಂಬುದು ಸಾಮಾನ್ಯ ಅಭಿಪ್ರಾಯ. ಆದರೆ ಸತ್ಯಾಸತ್ಯವನ್ನು ವಿವೇಚಿಸಿ ನೋಡಿದರೆ ಇತರ ಕಾರಣಗಳೇ ಪ್ರಬಲವಾಗಿರುತ್ತವೆ. ಆತ್ಮಹತ್ಯೆಯ ಪ್ರಕರಣಗಳನ್ನು ನಾಲ್ಕು ವಿಧಗಳಾಗಿ ವಿಂಗಡಿಸಬಹುದು.

1. 10 ರಿಂದ 15ರ ವಯಸ್ಸಿನ ಮಕ್ಕಳಲ್ಲಿನ ಆತ್ಮಹತ್ಯೆ.
2. 16 ರಿಂದ 30ರ ವರ್ಷದೊಳಗಿನ ಯುವಕರಲ್ಲಿಯ ಆತ್ಮಹತ್ಯೆ.
3. 30 ರಿಂದ 50 ವರ್ಷದೊಳಗಿನ ಪ್ರೌಢರ ಆತ್ಮಹತ್ಯೆ.
4. 50 ವರ್ಷ ಮಿಕ್ಕಿದ ವ್ಯಕ್ತಿಗಳ ಆತ್ಮಹತ್ಯೆ.

ಮಕ್ಕಳನ್ನು ಅತಿ ಕಟ್ಟುನಿಟ್ಟಾಗಿ ಬೆಳೆಸುವುದು, ಮನೆತನದ ಗೌರವದ ಪ್ರಶ್ನೆಯನ್ನು ಮಕ್ಕಳ ಮನಸ್ಸಿನಲ್ಲಿ ಅತಿಯಾಗಿ ತುಂಬುವುದು, ಲೈಂಗಿಕ ವಿಷಯದ ಬಗ್ಗೆ ಚಿಂತಿಸುವುದೇ ಕೆಟ್ಟದು ಎಂಬ ಅಭಿಪ್ರಾಯವನ್ನು ಅಪರೋಕ್ಷ

ವಾಗಿ ಮಕ್ಕಳ ಮನಸ್ಸಿನಲ್ಲಿ ಮೂಡಿಸುವುದು, ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ಪಾಸಾದರೆ ಮಾತ್ರ ಈ ಪ್ರಪಂಚದಲ್ಲಿ ಗೌರವ. ಇಲ್ಲದಿದ್ದರೆ ಬದುಕು ನಿರರ್ಥಕ ಎಂಬ ಭಾವನೆಗೆಡೆ ನೀಡುವುದು. ಮುಂತಾದುವು 10 ರಿಂದ 15 ವರ್ಷದೊಳಗಿನ ಮಕ್ಕಳ ಆತ್ಮಹತ್ಯೆಗೆ ಮುಖ್ಯ ಕಾರಣಗಳು.

ಹನ್ನೊಂದು ವರ್ಷ ವಯಸ್ಸಿನ ಶೀಲಾ ಶಾಲೆಯಲ್ಲಿ ಓದುತ್ತಿರುವ ಹುಡುಗಿ, ಬಲು ಚುರುಕು. ಒಂದರಿಂದ ನಾಲ್ಕನೇ ತರಗತಿಯವರೆಗೆ ಮೊದಲನೇ ರ್‍ಯಾಂಕನ್ನು ಬಿಟ್ಟು ಕೊಟ್ಟವಳೇ ಅಲ್ಲ. ತಂದೆ ತಾಯಿಗಳಿಗೂ ಆಕೆಯ ಪ್ರಗತಿ ಹೆಮ್ಮೆಯನ್ನುಂಟು ಮಾಡಿತ್ತು. ಆದ್ದರಿಂದ ನಾಲ್ಕನೇ ತರಗತಿ ಪಾಸಾದ ಮೇಲೆ ಅವಳನ್ನು ಇನ್ನೂ ಉತ್ತಮ ಶಾಲೆಗೆ ಸೇರಿಸಿದರು. ಹೊಸ ಪರಿ ಸರ, ಹೊಸ ಅಧ್ಯಾಪಕ ವರ್ಗ ಹಾಗೂ ಹೊಸ ಸ್ನೇಹಿತೆಯರೊಡನೆ ಬೆರೆಯಲು, ಹೊಂದಿಕೊಳ್ಳಲು ಆಕೆಗೆ ಸಮಯಯಾವ ಕಾಶದ ಅವಶ್ಯಕತೆಯಿತ್ತು. ಮೊದಲು ಒಂದೆರಡು ತಿಂಗಳುಗಳ ಟೆಸ್ಟ್ ನಲ್ಲಿ ಆಕೆಗೆ ಮೊದಲಿನಂತೆ ರ್‍ಯಾಂಕು ಗಳಿಸಲು ಸಾಧ್ಯವಾಗಲಿಲ್ಲ. ಆಗ ಅವಳ ತಂದೆ ತಾಯಿಗಳು ಅವಳಿಗೆ ಓದಿನಲ್ಲಿ ಆಸಕ್ತಿ ಕಡಿಮೆಯಾಗಿರುವ ವಿಷಯ ಕುರಿತು ಟೀಕಿಸತೊಡಗಿದರು. ಮಾತು ಮಾತಿಗೂ ಆಕೆಯ ಪ್ರಗತಿಯನ್ನು ಹೊಗಳುತ್ತಿದ್ದ ಅವಳ ತಾಯಿ ಈಗ ಅದೊಂದು ಮೊದ್ಲು ಅದ ಕ್ಕೆಲ್ಲಿ ಅಂಟುತ್ತೆ ವಿದ್ಯೆ ಎಂದು ಹಿಯಾಳಿಸ ತೊಡಗಿದಳು.

ಅತ್ತ ಶಾಲೆಯಲ್ಲಿ ಈಕೆಯ ಪ್ರಗತಿ ಕುಂಠಿತವಾಗುತ್ತಿರುವುದನ್ನು ತಿಳಿದ ಶಿಕ್ಷಕರು ಅವಳ ತಂದೆ ಅಥವಾ ತಾಯಿಯನ್ನು ಕರೆದುಕೊಂಡು ಬರುವಂತೆ ತಿಳಿಸಿದರು. ಮೊದಲಿನಿಂದಲೂ ತೆಗಳಿಕೆ ಅಥವಾ ಸೋಲೆಂಬುದನ್ನೇ ಕಂಡರಿಯದಿದ್ದ ಆಕೆಗೆ ತಂದೆ ತಾಯಿಗಳಿಗೆ ಆ ವಿಷಯ ತಿಳಿಸಲು ಸಾಧ್ಯವಾಗಲೇಯಿಲ್ಲ. ಹೇಳಿ ಹೇಳಿ ಬೇಸತ್ತ ಶಿಕ್ಷಕರು ಒಂದು ದಿನ ಶಾಲೆಯ ಸಮಯದಲ್ಲಿ ತಂದೆ ಅಥವಾ ತಾಯಿಯನ್ನು ಕರೆದುಕೊಂಡು ಬರದಿದ್ದರೆ ಶಾಲೆಗೆ ಬರಬೇಡವೆಂದು ಹೆದರಿಸಿ ಕಳುಹಿ ಸಿದರು. ಶೀಲಾ ಅಳುತ್ತಾ ಮನೆಗೆ ಬಂದಳು. ಆಕೆಯ ದುರದೃಷ್ಟಕ್ಕೆ ಅಂದು ಅವಳ ತಾಯಿ ಎಲ್ಲಿಯೋ ಹೋಗಿದ್ದಳು. ಶೀಲಾ ಮನೆಗೆ ಬಂದಾಗ ಪಕ್ಕದ ಮನೆಯಾಕೆ ಕೀಲಿಕೈ ಕೊಟ್ಟು, ಊಟ ಮಾಡುವಂತೆ ಹೇಳಿದರು. ಶೀಲಾ ಬೀಗ ತೆಗೆದು ಒಳಹೊಕ್ಕಳು. ಸಾಯಂಕಾಲ ತಾಯಿ ಬಂದು ತಮ್ಮ ಬ್ಯಾಗಿನಲ್ಲಿದ್ದ ಇನ್ನೊಂದು ಕೀಲಿ ಕೈಯಿಂದ ಬೀಗ ತೆಗೆದು, ಶೀಲಾಳ ಓದಿನ ಕೊಠಡಿಗೆ ಹೋಗಿ ನೋಡಿದಾಗ ಆಘಾತ ಕಾದಿತ್ತು. ತಾವೇ ಕೊಡಿಸಿದ್ದ ಆಟದ ಹಗ್ಗವನ್ನು ಫ್ಯಾನಿಗೆ ಕಟ್ಟಿ ತೂಗಾಡುತ್ತಿದ್ದಾಳೆ ಆಕೆ !

ಇಲ್ಲಿ ಶೀಲಾಳಂತಹ ಹಸುಗೂಸಿನ ಆತ್ಮಹತ್ಯೆಗೆ ಸ್ವತಃ ಆಕೆಯೇ ಕಾರಣಳೋ ಅಥವಾ ಅವಳ ತಂದೆ ತಾಯಿಗಳೋ? ಶಿಕ್ಷಕರೋ? ಶೀಲಾಳ ತಂದೆ ತಾಯಿಗಳು ಅಂಕಗಳಿಗೆ ಪ್ರಾಧಾನ್ಯ ಕೊಡದೆ ಆಕೆಯಲ್ಲಿ ಆತ್ಮವಿಶ್ವಾಸ ಧೈರ್ಯ ಮೂಡಿಸಬೇಕಿತ್ತು. ಹೊಸ ಪರಿಸರಕ್ಕೆ ಹೊಂದಿಕೊಳ್ಳಲು ಆಕೆಗೆ ಸ್ವಲ್ಪ ಕಾಲಾವಕಾಶ ಬೇಕೆಂಬುದನ್ನು ಅರಿತು ತಾವೇ ಶಾಲೆಗೆ ಹೋಗಿ ಶಿಕ್ಷಕರೊಂದಿಗೆ ಮಾತನಾಡ ಬೇಕಿತ್ತು. ಅತ್ತ ಶಾಲೆಯಲ್ಲಿ ಶಿಕ್ಷಕರ ಹೆದರಿಕೆ, ಇತ್ತ ಮನೆಯಲ್ಲಿ ಪಾಲಕರ ತೆಗಳಿಕೆ ಪುಟ್ಟ ಬಾಲಕಿಯ ಮನಸ್ಸಿನ ಮೇಲೆ ಪರಿಣಾಮ ಬೀರಿದ್ದು ಸಹಜ.

16 ರಿಂದ 30 ವರ್ಷದೊಳಗಿನ ವ್ಯಕ್ತಿಗಳನ್ನು ನಿರುದ್ಯೋಗ, ಪ್ರೇಮಪ್ರಕರಣಗಳಲ್ಲಿ ನಿರಾಸೆ, ಸಾಮಾಜಿಕ ಕಟ್ಟುನಿಟ್ಟು, ಮನೆತನದ ಗೌರವದ ಬಗ್ಗೆ ಹಿರಿಯರು ಮೂಡಿಸಿದ್ದ ಭೀತಿ, ಮುಂತಾದುವು ಆತ್ಮಹತ್ಯೆಗೆ ಪ್ರಚೋದಿಸುವುದು ಹೆಚ್ಚು. ಹದಿನೇಳರ ಹರೆಯದ ಹಂಸ ಹತ್ತನೇ ತರಗತಿಯಲ್ಲಿ ಓದುತ್ತಿದ್ದಳು. ತಂದೆ ಆ ಊರಿನ ದೊಡ್ಡ ಜಮೀನುದಾರರು. ಅಜ್ಜಿ, ತಾತ, ಚಿಕ್ಕಪ್ಪ, ದೊಡ್ಡಪ್ಪಂದಿರಿಂದ ಕೂಡಿದ ಅವಿಭಕ್ತ ಕುಟುಂಬ ಅವರದು. ಆಗ ಅವಳ ಶಾಲೆಗೆ ಯುವಕ ಮಾಸ್ತರನೊಬ್ಬ ವರ್ಗವಾಗಿ ಬಂದ. ಆತನದು ಆಕರ್ಷಕ ವ್ಯಕ್ತಿತ್ವ, ಕಲಿಸುವ ರೀತಿಯೂ ಸರಳ ಹಾಗೂ ಸುಲಭ. ಹಂಸ ಅವನಲ್ಲಿ ಅನುರಕ್ತ ಳಾದಳು. ಅವನೂ ಅವಳಿಗೆ ಕುಮ್ಮಕ್ಕು ನೀಡಿ, ಮದುವೆಯಾಗುವುದಾಗಿ ಹೇಳಿ ಚಕ್ಕಂದವಾಡಿದ. ಮುಂದೆ ಬೇಸಿಗೆ ರಜೆ ಕಳೆದ ಮೇಲೆ ಆ ಮಾಸ್ತರಗೆ ಬೇರೆ

ಊರಿಗೆ ವರ್ಗವಾಗಿತ್ತು. ಆಗ ಅವನು ತನಗೆ ಮೊದಲೇ ಮದುವೆಯಾಗಿದ್ದನ್ನು ತಿಳಿಸಿ ನಡೆದುದನ್ನೆಲ್ಲಾ ಮರೆತು ಹೊಸ ಜೀವನ ಆರಂಭಿಸು ಎಂದು ಹೇಳಿ ಹೊರಟು ಹೋದ. ಹಂಸ ಹೇಗೋ ಸಾವರಿಸಿ ಕೊಂಡಳು. ಆದರೆ ಒಂದೆರಡು ತಿಂಗಳು ಕಳೆಯುವಷ್ಟರಲ್ಲಿ ಆಕೆಗೆ ಇನ್ನೊಂದು ಆಘಾತ ಕಾದಿತ್ತು. ಆಕೆ ಗರ್ಭಿಣಿ ಯಾಗಿದ್ದಳು. ಯಾರಲ್ಲಿ ಈ ವಿಷಯ ತೋಡಿ ಕೊಳ್ಳುವುದು? ಆಕೆಯ ಈ ದುಃಸ್ಥಿತಿಗೆ ಕಾರಣ ನಾದ ವ್ಯಕ್ತಿ ಬಹು ದೂರ ಹೋಗಿಯಾಗಿತ್ತು. ಈ ವಿಷಯ ಹೊರಬಿದ್ದರೆ ಮನೆಯ ಮರ್ಯಾದೆ ಮಣ್ಣು ಪಾಲಾಗುವ ಭಯ. ತಂದೆ ತಾಯಿಗಳಿಗೆ ತಿಳಿಸಲು, ಗುಟ್ಟಾಗಿ ಡಾಕ್ಟರ ರನ್ನು ಸಂದರ್ಶಿಸಲು ಸಮಾಜದ ಭಯ. ಕೊನೆಗೆ ಅವಳಿಗೆ ತೋರಿದ್ದು ಒಂದೇ ದಾರಿ- ಆದೇ ಆತ್ಮಹತ್ಯೆ.

ಹಂಸಳ ಆತ್ಮಹತ್ಯೆಗೆ ಕಾರಣವನ್ನು ನಾಲ್ಕು ಹಂತಗಳಲ್ಲಿ ನಾವು ವಿಶ್ಲೇಷಿಸಬಹುದು. 1 ವಿಶ್ವಾಸಘಾತಕಾರದ ಮಾಸ್ತರು, 2 ಬೇಜ ವಾಬ್ದಾರಿ ತಂದೆ ತಾಯಿಗಳು, 3 ಮನೆ ತನದ ಗೌರವದ ಬಗೆಗಿನ ಅತಿಯಾದ ಕಾಳಜಿ 4 ಸಮಾಜ.

ವಿವೇಕ ಇಪ್ಪತ್ತಾರರ ಯುವಕ. ಡಿಗ್ರಿ ಮುಗಿಸಿ ಎರಡು ಮೂರು ವರ್ಷಗಳಾಗಿದ್ದವು. ಅಂದಿ ನಿಂದಲೂ ಕೆಲಸಕ್ಕಾಗಿ ಅಲೆಯುತ್ತಿದ್ದ ಅವನು ಕಾಲೇಜು ಕಲಿಯುತ್ತಿದ್ದ ಸಮಯದಲ್ಲಿ ಬಹಳ ಪ್ರತಿಭಾನ್ವಿತನಾಗಿದ್ದ. ಆಗ ಅವನ ತರಗತಿ ಯಲ್ಲಿ ಓದುತ್ತಿದ್ದ ನೀತಾಳೊಂದಿಗೆ ಸ್ನೇಹ ಬೆಳೆದು ಕ್ರಮೇಣ ಪ್ರೇಮಕ್ಕೆ ತಿರುಗಿತು. ಕೆಲಸ ದೊರೆತ ಮೇಲೆ ಮದುವೆಯಾಗಲು ಅವರು ನಿಶ್ಚಯಿಸಿದ್ದರು. ಆದರೆ ನೀತಾಳ ಮನೆಯವ ರಿಗೆ ಈ ವಿಷಯ ತಿಳಿದಾಗ ಅಂತಸ್ತು ಜಾತಿ ಯಾವುದರಲ್ಲೂ ಸರಿಸಮನಲ್ಲದ ನಿರುದ್ಯೋಗಿ ಹುಡುಗನಿಗೆ ಅವಳನ್ನು ಕೊಟ್ಟು ಮದುವೆ ಮಾಡಲು ತಂದೆ ತಾಯಿಗಳು ಒಪ್ಪಲಿಲ್ಲ. ನೀತಾಳ ಹಟ ಮೊಂಡುತನ ಯಾವುದೂ ನಡೆಯಲಿಲ್ಲ. ಮೊದಲೇ ಒಮ್ಮೆ ಹೃದಯಾ ಘಾತವಾಗಿದ್ದ ತಂದೆಯ ಜೀವಕ್ಕೆ ಅಪಾಯ ವಾಗಬಾರದು ಎಂಬ ಕಾರಣದಿಂದ ತಾನೇ ಸೋತು ಇಷ್ಟವಿಲ್ಲದಿದ್ದರೂ ನೀತಾ ತಂದೆ ತಾಯಿ ತೋರಿಸಿದ ವರನನ್ನು ಮದುವೆ ಮಾದಳು. ಯಾರಿಂದ ಎಷ್ಟೇ ತೊಂದರೆ ಬಂದರೂ ನೀತಾ ತನ್ನಿಂದ ದೂರವಾಗಲಾರ ಳೆಂದೇ ನಂಬಿದ್ದ ವಿವೇಕನಿಗೆ ನಿರಾಶೆ ಯಾಯಿತು. ಅತ್ತ ನಿರುದ್ಯೋಗ, ಬಡತನ, ಇತ್ತ ಪ್ರೇಮಭಂಗ. ಒಂದು ದಿನ ಸಮಯ ಸಾಧಿಸಿ ರೈಲಿಗೆ ತಲೆ ಕೊಟ್ಟು ಎಲ್ಲ ದ್ವಂದ್ವ ಗಳಿಂದ ಮುಕ್ತನಾದ.

ಇಲ್ಲಿ ಮನೋದೌರ್ಬಲ್ಯವೇ ಆತ್ಮಹತ್ಯೆಗೆ ಪ್ರಮುಖ ಕಾರಣದಂತೆ ತೋರಿದರೂ ವಾಸ್ತವಿ ಕತೆ ಭಿನ್ನವಾಗಿದೆ. ಜಾತಿ, ಪ್ರತಿಷ್ಠೆ, ನಿರುದ್ಯೋಗಗಳು ವಿವೇಕನ ಆತ್ಮಹತ್ಯೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇಲ್ಲಿ ವಿವೇಕ ನದೂ ತಪ್ಪಿಲ್ಲವೆಂದಲ್ಲ. ವಿದ್ಯಾವಂತನೂ ಬುದ್ಧಿವಂತನೂ ಆಗಿದ್ದರೂ ಆತನಲ್ಲಿ ವಿವೇಚನಾಶಕ್ತಿಯ ಕೊರತೆ ಎದ್ದು ಕಾಣುತ್ತದೆ. ಆತ ಒಂದೆರಡು ದಿನ ನಿಧಾನವಾಗಿ ಯೋಚಿಸಿ ಧೈರ್ಯ ತಂದುಕೊಂಡು ಜೀವನದ ಹೋರಾಟ ದಲ್ಲಿ ಪುನಃ ತೊಡಗಬೇಕಿತ್ತು. ಸರಿಯಾದ ಸಮಯದಲ್ಲಿ ಮನೋದೌರ್ಲಲ್ಯದಿಂದ ಬಿಡು ಗಡೆ ಪಡೆಯುವ ವಿವೇಚನಾಶಕ್ತಿ ಕಳೆದು ಕೊಂಡಾಗ ಇಂಥ ಅನಾಹುತಗಳು ಸಂಭವಿಸು ತ್ತವೆ.

30 ರಿಂದ 50 ವರ್ಷ ವಯಸ್ಸಾದವರನ್ನು ಆತ್ಮಹತ್ಯೆಗೆ ಪ್ರೇರೇಪಿಸುವುದು ಮುಖ್ಯವಾಗಿ ಕೌಟುಂಬಿಕ ಸಮಸ್ಯೆ, ಮನೆತನದ ಪ್ರತಿಷ್ಠೆಗೆ ಕುಂದು ಬರುವಂಥ ಇಕ್ಕಟ್ಟಿನ ಪರಿಸ್ಥಿತಿ, ಸಮಾಜದ ಭಯ, ಮುಂತಾದವು. ಸುಶೀಲಮ್ಮ ಮೂವತ್ತೈದರ ಮಹಿಳೆ. ಗಂಡ ಮನೆ ಕಟ್ಟಿಸುವ ಮೇಸ್ತ್ರಿ, ಮದುವೆಯಾದ ಹೊಸದರಲ್ಲಿ ಹೆಂಡತಿಯನ್ನು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದ. ಸುಶೀಲಮ್ಮನೂ ಅಷ್ಟೆ. ಅತ್ತೆ ಮಾವ ಗಂಡನೊಡನೆ ಹೊಂದಿಕೊಂಡು ಬಾಳುತ್ತಿದ್ದಳು. ಆದರೆ ಒಂದರ ಮೇಲೊಂದ ರಂತೆ ನಾಲ್ಕು ಮಕ್ಕಳಾಗುವಷ್ಟರಲ್ಲಿ ಆಕೆಯ ಆರೋಗ್ಯ ಹದಗೆಟ್ಟು ಸಹನೆ ಕಡಿಮೆಯಾಗುತ್ತ ಬಂತು. ಕೂಲಿ ನಾಲಿ ಮಾಡುತ್ತಿದ್ದ ಅತ್ತೆ ಮಾವಂದಿರಿಗೆ ವಯಸ್ಸಾಗಿ ಮಗನನ್ನೆ ಆಶ್ರಯಿಸುವಂತಾಯ್ತು. ಆದರೆ ಅವನೊಬ್ಬನ ದುಡಿತದಿಂದ ಎಂಟು ಜನರ ಸಂಸಾರ ಸಾಗುವುದು ದುಸ್ತರವಾಯಿತು. ಈ ಮಾನಸಿಕ ಒತ್ತಡದಿಂದ ಬಿಡುಗಡೆಯಾಗಲು ಆತ


ಕುಡಿತದ ಚಟಕ್ಕೆ ಬಲಿಯಾದ. ಕ್ರಮೇಣ ಮನೆಗೆ ಬರುವುದೇ ಕಡಿಮೆಯಾಯಿತು. ಸುಶೀಲಮ್ಮ ತಾನೇ ಕೂಲಿ ನಾಲಿ ಮಾಡ ಲಾರಂಭಿಸಿದಳು. ಆದರೂ ಕೊನೆಗೆ ಅವಳ ಎಂಟು ತಿಂಗಳ ಮಗು ಪೌಷ್ಟಿಕ ಆಹಾರದ ಕೊರತೆಯಿಂದ ಕಾಯಿಲೆ ಬಿದ್ದು ಮರಣವ ನ್ನಪ್ಪಿತು. ಈ ಘಟನೆ ಅವಳ ಮನಸ್ಸಿಗೆ ದೊಡ್ಡ ಆಘಾತವಾಗಿ ಪರಿಣಮಿಸಿತು. ಹಲವಾರು ವರ್ಷಗಳ ಸತತ ದುಡಿತ, ಕಣ್ಣೆದುರಿಗೆ ಮಕ್ಕಳು ಹಸಿವಿನಿಂದ ನರಳುವುದು, ವೃದ್ಧಾಪ್ಯದಲ್ಲಿ ಅತ್ತೆ ಮಾವಂದಿರನ್ನು ಸಲಹಲಾಗದ ಪರಿಸ್ಥಿತಿ, ಗಂಡ ರಸ್ತೆಯಲ್ಲಿ ಕುಡಿದು ಬೀಳುವ ಸಮಸ್ಯೆ ಎಲ್ಲಾ ಒಟ್ಟಿಗೆ ಸುಶೀಲಮ್ಮನನ್ನು ಅಸಹಾಯಕ ಳನ್ನಾಗಿ ಮಾಡಿದವು. ಬೇಸತ್ತ ಆಕೆ ಒಂದು ರಾತ್ರಿ ತನ್ನ ಕೊನೆಯೆರಡು ಮಕ್ಕಳೊಂದಿಗೆ ಬಾವಿಗೆ ಹಾರಿದಳು.

ಸುಶೀಲಮ್ಮನಿಗೆ ಕಷ್ಟದ ಸಮಯದಲ್ಲಿ ಅಣ್ಣ ತಮ್ಮಂದಿರೋ ಬಂಧುಬಳಗದವರೋ ಸಹಾಯ ಹಸ್ತ ನೀಡಿದ್ದರೆ, ಗಂಡ ವಿವೇಚನ ಕಳೆದುಕೊಳ್ಳದೆ ಕರ್ತವ್ಯ ನಿಭಾಯಿಸಿದ್ದರೆ, ತಂದೆ ತಾಯಿಗಳು ಮುಂದೆ ಸಮಯಕ್ಕೆ ಒದಗು ವಂತೆ ಅವಳಿಗೆ ನಾಲ್ಕಕ್ಷರ ಕಲಿಸಿದ್ದಿದ್ದರೆ ಸಣ್ಣದೋ ಪುಟ್ಟದೋ ಕೆಲಸ ಹುಡುಕಿಕೊಂಡು ತಾನೂ ಬಾಳಿ ತನ್ನ ಸಂಸರವನ್ನೂ ಮುಂದೆ ತರುತ್ತಿದ್ದಳು.

ನರಸಿಂಹಯ್ಯ 45 ವಯಸ್ಸಿನ ಸಭ್ಯ ವ್ಯಕ್ತಿ. ಸರಕಾರಿ ಕಚೇರಿಯೊಂದರಲ್ಲಿ ಉನ್ನತ ಹುದ್ದೆ. ಸಮಾಜದಲ್ಲೂ ಪ್ರತಿಷ್ಠೆ. ಕಚೇರಿಯ ಪ್ರಮುಖ ಸಾಮಾನುಗಳ ರಕ್ಷಣೆಯ ಹೊಣೆ ಆತನದು. ಪ್ರಾಮಾಣಿಕನಾದ ಆತ ಯಾವ ಆಸೆ ಆಮಿಷ ಗಳಿಗೂ ಬಲಿಯಾದವನೇ ಅಲ್ಲ. ಆದರೆ ಒಮ್ಮೆ ಆತ ರಜೆಯಿದ್ದಾಗ ಯಾರೋ ಸಹೋದ್ಯೋಗಿ ಗಳ ಕುತಂತ್ರದಿಂದ ಸುಮಾರು ಮೂರು ಲಕ್ಷ ರೂಪಾಯಿ ಬೆಲೆ ಬಾಳುವ ವಸ್ತುಗಳು ಕಾಣೆ ಯಾಗಿದ್ದವು. ಮೇಲಧಿಕಾರಿಯಾದ ಈತನ ಮೇಲೆ ಅಪವಾದ ಹೇರಲಾಯಿತು. ಅರೆಸ್ಟ್ ವಾರಂಟ್ ಕೂಡ ಬಂತು. ಸಾಕ್ಷ್ಯಾಧಾರಗಳೂ ಇವನಿಗೆ ಪ್ರತಿಕೂಲವಾಗಿಯೇ ಇದ್ದವು. ನರಸಿಂಹಯ್ಯ ಮರ್ಯಾದೆಗೆ ಅಂಜಿ ಕಳ್ಳತನದ ಅಪಾದನೆಯ ಮೇಲೆ ಜೈಲಿಗೆ ಹೋಗುವುದ ಕ್ಕಿಂತ ಸಾವೇ ಮೇಲೆಂದು ತೀರ್ಮಾನಿಸಿ ಅಂದೇ ರಾತ್ರಿ ವಿಷ ಸೇವಿಸಿ ಅಸು ನೀಗಿದ.

50 ವರ್ಷ ದಾಟಿದ ವ್ಯಕ್ತಿಗಳು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಮುಖ್ಯ ಕಾರಣಗಳೆಂದರೆ ಜೀವನದಲ್ಲಿ ನೆಲೆ ತಪ್ಪುವುದು, ಮನೋ ದೌರ್ಬಲ್ಯ, ಮಕ್ಕಳೊಡನೆ ಸಾಮರಸ್ಯವಿಲ್ಲ ದಿರುವುದು, ಮುಂತಾದುವು. ಸೀತಾರಾಮಯ್ಯ ನವರಿಗೆ 63 ವರ್ಷ. ಬಲಗಾಲು ಕುಂಟು. ಒಂಟಿ ಜೀವ. ಹಿರಿಯರ ಬಲವಂತಕ್ಕೆ ಕಟ್ಟುಬಿದ್ದು ಇವರನ್ನು ಮದುವೆಯಾಗಿದ್ದ ಇವರ ಹೆಂಡತಿ, ಮೂರು ವರ್ಷದ ಒಬ್ಬಳೇ ಮಗಳು ರಮೆಯನ್ನು ಬಿಟ್ಟು ಪ್ರಾಯದಲ್ಲಿ ದ್ದಾಗಲೇ ಯಾರೊಡನೆಯೋ ಓಡಿಹೋಗಿ ದ್ದಳು. ಸೀತಾರಾಮಯ್ಯ ಅಲ್ಪ ಸ್ವಲ್ಪ ಜಮೀನಿ ನಿಂದ ಬರುವ ವರಮಾನದಿಂದ ಮಗಳನ್ನು ಬೆಳೆಸಿ ನಂತರ ಅದೇ ಜಮೀನನ್ನು ಮಾರಿ ಆಕೆಯ ಮದುವೆ ಮಾಡಿದರು. ರಮೆಯ ಗಂಡ ಸುಧಾಕರ ಅವಳನ್ನು ಇಷ್ಟಪಟ್ಟು ಮದುವೆ ಯಾಗಿದ್ದ. ಆದರೆ ಅವಳ ಅತ್ತೆಗೆ ಯಾರೊಡ ನೆಯೋ ಓಡಿಹೋದ ಹೆಂಗಸಿನ ಮಗಳನ್ನು ಸೊಸೆಯಾಗಿ ತರುವುದು ಇಷ್ಟವಿರಲಿಲ್ಲ. ರಮೆಯ ಗಂಡ ಸುಧಾಕರ ಆ ಮನೆಯ ಒಬ್ಬನೇ ಮಗ. ಕಡಿಮೆ ಆದಾಯದ ಖಾಸಗಿ ಸಂಸ್ಥೆಯ ಕೆಲಸ ಅವನಿಗೆ. ವಯಸ್ಸಾದ ತಂದೆ ತಾಯಿಗಳ. ನೋಡಿಕೊಳ್ಳುವ ಜವಾಬ್ದಾರಿ ಆತನದೇ. ಸೀತಾರಾಮಯ್ಯ ವಯಸ್ಸಾದ ಕಾಲದಲ್ಲಿ ಮಗಳೇ ಆಧಾರ ಎಂದು ನಂಬಿ ದ್ದರು. ಆದರಂತೆ ರಮೆ ತಂದೆಯನ್ನು ತನ್ನ ಮನೆಗೆ ಕರೆದುಕೊಂಡು ಹೋದಳು. ಸುಧಾ ಕರನೂ ಅದಕ್ಕೇನೂ ವಿರೋಧ ತೋರಲಿಲ್ಲ. ಆದರೆ ಬೀಗಿತ್ತಿಯ ಕೊಂಕು ಮಾತುಗಳು, ಮಗಳ ಅಸಹಾಯ ಕತೆ ಇವು ಸೀತಾರಾಮಯ್ಯ ಪುನಃ ತಮ್ಮ ಊರಿಗೆ ಮರಳುವಂತೆ ಮಾಡಿದವು.

ವಯಸ್ಸಾಗಿದ್ದ ಅವರಿಗೆ ಆದಾಯದ ಯಾವ ಆಧಾರವೂ ಇರಲಿಲ್ಲ. ಊಟ ಬೇಯಿಸಿ ಹಾಕುವವರೂ ಇರಲಿಲ್ಲ. ಸ್ವಾಭಿಮಾನಿಗಳಾ ಗಿದ್ದ ಅವರಿಗೆ ಬೇರೆಯವರಿಂದ ಬೇಡಿ ತಿನ್ನುವುದು ಸರಿಯೆನಿಸಲಿಲ್ಲ. ಸರಿ ಒಂದು ಬೆಳಿಗ್ಗೆ ಊರಿನ ಕೆರೆಗೆ ಸ್ನಾನಕ್ಕೆಂದು


ಎಲ್ಲಾ ಹಸುರು
ಎಣ್ಣೆಗಳು ನಿಮಗೆ
ಒಳ್ಳೆಯವು.
ಆದರೆ, ನೀವು
ಶುದ್ಧ ತೆಂಗಿನೆಣ್ಣೆಗೆ 22
ಆಯುರ್ವೇದೀಯ
ಗಿಡಮೂಲಿಕೆಗಳು,
50 ವರ್ಷಗಳ
ಅನುಭವ ಮತ್ತು
2000 ವರ್ಷಗಳ
ಹಿಂದಿನ
ಆಯುರ್ವೇದೀಯ
ಸಲಹೆಯನ್ನು
ಸೇರಿಸಿ ಇದರ
ಒಂದೇ ಒಂದು
ಬೊಟ್ಟು
ಕ್ಷತಕವಾಗಲು
ಬಿಡದಾಗ ಸಿಗುವ
ಎಣ್ಣೆ ನಿಮ್ಮ
ಶರೀರಕ್ಕೂ
ಮಿದುಳಿಗೂ
ಅತ್ಯುತ್ತಮ.
ರಾಮತೀರ್ಥ
ಬ್ರಾಹ್ಮಿ ತೈಲಾ
ನಿಮ್ಮ
ತನು ಮನಕ್ಕಾಗಿ
ಆಯುರ್ವೇದೀಯ
ಔಷಧ.

ಹೋದವರು ತಿರುಗಿ ಬರಲೇ ಇಲ್ಲ. ಮೂರು ದಿನಗಳ ನಂತರ ಅವರ ಹೆಣ ನೀರಿನಲ್ಲಿ ತೇಲುತ್ತಿತ್ತು.

ಇಲ್ಲಿ ಪರಿಸ್ಥಿತಿ ಸೀತಾರಾಮಯ್ಯನವರನ್ನು ಆತ್ಮಹತ್ಯೆಗೆ ಪ್ರೇರೇಪಿಸಿತು. ವಯಸ್ಸಾದ ಒಂಟಿ ಮುದುಕನ ಬಾಳು ಮಗಳನ್ನು ಆಧರಿಸಿದೆ ಎಂಬ ಮನವರಿಕೆ ರಮೆಯ ಅತ್ತೆಗೆ ಇದ್ದಿದ್ದರೆ ಸ್ವಲ್ಪ ತಾಳ್ಮೆಯಿಂದ ವರ್ತಿಸಿದ್ದಿದ್ದರೆ, ಸೀತಾರಾಮಯ್ಯನವರು ಆತ್ಮಹತ್ಯೆಗೆ ಪ್ರಯತ್ನಿಸದೆ ತಮ್ಮ ಉಳಿದ ಆಯುಷ್ಯವನ್ನು ನೆಮ್ಮದಿಯಿಂದ ಕಳೆಯಬಹುದಿತ್ತು.

ಆತ್ಮಹತ್ಯೆ ಮಾಡಿಕೊಳ್ಳುವವರಲ್ಲಿ ವಯಸ್ಸಿನ ಭೇದವಿರದಿದ್ದರೂ ಹೆಚ್ಚಾಗಿ ಈ ಪಿಡುಗಿಗೆ ಬಲಿಯಾಗುವುದು ಯುವಕರು. ಅವರು ಆತ್ಮಹತ್ಯೆಯಿಂದ ದೂರವಿರಬೇಕಾದರೆ, ಪ್ರತಿಯೊಂದು ಕೆಲಸವನ್ನು ವಿವೇಚನೆಯಿಂದ ಮಾಡುವುದನ್ನು ರೂಢಿಸಿಕೊಳ್ಳಬೇಕು. ಸಮಾಜದ ಅಂಥ ಕಟ್ಟುನಿಟ್ಟುಗಳನ್ನು ಕಿತ್ತೆಸೆದು ಧೈರ್ಯದಿಂದ ಮುನ್ನುಗ್ಗುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು. ಬಂದ ಕಷ್ಟ ಕಾರ್ಪಣ್ಯಗಳನ್ನು ವಿವೇಚನೆಯಿಂದ ಚಾಣಾಕ್ಷತೆಯಿಂದ ಎದುರಿಸುವ ಪ್ರವೃತ್ತಿ ಎಂಥ ಇಕ್ಕಟ್ಟಿನ ಪರಿಸ್ಥಿತಿಯೇ ಆಗಲಿ ಎದುರಿಸುವ ಸ್ಥೈರ್ಯ ಬೆಳೆಸಿಕೊಳ್ಳಬೇಕು. ಇದಕ್ಕೆ ಸಮಾಜ, ಪಾಲಕರು, ನಿಕಟವರ್ತಿಗಳ ಸಹಾಯವೂ ಅತ್ಯಗತ್ಯ. ಚಿಕ್ಕ ಮಕ್ಕಳ ಆತ್ಮಹತ್ಯೆಯ ನಿಯಂತ್ರಣದಲ್ಲಿ ಪೋಷಕರು ಪ್ರಮುಖ ಪಾತ್ರ ವಹಿಸಬೇಕಾಗುತ್ತದೆ. ಮಕ್ಕಳಲ್ಲಿ ಜೀವನದ ಬಗ್ಗೆ ಆಸಕ್ತಿ ಮೂಡಿಸುವುದು, ಮನಃಸ್ಥೈರ್ಯ ಮೂಡಿಸುವುದು, ಕೇವಲ ಗೆಲುವಿಗೆ ಮಾತ್ರ ಪ್ರೋತ್ಸಾಹ ಕೊಟ್ಟು, ಸುಮ್ಮನಾಗದೆ ವೈಫಲ್ಯಗಳೆದುರಾದಾಗ ಅದನ್ನು ಧೈರ್ಯದಿಂದ ಎದುರಿಸುವ ಎದೆಗಾರಿಕೆ ಬೆಳೆಸುವುದು ಮಹತ್ವದ್ದು.

ಪ್ರೌಢರು ನಿಯತ್ತು, ಪ್ರಾಮಾಣಿಕತೆಗಳಿಗೆ ನ್ಯಾಯ ದೊರೆಯದಿದ್ದಾಗ ಅನ್ಯಾಯದ ವಿರುದ್ಧ ಹೋರಾಡಿ ಸಮಾಜದ ಪಿಡುಗುಗಳನ್ನು ತೊಡೆದುಹಾಕುವ ಪ್ರಯತ್ನ ಮಾಡಿ ಮಕ್ಕಳು ಹಾಗು ಯುವ ಜನಾಂಗಕ್ಕೆ ಮಾರ್ಗದರ್ಶಕರಾಗಬೇಕು.

ಅಸಹಾಯರಾದ ವೃದ್ಧರಿಗೆ ಸಹಾಯ ಹಸ್ತ ನೀಡುವುದು ಮಕ್ಕಳು ಬಂಧುಗಳು ಹಾಗೂ ನಮ್ಮ ನಿಮ್ಮೆಲ್ಲರ ಕರ್ತವ್ಯ. ●

ಆಹಾ ! ಆ ದಿನಗಳೇ ದಿನಗಳು !

ಬಂಗಾಲದಲ್ಲಿ ಶಾಯಿಸ್ತೆಖಾನನು ನವಾಬನಾಗಿದ್ದಾಗ ಅಕ್ಕಿಯ ಬೆಲೆ ಇಳಿದು ರೂಪಾಯಿಗೆ 8 ಮಣದಷ್ಟಾಗಿ ಹೋಯಿತು. ಆಗ ನವಾಬನು ಢಾಕಾ ಕೋಟೆಯ ಒಂದು ಬಾಗಿಲಿಂದ ಹೊರಬಿದ್ದು ಆ ಬಾಗಿಲು ಮುಚ್ಚಿಸಿಬಿಟ್ಟನು. "ಇನ್ನೊಮ್ಮೆ ಅಕ್ಕಿಯ ಬೆಲೆ ರೂಪಾಯಿಗೆ 8 ಮಣಕ್ಕೆ ಬಂದಾಗ ಈ ಬಾಗಿಲು ತೆರೆಯಿಸಲಾಗುವುದು" ಎಂದಾತ ಸಾರಿದನಂತೆ. ಇದು ಇಸವಿ 1675ರ ಕಥೆ.

ಅಕ್ಕಿ ಇಷ್ಟು ಅಗ್ಗವೇ ಎಂದು ಬಾಯಿ ತೆರೆಯುವ ಅಗತ್ಯವಿಲ್ಲ. 1632ರಲ್ಲಿ ಬಂಗಾಲಕ್ಕೆ ಬಂದ ಯಾತ್ರಿಕನಾದ ಸೆಬಾಸ್ಟಿಯನ್ ಮಾನ್ರಿಜೆ ಅಕ್ಕಿ ಅಲ್ಲಿ ರೂಪಾಯಿಗೆ 8 ಮಣ ಮಾರುತ್ತಿತ್ತೆಂದು ಬರೆದಿಟ್ಟಿದ್ದಾನೆ. ಢಾಕಾ ಪಟ್ಟಣವು ಬಂಗಾಲದ "ಭತ್ತದ ಕಣಜ"ದ ನಡುವೆ ಇದ್ದುದರಿಂದ ಅಲ್ಲಿ ಅಕ್ಕಿ ಇನ್ನೂ ಅಗ್ಗವಿತ್ತು.

1789ರಷ್ಟು ಹೊತ್ತಿಗೆ ದರಗಳು ಬಹಳ ಏರಿಬಿಟ್ಟಿದ್ದವು. ಆದರೂ ರೂಪಾಯಿಗೆ 8 ಮಣ ಭತ್ತ ಸಿಗುತ್ತಿತ್ತು. ಮರುವರ್ಷವೇ ಅದು ಇನ್ನೂ ತುಟ್ಟಿಯಾಗಿ ರೂಪಾಯಿಗೆ 2 ಮಣವಾಯಿತು ಎಂದು ಕೋಲ್‌ಬ್ರುಕ್ ಬರೆದಿದ್ದಾನೆ.

ಆದರೆ ಎಂಟು ಶತಮಾನಗಳ ಹಿಂದೆ ಹಿಂದೂ ಯುಗದಲ್ಲಿ ಅಕ್ಕಿಯ ದರ ಹೇಗಿತ್ತು? ಸ್ಥಿರವಾದ ಯಾವ ಉಲ್ಲೇಖಗಳೂ ಸಿಗುವುದಿಲ್ಲ. ಆದರೂ 1100-1200 ನಡುವೆ ಆಳಿದ ಸೇನ ವಂಶದ ರಾಜರ ಕಾಲದಲ್ಲಿ ಪ್ರತಿ "ದ್ರೋಣ" ಭೂಮಿಗೆ 15 "ಪುರಾಣ" ಭೂಕಂದಾಯ ಇತ್ತೆಂದು ತಿಳಿಯುತ್ತದೆ. ಇದರ ಮೇಲಿಂದ ಲೆಕ್ಕ ಹಾಕಿ ಯತೀಂದ್ರ ಮೋಹನ ದತ್ತರು ರೂಪಾಯಿಗೆ ಆಗ 9.7 ಮಣ ಅಕ್ಕಿ ಸಿಗುತ್ತಿರಬೇಕೆಂದು ಅಂದಾಜು ಮಾಡಿದ್ದಾರೆ.

ವಿನಾಶದ ಅಂಚಿನಲ್ಲಿ

ಕಡಲಾಮೆ

● ಕೆ.ಆರ್. ವಿನೀತ್ ಮತ್ತು
ವಿಚಿತ್ರ ಕುಮಾರ್ ಶೆಟ್ಟಿ ●

ವನ್ಯಜೀವಿಗಳ ಸಂರಕ್ಷಣೆಯಲ್ಲಿ ನಮ್ಮ ದೇಶ ಖರ್ಚು ಮಾಡಿದಷ್ಟು ಬೇರಾವ ಅಭಿವೃದ್ಧಿಶೀಲ ರಾಷ್ಟ್ರವೂ ಖರ್ಚು ಮಾಡುತ್ತಿಲ್ಲ. ಆದರೆ ನಮ್ಮ ಸಾಗರ ಸಸ್ತನಿಗಳ ಮತ್ತು ಸರಿಸೃಪಗಳ ಸ್ಥಿತಿ ಇಂದು ಶೋಚನೀಯವಾಗಿದೆ. ಮಾನವನ ದುರಾಸೆ ಮತ್ತು ಅಜ್ಞಾನದಿಂದಾಗಿ ನಮ್ಮ ಸಾಗರ ಸಸ್ತನಿಗಳ ಮತ್ತು ಸರಿಸೃಪಗಳ ವಂಶ ದಿನೇ ದಿನೇ ನಶಿಸುತ್ತಿದೆ. ನಮ್ಮ ದೇಶದ ಅಧೀನಕ್ಕೆ ಒಳಪಟ್ಟಿರುವ 200 ಮೈಲಿ ದೂರದ ವರೆಗಿನ ಸಾಗರದ ವ್ಯಾಪ್ತಿಯಲ್ಲಿರುವ ಸುಮಾರು 30 ಜಾತಿಯ ಸಾಗರ ಸಸ್ತನಿಗಳ, ಐದು ಜಾತಿಯ ಕಡಲಾಮೆಗಳ ಮತ್ತು ಉಪ್ಪು ನೀರಿನ ಮೊಸಳೆಯ ಸಂತತಿಯ ಸಂರಕ್ಷಣೆಯ ಹೊಣೆ ನಮ್ಮದಾಗಿದೆ. 'ಸಮುದ್ರಹಸು' ಎಂದು ಕರೆಯಲ್ಪಡುವ 'ಡ್ಯೂಗಾಂಗ್' ಎನ್ನುವ ಸಸ್ತನಿಯು ಬಹಳಷ್ಟು ಸಂಖ್ಯೆಯಲ್ಲಿ ಹಿಡಿಯಲ್ಪಟ್ಟ ಕಾರಣದಿಂದಾಗಿ ಈಗ ಅದರ ಸಂತತಿ ತೀವ್ರಗತಿಯಲ್ಲಿ ನಶಿಸುತ್ತಿದೆ. ಅದೇ ದಾರಿಯಲ್ಲಿರುವ ಸರೀಸೃಪಗಳಾದ ಉಪ್ಪುನೀರಿನ ಮೊಸಳೆ ಮತ್ತು ಕಡಲಾಮೆಯ ರಕ್ಷಣೆಯ ಬಗ್ಗೆ ಭಾರತ ಸರಕಾರ ಇತ್ತೀಚೆಗೆ ಹೆಚ್ಚಿನ ಗಮನ ಹರಿಸಿರುವುದು ತುಂಬಾ ಸಂತೋಷದ ವಿಷಯ. ಜಗತ್ತಿನ ಏಳು ವಿಧದ ಕಡಲಾಮೆಗಳಲ್ಲಿ ಆರು ಪ್ರಭೇದಗಳು ವಿನಾಶದ ಅಂಚಿನಲ್ಲಿ ಹಾಗೂ ಇವುಗಳಲ್ಲಿ ಐದು ಜಾತಿಯ ಕಡಲಾಮೆಗಳು ಭಾರತದಲ್ಲಿವೆ. ಅವು ಯಾವುವೆಂದರೆ ಲೆದರ್‌ಬ್ಯಾಕ್, ಹಾಕ್ಸ್‌ಬಲ್, ಗ್ರೀನ್ ಆಲಿವ್‌ರಿಡ್ಲೇ ಮತ್ತು ಲಾಗ್ಗರ್‌ಹೆಡ್ ಈ ಐದು ವಿಧದ ಕಡಲಾಮೆಗಳನ್ನು ವಿಪತ್ತಿನಲ್ಲಿರುವ ಪ್ರಾಣಿಗಳೆಂದು ಘೋಷಿಸಲ್ಪಡಲಾಗಿದ್ದರೂ ಇವುಗಳನ್ನು ಒರಿಸ್ಸಾ, ಪಶ್ಚಿಮ ಬಂಗಾಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿಯೂ ಇತರ ಕರಾವಳಿ ರಾಜ್ಯಗಳಾದ ಕೇರಳ, ಕರ್ನಾಟಕ, ಆಂಧ್ರಪ್ರದೇಶ, ಗೋವಾ ಹಾಗೂ ಪಾಂಡಿಚೆರಿ, ಲಕ್ಷದ್ವೀಪ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಕಡಿಮೆ ಪ್ರಮಾಣದಲ್ಲಿಯೂ ಹಿಡಿಯಲಾಗುತ್ತಿದೆ. ಈ ಮೇಲೆ ಹೇಳಿದ ಕಡಲಾಮೆಗಳಲ್ಲದೆ ನಮ್ಮಲ್ಲಿ ಸುಮಾರು 25 ಜಾತಿಯ ಸಿಹಿನೀರಿನ ಆಮೆಗಳೂ ಇವೆ. ಇವುಗಳಲ್ಲಿ ಭಾರತೀಯ ಮೃದು ಚಿಪ್ಪಿನ ಆಮೆ (ಲಿಸ್ಸೆಲಿಯಸ್ ಪಂಕ್ಟೇಟು) ಭಾರತೀಯ ಗುಡಾರ ಆಮೆ (ಕಚುಗಾ ಟೆಕ್ಟಾ ಟೆಕ್ಟಾ), ನವಿಲು ಗುರುತಿನ ಮೃದು ಚಿಪ್ಪಿನ ಆಮೆ (ಟಯೋನಿಕ್ಸ್ ಹರೆನಮ್) ಮುಂತಾದ ಆರು ಬಗೆಯ ಆಮೆಗಳನ್ನು ವನಜೀವಿ ಸಂರಕ್ಷಣಾ ಕಾಯಿದೆಯಲ್ಲಿ ಹೆಸರಿಸಲಾಗಿದ್ದರೂ ಅವುಗಳನ್ನು ಹಿಡಿಯುವುದರ ಹಾಗೂ ಮಾರುವುದರ ಬಗ್ಗೆ ಕಠಿಣ ನಿರ್ಬಂಧಗಳೇನೂ ಇಲ್ಲದಿರುವುದರಿಂದ ಇವುಗಳನ್ನು ಸಾಕಷ್ಟು

ಪ್ರಮಾಣದಲ್ಲಿ ಮುಖ್ಯವಾಗಿ ಪಶ್ಚಿಮ ಬಂಗಾಳದಲ್ಲಿ ಹಿಡಿದು ಮಾರಲಾಗುತ್ತಿದೆ.

ಕಡಲಾಮೆಯ ಸಂತಾನೋತ್ಪತ್ತಿಯ ರೀತಿಯೇ ಸಂತತಿಯು ಕ್ಷೀಣಿಸಲು ಕಾರಣವೆ?

ಕಡಲಾಮೆಗಳನ್ನು ಬಲೆಯಲ್ಲಿ ಅತಿ ಸುಲಭವಾಗಿ ಹಿಡಿಯಬಹುದು. ಅಲ್ಲದೆ ಅವು ಸಂಯೋಗ ಸಮಯದಲ್ಲಿ ಬಹು ಮಂದಗಾಮಿಗಳಾಗಿದ್ದು ಜೊತೆಜೊತೆಯಾಗಿ ಗುಂಪು ಕಟ್ಟಿಕೊಂಡು ಸಮುದ್ರ ತೀರಕ್ಕೆ ಹತ್ತಿರದಲ್ಲಿಯೇ ಇರುತ್ತವೆ. ಇಂತಹ ಸಮಯದಲ್ಲಿಯೂ ಅವುಗಳು ಸುಲಭವಾಗಿ ಹಿಡಿಯಲ್ಪಡುತ್ತವೆ.


ನವಂಬರ್ ತಿಂಗಳಿಂದ ಮಾರ್ಚ್ ತಿಂಗಳವರೆಗೆ ಕಡಲಾಮೆಗಳು ಮೊಟ್ಟೆಯಿಡಲು ಸಮುದ್ರ ತೀರಕ್ಕೆ ಬರುತ್ತವೆ. ಹೆಣ್ಣು ಕಡಲಾಮೆಯು ಮೊಟ್ಟೆಯಿಡಲು ರಾತ್ರಿ ವೇಳೆ ಸಮುದ್ರದಂಡೆಗೆ ಬಂದು ಮರಳಿನಲ್ಲಿ ಆಳವಿಲ್ಲದ ಗುಂಡಿ ತೋಡಿ ಸುಮಾರು ನೂರರಿಂದ ನೂರೈವತ್ತು ಮೊಟ್ಟೆಗಳನ್ನಿಟ್ಟು, ನಂತರ ಉಸುಕಿನಿಂದ ಅದನ್ನು ಮುಚ್ಚುತ್ತದೆ. ಹೀಗೆ ಉಸುಕಿನಲ್ಲಿ ಇಟ್ಟ ಮೊಟ್ಟೆಗಳು ಬೇಸಿಗೆಯ ಬಿಸಿಲ ಶಾಖಕ್ಕೆ 55 ರಿಂದ 60 ದಿವಸಗಳಲ್ಲಿ ಒಡೆದು ಮರಿಗಳು ಹೊರ ಬರುತ್ತವೆ. ಮೊಟ್ಟೆಯಿಂದ ಹೊರಬಂದ ಮರಿಗಳು ಸಮುದ್ರದೆಡೆಗೆ ಧಾವಿಸುವ ಪ್ರವೃತ್ತಿಯನ್ನು ಹೊಂದಿರುತ್ತವೆ. ಈ ಅವಸ್ಥೆಯಲ್ಲಿ ಅವು ಹೆಚ್ಚಾಗಿ ಕೊಲ್ಲಲ್ಪಡುವುದರಿಂದ ಶೇಕಡಾ 25ರಷ್ಟು ಮರಿಗಳು ಸಮುದ್ರ ಸೇರಿ ಬದುಕುಳಿದರೆ ಹೆಚ್ಚು. ಸಂರಕ್ಷಣಾಕಾರರು ಇಂತಹ ಮರಿಗಳನ್ನು ಒಂದು ವರ್ಷ ಕಾಲದವರೆಗೆ ರಕ್ಷಿತ್ ಪೆನ್ (pen)ಗಳಲ್ಲಿ ಸಾಕಿ, ನಂತರ ಸಮುದ್ರದಲ್ಲಿ ಬಿಡುವುದರಿಂದ ಅವುಗಳ ಸಾವಿನ ಪ್ರಮಾಣ ಗಮನಾರ್ಹವಾಗಿ ಕಡಿಮೆಯಾಗುತ್ತಿದೆ.

ಕಡಲಾಮೆಗಳು ಮೊಟ್ಟೆಯನ್ನಿಟ್ಟ ಸ್ಥಳವನ್ನು ಕಂಡುಹಿಡಿಯುವುದು ಮತ್ತು ಮೊಟ್ಟೆಯಿಡಲು ರಾತ್ರಿ ವೇಳೆ ಸಮುದ್ರದಿಂದ ಮರಳದಂಡೆಯ ಮೇಲೆ ಬರುವ ಹೆಣ್ಣು ಕಡಲಾಮೆಗಳನ್ನು ಹಿಡಿಯುವುದು ತುಂಬಾ ಸುಲಭ. ಕಡಲಾಮೆಯ ಮಾಂಸಕ್ಕಿರುವ ಅತಿ ಬೇಡಿಕೆಯ ಜೊತೆಗೆ ಮೊಟ್ಟೆಯಿಡುವ ಕಾಲದಲ್ಲಿ ಸಮುದ್ರ ತೀರದಲ್ಲಿ ಸುಲಭವಾಗಿ ಹಿಡಿಯಲು ಸಿಗುವುದರಿಂದ ಅವುಗಳ ವಂಶ ಶೀಘ್ರವಾಗಿ ಕ್ಷಯಿಸುತ್ತಿದೆ. ಈ ಸಂದಿಗ್ಧ ಕಾಲದಲ್ಲಿ ಬಲಿತ ಹೆಣ್ಣು ಕಡಲಾಮೆ ಮಾತ್ರವಲ್ಲದೆ ಅದರ ಮೊಟ್ಟೆಗಳು ಹಾಗೂ ಮೊಟ್ಟೆಯೊಡೆದ ಮರಿಗಳೂ ಮಾಂಸಾಹಾರಿ ಪ್ರಾಣಿ ಪಕ್ಷಿ ಹಾಗೂ ದುರಾಸೆಯ ಮನುಷ್ಯನ ಕರಾಳ ದೃಷ್ಟಿಗೆ ಸಿಕ್ಕಿ ನಾಶವಾಗುತ್ತವೆ. ಮರಳ ದಂಡೆಯ ಮೇಲೆ ಮೊಟ್ಟೆಯಿಡಲು ಬರುವ ಹೆಣ್ಣು ಕಡಲಾಮೆಗಳೇ ಹೆಚ್ಚಾಗಿ ಹಿಡಿಯಲ್ಪಡುತ್ತಿದ್ದುದರಿಂದ ಗಂಡು-ಹೆಣ್ಣುಗಳ ಸಂಖ್ಯೆಯಲ್ಲಿ ಅಸಮತೋಲನವುಂಟಾಗಿದೆ. ಇದರಿಂದಾಗಿ ಕಡಲಾಮೆಯ ವಂಶಾಭಿವೃದ್ಧಿಗೆ ಅತಿಯಾದ ಹಾನಿವುಂಟಾಗಿದ್ದು, ಸಂತತಿ ಕ್ಷಯಕ್ಕೆ ಒಂದು ಮುಖ್ಯ ಕಾರಣವಾಗಿರುತ್ತದೆ.


ಕಡಲಾಮೆಯ ಮಾಂಸ ಮತ್ತು ಮೊಟ್ಟೆಗೆ ಕಲಕತ್ತಾ ಮಾರುಕಟ್ಟೆಯಲ್ಲಿ ಬಹಳ ಬೇಡಿಕೆಯಿದೆ. ಇಲ್ಲಿ ಪ್ರತಿವರ್ಷ ಸ್ಥಳೀಯವಾಗಿ ಮಾರಲ್ಪಡುತ್ತಿರುವ ಮತ್ತು ಹೊರದೇಶಕ್ಕೆ ನಿರ್ಯಾತಗೊಳ್ಳುತ್ತಿರುವ ಕಡಲಾಮೆಯ ಒಟ್ಟು ಬೆಲೆ ಸುಮಾರು ನಾಲ್ಕುಕೋಟಿ

ಕರ್ನಾಟಕದ ಕರಾವಳಿಯಲ್ಲಿ


ಇತರ ರಾಜ್ಯಗಳಂತೆ ಕರ್ನಾಟಕದಲ್ಲಿಯೂ ಅರಣ್ಯ ಇಲಾಖೆಯು ಕಡಲಾಮೆ ಸಂರಕ್ಷಣೆಯಲ್ಲಿ ಮುಂಚೂಣಿಯಲ್ಲಿವೆ. ಮಂಗಳೂರು ವಿಶ್ವವಿದ್ಯಾನಿಲಯದ ಜೀವ ವಿಜ್ಞಾನ ವಿಭಾಗದವರು ಕಡಲಾಮೆಯ ಜೀವನ ಕ್ರಮವನ್ನು ಅಭ್ಯಸಿಸುತ್ತಲಿದ್ದಾರೆ. ಮೀನುಗಾರಿಕೆ ಹಾಗೂ ಇತರ ಇಲಾಖೆಗಳು ಮೀನುಗಾರರಲ್ಲೂ ಜನಸಾಮಾನ್ಯರಲ್ಲೂ ಕಡಲಾಮೆಯ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುತ್ತಿವೆ. ಅರಣ್ಯ ಇಲಾಖೆಯು ಎರಡು ವರ್ಷಗಳ ಪರಿಶ್ರಮದಿಂದಾಗಿ ಮಂಗಳೂರು, ಕುಂದಾಪುರ, ಹೊನ್ನಾವರ ಕರಾವಳಿಗಳಿಂದ ಸಂಗ್ರಹಿಸಿದ ಸುಮಾರು ಐದು ಸಾವಿರ ಮೊಟ್ಟೆಗಳಿಂದ ದೊರಕಿದ ಒಟ್ಟು ಎರಡು ಸಾವಿರ ಕಡಲಾಮೆಯ ಮರಿಗಳನ್ನು ಅರಬ್ಬಿ ಸಮುದ್ರದಲ್ಲಿ ಇತ್ತೀಚೆಗೆ ಬಿಡಲಾಯಿತು.



ಲೆದರ್ ಬ್ಯಾಕ್ ಟರ್ಟ್ಲ್



ಹಾಕ್ಸ್‌ಬಿಲ್ ಟರ್ಟ್ಲ್



ಗ್ರೀನ್ ಟರ್ಟ್ಲ್


ಲಾಮೆಗಳ ಹತ್ಯೆಯಾಗಬಹುದೆಂದು ಅಂದಾಜು ಮಾಡಲಾಗಿದೆ. ಇವುಗಳ ರಕ್ತವನ್ನು ಕೆಲವೊಂದು ರೋಗಗಳಿಗೆ ನಿವಾರಕವೆಂದೂ, ಮೊಟ್ಟೆಯು ಕಾಮೋತ್ತೇಜಕವೆಂದೂ ಜನರಲ್ಲಿ ನಂಬಿಕೆಯಿರುವುದೇ ಇವುಗಳ ಅತಿಯ ಬೇಡಿಕೆಗೆ ಕಾರಣ. ಇದರಿಂದಾಗಿ ಒರಿಸ್ಸಾ ರಾಜ್ಯದಲ್ಲಿ ಇವುಗಳಿಗೆ ಬೇಡಿಕೆಯಿಲ್ಲದಿದ್ದರೂ ಇವುಗಳನ್ನು ಅಲ್ಲಿ ಯಥೇಚ್ಛವಾಗಿ ಹಿಡಿದು ಲಾರಿ ಮತ್ತು ರೈಲುಗಳಲ್ಲಿ ಕಲ್ಕತ್ತಾ ಮಾರುಕಟ್ಟೆಗಳಿಗೆ ಸಾಗಿಸಲಾಗುತ್ತಿದೆ.

ಓರಿಸ್ಸಾ ಕರಾವಳಿಯಲ್ಲಿ ಕಡಲಾಮೆಯ ವೈಶಿಷ್ಟ್ಯ

ಒರಿಸ್ಸಾ ರಾಜ್ಯದ ಎತ್ತರ ಕರಾವಳಿಯ ಗಹಿರ್‌ಮಾತಾ-ಇಕಾಕುಲಾ ಸಮುದ್ರ ತೀರಕ್ಕೆ ಪ್ರತಿವರ್ಷ ಸಾವಿರಾರು ಆಲಿವರಿಡ್‌ಲೇ ಜಾತಿಯ ಕಡಲಾಮೆಗಳು ಗುಂಪುಗುಂಪಾಗಿ ಮೊಟ್ಟೆಯಿಡಲು ಬರುತ್ತವೆ. ಇದು ಪ್ರಪಂಚದಲ್ಲಿಯೇ ಅತಿ ವಿಸ್ತಾರವಾದ ಆಲಿವರಿಡ್‌ಲೇ ಕಡಲಾಮೆ ಮೊಟ್ಟೆಯಿಡುವ ಸ್ಥಳವೆಂದು ಪ್ರಖ್ಯಾತಿಗಳಿಸಿದೆ. ಮುಖ್ಯವಾಗಿ ಇಲ್ಲಿಂದ ಮತ್ತು ಒರಿಸ್ಸಾದ ಇತರ ಕರಾವಳಿ ಪ್ರದೇಶಗಳಿಂದಲೂ ಸಾವಿರಾರು ಕಡಲಾಮೆಗಳನ್ನು ಹಾಗೂ ಅವುಗಳ ಮೊಟ್ಟೆಗಳನ್ನು ಹಿಡಿದು ಕಲಕತ್ತಾ ಮಾರುಕಟ್ಟೆಗೆ ಸಾಗಿಸಲಾಗುತ್ತಿದೆ. ಅಲ್ಲದೆ ಈ ಕರಾವಳಿ ಪ್ರದೇಶದಲ್ಲಿ ಹೇರಳವಾಗಿರುವ ಕಡಲಾಮೆ ಮೊಟ್ಟೆಗಳು ಹಲವಾರು ಮಾಂಸಾಹಾರಿ ಪ್ರಾಣಿಗಳಿಂದ ನಾಶಗೊಳಿಸಲ್ಪಡುತ್ತಿವೆ. ಇವುಗಳಿಂದಾಗಿಯೇ ಕಡಲಾಮೆಯ ಸಂತತಿಯು ಕ್ಷೀಣಿಸಿತೆಂದರೆ ತಪ್ಪಾಗಲಾರದು. ಇದಲ್ಲದೆ ಪಶ್ಚಿಮ ಬಂಗಾಳದ ಕರಾವಳಿಯ ಹಲವಾರು ಪ್ರದೇಶಗಳಿಂದಲೂ ಕಡಲಾಮೆಗಳನ್ನು ಕಲಕತ್ತಾ ಮಾರುಕಟ್ಟೆಗೆ ತರಲಾಗುತ್ತಿದೆ. ಇದೇ ರೀತಿ ತಮಿಳುನಾಡಿನ ತಿರುನೆಲವೇಲಿ ಮತ್ತು ಕನ್ಯಾಕುಮಾರಿ ಜಿಲ್ಲೆಗಳಲ್ಲಿಯೂ ಆಂಧ್ರ, ಕೇರಳ ಕರ್ನಾಟಕ ಗೋವಾ-ಮುಂತಾದ ಕರಾವಳಿ ರಾಜ್ಯಗಳಿಂದಲೂ ಹಾಗೂ ಕೇಂದ್ರಾಡಳಿತದ ಪ್ರದೇಶಗಳಾದ ಲಕ್ಷದ್ವೀಪ ಮತ್ತು ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲೂ ಕಡಲಾಮೆಗಳನ್ನು ಮತ್ತು ಅವುಗಳ ಮೊಟ್ಟೆಗಳನ್ನು ಹಿಡಿದು ಆಹಾರಕ್ಕಾಗಿ ಬಳಸಲಾಗುತ್ತಿದೆ.

ಕಡಲಾಮೆ ಸಂರಕ್ಷಣೆಯಲ್ಲಿ ಭಾರತದ ಯತ್ನ

ನಮ್ಮ ದೇಶದ ಒರಿಸ್ಸಾ ಮತ್ತು ಪಶ್ಚಿಮ ಬಂಗಾಳ ಕರಾವಳಿಗಳಲ್ಲಿ ವಂಶಾಭಿವೃದ್ಧಿ ನಡೆಸುವ ಆಲಿವ್ ರಿಡ್‌ಲೇ ಕಡಲಾಮೆಯು ಹಾಗೂ ಆಂಧ್ರ ತಮಿಳುನಾಡು, ಲಕ್ಷದ್ವೀಪ ಮತ್ತು ಅಂಡಮಾನ ನಿಕೋಬಾರ್ ದ್ವೀಪ ಸಮೂಹಗಳಲ್ಲಿ ತಮ್ಮ ವಂಶಾಭಿವೃದ್ಧಿಯನ್ನು ನಡೆಸುವ ಲೆದರ್‌ಬ್ಯಾಕ್ ಹಾಕ್ಸ್‌ಬಿಲ್ ಗ್ರೀನ್‌ಟರ್ಟಲ್ ಮತ್ತು



ಆಲಿವ್ ರಿಡ್ಲೇ ಟರ್ಟಲ್



ಲಾಗ್ಗರ್ ಹೆಡ್ ಟರ್ಟಲ್

ಗ್ರೀನ್ ಕಡಲಾಮೆಗಳ ಸಂರಕ್ಷಣೆಯ ಹೊಣೆ ನಮ್ಮೆಲ್ಲರದಾಗಿರುತ್ತದೆ. ಕಡಲಾಮೆಯನ್ನು ವಿಪತ್ತಿನಲ್ಲಿರುವ ಸರೀಸೃಪ ಎಂದು 1972 ರಲ್ಲಿ ಘೋಷಿಸಿದ್ದರೂ ಭಾರತದ ಕರಾವಳಿಯ ವಿವಿಧ ಕಡಲತೀರದಲ್ಲಿ ಮುಖ್ಯವಾಗಿ ಒರಿಸ್ಸಾದ ಗಹಿರ್‌ಮೌತಾ ಕಡಲತೀರ ಮತ್ತು ಪಶ್ಚಿಮ ಬಂಗಾಳದ ಕಡಲತೀರದಲ್ಲಿ ಅದರ ವಂಶಾಭಿವೃದ್ಧಿ ಮತ್ತು ಸಂತತಿಗೆ ಆಗುತ್ತಿರುವ ಹಾನಿಯನ್ನು ಮನಗಂಡ ನಿಸರ್ಗತಜ್ಞರು, ಪ್ರಾಣಿಶಾಸ್ತ್ರಜ್ಞರು ಮತ್ತು ಪ್ರಾಣಿ ಸಂರಕ್ಷಣಾ ಕಾಂಕ್ಷಿಗಳು ಆಗ ನಮ್ಮ ಪ್ರಧಾನಿಗಳಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರಿಗೆ ಸಮಸ್ಯೆಯ ಗಹನತೆ ಹಾಗೂ ಗಂಭೀರತೆಯನ್ನು ಬಿಂಬಿಸಿದರು. ಈ ಸಮಸ್ಯೆಯ ಆಳವನ್ನು ಮತ್ತು ಅವುಗಳ ಸಂರಕ್ಷಣೆಯಲ್ಲಿ ಭಾರತದ ಹೊಣೆಯನ್ನು ಮನಗಂಡ ಇಂದಿರಾರವರು 1982ರಲ್ಲಿ ಕಡಲಾಮೆ ಸಂರಕ್ಷಣಾ ಆಜ್ಞೆಯನ್ನು ಹೊರಡಿಸಿದರು.

ಇದು ಅಲ್ಲದೆ ಇವುಗಳ ಸಂರಕ್ಷಣಾ ಕಾರ್ಯವನ್ನು ಭಾರತ ಸರಕಾರ ಬಹು ಮುಖ್ಯಕಾರ್ಯಕ್ರಮವೆಂದು ಪರಿಗಣಿಸಿತು. ಈ ಕಾರ್ಯಕ್ರಮದ ಜವಾಬ್ದಾರಿಯನ್ನು ಮೊದಲಿಗೆ ಓರಿಸ್ಸಾ ರಾಜ್ಯದಲ್ಲಿ ಅರಣ್ಯ ಇಲಾಖೆ, ಭಾರತೀಯ ನೌಕಾಪಡೆ, ಕರಾವಳಿ ರಕ್ಷಣಾದಳ ಮತ್ತು ರಾಜ್ಯ ಮೀನುಗಾರಿಕಾ ಇಲಾಖೆಗಳಿಗೆ ವಹಿಸಿಕೊಡಲಾಯಿತು. ತದನಂತರ ಪಶ್ಚಿಮ ಬಂಗಾಳ, ಕೇರಳ, ಕರ್ನಾಟಕ, ಆಂಧ್ರ, ತಮಿಳುನಾಡುಗಳ ಅರಣ್ಯ ಇಲಾಖೆ ಮತ್ತು ಮೀನುಗಾರಿಕಾ ಇಲಾಖೆಗಳು ಕಡಲಾಮೆಗಳ ಸಂರಕ್ಷಣೆಗೆ ವಿವಿಧ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದು, ವಿವಿಧ ಮಾರ್ಗಗಳಲ್ಲಿ ಆ ದಿಸೆಯಲ್ಲಿ ಪ್ರಯತ್ನ ನಡೆಯುತ್ತಿದೆ ಹಾಗೂ ಸ್ವಲ್ಪ ಮಟ್ಟಿನ ಯಶಸ್ಸು ಈಗಾಗಲೇ ಲಭಿಸಿದೆ.

ಇವುಗಳಲ್ಲದೆ ವಿವಿಧ ಸರಕಾರಿ ಮತ್ತು ಖಾಸಗಿ ಸಂಸ್ಥೆಗಳು ಕಡಲಾಮೆಗಳ ಸಂರಕ್ಷಣೆಯ ಕಾರ್ಯಕ್ರಮಗಳನ್ನು ನಡೆಸುತ್ತಿವೆ. ಇವುಗಳಲ್ಲಿ ಕೇಂದ್ರೀಯ ಸಾಗರ ಮೀನುಗಾರಿಕಾ ಸಂಶೋಧನಾ ಸಂಸ್ಥೆ, ಜುವಾಲಾಜಿಕಲ್ ಸರ್ವೆ ಆಫ್ ಇಂಡಿಯಾ, ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ, ವರ್ಲ್ಡ್ ವೈಲ್ಡ್ ಲೈಫ್ ಇಂಡಿಯಾ, ಮದ್ರಾಸಿನ ಉರಗ ಉದ್ಯಾನ ಮತ್ತು ಕೇಂದ್ರಾಡಳಿತ ಪ್ರದೇಶಗಳಾದ ಪಾಂಡಿಚೇರಿ ಲಕ್ಷದ್ವೀಪ ಮತ್ತು ಅಂಡಮಾನ್ ನಿಕೋಬಾರ್ ದ್ವೀಪಗಳ ಅರಣ್ಯ ಮತ್ತು ಮೀನುಗಾರಿಕಾ ಇಲಾಖೆಗಳು ಮುಖ್ಯವಾದವುಗಳು.

ಕಡಲಾಮೆಯ ಭಾರಿ ಪ್ರಮಾಣದ ಬೇಡಿಕೆಯಿಂದಾಗಿ, ಅವುಗಳನ್ನು ಹಿಡಿಯುವವರಿಗೆ ಆರು ತಿಂಗಳಿನಿಂದ ಆರುವರ್ಷಗಳವರೆಗೆ ಜೈಲು ಶಿಕ್ಷೆದೊರೆಯುವ ಸಂಭವವಿದ್ದರೂ ಅವುಗಳನ್ನು ಮುಖ್ಯವಾಗಿ ಗಹಿರ್‌ಮಾತಾ, ಓರಿಸ್ಸಾದ ಗಹಿರಮಾತಾ ಕರಾವಳಿ ದಂಡೆಯಲ್ಲಿ ಕದ್ದು ಹಿಡಿಯಲಾಗುತ್ತಿದೆ. ಆ ಸಮಯದಲ್ಲಿ ಮೊಟ್ಟೆಯಿಡಲು ಸಮುದ್ರ ತೀರಕ್ಕೆ ಹತ್ತಿರದಲ್ಲಿಯೇ ಗುಂಪು ಗುಂಪಾಗಿ ಕೂಡಿರುವ ಕಡಲಾಮೆಗಳನ್ನು ಕದ್ದು ಹಿಡಿಯುವುದರಿಂದ ಅವುಗಳನ್ನು ಸಂರಕ್ಷಿಸುವುದು ಕಷ್ಟಕರವಾಗಿದೆ.

ಇಂತಹ ಸಂದರ್ಭವನ್ನು ನಮ್ಮ ಮೀನುಗಾರರ ಜೊತೆಗೆ ಬೇರೆ ದೇಶದ ಮೀನುಗಾರಿಕೆಯ ಹಡಗುಗಳೂ ದುರುಪಯೋಗಪಡಿಸಿಕೊಳ್ಳುತ್ತಿವೆ. ಇದನ್ನು ತಡೆಗಟ್ಟಲು ಒರಿಸ್ಸಾ ರಾಜ್ಯವು ಭಾರತೀಯ ನೌಕಾದಳ ಮತ್ತು ಕರಾವಳಿ ರಕ್ಷಣಾದಳಗಳ ಸಹಾಯವನ್ನು ಪಡೆದಿದೆ. ಅಲ್ಲದೆ ರೈಲುಗಳಲ್ಲಿ ಅಥವಾ ಇತರ ಯಾವುದೇ ವಾಹನಗಳಲ್ಲಿ ಕಡಲಾಮೆಗಳನ್ನು ಸಾಗಿಸುವುದನ್ನು ನಿಷೇಧಿಸಲಾಗಿದೆ. ಒರಿಸ್ಸಾ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಜನರಿಗೆ ಇವರ ಬಗ್ಗೆ ತಿಳುವಳಿಕೆಯುಂಟು ಮಾಡಲು ಪ್ರಾದೇಶಿಕ ವೃತ್ತಪತ್ರಿಕೆಗಳಲ್ಲಿ ಪ್ರಕಟಣೆಗಳನ್ನು ಹಾಗೂ ಲೇಖನಗಳನ್ನು ಪ್ರಕಟಿಸಲಾಗಿದೆ. ಅಲ್ಲದೆ ಇಲ್ಲಿಯ ಹಲವಾರು ಮೀನು ಮಾರಾಟ ಸ್ಥಳಗಳಿಗೆ ಮತ್ತು ಕರಾವಳಿಯ ಸಮೀಪದ ಹಳ್ಳಿಗಳಲ್ಲಿಯ ಕಡಲಾಮೆಯ ಅಕ್ರಮ ಸಂಗ್ರಹದ ಸ್ಥಳಗಳಿಗೆ ಅರಣ್ಯಾಧಿಕಾರಿಗಳು ದಾಳಿನಡೆಸಿ ಆಗಾಗ ಕಡಲಾಮೆಗಳನ್ನು

ಗಮನಿಸಬೇಕಾದ ಮುಖ್ಯ ಅಂಶಗಳು

1. ಕಡಲಾಮೆಗಳು ಮೊಟ್ಟೆ ಇಡುವ ನಮ್ಮ ಕರಾವಳಿಯ ಎಲ್ಲಾ ಪ್ರದೇಶಗಳನ್ನು ಗುರುತಿಸುವುದು. ಇಂತಹ ಸ್ಥಳಗಳಲ್ಲಿ ಅವುಗಳ ಮತ್ತು ಮೊಟ್ಟೆ ಮರಿಗಳ ಪೂರ್ಣ ರಕ್ಷಣೆಯ ದೃಷ್ಟಿಯಿಂದ ಮಾನವನ ಹಸ್ತಕ್ಷೇಪವನ್ನು ಕಡಿಮೆ ಮಾಡುವುದು.

2. ಮಾನವನ ಮತ್ತು ಮಾಂಸಾಹಾರಿ ಪ್ರಾಣಿಗಳಿಂದ ತೊಂದರೆಯಿರುವ ಸ್ಥಳಗಳಿಂದ ಕಡಲಾಮೆಗಳ ಮೊಟ್ಟೆಗಳನ್ನು ಸಂಗ್ರಹಿಸಿ, ಅನುಕೂಲ ಪರಿಸರದಲ್ಲಿರಿಸಿ, ಮರಿಗಳನ್ನು ಬೆಳೆಸಿ ಸಮುದ್ರಕ್ಕೆ ಬಿಡುವುದು.

3. ಕಡಲಾಮೆಗಳ ಸಂರಕ್ಷಣಾ ಕಾರ್ಯವನ್ನು ತೀವ್ರಗತಿಯಲ್ಲಿ ಜಾರಿಗೆ ತರುವುದಕ್ಕಾಗಿ ಅವುಗಳ ಸಂರಕ್ಷಣೆ ಮತ್ತು ನಿರ್ವಹಣೆಯಲ್ಲಿ ಅರಣ್ಯ ಮತ್ತು ಮೀನುಗಾರಿಕಾ ಇಲಾಖೆಯ ಸಿಬ್ಬಂದಿಗೆ ಹೆಚ್ಚಿನ ಮಾಹಿತಿ ಮತ್ತು ತರಬೇತಿ ಕೊಡುವುದು.

4. ಕಡಲಾಮೆಗಳು ಮೀನಿನ ಬಲೆಯಲ್ಲಿ ಸಿಕ್ಕಿ ಸಾಯುವ ಸಂಭವವನ್ನು ಕಡಿಮೆಮಾಡಲು ಇತ್ತೀಚೆಗೆ ಅಮೇರಿಕಾದಲ್ಲಿ ಬಳಕೆಯಲ್ಲಿ ಬಂದ ಟ್ರಾಲ್‌ಬಲೆಗಳನ್ನು ನಮ್ಮಲ್ಲೂ ಪ್ರಾಯೋಗಿಕವಾಗಿ ಉಪಯೋಗಿಸಿ, ಅದರ ಸಾಧ್ಯಾಸಾಧ್ಯತೆಯನ್ನು ಅಭ್ಯಸಿಸುವುದು.

5. ಕಡಲಾಮೆಗಳ ಜೀವನ ಚರಿತ್ರೆ, ಜೀವಶಾಸ್ತ್ರ, ಅವುಗಳ ಪರಾವಲಂಬಿಗಳು ಮತ್ತು ರೋಗರುಜಿನಗಳು ಹಾಗೂ ಅವು ಬಯಸುವ ನಿಸರ್ಗ, ಪರಿಸರಗಳ ಬಗೆಗೆ ಹೆಚ್ಚಿನ ಅಭ್ಯಾಸ ಮತ್ತು ಸಂಶೋಧನೆಗಳನ್ನು ಕೈಕೊಳ್ಳುವುದು.

6. ಸಂರಕ್ಷಣೆಯಲ್ಲಿ ಸಹಾಯವಾಗುವಂತಹ ಕಡಲಾಮೆಗಳ ಮತ್ತು ಅವುಗಳ ಮರಿಗಳ ಸ್ವಭಾವ ಹಾಗೂ ವಲಸೆ ಪ್ರವೃತ್ತಿಯ ಬಗ್ಗೆ ಸಂಶೋಧನೆ ನಡೆಸುವುದು.

7. ಮನರಂಜನೆಯ ಮತ್ತು ಪ್ರವಾಸ ಕೇಂದ್ರಗಳಲ್ಲಿ ಕಡಲಾಮೆಗಳ ಪ್ರದರ್ಶನ ಮತ್ತು ಅವುಗಳ ಸಂರಕ್ಷಣೆಯ ಬಗ್ಗೆ ಜನಜಾಗೃತಿಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು.

8. ಕಡಲಾಮೆಗಳ ಸಂಯೋಗ ಮತ್ತು ಮೊಟ್ಟೆಯಿಡುವ ಸಮಯದಲ್ಲಿ ಅವು ಕಲೆತ ಸಮುದ್ರ ಪ್ರದೇಶದಲ್ಲಿ ಮೀನು ಹಿಡಿಯುವುದನ್ನು ನಿಷೇಧಿಸುವುದು ಹಾಗೂ ಕಡಲಾಮೆಗಳ ಬೇಟೆಯನ್ನು ಕಾಯಿದೆ ಪ್ರಕಾರ ಶಿಕ್ಷೆಗೆ ಒಳಪಡಿಸುವುದು.

ಮೇಲೆ ವಿವರಿಸಿದ ಕೆಲವು ಅಂಶಗಳನ್ನು ಸರ್ಕಾರ ವಿವಿಧ ಸಂಘಸಂಸ್ಥೆಗಳು ಮತ್ತು ಜನರು ಜಾರಿಗೆ ತಂದಲ್ಲಿ ಕಡಲಾಮೆಯು ನಿರ್ನಾಮವಾಗಲಾರದೆಂದು ಧಾರಾಳವಾಗಿ ಹೇಳಬಹುದು.

ಅಕ್ರಮ ಸಂಗ್ರಹಕಾರರನ್ನು ಹಾಗೂ ಮಾರಾಟಗಾರರನ್ನು ಸೆರೆಹಿಡಿಯುತ್ತಾರೆ. ಗಹಿರಮಾತಾ ಕರಾವಳಿಯ ಇಕಾಕುಲಾ ಸಮುದ್ರ ತೀರದ ಸುಮಾರು 15 ಕಿಲೋಮೀಟರ್ ಉದ್ದಳ ದಂಡೆಗೆ ಪ್ರತಿವರ್ಷ ಜನವರಿ, ಫೆಬ್ರವರಿ, ಮತ್ತು ಮಾರ್ಚ್ ತಿಂಗಳಲ್ಲಿ ಸಾವಿರಾರು ಆಲಿವರಿಡ್ಲೇ ಕಡಲಾಮೆಗಳು ಮೊಟ್ಟೆಯಿಡಲು ಬರುವುದರಿಂದ ಕಳೆದ ಸುಮಾರು ಮೂರು ವರ್ಷದಿಂದ ಈ ಸಮಯದಲ್ಲಿ ಪ್ರತಿರಾತ್ರಿ ರಕ್ಷಣೆಗಾರರು ಬಂದೂಕು, ಟಾರ್ಚ್‌ಗಳನ್ನು ಹಿಡಿದು ಮೊಟ್ಟೆಯಿಡಲು ಬರುವ ಕಡಲಾಮೆಗಳನ್ನು ಹಾಗೂ ಮೊಟ್ಟೆ ಮತ್ತು ಮರಿಗಳನ್ನು ಕಾಯುತ್ತಾರಲ್ಲದೆ ಅವುಗಳ ಬಗ್ಗೆ ಅಂಕಿಅಂಶಗಳನ್ನು ಕೂಡಿಹಾಕುತ್ತಾರೆ. ಇವೆಲ್ಲವುಗಳಿಂದಾಗಿ ಈವರೆಗೆ ಸುಮಾರು ನೂರಕ್ಕೂ ಹೆಚ್ಚು ಕಡಲಾಮೆಗಳ್ಳರನ್ನು ಬಂಧಿಸಲಾಗಿದೆ. ತತ್ಪರಿಣಾಮವಾಗಿ ಈಗ ಈ ಸ್ಥಳಕ್ಕೆ ಮೊಟ್ಟೆಯಿಡಲು ಭೇಟಿ ಕೊಡುವ ಕಡಲಾಮೆಗಳ ಸಂಖ್ಯೆ ಒಂದು ಲಕ್ಷ ಎಪ್ಪತ್ತುಸಾವಿರದಿಂದ ಮೂರು ಲಕ್ಷದಾಟಿರುವುದು ತುಂಬಾ ಆಶಾದಾಯಕವಾಗಿದ್ದು ಸರಕಾರದ ಮುಖ್ಯವಾಗಿ ಅರಣ್ಯ ಇಲಾಖೆಯ ಪ್ರಯತ್ನಕ್ಕೆ ತಕ್ಕ ಪ್ರತಿಫಲ ದೊರೆಯುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಕಡಲಾಮೆಗಳ ಸಂರಕ್ಷಣೆಯಲ್ಲಿರುವ ಮತ್ತೊಂದು ಅಡಚಣೆಯೆಂದರೆ ಹಲವಾರು ಕಡಲಾಮೆಗಳು ಅಕಸ್ಮಾತ್ತಾಗಿ ಮೀನು ಹಿಡಿಯುವ ಬಲೆಗೆ ಸಿಕ್ಕಿಕೊಂಡು ಸಾಯುತ್ತಿರುವುದು. ಬದುಕುಳಿದವುಗಳನ್ನು ಸಮುದ್ರಕ್ಕೆ ವಾಪಸುಬಿಟ್ಟರೂ ಅವುಗಳ ಅಂಗಾಂಗಗಳಿಗಾದ ಪೆಟ್ಟಿನಿಂದಾಗಿ ಅವುಗಳು ಬದುಕುಳಿಯುವ ಸಾಧ್ಯತೆ ಬಹಳ ಕಡಿಮೆ.


ಈಗ ಗಹಿರ್‌ಮಾತಾ-ಇಕಾಕುಲಾ ಸಮುದ್ರದಂಡೆಯನ್ನು ಕಡಲಾಮೆಯ ಮೊಟ್ಟೆಯಿಡುವ ಮತ್ತು ಮರಿಸಾಕಾಣಿಕೆಯ ಸ್ಥಳವನ್ನಾಗಿ ಪರಿಗಣಿಸಲಾಗಿದೆ. ಇಲ್ಲಿ ಕಡಲಾಮೆಗಳು ಇಟ್ಟ ಮೊಟ್ಟೆಗಳಿಗೆ, ಮೊಟ್ಟೆಯೊಡೆದು ಮರಿಯಾಗುವವರೆಗೆ ರಕ್ಷಣೆಯ ಜೊತೆಗೆ ಎಲ್ಲಾ ಅನುಕೂಲಗಳನ್ನು ಒದಗಿಸಲಾಗಿದೆ ಮತ್ತು ಮರಿಗಳನ್ನು ಕ್ಲಪ್ತ ಸಮಯದವರೆಗೆ ಸಾಕಿ ಸಾಕಷ್ಟು ಬೆಳೆದ



ನಂತರ ಅವುಗಳನ್ನು ಜಾಗ್ರತೆಯಿಂದ ಸಮುದ್ರಕ್ಕೆ ಬಿಡಲಾಗುವುದು. ಈ ಕಡಲಾಮೆ ಮರಿ ಸಾಕಾಣಿಕೆಯ ಅತಿದೊಡ್ಡ ಕೇಂದ್ರದಿಂದ ಪ್ರತಿವರ್ಷ ಸಾವಿರಾರು ಮರಿಗಳನ್ನು ಸಮುದ್ರಕ್ಕೆ ಬಿಡಲಾಗುತ್ತಿದೆ. ಇದಲ್ಲದೆ ತಮಿಳುನಾಡು, ಕೇರಳ, ಕರ್ನಾಟಕ ರಾಜ್ಯದ ಅರಣ್ಯ ಇಲಾಖೆ ಕಡಲಾಮೆಗಳ ಸಂರಕ್ಷಣೆಯ ವಿವಿಧ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದು ಪ್ರಶಂಸಾರ್ಹ. ಕೇಂದ್ರೀಯ ಸಾಗರ ಮೀನುಗಾರಿಕೆಯ ಸಂಶೋಧನಾ ಸಂಸ್ಥೆಯು ಇದರ ಬಗ್ಗೆ ತುಂಬಾ ಆಸಕ್ತಿವಹಿಸಿ ಕಡಲಾಮೆಗಳ ಉಳಿವಿಗಾಗಿ ಶ್ರಮಿಸುತ್ತಿದೆ. ವಿಜ್ಞಾನಿಗಳು ಭಾರತ ಕರಾವಳಿಯಲ್ಲಿ ಕಡಲಾಮೆಗಳು ಮೊಟ್ಟೆಯಿಡುವ ಸ್ಥಳಗಳನ್ನು ಗುರುತಿಸಿ, ಆ ಬಗ್ಗೆ ಅಂಕಿಅಂಶಗಳನ್ನು ಸಂಗ್ರಹಿಸಿದ್ದಾರೆ. ಅಲ್ಲದೆ ಇವರು ಒರಿಸ್ಸಾ, ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ ಮುಂತಾದ ರಾಜ್ಯಗಳ ಹಲವೆಡೆ ಕಡಲಾಮೆಗಳ ಮೊಟ್ಟೆಗಳನ್ನು ಸಂಗ್ರಹಿಸಿ ಮರಿಯಾಗುವವರೆಗೆ ರಕ್ಷಣೆಯನ್ನು ಒದಗಿಸಿ ಮರಿಗಳನ್ನು ಸಾಕಷ್ಟು ಬೆಳೆಸಿ ಸಮುದ್ರಕ್ಕೆ ಬಿಡುವ ಕಾರ್ಯಕ್ರಮವನ್ನು ಅತಿ ತೀವ್ರಗತಿಯಿಂದ ನಡೆಸುತ್ತಲಿದ್ದಾರೆ.

ಬೆಳಗ್ಗೇಳುವುದಕ್ಕಿಲ್ಲ. ಈ ಹಾಳು ಬೆಕ್ಕು ಮಿಯಾಂ.. ಮಿಯಾಂ ಎಂದು ಕಾಲಿಗೆ ತೊಡರುತ್ತದೆ. "ಜಿರಳೆಗಳು ಜಾಸ್ತಿಯಾಗಿವೆ. ಹೆಗ್ಗಣಗಳು ಬೇರೆ ಹೆಚ್ಚಿಕೊಂಡಿವೆ. ಹಿತ್ತಲಲ್ಲಿ ಗುಳಿತೋಡಿ ಇರುವ ಚೂರುಪಾರು ಗಿಡಗಳನ್ನೆಲ್ಲ ಹಾಳುಗೆಡವುತ್ತಿವೆ. ಒಳಗೆ ಇಲಿಗಳ ಕಾಟ ಬೇರೆ. ಒಂದು ಬೆಕ್ಕನ್ನು ಎಲ್ಲಿಂದಾದರೂ ತಂದುಕೊಡಿ. ಸಾಕಿದರಾದರೂ ಈ ಉಪದ್ರವ ಕಮ್ಮಿಯಾದೀತು" ಎಂದಿದ್ದವಳು ತಾನೇ. ಅವ ತಂದುಕೊಡದಿದ್ದಾಗ ಹಿತ್ತಲ ಮನೆಯವರು ಸಾಕಿದ್ದ ಕರಿ ಬೆಕ್ಕಿಗೆ ಮರಿಯಾದಾಗ ಅದರಲ್ಲಿ ಒಂದು ಮರಿಯನ್ನು ಪಡೆದು ಅಕ್ಕರೆಯಿಂದ


• ಪ್ರೇಮಾ ಭಟ್ •



ಸುಪ್ರಭಾತ

ಸಾಕಿದ್ದೂ ತಾನೇ. ಮಕ್ಕಳಿಲ್ಲದ್ದಕ್ಕೆ ತಂದ ಹಾಲಿನಲ್ಲಿ ಅರ್ಧ ಅದರ ಹೊಟ್ಟೆಗೆ ಹಾಕಿ ಮುದ್ದಿನಿಂದ ಬೆಳೆಸಿದ್ದಕ್ಕೆ ಅದು ಅಕ್ಕಳೆ (ಜಿರಳೆ), ಇಲಿಗಳ ಬೇಟೆಗೆ ಹೋಗುತ್ತಿರಲಿಲ್ಲ. ಮೊದಮೊದಲು ಸಹಿಸಿಕೊಂಡಿದ್ದಳು ಸುಕನ್ಯಾ. ಆದರೆ ಅವಳ ಮನೆಗೆ ಬರುತ್ತಿದ್ದ ಗೆಳತಿ ಅಂಬಿಕಾಳೇ ಆಗಲಿ, ಅಕ್ಕ ತಂಗಿಯರೇ ಆಗಲಿ ಆ ಬೆಕ್ಕನ್ನು ಕಂಡು,

“ಇದೆಂತ ಬೆಕ್ಕನ್ನು ಸಾಕಿದ್ದೀಯ ಸುಕನ್ಯಾ? ಹೊಟ್ಟೆ ತುಂಬ ಹಾಲು ಮೊಸರು ಸಿಗುವಾಗ ಅದಕ್ಕೆ ಅಕ್ಕಳೆ-ಇಲಿಗಳು ಯಾಕೆಬೇಕು? ಈ ಕಪಾಟಿನಲ್ಲಿ ತುಂಬಿರುವ ಅಕ್ಕಳೆಯನ್ನು ನೋಡಿದರೆ ಅಸಹ್ಯವಾಗುತ್ತಮ್ಮ. ನಿನ್ನ ಬೆಕ್ಕು ಎಂತಕ್ಕೆ; ಇದನ್ನೆಲ್ಲ ತಿಂದು ಚೊಕ್ಕಟ ಮಾಡಿ ತಾನು ಹೊಟ್ಟೆ ತುಂಬಿಸಿಕೊಳ್ಳುವುದು ಬಿಟ್ಟು, ನೀನಿಕ್ಕೋ ಹಾಲು-ಅನ್ನದಲ್ಲೇ ಉಂಡು ನಾಳೆಯಿಂದ ನೀನು ಹಾಲನ್ನ ಹಾಕಬೇಡ. ಬೇಡ, ಬೇಕಾದ್ರೆ ಅಕ್ಕಳೆ-ಇಲಿಗಳನ್ನ ತಿನ್ನಲಿ, ಬೇಡದಿದ್ರೆ ಬಿಡಲಿ” ಎನ್ನುತ್ತಿದ್ದರು. ಅವರು ಹಾಗೆಂದು ಹೋದಾಗಲೆಲ್ಲ, ಸುಕನ್ಯಾ ಬೆಕ್ಕಿಗೆ ಹಾಲು ಅನ್ನ ಹಾಕದೆ, ಅಕ್ಕಳೆ-ಇಲಿಗಳನ್ನದು ತಿನ್ನುತ್ತದೇನೋ ನೋಡೋಣ ಎಂದು ಕಾದು ಕೂತದ್ದುಂಟು. ಊಹುಂ. “ಆ ಬೆಕ್ಕು ಮಡಿಯವರ ಮನೆಯಲ್ಲಿ ಬೆಳೆದದ್ದು-ಅಪ್ಪಟ ಸಸ್ಯಾ



ಪಾರಿ" ಎಂದು ಆಗಾಗ ಬರುತ್ತಿದ್ದ ಅಕ್ಕ ಅಪಹಾಸ್ಯ ಮಾಡುತ್ತಿದ್ದಳು.

"ನಂಗಂತೂ ಬೆಕ್ಕಿನ ತಲೆ ಕಂಡ್ರೆ ಆಗೋದಿಲ್ಲ. ಅದು ನಾವು ಫಕ್ಕನೆ ಕೆಳಗಿಟ್ಟು ಮರೆತು ಹೋದ ತಿನ್ನುವ ವಸ್ತುವಿಗೆ ಬಾಯಿ ಹಾಕುತ್ತದೆ. ನೀನು ಎಷ್ಟೇ ಇಲ್ಲ ಅಂದರೂ ಅದು ಅದರ ಜಾತಿಗುಣ. ಅದಕ್ಕೆ ಮಾಡಿರೋದು ಕಣೆ ಗಾದೆ: 'ಬೆಕ್ಕು ಕಣ್ಮುಚ್ಚಿಕೊಂಡು ಹಾಲು ಕುಡಿದ ಹಾಗೆ' ಅಂತ." ಎನ್ನುತ್ತಿದ್ದಳು ತಂಗಿ.

ಯಾರು ಏನೇ ಹೇಳಿದರೂ ಸುಕನ್ಯಾ ಆ ಮುದ್ದಾದ ಬೆಕ್ಕನ್ನು ಮುದ್ದಿನಿಂದಲೇ ಸಾಕಿದ್ದಳು. ರಾತ್ರಿ ಮಲಗುವಾಗ ರಮಾನಂದನ ಹಾಸಿಗೆಯೊಳಗೋ ತನ್ನ ಹಾಸಿಗೆಯೊಳಗೋ ಬೆಚ್ಚಗೆ ಹುದುಗಿ ಬೆಳೆದ ಬೆಕ್ಕು ಮಾತ್ರ ಎಂದೂ ಅಕ್ಕಳೆ-ಇಲಿಗಳನ್ನು ಮೂಸಿ ನೋಡಿರಲಿಲ್ಲ. ಒಂದು ಲೆಕ್ಕಕ್ಕೆ ಅದೂ ಒಳ್ಳೆಯದೇ. ಮಾಂಸದ ರುಚಿ ನೋಡಿದ ಬೆಕ್ಕನ್ನು ತಮ್ಮ ಹಾಸಿಗೆಯಲ್ಲಿ ಮಲಗಿಸುವಂತಿಲ್ಲ. ಅದರ ಬಾಯಿಗೆ ಬಾಯಿ ಕೊಟ್ಟು ಮುದ್ದಿಸುವ ಗಂಡನನ್ನು ಎಚ್ಚರಿಸಬೇಕೆಂದುಕೊಂಡಿದ್ದಳು. ಆದರೆ ಒತ್ತಲಲ್ಲಿ ಕೆಲವು ದಿವಸದ ಹಿಂದೆ ತೋಟಗಾರಿಕೆ ಇಲಾಖೆಯಿದ ತರಿಸಿ ನೆಟ್ಟ ಗುಲಾಬಿ ಗಿಡ ಚಿಗುರೊಡೆದು ಹೂಬಿಡುವ ಹೊತ್ತಿಗೆ ಅದರ ಬುಡದಲ್ಲೇ ಗುಳಿತೋಡಿದ ಹೆಗ್ಗಣ ಗುಲಾಬಿಗಿಡವನ್ನು ಹಾಳುಗೆಡವಿದಾಗ ಬೆಕ್ಕಿನ ಮೇಲೆ ಸಿಟ್ಟು ಬಂದಿತ್ತು ಸುಕನ್ಯಾಳಿಗೆ. ರಾತ್ರಿ ಎಲ್ಲಾ ಬೇಟೆಯಾಡದೆ, ತಮ್ಮ ಗಮನಕ್ಕೂ ಸಮಕ್ಕೂ ತಮ್ಮ ಹಾಸಿಗೆಯಲ್ಲಿ ಮುದುಡಿ ಮಲಗಿರುತ್ತಿದ್ದ ಬೆಕ್ಕನ್ನು ಎತ್ತಿ ಹಿತ್ತಲಿಗೆ ಒಗೆದು ಬಂದು ಮಲಗಿದ್ದಳು ಸಿಟ್ಟನಿಂದ ಆ ದಿನ.

ದಿನವೆಲ್ಲ ದುಡಿದ ಶ್ರಮದ ಫಲವಾಗಿ ಸುಖನಿದ್ದೆಯಲ್ಲಿದ್ದ ರಮಾನಂದನಿಗೆ ಸುಕನ್ಯಾ ಬೆಕ್ಕನ್ನು ಹೊರಗೆ ಎತ್ತಿ ಬಿಸುಟಿದ್ದು ತಿಳಿಯಲಿಲ್ಲ. ಮಧ್ಯರಾತ್ರಿಗೆ ಎಚ್ಚರಾದಾಗ ಸುಕನ್ಯಾ ಇನ್ನೂ ಮಲಗದೆ ಚಡಪಡಿಸುತ್ತಿರುವುದನ್ನು ನೋಡಿ "ಏನಂತದೆ ಮಹಾರಾಣಿ. ನಿದ್ದೆ ಬರಲಿಲ್ಲ?" ಎಂದ.

ಅಷ್ಟರಲ್ಲಿ ಹೊರಗ್ನಿಂದ 'ಮಿಯಾಂ.. ಮಿಯಾಂ' ಕೇಳಿಬಂತು.

"ಬೆಕ್ಕನ್ನು ಹೊರಗೆ ಬಿಟ್ಟಿದ್ದೀಯೇನು? ಅದಕ್ಕೇ ನಿನಗೆ ನಿದ್ರೆ ಬರಲೊಲ್ಲದು. ಸರಿ. ಅದನ್ನ ತೊಗೊಂಡು ಬರೋಣ. ಆಗಿನಿಂದ ಅದು ಬಾಯಿ ಮುಚ್ಚಿರಲಿಕ್ಕಿಲ್ಲ. ನೀನೇನೇ ಮಾಡಿದರೂ ಅದು ಹೆಗ್ಗಣ-ಜಿರಳೆ ತಿನ್ನಲಾರದು" ಎಂದು ಆತ ಬೆಕ್ಕನ್ನು ಒಳತಂದ ಮೇಲೆಯೇ ಸುಖವಾಗಿ ನಿದ್ರೆ ಹೋಗಿದ್ದಳು ಸುಕನ್ಯಾ.

ಅದೆಲ್ಲ ಆಗಿನ ದಿನಗಳಲ್ಲಿ. ಈಗ ಆಕೆ ಇಬ್ಬರು ಮಕ್ಕಳ ತಾಯಿ. ಶಶಿ ಮತ್ತು ರಂಜನಾ. ಮಜವೆಂದರೆ ಸುಕನ್ಯಾ ಮೊದಲ ಸಲ ಬಸುರಿಯಾಗಿದ್ದಾಗ ಆ ಬೆಕ್ಕು ಗರ್ಭಧರಿಸಿತ್ತು. ರಮಾನಂದ ಹೆಂಡತಿಗಾಗಿ ಟಾನಿಕ್, ಹಣ್ಣು ಹಂಪಲು ತಂದುಕೊಡುತ್ತಿದ್ದ. ಹಾಲಿಗೆ ಬೆರೆಸಿ ಕುಡಿಯಲು ಕೇಸರಿ, ಬಾದಾಮಿ... ಒಂದೇ ಎರಡೇ.. ಸುಕನ್ಯಾ ದಷ್ಟಪುಷ್ಟವಾಗಿ ಮೈತುಂಬಿಕೊಂಡಿದ್ದಳು. ಬೆಕ್ಕಿಗೂ, ಒಳ್ಳೆಯ ಉಪಚಾರವೇ ಸಿಕ್ಕಿತ್ತು. ಆಕೆಗಿಂತ ಮೊದಲೇ ಅದು ಬಚ್ಚಲು ಮನೆಯ ಸಂದಿಯಲ್ಲಿ ಮರಿಗಳನ್ನು ಹಾಕಿದಾಗ ನಡುಮನೆಯಲ್ಲಿ ನಿಂತು ನೋಡಿದ್ದಳು. ಪುಟ್ಟ ಮರಿಗಳು ಹುಟ್ಟಿದಾಕ್ಷಣ ಮಿಯಾಂ ಮಿಯಾಂ ಎಂದು ಹರಿದಾಡತೊಡಗಿದ್ದವು. ಅವುಗಳಲ್ಲಿ ಒಂದು ಮರಿಯನ್ನು ತಾಯಿ ಕಚಕಚ ತಿಂದು ಹಾಕಿದ್ದನ್ನು ನೋಡುತ್ತಲಿದ್ದ ಸುಕನ್ಯಾಳಿಗೆ ಮೈತುಂಬ ಬೆವರು! ಜಿರಳೆ-ಇಲಿಗಳ ಗೊಡವೆಗೆ ಹೋಗದೇ ತನ್ನ ಕರುಳ ಕುಡಿಯನ್ನೇ ತಿಂದು ಹಾಕಿ ತೃಪ್ತಭಾವದಿಂದಿದೆಯಲ್ಲ! ಗಂಡ ಬಂದೊಡನೆಯೇ ಹೇಳಿದ್ದಳು ಸುಕನ್ಯಾ.

"ಅಷ್ಟೆ ತಾನೆ.... ಅದು ನಾಯಿ-ಬೆಕ್ಕಿನಂಥವುಗಳಿಗೆ ಬಾಣಂತನದ **ಔಷಧವಂತೆ**" ಎಂದುಬಿಟ್ಟಿದ್ದ ಆತ.

"ಛೆ! ಎಂಥ ಅನ್ಯಾಯ. ತಾಯಿಯ ವಾತ್ಸಲ್ಯ ಇಷ್ಟೇ ಏನು?", ಎಂದ ಆಕೆಯ ಮನಸ್ಸು ಕುದಿಯಿತು. ಇಂಥ ಪ್ರಾಣಿಗೆ ಅದರ ಸ್ಥಾನವನ್ನು ಗೊತ್ತುಮಾಡಿಕೊಡಬೇಕು. ಅದನ್ನಿನ್ನು ಹಾಸಿಗೆಯಲ್ಲಿ ಮಲಗಿಸಿಕೊಳ್ಳಕೂಡದು ಎಂದುಕೊಂಡು ಕೊಟ್ಟಿಗೆಯೊಂದರಲ್ಲಿ ಮರಿಗಳನ್ನೂ ತಾಯಿಯನ್ನೂ ಕೂಡಿ ಹಾಕಿ ಬಾಗಿಲು ಮುಚ್ಚಿ ಬಂದಿದ್ದಳು. ರಾತ್ರಿಯಿಡಿ ಅವುಗಳ [illegible] ಸುಖವಾಗಿ ನಿದ್ದೆ

ಪೊಡೆಯುತ್ತಿದ್ದುದನ್ನು ನೋಡುತ್ತಲೇ ಮಗ್ಗುಲು ಬದಲಿಸುತ್ತ ಬೆಳಗಿನವರೆಗೆ ಚಡಪಡಿಸಿದ್ದಳು.

ನಾಲ್ಕಾರು ದಿನಗಳಲ್ಲೇ ಆ ಮರಿಗಳನ್ನು ಯಾರ್ಯಾರೋ ತಮಗೆ ಬೇಕೆಂದುಕೊಂಡೊಯ್ದರು. ಆದರೆ ತನ್ನ ಕರುಳ ಕುಡಿಯನ್ನು ತಿಂದು ತೃಪ್ತಿಯಿಂದ ತೇಗಿದ ಬೆಕ್ಕು ಈಗ ಉಳಿದ ಮರಿಗಳು ಒಮ್ಮೆಲೇ ಕಣ್ಮರೆಯಾದುದನ್ನು ಕಂಡು ರೋಷ-ನೋವುಗಳಿಂದ ಅತ್ತಿತ್ತ ತಿರುಗಾಡಿದುದನ್ನು ನೋಡಿದರೂ ಸುಕನ್ಯಳಿಗೆ ಅದರ ಮೇಲೆ ಪ್ರೀತಿ ಮರುಕಳಿಸಲೇ ಇಲ್ಲ. ಬೆಳಿಗ್ಗೆದ್ದು ಅಡಿಗೆ ಮನೆಗೆ ಬರಲಿಕ್ಕಿಲ್ಲ, ರಾತ್ರಿ ಮರುಕಳಿಸಲೇ ಇಲ್ಲ. ಬೆಳಿಗ್ಗೆದ್ದು ಅಡಿಗೆ ಮನೆಗೆ ಬರಲಿಕ್ಕಿಲ್ಲ, ರಾತ್ರಿ ಎಲ್ಲ ಹೊರಗೆ ಸುತ್ತುತ್ತ ಬಿದ್ದಿರುತ್ತಿದ್ದ ಬೆಕ್ಕು ಕಾಲಿಗೆ ತೊಡರಿಕೊಂಡಾಗ ರೊಯ್ಯನೇ ಅಪ್ಪಳಿಸಿ ಅಷ್ಟು ದೂರ ಒಗೆಯುತ್ತಿದ್ದಳು ಸುಕನ್ಯಾ. ಶಶಿ ಎಚ್ಚರವಾಗಿ ಸರ್ರನೆ ಅತ್ತ ಓಡಿ, ಬೆಕ್ಕನ್ನು ಬಾಗಿ ಎತ್ತಿಕೊಂಡು ಬರುತ್ತಿದ್ದ ಒಳಗೆ.

"ಬಿಡೋ ಅದನ್ನ, ಎಲ್ಲಿಯಾದರೂ ಹೋಗಿ ಸಾಯ್ಲಿ" ಎನ್ನುತ್ತಿದ್ದಳು. ಆತ ಅದನ್ನು ಬಿಡದಿದ್ದಾಗ ರೌದ್ರಾವತಾರ ತಾಳುತ್ತಿದ್ದಳು.

ರಂಜನಾಳನ್ನು ಬಸುರಿದ್ದಾಗ ಬೆಕ್ಕು ಮತ್ತೆ ಗರ್ಭಧರಿಸಿತಾದರೂ ಈ ಸಲ ಅದನ್ನು ಉಪಚರಿಸುವ ಗೋಜಿಗೆ ಹೋಗಿರಲಿಲ್ಲ ಸುಕನ್ಯಾ. ಈಗ ಬೆಕ್ಕಿಗೂ ಇದು ಗೊತ್ತಾಗಿಬಿಟ್ಟಿತ್ತೇನೋ. ಅದು ಹಾಸಿಗೆಯ ಸಮೀಪ ಬರುತ್ತಿರಲಿಲ್ಲ. ಕೋಣೆಯಲ್ಲಿ ಕೂಡಿಹಾಕಿದಾಗ ಮೊದಲಿನಂತೆ ಪ್ರತಿಭಟಿಸುತ್ತಿರಲಿಲ್ಲ. ಅಡಿಗೆ ಮನೆಗೆ ಬಂದು ಕಂಡದ್ದಕ್ಕೆಲ್ಲ ಬಾಯಿ ಹಾಕುತ್ತಿರಲಿಲ್ಲ ಕೂಡ.

"ದಯೆ ಇರಬೇಕು ಸಕಲ ಪ್ರಾಣಿಗಳಲ್ಲಿ ಎನ್ನುವ ಮಾತು ಕೇಳಿಲ್ವೇನೇ ಸುಕನ್ಯಾ?" ಎನ್ನುತ್ತಿದ್ದ ರಮಾನಂದ.

"ಸ್ವಾರ್ಥಿ ಬೆಕ್ಕಿದು. ತನ್ನ ಮರಿಯನ್ನೇ ತಿಂದು ಹಾಕೋ ಕ್ರೂರಿ. ಇಂತದರ ಮೇಲೆ ದಯೆ ಎಂತದು?" ಎಂದಾಕೆ ಪ್ರಶ್ನಿಸುತ್ತಿದ್ದಳು.

"ಒಂದನ್ನೊಂದು ತಿಂದು ಬದುಕೋದೇ ಸೃಷ್ಟಿ ಧರ್ಮ ಕಣೆ".


"ಹೌದ್ಹೌದು. ಥೂ ಈ ಬೆಕ್ಕು ಮನೇಲಿರೋದೇ ನನಗಿಷ್ಟವಿಲ್ಲ. ಹೇಸಿಗೆ. ಅದರ ಮೈರೋಮ ಬೇರೆ ಉದುರುತ್ತೆ. ಹಾಲಲ್ಲಿ, ಊಟಕ್ಕೆ ಕೂಡೋ ಜಾಗದಲ್ಲಿ ಎಲ್ಲಿ ನೋಡಿದ್ರೂ ಬೆಕ್ಕಿನ ಮೈಕೂದಲು".

"ಲೇ.. ಅದು ಹೆಚ್ಚೆಂದ್ರೆ ಬದುಕೋದು ಇನ್ನು ಆರೋ ಮೂರೋ ತಿಂಗಳು. ಶುಭ ದಿನದಲ್ಲಿ ಈ ಮನೆ ಪ್ರವೇಶಿಸಿದೆ ಅದು. ಅದು ಬಂದ ಮೇಲೆ ಈ ಮನೆ ತುಂಬಿತು. ನಮ್ಮ ಮಕ್ಕಳಿಬ್ಬರಿಗೂ ಈ ಬಿಳಿ ಬೆಕ್ಕು ಬೇಕು. ನಿನಗೊಬ್ಬಳಿಗೆ ಮಾತ್ರ ಬೇಡ. ನೀನು ಪ್ರೀತಿಸಿದಾಗ ನಿನ್ನನ್ನೇ ಸುತ್ತಿಕೊಳ್ಳುತ್ತಿತ್ತು. ನಿನಗೆ ಮಕ್ಕಳಾದ ಮೇಲೆ ಅದಕ್ಕೆ ನಿನ್ನ ಪ್ರೀತಿ ಸಿಗದೇ ನಿನ್ನಿಂದ ದೂರವಾಗತೊಡಗಿತು. ಮೂಕ ಪ್ರಾಣಿಯಾದರೇನು, ಅದಕ್ಕೂ ಒಂದು ಭಾಷೆ ಇದೆ ಕಣೆ ಸುಕನ್ಯಾ. ಬೇಕಾದ್ರೆ ಪರೀಕ್ಷಿಸಿ ನೋಡು. ಮತ್ತೆ ಪ್ರೀತಿಯಿಂದ ಹತ್ತಿರ ಕರೆ. ಅದು ಮತ್ತೆ ನಿನ್ನನ್ನು ಸುತ್ತಿಕೊಳ್ಳದಿದ್ರೆ ಹೇಳು" ಎಂದ ರಮಾನಂದ.

"ನಾನೊಂದು ಹೇಳಿದ್ರೆ ನೀವು ಹೇಳೋದೇ ಮತ್ತೊಂದು. ಅದು ಸತ್ತರೆ ನನಗಂತೂ ಇನ್ನೂ ಸುಖ. ಬೆಳಗ್ಗೆದ್ದು ಅದಕ್ಕಷ್ಟು ಹಾಲು ಬಿಡುವ ಕಷ್ಟ ತಪ್ಪುತ್ತದೆ" ಎಂಬುದು ಸುಕನ್ಯಳ ಪ್ರತಿಕ್ರಿಯೆ.

ಈಚೆಗೆ ಬೆಕ್ಕು ಹಿತ್ತಲಲ್ಲಿ ನೀರೊಲೆಗಾಗಿ ಪೇರಿಸಿಟ್ಟ ಒಣಗಿದ ಕಟ್ಟಿಗೆಯ ಮೇಲೆ ಮಲಗಿ ರಾತ್ರಿ ಬೆಳಗು ಮಾಡುತ್ತಿತ್ತು. ಮೂರನೇ ಬಾರಿಗೆ ಗರ್ಭಧರಿಸಿದ ಬೆಕ್ಕು ಮರಿ ಹಾಕಿದ್ದು ಅಲ್ಲೇ. ಈ ಸಾರಿ ನಾಲ್ಕು ಮರಿಗಳು. ಆ ಪುಟ್ಟ ಮರಿಗಳನ್ನು ಶಶಿ ಮತ್ತು ರಂಜನಾ ಕಂಕುಳಲ್ಲಿಟ್ಟುಕೊಂಡು ಮನೆತುಂಬ ನಲಿದಾಡುತ್ತ ಯಾರಿಗೂ ಕೊಡಲು ಒಪ್ಪದಿದ್ದಾಗ ಸುಕನ್ಯಾ ಅವರಿಬ್ಬರನ್ನೂ ಗದರಿ ಆ ಮರಿಗಳನ್ನೆಲ್ಲ ಕೇಳಿದವರಿಗೆ ಕೊಟ್ಟು ಕೈತೊಳೆದುಕೊಂಡಿದ್ದಳು. "ಹಾಳಾದ್ದು. ಈ ದೊಡ್ಡ ಬೆಕ್ಕನ್ನು ಕೇಳುವವರಿಲ್ಲ. ಇನ್ನು ಎಷ್ಟು ಸಾರೆ ಗರ್ಭಧರಿಸಬೇಕಾಗಿದೆಯೋ ಇದು" ಎಂದುಕೊಳ್ಳುತ್ತ, ಗರ್ಭದ ಬೆಕ್ಕು ಕದ್ದು ಬರುವಾಗ ಹೊಂಚು ಹಾಕುತ್ತಿದ್ದು ಸರಿಯಾಗಿ ಥಳಿಸಿ ಮತ್ತೆ ಅದು ಒಲೆಯ ಸೌದೆಯ ಮೇಲೆ ಹತ್ತದಂತೆ ಮಾಡಿದ್ದಳು.

ಆ ದಿನ ಹೊರಗೆ ಬೀಸುತ್ತಿದ್ದ ಬಿರುಗಾಳಿ ಜೊತೆಯಲ್ಲೇ ಕೇಳಿಬರುತ್ತಿದ್ದ ಮಳೆಯ



"ಈ ಹೊಟೆಲ್ಲಿನಲ್ಲಿ ಚೆನ್ನಾಗಿ 'ಪೋಳಿ ಸ್ತಾರ' ಅಂತ ನೀನು ಹೇಳ್ತಾ ಇದ್ದದ್ದನ್ನ ನಾನು ನಂಬಿರಲಿಲ್ಲ- ನಿನ್ನೆ ನಾನೇ ಭೇಟಿ ಕೊಟ್ಟಿದ್ದೆ!"

ಆರ್ಭಟ. ಮಕ್ಕಳು ಮಲಗಿ ನಿದ್ರಿಸಿದಾಗ ಮೆಲ್ಲನೆ ಎದ್ದು,

"ಸುಕನ್ಯಾ, ನನಗ್ಗೊತ್ತು ನಿನಗೆ ನಿದ್ರೆ ಬಂದಿಲ್ಲ" ಅಂದ.

"ಹೌದು".

"ಬೆಕ್ಕು ಹೊರಗಿದೆ ಅಂತ ನಿನಗೆ ಒಳಗೊಳಗೇ ಅನ್ನಿಸ್ತಿದೆ. ಆ ಗುಡುಗು-ಸಿಡಿಲು-ಮಿಂಚುಗಳಿಗೆ ಬೆಕ್ಕು ಹೆದರುತ್ತಿದೆ ಎಂದು ನಿನಗೆ ಚಿಂತೆಯಿದೆ. ನನಗ್ಗೊತ್ತು ಸುಕನ್ಯಾ ನಿನ್ನ ಚಡಪಡಿಕೆ ಏಕಿಷ್ಟು ಹಟ, ಬೆಕ್ಕನ್ನು ಒಳಗೆ ಕರೆದುಕೋ".

"ಇಲ್ಲ. ಅದು ಮಾತ್ರ ಸಾಧ್ಯವಿಲ್ಲ.

"ಹಾಗಾದ್ರೆ ತೆಪ್ಗೆ ಮಲಗು. ಗಳಿಗೆಗೊಮ್ಮೆ ಎದ್ದು ಬಿಸುಸುಯ್ಯುವ ಅಗತ್ಯವಾದರೂ ಏಂತಕ್ಕೆ?"

"ನನಗೆ ನಿದ್ರೆ ಹತ್ತಿತ್ತು. ನೀವೇ ಕೂಗಿ ಎಬ್ಬಿಸಿದಿರಿ".

"ಓ ಹೀಗೋ.." ಎಂದ ರಮಾನಂದ ಮುಸು ಕೆಳೆದುಕೊಂಡು ಮಲಗಿದನಾದರೂ ಅವನಿಗೆ ಬಹಳ ಹೊತ್ತು ನಿದ್ರೆ ಬರಲಿಲ್ಲ. ಬೆಕ್ಕು ಆ ಚಳಿ-ಮಳೆಯಲ್ಲಿ ನಡುಗುತ್ತಿರಬಹುದು. ಒಲೆಯೊಳಗೊ ಮುಂದೋ, ಹಾಸಿಗೆಯೊಳಗೊ ತೊಡೆಗಳ ಮೇಲೋ ಬೆಚ್ಚಗೆ ಮಲಗುವ ಪ್ರಾಣಿ; ಈ ಚಳಿ ಮಳೆಯನ್ನು ಖಂಡಿತ ವಾಗಿಯೂ ತಡೆದುಕೊಳ್ಳಲಾರದು ಎನ್ನುವ ಯೋಚನೆ ಆತನಿಗೆ. ಪಕ್ಕದಲ್ಲಿ ಮಲಗಿರುವ ಸುಕನ್ಯಾ ಕ್ಷಣಕ್ಕೊಮ್ಮೆ ನಿಟ್ಟುಸಿರಿಟ್ಟು ಮಗ್ಗುಲು ಬದಲಿಸುತ್ತಿರುವುದೂ ನಿದ್ರೆ ಬಾರದಿರುವುದಕ್ಕೆ ಒಂದು ಕಾರಣ. ಇಷ್ಟಾದರೂ ಅವಳು ಸೋಲುವುದಿಲ್ಲ. ಯೋಚಿಸುತ್ತ ಮಲಗಿದ್ದ ಆತನಿಗೆ ಬೆಕ್ಕು ಹೊರಗೆ ಬುಸುಗುಟ್ಟುತ್ತಿರುವುದು ಕೇಳಿಸಿತು. ಒಂದೆರಡು ಬಾರಿ ಕರ್ಕಶ ವಾಗಿ ಕೂಗಿದ್ದು, ಕಟ್ಟಿಗೆಯ ಮೇಲಿಂದ ಕೆಳಕ್ಕೆ ಹಾರಿದ್ದು ಆ ಮಳೆಯ ರಭಸದಲ್ಲೂ ಆತನಿಗೆ ಸ್ಪಷ್ಟವಾಗಿ ಕೇಳಿಸಿತು. ಎದ್ದು ಹೋಗಿ ಬೆಕ್ಕನ್ನು ಒಳಗೆ ಕರೆತರಲೇ ಎಂದು ಯೋಚಿಸಿದ. ಆದರೆ ಹೆಂಡತಿಯ ಮನಸ್ಸಿಗೆ ವಿರುದ್ಧವಾದ ಕೆಲಸ ವನ್ನು ಮಾಡಲು ಮುಂದಾಗಲಿಲ್ಲ. ರಾತ್ರಿ ಎಷ್ಟೊತ್ತಿಗೆ ನಿದ್ದೆ ಬಂತೋ ಗೊತ್ತಿಲ್ಲ.

ಸೂರ್ಯೋದಯಕ್ಕೆ ಮುನ್ನವೇ ಎದ್ದು ಬಚ್ಚಲು ಮನೆಗೆ ಹೋಗಿ ನಿರೊಲೆಗೆ ಉರಿ ಹಾಕುತ್ತಿದ್ದಳು. ರಮಾನಂದ ಏಳುವ ಹೊತ್ತಿಗೆ ನೀರು ಕುದ್ದಿರುತ್ತಿತ್ತು. ಆ ರಾತ್ರಿಯೆಲ್ಲ ಇಬ್ಬರಿಗೂ ಬಹಳ ತಡವಾಗಿ ನಿದ್ದೆ ಹತ್ತಿದ್ದರಿಂದ ತಡವಾಗೇ ಎಚ್ಚರವಾಗಿತ್ತು. ಬೆಳಿಗ್ಗೆ ಮೊದಲು ಎಚ್ಚರವಾದದ್ದು ರಮಾನಂದನಿಗೆ. ಲಗು ಬಗೆಯಿಂದ ಹೊರಬಂದು ನೀರು ಕಾಯಿಸಲು ಒಲೆಗೆ ಉರಿಹಾಕಬೇಕೆಂದು ಸೌದೆಗೆ ಕೈ ಹಾಕಿದ. ಸತ್ತ ಹಾವೊಂದು ಕೆಳಗೆ ಉರುಳಿ ಬಿತ್ತು. ಸ್ವಲ್ಪ ದೂರಕ್ಕೆ ಬೆಕ್ಕೂ ಸತ್ತು ಬಿದ್ದಿದೆ. ಕಣ್ಣುಜ್ಜಿಕೊಳುತ್ತ ಎದ್ದು ಬಂದ ಸುಕನ್ಯಾ ಆ ದೃಶ್ಯ ನೋಡಿ ಅವಾಕ್ಕಾದಳು.

ಒಂದು ವೇಳೆ ಬೆಕ್ಕು ಇರದಿದ್ದರೆ?

ತನಗೋ ತನ್ನ ಗಂಡನಿಗೋ ಹಾವು ಕಚ್ಚಿದ್ದರೆ?

ಸುಕನ್ಯಾ ಮೆಲ್ಲನೇ ಬೆಕ್ಕಿನ ಶವವನ್ನು ನೇವರಿಸಿದಳು. ●

ಬಿಂಗಾರಿಯ ಮದುವೆ

★ ಪ್ರಭುಶಂಕರ ★

ಮೊದಲನೆಯದಾಗಿ ಬಿಂಗಾರಿ ಎಂದರೆ ಏನು ಎಂಬುದನ್ನು ವಿವರಿಸಬೇಕು. ಎಲ್ಲರೂ 'ಬಿಂಕದ ಸಿಂಗಾರಿ' ಎಂಬ ಸಮಾಸ ಪದವನ್ನು ಕೇಳಿದ್ದೀರಿ. ನನ್ನ ಮನಸ್ಸಿನಲ್ಲಿರುವುದೂ ಅದೇ. ಆದರೆ ಬಿಂಕದ ಸಿಂಗಾರಿ ಎಂಬುದನ್ನು ಪ್ರತಿ ಸಲವೂ ಅಷ್ಟು ಉದ್ದವಾಗಿ ಬರೆಯಲಾರದೆ, ಅಥವಾ ಉಚ್ಚರಿಸಲಾರದೆ ನಾನು ಅದನ್ನು ಬಿಂಗಾರಿ ಎಂದು ಸಂಕ್ಷೇಪಗೊಳಿಸಿದ್ದೇನೆ. ಇದಕ್ಕೆ ನಿಮ್ಮ ಆಕ್ಷೇಪಣೆ ಏನೂ ಇಲ್ಲ ಎಂದು ಭಾವಿಸಿದ್ದೇನೆ. ನಮ್ಮ ಭಾಷೆ ಬೆಳೆಯುವುದಕ್ಕೆ ಹೀಗೆ ಅನೇಕ ಹೊಸ ಪದಗಳ ಸೃಷ್ಟಿ ಅತ್ಯಗತ್ಯ ಎಂಬುದೂ ನನ್ನ ನಂಬಿಕೆ. ಇರಲಿ. ಈಗ ವಿಷಯಕ್ಕೆ ಬರೋಣ.

ನಾನು ಹೇಳ ಹೊರಟಿರುವುದು ಬಿಂಗಾರಿ ಆಶಾಳ ವಿಷಯ. ಆಶಾ ನಮ್ಮ ಕುಲಪುರೋಹಿತರ ಪ್ರೀತಿಯ ಮಗಳು. ಅವಳಿಗೆ ಈಗ ಇಪ್ಪತ್ತು ವರ್ಷ ವಯಸ್ಸು (ಕರಾರುವಾಕ್ಕಾಗಿ ಅಲ್ಲ, ಸ್ವಲ್ಪ ಈಚೆ ಆಚೆ ಇರಬಹುದು.) ಅವಳು ಅತ್ಯಂತ ಸುಂದರಿಯೂ, ಅತ್ಯಂತ ಬುದ್ಧಿವಂತೆಯೂ ಆದ ಹುಡುಗಿ. ಈ ಮಾಹಿತಿಯನ್ನು ಕೊಟ್ಟವರು ಯಾರು ಎಂದು ನೀವು ಕೇಳಬಹುದು. ಅದನ್ನು ಕೊಟ್ಟವರು ಅವಳ ತಾಯಿ, ತಂದೆ. ತಮ್ಮ ಮಕ್ಕಳ ವಿಷಯ ತಂದೆ ತಾಯಿಗಳಿಗಲ್ಲದೆ ಬೇರೆ ಯಾರಿಗೆ ತಾನೆ ಗೊತ್ತಿರುತ್ತದೆ? ಅಲ್ಲದೆ ಮಕ್ಕಳ ವಿಷಯದಲ್ಲಿ ತಂದೆ ತಾಯಿಗಳ ಮಾತನ್ನಲ್ಲದೆ ಬೇರೆ ಯಾರ ಮಾತನ್ನು ನಂಬುವುದಕ್ಕಾಗುತ್ತದೆ? ಆದ್ದರಿಂದ ನಾನು ಆಶಾಳ ಸೌಂದರ್ಯದ ವಿಷಯದಲ್ಲಿಯೂ, ಅವಳ ಬುದ್ಧಿಶಕ್ತಿಯ ವಿಷಯದಲ್ಲಿಯೂ ಅವಳ ತಂದೆಯಾದ ನಮ್ಮ ಕುಲಪುರೋಹಿತರೂ, ಅವರ ಧರ್ಮಪತ್ನಿಯೂ ಹೇಳಿದ್ದನ್ನು ಅಕ್ಷರಶಃ ನಂಬಿದ್ದೇನೆ.

ಅಲ್ಲದೆ ನಂಬಬಹುದಾದ ಒಂದೆರಡು ಅಂಶಗಳು ಅವರ ಮಾತುಗಳಲ್ಲಿದ್ದುವು. ಉದಾಹರಣೆಗೆ ಆಶಾ ತನ್ನ ಒಂದನೇ ವಯಸ್ಸಿನಲ್ಲಿ 'ತಾತ' ಎಂದು ಪೂರ್ತಿಯಾಗಿ ಹೇಳಿದ್ದು. ಎರಡನೆಯ ವರ್ಷದಲ್ಲಿ ತಾಯಿಯನ್ನು 'ಮಮ್ಮಿ' ಎಂದೂ ತಂದೆಯನ್ನು 'ಡ್ಯಾಡಿ' ಎಂದೂ ಬಾಯಿ ತುಂಬ ಕರೆದದ್ದು. ನಮ್ಮ ಕುಲಪುರೋಹಿತರು ತಮ್ಮ ಮಗಳು ತನ್ನ ಎರಡನೆಯ ವರ್ಷದಲ್ಲೇ 'ಡ್ಯಾಡಿ' ಎಂದು ಕರೆದದ್ದನ್ನು ಕೇಳಿ ಹಿರಿ ಹಿರಿ ಹಿಗ್ಗಿದರು ಮತ್ತು ವೈದಿಕರಾದ ಅವರು ಸಂಧ್ಯಾವಂದನೆಗೆ ರಜಾ ಕೊಟ್ಟು, ಸಂಜೆಯೆಲ್ಲಾ ಸುತ್ತಿ ತಮ್ಮ ಬಂಧುಮಿತ್ರರಿಗೆಲ್ಲಾ ಈ ವಾರ್ತೆಯನ್ನು ತಿಳಿಸಿ ತಮ್ಮ ಮಗಳ ಬುದ್ಧಿಮತ್ತೆಯನ್ನೂ ಶಬ್ದಸಂಪತ್ತನ್ನೂ ಕೊಂಡಾಡಿದರು. ಅವರು ಬೆಂಗಳೂರಿನಂತಹ ವಿಸ್ತಾರವಾದ ಪಟ್ಟಣದಲ್ಲಿ ಕಾಲುನಡಿಗೆಯಲ್ಲೇ ಹೋಗಿ ಈ ವಾರ್ತೆಯನ್ನು ಬಿತ್ತರಿಸಿದರು ಎಂದು ಭಾವಿಸಬಾರದು. ಪೌರೋಹಿತ್ಯ, ಉಪಾಕರ್ಮ, ಗೌರಿ, ಗಣಪತಿ, ಸತ್ಯನಾರಾಯಣ ಪೂಜೆ ಮುಂತಾದುವನ್ನು ಕ್ಲುಪ್ತ ಕಾಲದಲ್ಲಿ ಹತ್ತಾರು ಮನೆಗಳಲ್ಲಿ ಮಾಡಿಸಲು ಅವರು ಒಂದು ಸ್ಕೂಟರ್ ಇಟ್ಟುಕೊಂಡಿದ್ದಾರೆ. ಅದರ ಚರ್ಮದ ಆಸನಕ್ಕೆ ಕೃಷ್ಣಾಜಿನ ಹೊದಿಸಿದ್ದಾರೆ. ಅವರು ಗರಿಗರಿಯಾಗಿ ಮಡಿ ಪಂಚೆಯುಟ್ಟು, ದೊಡ್ಡ ಹೊಟ್ಟೆಯ ಮೇಲ್ಭಾಗದಲ್ಲಿ ಉತ್ತರೀಯ ಹೊದ್ದು, ವಿಭೂ

-ಬಳಿದುಕೊಂಡು ಹೆಲ್ಮೆಟ್ ಧರಿಸಿ ಸ್ಕೂಟರ ಸ್ಟಾರ್ಟ್ ಮಾಡಿ ಹೊರಟ ರೆಂದರೆ ರಸ್ತೆಯ ಎರಡು ಬದಿ ಜನ ನಿಂತು ಒಂದು ಕ್ಷಣ ಅವರನ್ನೇ ದಿಟ್ಟಿಸಿ ನೋಡಿ ಸಂತೋಷ ಪಡುತ್ತಾರೆ.

ತುಂಬ ವಿಷಯಾಂತರವಾಯಿತಲ್ಲವೆ? ಇರಲಿ. ಸಹಿಸಿಕೊಳ್ಳಿ. ನಮ್ಮ ಬಂಗಾರಿ ಆಶಾಳ ತಂದೆಯ ವಿಷಯ ತಿಳಿಸಿದೆ. ಅವರ ತಾಯಿಯ ವಿಷಯ. ಅವರು ಬಿಚ್ಚೋಲೆ ಗೌರಮ್ಮ. ಕಳೆ ಕಳೆಯಾದ ಹೆಂಗಸು. ಅವರು ಮಾತ್ರ ತಮ್ಮ ಮಗುವಿನ ಬುದ್ಧಿಶಕ್ತಿಯ ವಿಷಯ ಒಂದು ಮಾತೂ ಆಡುವುದಿಲ್ಲ. ವೃತ್ತಿ ವಿಭಜನೆ Division of Labour ಅವರ ಮನೆಯಲ್ಲಿ ನಷ್ಟು ಕಟ್ಟುನಿಟ್ಟಾಗಿ ಎಲ್ಲೂ ನಡೆದಿರುವುದನ್ನು ನಾನು ಕಾಣೆ. ತಂದೆಯವರು ಮಗಳ ಬುದ್ಧಿ ಶಕ್ತಿಯನ್ನು ಮುಕ್ತಕಂಠರಾಗಿ ಹೊಗಳಿದರೆ ತಾಯಿಯವರು ಮಗಳ ಸೌಂದರ್ಯವನ್ನು ಶುಷ್ಕಕಂಠವಾಗುವವರೆಗೂ ಎಂದರೆ ಗಂಟಲು ಒಣಗುವವರೆಗೂ ಹೊಗಳುತ್ತಾರೆ. ಒಬ್ಬರು ಇನ್ನೊಬ್ಬರ ಕ್ಷೇತ್ರಕ್ಕೆ ಪ್ರವೇಶಿಸುವುದಿಲ್ಲ. 6ನೆಯ ವರ್ಷದಲ್ಲಿ ಆಶಾ "ಧರಣಿ ಮಂಡಲ ಮಧ್ಯದೊಳಗೆ" ಎಂಬುದನ್ನು ತಪ್ಪಿಲ್ಲದೆ ಹೇಳಿದಾಗ ಪುರೋಹಿತರು ಐದು ಲೀಟರ್ ಪೆಟ್ರೋಲ್ ಖರ್ಚು ಮಾಡಿ. ಬೆಂಗಳೂರಿನ ವಿವಿಧ ಭಾಗಗಳಲ್ಲಿರುವ ಬಂಧು ಮಿತ್ರರಿಗೂ ಆಜನ್ಮ ಮರಣ ಪರ್ಯಂತ ಮಾತ್ರವಲ್ಲದೆ ಮರಣೋತ್ತರದ ಕ್ರಿಯೆಗಳಿಗೂ ತಮ್ಮನ್ನೇ ನಂಬಿರುವ ಆಸ್ತಿಕ ಗಿರಾಕಿಗಳಿಗೂ ಆ ಸುದ್ದಿಯನ್ನು ಮುಟ್ಟಿಸಿ ಬಂದರು.

ಆಶಾಳ ತಾಯಿ ಮಾತ್ರ ಆ ಬಗ್ಗೆ ಚಕಾರ ವೆತ್ತಲಿಲ್ಲ. ಅವರು ಅದೇ ಸಮಯದಲ್ಲಿ ತಮ್ಮ ಮಗಳ ಚೆಲುವಿನ ಬಗ್ಗೆ ಹೇಳುತ್ತಿದ್ದರು. ಎಲ್ಲಿ? ಹಿಂದಿನ ಕಾಲದ ಬಾವಿಕಟ್ಟೆಗೆ ಈಗಿನ ಕಾಲದ ಪರ್ಯಾಯವಾದ ರೇಷನ್ ಡಿಪೋ ಮುಂದೆ. ಅವರು ಹೇಳಿದ ಎಲ್ಲ ವಿವರಗಳನ್ನೂ. ಮಗಳ ಕಣ್ಣು. ಕಿವಿ. ಮೂಗು. ಕತ್ತು. ಕಾಲು. ಜಡೆ ಮುಂತಾದುವುಗಳ ವರ್ಣನೆಯನ್ನು ನಾವು ಇಲ್ಲಿ ಪುನರಾವರ್ತಿಸುವುದಿಲ್ಲ. ಅವರ



ಎರಡೂ ಕಾಲು ಗಂಟೆಗಳ ನಿರೂಪಣೆಯ ಕೊನೆಯ ವಾಕ್ಯಗಳನ್ನು ಮಾತ್ರ ಉದ್ಧರಿಸುತ್ತೇನೆ. "ಇನ್ನೂ ಯಾಕೆ ಮಾತನಾಡಿ ಬೇಜಾರು ಮಾಡಲಿ ಭಾಗೀರಥಮ್ಮ (ಈಗ ಅವರ ಮುಂದೆ ನಿಂತಿದ್ದವರು ಮೂರನೇ ಭಾಗೀರಥಮ್ಮ. ಒಂದನೆಯ ಭಾಗೀರಥಮ್ಮನವರೂ, ಎರಡನೆಯ ಭಾಗೀರಥಮ್ಮನವರೂ ಸರದಿಯಂತೆ ಒಂದೊಂದು ಗಂಟೆ ಶ್ರವಣ ಮಾಡಿ ಹೊರಟು ಹೋಗಿದ್ದರು. ಆಶಾಳ ತಾಯಿ ಮಾತ್ರ ಮೊದಲನೆಯ ಭಾಗೀರಥಮ್ಮನವರೇ ಇನ್ನೂ ತಮ್ಮ ಮಗಳ ವರ್ಣನೆಯನ್ನು ಕೇಳುತ್ತಿದ್ದಾರೆ ಎಂದು ಭ್ರಮಿಸಿದ್ದರು. ಆ ಬಾಲಕಿ ಆಶಾಳ ಕಣ್ಣು ಕಿವಿ ಮೂಗುಗಳ ವರ್ಣನೆಯನ್ನು ಮೊದಲನೆಯ ಭಾಗೀರಥಮ್ಮನವರೂ, ಕತ್ತು, ಬೆನ್ನು, ಕೈಗಳ ವರ್ಣನೆಯನ್ನು ಎರಡನೆಯ ಭಾಗೀರಥಮ್ಮನವರೂ ಕೇಳಿಯಾಗಿತ್ತು. ಉಳಿದ ಅಂಗಾಂಗಗಳ ಚೆಲುವಿನ ವರ್ಣನೆಯನ್ನು ಕೇಳುತ್ತಿದ್ದವರು ಮೂರನೆಯ ಭಾಗೀರಥಮ್ಮನವರು) ಒಂದೇ ಮಾತಿನಲ್ಲಿ ಹೇಳುತ್ತೇನೆ. ನಮ್ಮ ಆಶಾನ ನೋಡಿ. ಆ ಫರಂಗಿಯೋರು, ಇದು ತಮ್ಮ ದೇಶದ ಮಗು, ತಪ್ಪಿಸಿಕೊಂಡು ಬಂದುಬಿಟ್ಟಿದೆ, ಮತ್ತೆ ತಮ್ಮ ದೇಶಕ್ಕೆ ಕರೆಕೊಂಡು ಹೋಗ್ಬೇಕೂಂತ, ಇಂಗ್ಲೀಷಿನಲ್ಲಿ ಪುಸುಪುಸಾಂತ ಮಾತಾಡ್ತಾ ಮಗೂನ ಹಿಡಿಕೊಳ್ಳೋಕೆ ಬಂದುಬಿಟ್ರು. ಆಮೇಲೆ ಅಕ್ಕಪಕ್ಕದೋರೆಲ್ಲ ಸೇರಿ, 'ಇಲ್ಲ. ಇದು ಈ ಶಾಸ್ತ್ರಿಗಳ ಮನೇ ಮಗು, ಹುಟ್ಟಿದಾಗಿನಿಂದ ನಾವೆಲ್ಲ ನೋಡ್ತಾ ಇದೀವಿ' ಅಂತ ಹೇಳಿ ಅವರನ್ನೆಲ್ಲ ಅಟ್ಟಿದ್ರು ಕಾಣ್ರಿ." ಮೂರನೆಯ ಭಾಗೀರಥಮ್ಮನವರು ಸುಮ್ಮನೆ 'ಹೂಂ' ಗುಟ್ಟುತ್ತಿದ್ದರು. ಅವರು ಇದರಲ್ಲಿ ಒಂದೇ ಒಂದು ಅಕ್ಷರವನ್ನೂ ಕೇಳಿಸಿಕೊಳ್ಳುತ್ತಿರಲಿಲ್ಲ. ಅವರ ಮನಸ್ಸೆಲ್ಲ ಮನೆಯಲ್ಲಿ ತಾವು ಒಲೆಯ ಮೇಲೆ ಬೇಯಲು ಇಟ್ಟಿದ್ದ ಬೇಳೆಯ ಮೇಲಿತ್ತು. ಇರಲಿ. ಅದು ಬೇರೆ ವಿಷಯ.

ಮುಖ್ಯವಾದ ವಿಷಯ ಯಾವುದು? ಹೂಂ. ಆಶಾಳ ಮದುವೆ. ಅದೂ ಸಿಂಗಪ್ಪನ ಜೊತೆ ಅದದು ಯಾಕೆ ಅಂತ ಅಲ್ಲವೆ? ಹೇಳುತ್ತೇನೆ. ಆಶಾ ಮೂರು, ಆರು, ಒಂಬತ್ತು, ಹದಿನೆಂಟು ವರ್ಷಗಳಲ್ಲಿ ಸಾಧಿಸಿದ್ದನ್ನೆಲ್ಲ ಸದ್ಯಕ್ಕೆ ಕೈಬಿಡೋಣ. ಅವಳ ಹತ್ತೊಂಬತ್ತನೇಯ ವರ್ಷಕ್ಕೆ ಬರೋಣ. ಅವಳು ಕಾಲೇಜು ಮೆಟ್ಟಿಲು ಹತ್ತಿದ್ದಳು. ಅಲ್ಲಿ ಅನೇಕ ಸುಂದರರೂ ಸುಂದರರಲ್ಲದವರೂ, ಸುಂದರರಲ್ಲದಿದ್ದರೂ ತಾವು ಸುಂದರರೆಂದು ಭ್ರಮಿಸಿದವರೂ, ಸುಂದರರಲ್ಲದಿರುವುದೇ ಕೊರತೆಯಲ್ಲ, ಬೇರೆ ಸಾಹಸಗಳಿಂದ ತರುಣಿಯರ ಮನಸ್ಸನ್ನು ಒಲಿಸುವುದು ಸಾಧ್ಯ ಎಂದು ನಂಬಿದ್ದವರೂ ಆಶಾಳ ಸುತ್ತಮುತ್ತ ಓಡಾಡುತ್ತಿದ್ದರು. ಕೆಲವರು ಪ್ರೇಮ ಪತ್ರಗಳನ್ನು ಬರೆದಿದ್ದರು. ಇನ್ನು ಕೆಲವು ಕನ್ನಡಾಂಗ್ಲ ಹಿತೈಷಿಗಳು- ನಿಲ್ಲಿ ಅವರ ಸ್ವರೂಪವನ್ನು ವರ್ಣಿಸಲೇಬೇಕು. ಅನೇಕರಿಗೆ ಇಂಗ್ಲೀಷ್ ಭಾಷೆ ಒಗ್ಗುವುದಿಲ್ಲ. ಹಾಗೆಂದ ಮಾತ್ರಕ್ಕೆ ಅವರಿಗೆ ಕನ್ನಡ ಭಾಷೆ ಒಗ್ಗುತ್ತದೆಯೇ ಎಂದು ವಿಚಾರಿಸಬಹುದು. ಅದೂ ಒಗ್ಗುವುದಿಲ್ಲ. ಅಷ್ಟರಿಂದಲ್ಲೇ ಅವರಿಗೆ ಒಳ್ಳೆಯ ಮನಸ್ಸು ಇಲ್ಲವೇ ಇಲ್ಲ ಎಂದು ಭಾವಿಸುವುದೂ ತಪ್ಪಾಗುತ್ತದೆ. ಅವರಿಗೆ ಇಂಗ್ಲೀಷ್, ಕನ್ನಡ, ಅಷ್ಟೇಕೆ ಯಾವುದೇ ಭಾಷೆಯೂ ಒಗ್ಗುವುದಿಲ್ಲ ಅಷ್ಟೆ. ಅವರ ಮನಸ್ಸು ಮೃದು. ಭಾಷೆಯ ವಿಷಯದಲ್ಲಂತೂ ಅಷ್ಟು ತುಂಬ ಮೃದು. ಅದರ ಬಗ್ಗೆ ತುಂಬ ಕನಿಕರ. ಆದ್ದರಿಂದ ಅವರು ಅದನ್ನು ನೋಯಿಸುವುದಿಲ್ಲ. ತಮ್ಮ ಮನಸ್ಸಿನಲ್ಲಿರುವುದನ್ನೆಲ್ಲ ಭಾಷೆಗೆ ಇಳಿಸಲೇಬೇಕಾಗಿ ಬಂದಾಗ, ಯಾವುದೇ ಭಾಷೆಯನ್ನೂ ಹಿಂಸಿಸದೆ, ಇತರರನ್ನು ಆಶ್ರಯಿಸುತ್ತಾರೆ. ಅದು ಪ್ರೇಮಪತ್ರ ಲೇಖನವಾಗಲಿ, ಪರೀಕ್ಷೆಯ ಉತ್ತರ ಪತ್ರಿಕೆಯ ಲೇಖನವಾಗಲಿ, ಇತರರೇ ಅವರ ಪರವಾಗಿ ಬರೆಯಬೇಕು. ಭಾಷೆಯ ಬಗ್ಗೆ, ಅದರ ಪರಿಶುದ್ಧತೆಯನ್ನು ಕಾಪಾಡುವ ಬಗ್ಗೆ ಅಷ್ಟೊಂದು ಕಾಳಜಿ ಅವರಿಗೆ. ಅಂಥವರನ್ನೇ ನಾನು ಸದ್ಯಕ್ಕೆ ಕನ್ನಡಾಂಗ್ಲ ಹಿತೈಷಿಗಳು ಎಂದು ಕರೆದಿದ್ದೇನೆ. ಅಂಥ ಹಿತೈಷಿಗಳು ಇತರರಿಂದ ಪ್ರೇಮಪತ್ರ ಬರೆಸಿದ್ದರು.

ಕ್ರಯಪತ್ರ, ಅಡಮಾನುಪತ್ರ ಮುಂತಾದವುಗಳನ್ನು ಬರೆದುಕೊಡುವವರು ಇರುವಂತೆ, ಪ್ರೇಮಪತ್ರಗಳನ್ನೂ ಬರೆದುಕೊಡುವವರು ಇದ್ದಾರೆಯೆ? ಎಂದು ಶಂಕಿಸಬೇಡಿ. ಇದ್ದಾರೆ. ಅನಾಮಧೇಯ ಪತ್ರಗಳನ್ನು ಬರೆದುಕೊಡುವವರು ಇರುವಂತೆ ಪ್ರೇಮಪತ್ರಗಳನ್ನು ಬರೆ



ಕೊಡುವವರೂ ಇದ್ದಾರೆ. ಅವರನ್ನು ಬೇಕಾದರೆ ಅನಾಮಧೇಯ ಪ್ರೇಮಪತ್ರ ಲೇಖಕರು ಎಂದು ಕರೆಯೋಣ. ಅಂಥ ಅನಾಮಧೇಯ ಪತ್ರ ಲೇಖಕರೊಬ್ಬರಿಂದ ಸೋಮು ಪತ್ರ ಬರೆಯುವಾಗ ಸ್ವಲ್ಪ ವಿರಸವೂ ಉಂಟಾಯಿತು. ಸೋಮು ಹೇಳಿದ "ನನ್ನ ಪ್ರಾಣಪ್ರಿಯೆ ಆಶಾದೇವಿಯ ಚರಣ ಸನ್ನಿಧಿಯಲ್ಲಿ" ಎಂದು ಪ್ರಾರಂಭಿಸಿದ. ಅ.ಪ.ಲೇ (ಅನಾಮಧೇಯ ಪತ್ರ ಲೇಖಕ) ಹಾಗೇ ಬರೆದರು. ಸೋಮುಗೆ ಅನುಮಾನ ಬಂತು. "ಏನು ಬರಿದೀ ಓದಲೇ" ಎಂದ. ಅ.ಪ.ಲೇ. ಆದನು ಓದಿದರು ಸೋಮುಗೆ ಅಸಾಧ್ಯವಾದ ಕೋಪ ಬಂತು [illegible]ಗಲೇ, ಆಶಾ ನನ್ನ ಪ್ರಾಣಪ್ರಿಯೆ ಆದಾಳೆ [illegible] ಪ್ರಾಣಪ್ರಿಯೆ ಹ್ಯಾಂಗಾದಾಳು?" ತಾನು ಸೋಮುವಿನ ಪರವಾಗಿ ಬರೆಯುತ್ತಿರುವ [illegible] ಕೊನೆಯಲ್ಲಿ ಸೋಮುವಿನ [illegible] ತಾನು ಹಾಕುವುದಾಗಿಯೂ ಏಸು ವೇಳೆ

ದರೂ ಸೋಮುವಿಗೆ ಅರ್ಥವಾಗಲಿಲ್ಲ. ಕೊನೆಗೆ ರಾಜಿ ಓಗಾಯಿತು. "ನನ ಎಂದರೆ ಸೋಮುವಿನ ಪ್ರಾಣಪ್ರಿಯೆ ಆಶಾದೇವಿಯ ಚರಣ ಸನ್ನಿಧಿಯಲ್ಲಿ" ಎಂದು ಬದಲಾವಣೆಯಾಯಿತು.

ಆಶಾಳ ಕಾರ್ಯಚಟುವಟಿಕೆಗಳಲ್ಲಿ ಪ್ರೇಮಪತ್ರಗಳನ್ನು ಓದುವುದು ಸೇರಿರಲಿಲ್ಲ. ಅವಳಿಗೆ ಬೆಳಗಿನಿಂದ ಸಂಜೆಯವರೆಗೆ ಪತ್ರಿಕೆಯನ್ನಾಗಲಿ, ಪತ್ರಪುಸ್ತಕಗಳನ್ನಾಗಲೀ, ಪ್ರೇಮಪತ್ರಗಳನ್ನಾಗಲಿ [illegible] ಕ್ಷಣವೂ ಸಮಯ ಸಿಕ್ಕುತ್ತಿರಲಿಲ್ಲ. ಅವಳ ಓಡಾಟ ಅಷ್ಟಿರುತ್ತಿತ್ತು. ಅಂದರೆ ಅವಳು ತನ್ನ ಆರಾಧಕರನ್ನು ಮುಖಾಮುಖಿಯಾಗಿ ಕಂಡು ಅವರ ಕಷ್ಟ ಸುಖಗಳನ್ನು ನೇರವಾಗಿ ವಿಚಾರಿಸಿ, ಅವರ ಅಹವಾಲುಗಳನ್ನು [illegible] ಸ್ಥಳದಲ್ಲೇ ವಿಷಯಗಳನ್ನು ಫೈಸಲ್ [illegible] ವುದರಲ್ಲಿ ಅವಳಿಗೆ ಸಂತೋಷ [illegible]

ವೇರಿಸುವ ಶಕ್ತಿಯೂ ಇದ್ದುವು.

ಒಂದು ಸಣ್ಣ ಉದಾಹರಣೆ ನೋಡಿ. ದಷ್ಟಪುಷ್ಟವಾಗಿ ಬೆಳೆದಿದ್ದ ಆಶಾಳ ಸುತ್ತಮುತ್ತ, ನಾಲ್ಕುಮುಕ್ಕಾಲು ಅಡಿಯ ಬಡಕಲು ದೇಹದ ತೀವ್ರ ಪ್ರೇಮಿಯೊಬ್ಬ, ನಾಲ್ಕು ದಿನ ಸುತ್ತಿದ. ಆರುನೂರ ಎಂಬತ್ತು ಸಲ ಮೆಲ್ಲಗೆ ಕೆಮ್ಮಿದ. ಅವನ ಬಗ್ಗೆ ಗಮನಕೊಡಲು ಸಾಧ್ಯವಾದ ಕೂಡಲೇ ಆಶಾ ಹೇಳಿದಳು. "ಮಗೂ, ನಿನಗೆ ಮೈಸರಿಯಾಗಿಲ್ಲ. ಉಬ್ಬಸರೋಗ ಬಂದಿದೆ, ಇಲ್ಲವೇ ಬರುವ ಹಾಗಿದೆ. ನೀನು ಈಗಿಂದೀಗ ಪೇಟೆಗೆ ಹೋಗಿ, ಚ್ಯವನ ಪ್ರಾಶ ಲೇಹ್ಯ ಕೊಂಡುಕೊಂಡು ಮನೆ ಸೇರಿ ಅದನ್ನು ಸೇವಿಸಿ ಬೆಚ್ಚಗೆ ಮಲಗಿಕೋ." ಆ ತರುಣ ಅಂದಿನಿಂದ ಆಶಾಳ ಬಳಿ ಇರಲಿ, ಯಾವುದೇ ಮಹಿಳಾ ಮಣಿಯ ಬಳಿಯೂ ಸುಳಿಯುವುದನ್ನೇ ಬಿಟ್ಟುಬಿಟ್ಟ.

ಆಶಾಳಿಗೆ ಯಾರಲ್ಲಿಯೂ ಪ್ರೀತಿ ಇರಲಿಲ್ಲ ಎಂದೇನಿಲ್ಲ. ಆದರೆ ಅವಳ ಪ್ರೀತಿ ಹತ್ತು ಹದಿನೈದು ದಿನಗಳನ್ನು ಮೀರಿ ಯಾರಲ್ಲಿಯೂ ಉಳಿಯುತ್ತಿರಲಿಲ್ಲ. ಅವಳ ಪ್ರೀತಿಗೆ ಪಾತ್ರನಾಗುವ ಭಾಗ್ಯವಂತನ ಯಾವುದಾದರೂ ದೋಷಗಳು ಅವಳಿಗೆ ಆ ಅವಧಿಯಲ್ಲಿ ಗೋಚರವಾಗುತ್ತಿದ್ದುವು. ಮೋಹನ ಪಠ್ಯ ಪುಸ್ತಕಗಳನ್ನು ಬಿಟ್ಟು ಬೇರೇನನ್ನೂ ಓದುವುದಿಲ್ಲ. ನಾರಾಣಾಚಾರಿ ಮಾಂಸಾಹಾರದ ಬಗ್ಗೆ ತನ್ನ ಖಂಡನೆಗಳನ್ನು ಉಗ್ರವಾಗಿ ಮಂಡಿಸುವುದಿಲ್ಲ. ಅಶೋಕ ಈಚಿನ ಹುಡುಗರಂತೆ ಬನಿಯನ್ ಇಲ್ಲದೆಯೇ ಶರ್ಟ್ ಹಾಕಿಕೊಳ್ಳದೆ ಬನಿಯನ್ ಕೂಡ ಧರಿಸುತ್ತಾನೆ. ಅಷ್ಟು ಅತ್ಯಾಧುನಿಕನಾದ ಸಂಜಯ ಪರೀಕ್ಷೆಯ ಬೆಳಿಗ್ಗೆ ಗಣಪತಿ ಗುಡಿಗೆ ಹೋಗಿದ್ದ. ಇತ್ಯಾದಿ ದೋಷಗಳನ್ನು ಪಟ್ಟಿ ಮಾಡಿ ಅವರನ್ನೆಲ್ಲಾ ನಿರಾಕರಿಸಿವ್ವಾಯಿತು. "ಇಂಥ ಜಿಂಗಾರಿಗೆ ಅದೆಂಥ ಗಂಡ ಸಿಕ್ಕುತ್ತಾನೋ ನೋಡೇ ಬಿಡೋಣ" ಎಂದು ತಮ್ಮ ಬೀದಿ ಚೌಕದ ಸಭೆಯಲ್ಲಿ ಅವರು ಹಾರಾಡಿದರು.

ಕಡೆಗೊಬ್ಬ ಕಟ್ಟಾಪ್ರೇಮಿ ಆಶಾಳಿಗೆ ಗಂಟು ಬಿದ್ದ. ಅವನು ಪ್ರಶಾಂತ. ತಳ್ಳಿಹಾಕುವಂಥ ರೂಪ ಅಲ್ಲ. ಓದಿನಲ್ಲಿ ಅಂಥ ದಡ್ಡನಲ್ಲ. ಐದು ವರ್ಷಗಳಲ್ಲಿ ಬಿ.ಎ. ಕೊನೆಯ ವರ್ಷ ತಲುಪಿದ. ಎರಡು ವರ್ಷ ತಡವಾದದ್ದು ಅವನಿಗೆ ವಿದ್ಯೆಯಲ್ಲಿ ಆಸಕ್ತಿ ಇಲ್ಲದೆ ಅಲ್ಲ, ಕಾಲೇಜು ಜೀವನದಲ್ಲಿ ಅವನಿಗಿದ್ದ ಅತ್ಯಾಸಕ್ತಿಯಿಂದ. ಅವರ ಅಪ್ಪ ಹತ್ತಿಪ್ಪತ್ತು ಲಕ್ಷಗಳಿಗೆ ಒಡೆಯರು. ಒಂದು ಮೋಟಾರು ವಾಹನಗಳ ಗ್ಯಾರೇಜು ಇಟ್ಟಿದ್ದರು. ಪ್ರಶಾಂತನ ಓದು ಮುಗಿದು ಅವನಿಗೆ ಪದವಿ ದೊರೆತ ಕೂಡಲೇ ಅವನಿಗೆ ಮದುವೆ ಮಾಡುವುದು ಎಂಬ ಮೊದಲನೆ ಭಯವನ್ನೂ, ಗ್ಯಾರೇಜಿನ ಮೇಲ್ವಿಚಾರಣೆಯನ್ನು ಅವನಿಗೆ ವಹಿಸುವುದು ಎಂಬ ಎರಡನೆಯ ಭಯವನ್ನೂ, ಅವನ ಎದೆಯಲ್ಲಿ ಬಿತ್ತಿದ್ದರು. ಅದನ್ನು ನೆನೆದು ಪ್ರಶಾಂತ ಓದು ಮುಗಿಯದೆ ಇರುವಂತೆಯೂ, ಪದವಿ ದೊರಕದೆ ಇರುವಂತೆಯೂ ಎಚ್ಚರಿಕೆ ವಹಿಸಿ ನಡೆಯುತ್ತಿದ್ದ.

ಈ ಮಧ್ಯೆಯೇ ಅವನಿಗೆ ಅಪಘಾತವಾದದ್ದು, ಎಂದರೆ ಅವನು ಆಶಾಳಲ್ಲಿ ಅನುರಕ್ತನಾದದ್ದು. ಮನ್ಮಥನು ಯಾರ ಮೇಲೆ ಯಾವಾಗ ತನ್ನ ಪುಷ್ಪಬಾಣಗಳನ್ನು ಪ್ರಯೋಗಿಸುತ್ತಾನೆ, ಹೇಳಬಲ್ಲವರು ಯಾರು? ಪ್ರಶಾಂತನ ಮೇಲೆ ಮದನನ ಬಾಣ ಬಿತ್ತು. ಅವನು ಹತನಾದ. ಹಗಲೂ ರಾತ್ರಿ ಆಶಾ ಚಿಂತೆಯಲ್ಲಿ ಕಾಲ ಕಳೆದ. ಮನೆಯಲ್ಲಿ ಅವನದ್ದೇ ಆದ ಖಾಸಗಿ ಕೊಠಡಿ ಉಂಟು. ಅದರ ನಾಲ್ಕು ಗೋಡೆಗಳಲ್ಲಿ ಹೇಮಾಮಾಲಿನಿ, ಸ್ಮಿತಾ ಪಾಟೀಲ್ ಶಬನಾಅಜ್ಮಿ ಇತ್ಯಾದಿ ಸಿನಿಮಾ ನಟಿಯರ ಚಿತ್ರಗಳು ಅಲಂಕರಿಸದೆ ಬಿಟ್ಟಿದ್ದ ಜಾಗದಲ್ಲೆಲ್ಲ ಆಶಾ ಆಶಾ ಎಂದು ಬರೆದ. ಅವನ ತಾಯಿ ಅದನ್ನು ಕಂಡು ಮಮ್ಮಲ ಮರುಗಿದರು. ತಂದೆ ಕನಲಿದರು. "ಹೇಡಿ" ಎಂದರು. "ಧೈರ್ಯವಾಗಿ ಹೋಗಿ ಆ ಆಶಾ ಎಂಬುವಳನ್ನು ಕಂಡು ಮಾತನಾಡಿ ನಿನ್ನ ವ್ಯಥೆಯನ್ನು ಹೇಳಿಕೋ" ಎಂದರು. ಅವರ ವಯಸ್ಸಿನಲ್ಲಿ ತಾವು ಹೇಗೆ ಧೈರ್ಯವಾಗಿ ಅನೇಕ ಮಹಿಳಾ ಮಣಿಯರನ್ನು ಮಾತನಾಡಿಸಿದ್ದೆ, ಎಂಬುದನ್ನು ವರ್ಣಿಸಿದರು.

ಮಾರನೆಯ ದಿನ ಪ್ರಶಾಂತನು ದೊಡ್ಡ ರಸ್ತೆಯು ಕಾಲೇಜಿನ ಸಣ್ಣ ರಸ್ತೆಗೆ ತಿರುಗುವ ಸ್ಥಳದಲ್ಲಿ ನಿಂತ. ಆಶಾದೇವಿ ಆ ಮಾರ್ಗವಾಗಿ ಹೋಗುವುದನ್ನೇ ಕಾದಿದ್ದ. ಕೆಲವು ಗಂಟೆಗಳು ಕಾದಮೇಲೆ ಅವನ ಕಣ್ಣು ತುಂಬ ಮಬ್ಬು ತುಂಬಿತು. ಬಹಳ ಹೊತ್ತಾದ ಮೇಲೆ ಅವನಿಗೆ ತಿಳಿಯಿತು ಅದು ಆಶಾದೇವಿ ಬಿಟ್ಟುಕೊಂಡ

...ೀದ ಇಂಡ್ ಸುಜುಕಿ ಮೋಟಾರ್ ಸೈಕಲ್
...ಸಿದ ಧೂಳು ಎಂದು!


...ನ್ನ ಕಣ್ಣು ಮೂಗು ಕಿವಿಗಳು ಧೂಳಿನಿಂದ ...ಾದ ಮೇಲೆ ಪ್ರಶಾಂತ ತನ್ನ ನೋಟವನ್ನು ...ಳು ಹೋದ ದಿಕ್ಕಿನತ್ತ ಹರಿಯಬಿಟ್ಟ. ...ಾ ದಿಕ್ಕಿನತ್ತ ಹರಿಯಬಿಟ್ಟ. ಅತ್ತ ದಿಕ್ಕಿನ ...ಳು ಅಡಗಿದ ಮೇಲೆ ಅವನು ಕಂಡ ದೃಶ್ಯ ...ವನ್ನು ಅಧೀರನನ್ನಾಗಿ ಮಾಡಿತು. ...ಟು ಷರ್ಟುಗಳನ್ನು ತೊಟ್ಟ ಆಶಾ ತನ್ನ ...ೆಯ ಕ್ರಾಪನ್ನು ಪದೇ ಪದೇ ಸರಿ ಮಾಡಿ ...ತ್ತಾ ತನ್ನ ಸುತ್ತ ಮುತ್ತಿದ್ದ ಐದಾರು ಜನ ...ರೊಡನೆ ಏಕಕಾಲದಲ್ಲಿ ಮಾತನಾಡುತ್ತಿ...ಳೆ. ಪ್ರಶಾಂತ ಕವಿಯಲ್ಲ. ಆದರೂ ಮಹಾ...ರತದ ಅಭಿಮನ್ಯುವಿನ ಕಥೆ ಅವನಿಗೆ ...ತ್ತಿತ್ತು. ಆದ್ದರಿಂದ ಅವನಿಗೆ ಒಂದು ...ನೆ ಹೊಳೆದು ತನ್ನ ಪರಿಸ್ಥಿತಿ ಅರ್ಥ...ಾಯಿತು. ತಾನು ಆ ತರುಣರ ಚಕ್ರವ್ಯೂಹವನ್ನು ಬೇಧಿಸಿಕೊಂಡು ಆಶಾ ಸಮೀಪಿಸುವುದು ಸಾಧ್ಯವಿಲ್ಲವೆಂದೂ, ಒಂದು ವೇಳೆ ಸಮೀಪಿಸಿದರೂ ತಾನು ಹಿಂದಕ್ಕೆ ಬರುವುದು ಅಸಾಧ್ಯವೆಂದೂ ತೀರ್ಮಾನಿಸಿದ. ಪಕ್ಕದಲ್ಲಿ ಇದ್ದ ತಂಪು ಪಾನೀಯದ ಅಂಗಡಿಯನ್ನು ಪ್ರವೇಶಿಸಿ ಅಲ್ಲಿ ಅತ್ಯಂತ ಭಾರೀ ಪ್ರಮಾಣದ ಲೋಟ... ...ಂಬೆಹಣ್ಣು ಸೋಡಾಗಳನ್ನು ತರಿಸಿ ನಿಧಾನವಾಗಿ ಗುಟುಕಿಸುತ್ತಾ ಮುಂದಿನ ಹೆಜ್ಜೆ ...ವ ಎಂದು ಯೋಚಿಸತೊಡಗಿದ.

ಇಂಥ ಸಂದರ್ಭದಲ್ಲಿ ಯಾವ ಹೇಡಿಯೂ ಮಾಡಬಹುದಾದ್ದನ್ನೇ ಪ್ರಶಾಂತನೂ ಮಾಡಿದ. ಆದರೆ ಅವನು ಭಾವಾವೇಶದಿಂದ ಕವಿಗಳಂತೆ ವರ್ಣನೆಗಳಲ್ಲಿ ಕಾಲವನ್ನಾಗಲೀ ...ವನ್ನಾಗಲೀ ವ್ಯಯಮಾಡಲಿಲ್ಲ. ...ವಳಿಗೆ ಒಂದು ಅರ್ಜಿ ಫಾರಂ ತಯಾರಿಸಿದ ...ಂದಂತೆ:

ಕುಮಾರಿ ಆಶಾದೇವಿಯವರ

ಪ್ರಣಯಕ್ಕಾಗಿ ಸಲ್ಲಿಸಿರುವ ಅರ್ಜಿ

ಹೆಸರು: ಪ್ರಶಾಂತಕುಮಾರ
ನಿಜವಾದ ವಯಸ್ಸು: 26
ಕಾಲೇಜಿನ ರಿಜಿಸ್ಟಾರ್ ಪ್ರಕಾರ ವಯಸ್ಸು: 23



ಜಾತಿ: ಜಾತ್ಯತೀತ
ಗೋತ್ರ: ಪ್ರಶ್ನೆ ಉದ್ಭವಿಸುವುದಿಲ್ಲ
ತಂದೆಯ ಹೆಸರು: ವಸಂತರಾವ್
ತಾಯಿಯ ಹೆಸರು: ವೆಂಕಟಲಕ್ಷ್ಮಮ್ಮ
ತಂದೆಯ ಉದ್ಯೋಗ: ಕಾರ್ಖಾನೆಯ ಮಾಲೀಕರು
ನಿಜವಾದ ವಾರ್ಷಿಕ ಆದಾಯ: ... ಅಥವಾ ಏಳು ಲಕ್ಷ
ವರಮಾನ ತೆರಿಗೆಯವರಿಗೆ ತಿಳಿಸುವ ವಾರ್ಷಿಕ ಆದಾಯ: ಸುಮಾರು ಒಂದು ಲಕ್ಷ
ವಿದ್ಯಾರ್ಹತೆ: ಬಿ.ಎ. ಅಂತಿಮ ವರ್ಷ
ಎತ್ತರ: 5 ಅಡಿ 10 ಅಂಗುಲ
ತೂಕ: 48 ಕಿಜಿಗಳು
ವ್ಯಾಸಂಗೇತರ ಆಸಕ್ತಿ:- ಆಶಾದೇವಿಯವರನ್ನು ಅವಕಾಶ ಸಿಕ್ಕಿದಾಗಲೆಲ್ಲ ಎದೆ

ಬಿಕ್ಕದೆ ನೋಡುವುದು.

ವಿಶೇಷಾಂಶಗಳು:- ಈ ಅಭ್ಯರ್ಥಿಯು ಅನುಭವದಲ್ಲಿ, ಆಶಾದೇವಿಗಿಂತ ಸುಂದರಳೂ, ಬುದ್ಧಿಶಾಲಿಯೂ ಇಲ್ಲ. ಆದ್ದರಿಂದ ಅವಳನ್ನೇ ನಾನು ಮದುವೆಯಾಗುವ ತೀರ್ಮಾನ ಕೈಗೊಂಡಿದ್ದೇನೆ. ಆಶಾದೇವಿ ಒಪ್ಪಲೇ ಬೇಕು.

ಇಂಥದೊಂದು ಅರ್ಜಿ ಬಹಿರಂಗವಾದದ್ದು ಹೀಗೆ: ಮೇಲಿನ ಅರ್ಜಿಯನ್ನು ಅಂಚೆಯವನು ಆಶಾದೇವಿಗೆ ಖುದ್ದಾಗಿ ತಲುಪಿಸಿದ. ಅವಳು ಅದನ್ನು ಕೂಲಂಕಷವಾಗಿ ಓದಿ ಆದರ ತುದಿಯಲ್ಲಿ "ಸಾಧ್ಯವಿಲ್ಲ" ಎಂದು ಷರಾ ಬರೆದು, ರುಜುಮಾಡಿ, ತಾರೀಖು ಹಾಕಿ ಸದರಿ ಅಂಚೆ ಇಲಾಖೆಯ ಮೂಲಕ ಪ್ರಶಾಂತನಿಗೆ ಹಿಂದಿರುಗಿಸಿದಳು. ಮಾರನೆಯ ದಿನ ಕಾಲೇಜು ನೋಟೀಸು ಬೋರ್ಡಿನ ಮೇಲೆ ಅದನ್ನು ಅಂಟಿಸಲಾಗಿತ್ತು, ಒಂದು ಸೇರ್ಪಡೆಯೊಡನೆ "ಹಾಳಾಗಿ ಹೋಗು" ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ಅಧ್ಯಾಪಕ ವರ್ಗದ ತರುಣ ತರುಣಿಯರಿಗೂ ಈ ಪ್ರಸಂಗ ಎರಡು ದಿನಗಳ ಗ್ರಾಸವನ್ನೊದಗಿಸಿ ಅವರ ಕಾಲ ಸುಲಭವಾಗಿ ಜಾರುವಂತೆ ಮಾಡಿತು.

ಆಶಾದೇವಿಯ ಆಪ್ತರು ಅವಳನ್ನು ಛೇಡಿಸಿದರು. ಕುಲೀನನೂ, ಲಕ್ಷಾಧೀಶರ ಏಕಮಾತ್ರ ಪುತ್ರನೂ, ಅಸುಂದರನಲ್ಲದವನೂ, ಅಕ್ಷರಸ್ಥನೂ, ಸ್ವಯಂ ಪ್ರೇಮಾರ್ಜಿಯನ್ನು ತುಂಬ ಬಲ್ಲವನೂ ಆದ ತರುಣನನ್ನು ನಿರಾಕರಿಸಿದ್ದು ಮೂರ್ಖತನದ ಪರಮಾವಧಿ ಎಂದರು. ಅಂಥವರನ್ನು ನಿರಾಕರಿಸಿದ್ದಕ್ಕೆ ಒಂದೇ ಒಂದು ಸರಿಯಾದ ಕಾರಣವನ್ನಾದರೂ ಕೊಡಲೇ ಬೇಕೆಂದು ಒತ್ತಾಯಿಸಿದರು. ಆಶಾದೇವಿ ಸ್ವಲ್ಪವೂ ಸಿಡುಕದೆ ನೇರವಾಗಿ ಹೇಳಿದಳು. "ಪ್ರಶಾಂತ ಸುಳ್ಳುಗಾರ." ಒತ್ತೈಷಿಗಳು ಅವಾಕ್ಕಾದರು. ಪ್ರಶಾಂತನಂತಹ ಗುಣಶಾಲಿ ಇಡೀ ಕಾಲೇಜಿನಲ್ಲೇ ಇಲ್ಲ ಎಂಬುದನ್ನು ಅವರೆಲ್ಲ ಬಲ್ಲರು. ಆದ್ದರಿಂದ ಅವರೆಲ್ಲ ಏಕಕಾಲದಲ್ಲಿ ದನಿಯೇರಿಸಿ "ಬಿಂಗಾರಿ, ನಾಲಗೆ ಬಿಗಿ ಹಿಡಿ. ಅಂಥ ಹೃದನನ್ನು ದೂಷಿಸಿ ಪಾಪ ಕಟ್ಟಿಕೊಳ್ಳಬೇಡ. ಅವನು ಸುಳ್ಳುಗಾರ ಎಂದು ಹೇಗ ಹೇಳುತ್ತೀ?" ಎಂದು ನೆಲವನ್ನು ಕಾಲಿಂದ ಬಡಿದರು. ಇಪ್ಪತ್ತು ಮೂವತ್ತು ಗುಜ್ಜಾನೆ ಮರಿಗಳು ನೆಲವನ್ನು ತಮ್ಮ ಕೋಮಲವಾದ ಪಾದಗಳಿಂದ ಏಕಕಾಲದಲ್ಲಿ ಬಡಿದಾಗ ಸಣ್ಣ ಭೂಕಂಪ ಅನುಭವವಾಯಿತು. ಆಶಾ ಹೆದರಲಿಲ್ಲ. ಅವರನ್ನೆಲ್ಲ ನೋಟಿಸು ಬೋರ್ಡಿನ ಬಳಿಗೆ ಕರೆದುಕೊಂಡು ಹೋಗಿ ವಿಶೇಷಾಂಶಗಳು ಎಂಬುದರ ಕಡೆಗೆ ಬೆಟ್ಟು ತೋರಿಸಿ ಓದಿ ಎಂದಳು. ಅವರು ಗಟ್ಟಿಯಾಗಿ ಓದಿದರು. "ಅಭ್ಯರ್ಥಿಯ ಅನುಭವದಲ್ಲಿ ಆಶಾದೇವಿಗಿಂತ ಸುಂದರಳೂ, ಬುದ್ಧಿಶಾಲಿಯೂ ಇಲ್ಲ."

"ನಿಲ್ಲಿಸಿ" ಎಂದು ಆಶಾ ಗುಡುಗಿದಳು. ಅವರೆಲ್ಲ ಬೆಚ್ಚಿ ನಿಲ್ಲಿಸಿದರು. "ಇದನ್ನೆಲ್ಲ ಬರೆದವನು ಸುಳ್ಳುಗಾರನಲ್ಲವೆ ಏನು?"

ಬೆಪ್ಪು ಬೆರಗಾದ ಅಭಿಮಾನಿಗಳ ತಂಡ ಕೇಳಿತು. "ಅದರಲ್ಲಿ ಸುಳ್ಳೇನು ಬಂತು?"

"ನಾನು ಸುಂದರಿ ಎಂಬುದೂ ಸುಳ್ಳು. ಬುದ್ಧಿಶಾಲಿ ಎಂಬುದೂ ಸುಳ್ಳು."

"ಯಾರು ಹೇಳಿದ್ದು?" ಎಂದು ಸಾಮೂಹಿಕ ಪ್ರಶ್ನೆ ಪ್ರತಿಧ್ವನಿತವಾಯಿತು. ಆಶಾ ದೃಢವಾದ ಸ್ವರದಲ್ಲಿ ಉತ್ತರ ಹೇಳಿದಳು:" ಕನ್ನಡಿ ಮತ್ತು ಮಾರ್ಕ್ಸ್‌ಕಾರ್ಡ್." ಆಶಾಳ ಮೆಚ್ಚುಗರು ಅವಾಕ್ಕಾದರು.

ಆಶಾ ಇದೇ ಮಾತನ್ನು ತಂದೆ ತಾಯಿಗಳ ಮುಂದೆ, ಗುರು ಹಿರಿಯರ ಮುಂದೆ ಸಾರಿದಳು. ಅವರಲ್ಲಿ ವಿವೇಕಿಗಳಾದವರು ಇಷ್ಟು ಸಣ್ಣ ಪ್ರಾಯದಲ್ಲಿ ಬಾಲಕಿಯೊಬ್ಬಳಿಗೆ ಸ್ವಸ್ವರೂಪಜ್ಞಾನ ಉಂಟಾದದ್ದಕ್ಕಾಗಿ ಆಶ್ಚರ್ಯಪಟ್ಟರು. ಅವಳನ್ನು ಹೃದಯ ಪೂರ್ವಕ ವಾಗಿ ಅಭಿನಂದಿಸಿದರು.

ಕಾಲೇಜು ಜೀವನದ ಕೊನೆಯ ದಿನ. ಗೆಳೆಯ ಗೆಳತಿಯರೆಲ್ಲ ಒಟ್ಟಾಗಿ ಸೇರಿ ಗ್ರೂಪ್ ಫೋಟೋ ತೆಗೆಸುವ ಏರ್ಪಾಟಾಗಿತ್ತು. ಹಿನ್ನೆಲೆಯಲ್ಲಿ ಕಾಲೇಜು ಮುಂದೆ ಐವತ್ತು ಅರವತ್ತು ತರುಣ ತರುಣಿಯರು ಬೆಂಚು, ಕುರ್ಚಿ, ಹೀಗೆ ವಿವಿಧ ಆಸನಗಳನ್ನು ಅವಲಂಬಿಸಿ ಫೋಟೋ ತೆಗೆಸಿಕೊಳ್ಳಲು ಸಜ್ಜಾಗಿ ನಿಂತಿದ್ದಾರೆ. ಫೋಟೋಗ್ರಾಫರ್ ಸೀತೂರುಸಿಂಗಣ್ಣ ಎಲ್ಲವನ್ನೂ ಕೊನೆಯಬಾರಿಗೆ ಅಜಮಾಯಿಷಿ ಮಾಡುತ್ತಿದ್ದಾನೆ.

ಚಿತ್ತೂರು ಸಿಂಗಣ್ಣನ ವಿಷಯ ನಾಲ್ಕು ಮಾತು ಹೇಳಲೇ ಬೇಕು. ಅವನು ತರುಣ, [illegible]. ಕುರೂಪಿ ಎಂದು ಹೇಳಲಾರೆ. ಅವರೆ ಸುರದ್ರೂಪಿ ಅಲ್ಲ. ಅರ್ಧ ಪಂಚೆ ಅರ್ಧ ತೋಳಿನ ಅಂಗಿ ಇವೇ ಅವನ ಸಾಮಾನ್ಯ ಉಡುಪು. ಕ್ರಾಪಿಗೂ, ಜುಟ್ಟಿಗೂ ಅವನ ತಲೆ ಮಧ್ಯೆ ವಿಚಿತ್ರ ರೀತಿಯ [illegible] ಏರ್ಪಾಟಿದೆ. ಹಣೆಯ ಮೇಲೆ ವಿಭೂತಿಯಿಲ್ಲದೆ ಅವನು ಯಾವ ಸಾರ್ವಜನಿಕ ಸಮಾರಂಭಕ್ಕೂ ಬರುವುದೇ ಇಲ್ಲ.

ಫೋಟೋ ತೆಗೆಯುವುದು ಅವನ ಮನೆತನದ ಉದ್ಯೋಗ. ಕ್ಷೌರಿಕನ ಮಗ ಕ್ಷೌರಿಕನಾಗಿಯೇ ಉಳಿಯಬೇಕು. ಅಗಸನ ಮಗ ಅಗಸನಾಗಿಯೇ ಉಳಿದರೆ ಸಮಾಜಕ್ಕೆ ಕ್ಷೇಮ ಎಂಬ ಡಿ.ವಿ.ಜಿ. ಯವರ ಅಭಿಪ್ರಾಯ ಅವನಿಗೆ ಗೊತ್ತಿರಲಿಲ್ಲ. ಏಕೆಂದರೆ ಅವನು ಅವರ "ಜೀವನ ಧರ್ಮಯೋಗ" ಎಂಬ ಗ್ರಂಥವನ್ನು ಓದಿರಲಿಲ್ಲ. ಅಷ್ಟೇ ಅಲ್ಲ, ಅವನಿಗೆ ಅಂಥದೊಂದು ಗ್ರಂಥ ಇರುವುದೂ ಗೊತ್ತಿರಲಿಲ್ಲ. ಹಾಗೆಂದರೆ ಅವನು ತಾತ, ತಂದೆಯವರ ಕಸುಬಾದ ಫೋಟೋಗ್ರಫಿಯನ್ನೇ ಅವಲಂಬಿಸಿರುವುದಕ್ಕೆ ಕಾರಣವೇನು ಎಂಬ ಪ್ರಶ್ನೆ ಏಳುತ್ತದೆ. ಅದಕ್ಕೆ ಒಂದು ಸಣ್ಣ ಇತಿಹಾಸ ಇದೆ.

ಬಿ.ಎ. ಪದವಿ ಮುಗಿಸಿ ನಾಲ್ಕಾರು ತಿಂಗಳ ಕಾಲ ತನ್ನ ಹಿರಿಯರ ಅಪೇಕ್ಷೆಯಂತೆ ಸಿಂಗಣ್ಣ ಪ್ರಪಂಚವನ್ನು 'ನೋಡು'ತ್ತಿದ್ದ. ಅವನಿಗೆ ಲೋಕಾನುಭವ ಬರಬೇಕು ಎಂಬುದು ಅವನ ಅಪೇಕ್ಷೆಯಾಗಿತ್ತು. ಆ ಅವಧಿಯಲ್ಲಿ ಸಿಂಗಣ್ಣ ಒಂದು ಸರ್ಕಾರೀ ಜಾಹೀರಾತು ನೋಡಿ ಒಂದು ಗುಮಾಸ್ತೆ ಹುದ್ದೆಗೆ ಅರ್ಜಿ ಹಾಕಿದ. ಸಂದರ್ಶನಕ್ಕೂ ಬಂತು. ಆ ಕಾಲದಲ್ಲಿ ಅದನ್ನು ಇಂಟರ್ವ್ಯೂ ಎಂದು ಕರೆಯುತ್ತಿದ್ದರು. ಸಿಂಗಣ್ಣ ಅಡ್ಡಪಂಚೆ, ಅರ್ಧ ತೋಳಿನ ಅಂಗಿ ತೊಟ್ಟು, ಪಟ್ಟಾಗಿ ವಿಭೂತಿ ಧರಿಸಿ, ಕ್ರಾಪು ಬಾಚಿ, ಜುಟ್ಟು ಕಟ್ಟಿಕೊಂಡು ಸಂದರ್ಶನಕ್ಕೆ ಹೋದ. ಸಂದರ್ಶನಕರು ಇವನನ್ನು ಕೇಳಿದ ಮೊದಲ ಪ್ರಶ್ನೆ "ನೀವು ಬ್ರಾಹ್ಮಣರೆ?" ನಮ್ಮ ಸಿಂಗಣ್ಣ [illegible] ಮುಟ್ಟಿಕೊಂಡು ಹೆಮ್ಮೆಯಿಂದ "ಹೌದು" ಎಂದ. ಅವರಲ್ಲಿ ಮುಖ್ಯಸ್ಥರು [illegible]. ಈ ಕೆಲಸ ನಿಮಗಲ್ಲ" ಎಂದರು. ಸಿಂಗಣ್ಣ ಅಷ್ಟೇ ಹೆಮ್ಮೆಯಿಂದ ಎದ್ದು ಒಂದಕ್ಕೆ ಬಂದ. ಮತ್ತೆ ಹಿಂದಕ್ಕೆ ಹೋದ. "ತಮ್ಮ ಫೋಟೋ ತೆಗೆಯಲು ತಮ್ಮ ಅಭ್ಯಂತರ ಇದೆಯೆ?" ಎಂದು ಕೇಳಿದ. ಅವರು "ಇಲ್ಲ" ಎಂದರು. ಸಿಂಗಣ್ಣ ಅವರ ಫೋಟೋ ತೆಗೆದ. ಅದನ್ನು ದೊಡ್ಡದು ಮಾಡಿ ತನ್ನ ಸ್ಟುಡಿಯೋದಲ್ಲಿ ಹಾಕಿದ್ದಾನೆ. ದಿನಾ ಬೆಳಿಗ್ಗೆ ಅವರ ಫೋಟೋಕ್ಕೆ ನಮಸ್ಕಾರ ಮಾಡುತ್ತಾನೆ. ಒಂದು ದಿನ "ಸಿಂಗಣ್ಣ, ಅವರು ನಿನಗೆ ಕೆಲಸ ಕೊಡಲಿಲ್ಲ, ಏನಿಲ್ಲ. ಅವರಿಗೇಕೆ ನಮಸ್ಕಾರ ಮಾಡುತ್ತೀಯ?" ಎಂದದ್ದಕ್ಕೆ ಅವನು ಹೇಳಿದ್ದು ಇದು. "ನೋಡಪ್ಪ, ಅವರು ಕೆಲಸ ಕೊಟ್ಟಿದ್ದರೆ ನಾನು ಯಾವುದೋ ಕಛೇರಿಯಲ್ಲಿ ಗುಮಾಸ್ತೆಯಾಗಿ ಕೊಳೆಯುತ್ತಿದ್ದೆ. ಈಗ ನನ್ನ ಸಂಪಾದನೆ ನೋಡು ಗುಮಾಸ್ತೆಯ ಸಂಬಳ, ಲಂಚ, ಇದೆಲ್ಲ ಸೇರಿದ್ದರ ಮೂರರಷ್ಟಾದರೂ ಆಗುತ್ತಿದೆ! ಆದ್ದರಿಂದ ನನಗೆ ಕೆಲಸ ಕೊಡದೆ ಉಪಕಾರ ಮಾಡಿದ ಮಹಾನುಭಾವರನ್ನು ನೆನೆದು ದಿನವೂ ಅವರ ಭಾವಚಿತ್ರಕ್ಕೆ ನಮಸ್ಕಾರ ಮಾಡುತ್ತೇನೆ."

ಈ ಕಾಲದ ಪದವೀಧರನಾದರೂ ಸಿಂಗಣ್ಣ ಹಳೇಕಾಲದ ಫೋಟೋಗ್ರಾಫರ್. ಮೂರು ಕಾಲಿನ ಸ್ಟ್ಯಾಂಡಿನ ಮೇಲೆ ಕ್ಯಾಮರಾ ನಿಲ್ಲಿಸಿ ಕರಿಬಟ್ಟೆಯೊಳಗೆ ತೂರಿಕೊಂಡು ಅವನು ಫೋಟೋ ತೆಗೆಯುತ್ತಿದ್ದ. ಅವನು ಸೂಚನೆ ಕೊಟ್ಟಾಗ ಮಾತ್ರ, ಅವನು ಹೇಳಿದಷ್ಟು ಮಾತ್ರ ಮಂದಹಾಸ ಬೀರಬೇಕು. ಅವನು ಕರಿಯ ಬಟ್ಟೆಯೊಳಕ್ಕೆ ಮುಖ ತೂರಿಸಿ ತನಗೆ ಎಲ್ಲ ಸರಿಯಾಗಿದೆ ಎಂದು ತೋರುವವರೆಗೂ ಹೊರಗೆ ಬರುತ್ತಿರಲಿಲ್ಲ. ಆಗ ಯಾರೂ ಹೊತ್ತಾಯಿತು ಎಂದು ಗೊಣಗಕೂಡದು. ಎಷ್ಟೋ ಜನ ತರುಣರು ಶುಭ್ರವಾಗಿ ಮುಖಕ್ಷೌರ ಮಾಡಿಸಿಕೊಂಡು ಫೋಟೋಕ್ಕೆ ಕೂಡುತ್ತಿದ್ದರು. ಫೋಟೋ ತಯಾರಾಗಿ ಬಂದಾಗ ಅವರ ಮುಖದ ಮೇಲೆ ಸ್ವಲ್ಪ ಮಾತ್ರ ಗಡ್ಡ ಮೀಸೆ ಕಾಣಿಸಿಕೊಳ್ಳುತ್ತಿತ್ತು. ಅದಕ್ಕೆ ಅವರು ಕೊಡುತ್ತಿದ್ದ ಕಾರಣ ಸಿಂಗಣ್ಣ ಅಷ್ಟು ಹೊತ್ತು ಕರಿಯಬಟ್ಟೆಯೊಳಗೆ ತಲೆ ತೂರಿಸಿಕೊಂಡಿರುತ್ತಿದ್ದ ಎಂದು!

ಅದೇನೇ ಇರಲಿ. ಪ್ರಕೃತ ಮುಖ್ಯವಾದ [illegible]

ಬಟ್ಟೆಯೊಳಗೆ ತಲೆಯಿಟ್ಟು, ಕೇವಲ ಹದಿನಾರು ನಿಮಿಷಗಳಲ್ಲಿ ಹೊರಗೆ ಬಂದು ನೇರವಾಗಿ ಗುಂಪಿನ ಬಳಿಗೆ ಹೋಗಿ ಆಶಾಳನ್ನು ಉದ್ದೇಶಿಸಿ "ನೀವು ನೆಟ್ಟಗೆ, ಗಂಭೀರವಾಗಿ [illegible] ಎಂದು ನಗುತ್ತಾ ಬಳುಕುತ್ತಿದ್ದರೆ ಫೋಟೋ ತೆಗೆಯೋದು ಕಷ್ಟವಾಗುತ್ತದೆ" ಎಂದುಬಿಟ್ಟ. ಸರಿ, ಸಿಂಗಣ್ಣ ಹುಲಿಯ ಬಾಲ ತುಳಿದ. ಇನ್ನು ನಮ್ಮ ಫೋಟೋ ಕಾರ್ಯಕ್ರಮಕ್ಕೆ ಕಲ್ಲು ಬಿತ್ತು [illegible] ತರುಣತರುಣಿಯರು [illegible] ನಾದರು. ಆದರೆ ಏನಾಯಿತೋ ಏನೋ ಆಶಾ ಗರಬಡಿದವಳಂತೆ ನಿಂತುಬಿಟ್ಟಳು. ಸಿಂಗಣ್ಣ ಹಿಂದಕ್ಕೆ ಹೋಗಿ ಮತ್ತೆ ಕರಿಬಟ್ಟೆಯೊಳಕ್ಕೆ ತನ್ನ ತಲೆಯನ್ನು ತುರುಕಿಬಿಟ್ಟ.

ಹಾಗೆ ತುರುಕಿ ಎರಡೇ ನಿಮಿಷ ಕಳೆದಿರಬೇಕು. ಮತ್ತೆ ಆತ ತಲೆ ಹೊರಕ್ಕೆ ತೆಗೆದು, ನೇರವಾಗಿ ಫೋಟಾಕಾಂಕ್ಷಿಗಳ ಬಳಿಗೆ ನಡೆದ. ಅವನ ನಡೆ ಬಿರುಸಾಗಿತ್ತು. ಮುಖದಲ್ಲಿ ಉಗ್ರತೆ ಇತ್ತು. ನೇರವಾಗಿ ಆಶಾಳ ಬಳಿ ನಡೆದು "ಕೋತಿ ಮುಖದವಳೇ, ಕೋತಿ ಚೇಷ್ಟೆ ಬಿಟ್ಟು, ನಿಮಿಷ ಸುಮ್ನೆ ನಿಂತ್ಕೊಳೊ ಕ್ಯಾಗೋಲ್ವೇ" ಎಂದು ಅವಳು ಮುಖದ ಮೇಲೆ ಹೊಡೆಯುವವನಂತೆ ಕೈಯೆತ್ತಿದ. ಪರಿಣಾಮ ಏನಾಗುತ್ತದೆಯೋ ಎಂದು ಬೆದರು ಗಣ್ಣುಗಳಿಂದ ತರುಣ ತರುಣಿಯರು ನೋಡುತ್ತಿದ್ದರು. ಆಶಾ, ಬೆಂಚಿನ ಮೇಲೆ ನಿಂತಿದ್ದವಳು ಛಂಗನೆ ಹಾರಿ ಬಂದು, ಖೊಕ್ಕನೆ ನಕ್ಕು ಎಲ್ಲರೂ ನೋಡುತ್ತಿರುವಂತೆಯೇ ಸಿಂಗಣ್ಣನ ಕೈಕುಲುಕಿದಳು. "ಧೀರರು ಎಂದರೆ ನೀವೇ" ಎಂದಳು. "ಒಂದು ನಿಮಿಷ ಗೊಂಬೆ ಹಾಗೆ ನಿಂತಿರುತ್ತೇನೆ. ಫೋಟೋ ತೆಗೆದು ಬಿಡಿ" ಎಂದು ಹೇಳಿ ಮತ್ತೆ ಹಿಂದಕ್ಕೆ ಓಡಿ ಬೆಂಚಿನ [illegible] ವಂತೆ. ಗೊಂಬೆಯಂತೆ [illegible] ಮತ್ತೆ ಕರಿಬಟ್ಟೆಯನ್ನು ಹೊಕ್ಕು ಒಂದೇ ಕ್ಷಣದಲ್ಲಿ ಫೋಟೋ ತೆಗೆದ.

ತರುಣತರುಣಿಯರು ವಿನೋದವಾಗಿ ಮಾತನಾಡುತ್ತಾ ಕಾರ್ಯಕ್ರಮದ ಉತ್ತರಾರ್ಧವಾದ ತಿಂಡಿತೀರ್ಥಗಳ ಸೇವನೆಗೆ ತೆರಳಿದರು. ಸಿಂಗಣ್ಣ ಜಟಕಾಗಾಡಿಯಲ್ಲಿ ತನ್ನ ಕ್ಯಾಮರಾ ಇತ್ಯಾದಿಗಳನ್ನು ಏರಿಸಿ ಸ್ಟೂಡಿಯೋಗೆ ಹೊರಟುಹೋದ.

ಮುಂದಿನ ಘಟನೆಗಳೆಲ್ಲಾ ಬಹು ವೇಗವಾಗಿ ನಡೆದುವು. ಆಶಾ ಮನೆಗೆ ಹೋದವಳೇ ತಾನು ಮದುವೆಯಾಗುವುದು ಸ್ಟೂಡಿಯೋ ಸಿಂಗಣ್ಣನನ್ನೇ ಎಂದು ಘೋಷಿಸಿದಳು. ಲಕ್ಷಾಧೀಶನನ್ನು ತಿರಿಸ್ಕರಿಸಿ ಸಿಂಗಣ್ಣನನ್ನು ಮದುವೆಯಾಗಲು ತೀರ್ಮಾನಿಸಿದ್ದೇಕೆ ಎಂಬುದಕ್ಕೆ ಆಶಾ ಕೊಟ್ಟ ಉತ್ತರ: "ನಾನು ಕಂಡಿರುವವರಲ್ಲೆ ಅತ್ಯಂತ ಸತ್ಯಸಂಧನಾದವನು ಎಂದರೆ "ಸಿಂಗಣ್ಣ ಒಬ್ಬರೇ..."

"ಏಕೆ ಹೀಗೆ...."?

"ಕೋತಿ ಮುಖದವಳೇ ಎಂದು ನನ್ನನ್ನು ಕರೆದವರು ಅವರೊಬ್ಬರೇ. ನನ್ನ ಮದುವೆ ಅವರೊಂದಿಗೇ!"

ಸಿಂಗಣ್ಣ, ಆಶಾ, ಮೂರು ಮಕ್ಕಳು ಈಗ ಸುಖವಾಗಿದ್ದಾರೆ. ★

ಇತಿಹಾಸ ನಿರ್ಮಾಪಕ

ನೌಕಾಪಡೆಯಲ್ಲಿ ಸೇರುವುದಕ್ಕಾಗಿ ಸಂದರ್ಶನಕ್ಕೆ ಬಂದ ತರುಣನೊಬ್ಬ ಕೇಳಿದ ಎಲ್ಲ ಪ್ರಶ್ನೆಗಳಿಗೂ ಅತ್ಯುತ್ತಮವಾಗಿ ಉತ್ತರವೀಯುತ್ತ ಹೋದ. ಆದರೆ ಇತಿಹಾಸದ ಪ್ರಶ್ನೆಗಳು ಬಂದಾಗ ಮಾತ್ರ ಅವನ ಬುದ್ಧಿ ನಿಂತಲ್ಲೇ ನಿಂತುಬಿಟ್ಟಿತು. ಆಗ ಸಂದರ್ಶನ ತೆಗೆದುಕೊಳ್ಳುತ್ತಿದ್ದವರೊಬ್ಬರು, "ನಿನಗೇನೂ ಇತಿಹಾಸ ಬರೋದಿಲ್ಲವೆ?" ಎಂದು ಕೇಳಿದರು.

ಯುವಕ ಚೇತರಿಸಿಕೊಂಡು ಉತ್ತರವಿತ್ತ: "ಇಲ್ಲ ಸ್ವಾಮಿ. ನಮ್ಮ [illegible] ಇತಿಹಾಸವನ್ನು ನಿರ್ಮಿಸುವುದರಲ್ಲಿ ಪ್ರವೀಣರಾಗಿದ್ದಾರೆ ಹೊರತು ಇತಿಹಾಸ ಕಲಿಯುವುದರಲ್ಲಿ [illegible]."

— [illegible]

ಬರ ಮತ್ತು ಕವಿತೆ



ಬರ ಮತ್ತು ಕವಿತೆ
ಅನಾದಿಕಾಲದಿಂದಲೂ
ಒಬ್ಬರನ್ನೊಬ್ಬರು
ಗುಮಾನಿಯಿಂದ ನೋಡಿದ್ದು
ಹಗೆತನ ಬೆಳೆಸಿದ್ದು
ಸತ್ಯವಷ್ಟೆ?
ಹಾಗಾಗಿ ಬರಕ್ಕೊಂದು ಬಲವಾದ
ಧಿಕ್ಕಾರ
ಸೂಚಿಸೋಣ ಕವಿತೆಯ ಮೂಲಕ
ಎಂದರೆ
ಬರದಲ್ಲಿ ಕವಿತೆ ಹುಟ್ಟುವದಿಲ್ಲ
ಹುಟ್ಟಿದರೂ
ಕೆಲಸಕ್ಕೆ ಬಾರದ ಶುದ್ಧ
ಸೋಂಬೇರಿಯಂತೆ
ಅಪ್ಪಾಪಿಡ್ಡಿಯಾಗಿ ನಾಲಾಯಕ್ಕಾಗಿ
ಹುಟ್ಟುತ್ತದೆ
ಕಂಡದ್ದು ಉಂಡದ್ದು
ಯಾರೊಡನೆಯೂ
ಹಂಚಿಕೊಳ್ಳಲಾಗದ
ಮೂಕ ಭಾವನೆಯಾಗಿ ದಕ್ಕದೇ
ಮರುಭೂಮಿಯಲ್ಲಿ ಬಿದ್ದ
ನಾಕಾರು ಹನಿಗಳಂತೆ
ನನ್ನಲ್ಲೇ ಇಂಗಿಹೋಗುತ್ತದೆ.
ಮಳೆ ಬಾರದಿದ್ದಾಗ
ನೀರಿಗಾಗಿ ಜನ ಬೊಬ್ಬೆ ಹೊಡೆದಾಗ
ತಿಪ್ಪರಲಾಗ ಹಾಕಿದರೂ
ಕವಿತೆಯ ಒರತೆ
ಪುಟಿದೆದ್ದು ಹೊರಚಿಮ್ಮುವದಿಲ್ಲ
ಬದುಕನ್ನು ಇಡಿಯಾಗಿ ಹೀರುವ
ಬೆರಗುಗಣ್ಣುಗಳು
ಹೊಳಪು ಕಳಕೊಂಡಾಗ
ಕಂಪಷ್ಟನ್ನು ಗ್ರಹಿಸುವ ತತ್ಪರತೆ
ಸಾಧಿಸುವದಿಲ್ಲ.

ನನ್ನೊಳಗೆ ಚೆಲ್ಲಾಪಿಲ್ಲಿಯಾಗಿ
ಹರಡಿರುವ ಉಸುಕಿನಲ್ಲಿ
ಕೆಬರಿ ಗುಬ್ಬೀಗೂಡ ಮಾಡಿ
ತಡಪಿದರೂ
ಒಳಗಿಂದ ಕವಿತೆ ಚಿಂವೆನ್ನುವುದಿಲ್ಲ.
ಹಾಗಾಗಿ ಗರ್ಭದಲ್ಲೇ ಅರೆಜೀವವಾಗಿ
ಹೊರಬಿದ್ದ (ಅ) ಕವಿತೆ
ಬರಕ್ಕೊಂದು ಗಟ್ಟಿ
ಸವಾಲಾಗುವುದಿಲ್ಲ.

• ಎ.ಡಿ. ಹೆಗಡೆ •

ನಿಮ್ಮ ಶಬ್ದ ಭಂಡಾರ ಬೆಳೆಯಲಿ

ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳ ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

1. ದಂಷ್ಟ್ರ
   - ಅ) ದಪ್ಪ
   - ಆ) ದೋಷ
   - ಇ) ಕೋರೆ ಹಲ್ಲು
   - ಈ) ದರೋಡೆಗಾರ

2. ಪ್ರತಿಕೃತಿ
   - ಅ) ನಕಲು
   - ಆ) ಒಂದೇ ಕೆಲಸ
   - ಇ) ರೂಪಾಂತರ
   - ಈ) ಸುಂದರ

3. ಚಾರಿವರಿ
   - ಅ) ನಾಲ್ಕೂವರೆ
   - ಆ) ಮುಕ್ಕಿಯಿಂದ ಸುಗು
   - ಇ) ಚೆನ್ನಾಗಿ ಅರೆ
   - ಈ) ತಾಳ ಹಾಕು

4. ಕುಸೀದ
   - ಅ) [illegible] ಭೂಮಿ
   - ಆ) ಚತುರ
   - ಇ) ಕೆತ್ತನೆಯ ಕೆಲಸ
   - ಈ) ಬಡ್ಡಿ ವ್ಯವಹಾರ

5. ಪತ್ತೋಲೆ
   - ಅ) ಪತ್ರ[illegible]
   - ಆ) [illegible]
   - ಇ) [illegible]
   - ಈ) [illegible]

6. ಯುಗ್ಮ
   - ಅ) ನೇಗಿಲು
   - ಆ) ಕುಂಟುತನ
   - ಇ) ಬಹಳ ಕಾಲಾವಧಿ
   - ಈ) ಜೊತೆ

7. ಪಟ್ಕಾಮು
   - ಅ) ಮಟ್ಟನ ಮನೆ
   - ಆ) ಸೈನ್ಯದ ತುಕಡಿ
   - ಇ) ಬಾವುಟ
   - ಈ) ಇಜಾರ

8. ದೇವಮಾತೃಕ
   - ಅ) ಮಳೆ ನೀರನ್ನು ಅವಲಂಬಿಸಿದ ಕೃಷಿಭೂಮಿ
   - ಆ) ದೇವತೆಗಳಿಂದ ಹುಟ್ಟಿದವರು
   - ಇ) ಗಂಧರ್ವ
   - ಈ) ವೇದ

9. ಗಾಂಪ
   - ಅ) ಗಣಪತಿ
   - ಆ) ಗಂಭೀರ
   - ಇ) [illegible]
   - ಈ) [illegible]

10. ಮುಂದಾಸನ
    - ಅ) ದೇವರ ಮಂಟಪ
    - ಆ) [illegible]
    - ಇ) [illegible]
    - ಈ) [illegible]

11. ಕೆತ್ತಿಸು
    - ಅ) ಕಂಗಳಿಂದ ನೋಡು
    - ಆ) [illegible]
    - ಇ) [illegible]
    - ಈ) [illegible]

12. ಮರುಕಳಿಸು
    - ಅ) [illegible]
    - ಆ) [illegible]
    - ಇ) [illegible]
    - ಈ) [illegible]

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

1. ದಂಷ್ಟ್ರ
ಇ) ಕೋರೆಹಲ್ಲು, ದಾಡೆ, ಉದಾ: ರಾಕ್ಷಸನ ಕರಾಳ ದಂಷ್ಟ್ರಗಳು (ಸಂ.)

2. ಪ್ರತಿಕೃತಿ
ಅ) ನಕಲು, ಪ್ರತಿ, ಪ್ರತಿಮೆ, ಮೂಲವನ್ನು ಹೋಲುವ ಬೊಂಬೆ. ಉದಾ: ಮಂತ್ರಿಗಳ ಪ್ರತಿಕೃತಿಯನ್ನು ಸುಟ್ಟರು (ಸಂ. ಪ್ರತಿ=ಎದುರು+ಕೃತಿ=ಕೆಲಸ)

3. ಚಾರಿವರಿ
ಅ) ಯುಕ್ತಿಯಿಂದ ಮುನ್ನುಗ್ಗು, ಸುತ್ತುವರಿ, ಆವರಿಸು. ಉದಾ: ಚಾರಿವರಿದನು ರಣದ ರಂಗದಲಿ (ಸಂ. ಚಾರಿ=ಚಲನೆ+ದೇಶ್ಯ-ಪರಿ =ಸಾಗು.)

4. ಕುಸೀದ
ಈ) ಬಡ್ಡಿ ವ್ಯವಹಾರ: ಬಡ್ಡಿ ವ್ಯವಹಾರ ಮಾಡುವವ, ಮಹಾಜನ: ಸಾಲ ಕೊಡುವ ಸಂಸ್ಥೆ. ಉದಾ: ಮುಸ್ಲಿಮರಿಗೆ ಕುಸೀದ ವೃತ್ತಿ [illegible] (ಸಂ)

5. ಹತೋಟಿ
ಅ) [illegible], ಅಂಕೆ, ನಿಯಂತ್ರಣ. ಉದಾ: ಸಂಸ್ಥೆಯ ಮೇಲೆ ಅವನಿಗೆ ಹತೋಟಿ [illegible] (ಸಂ. ಹಸ್ತವರ್ತಿ)

6. ಯುಗ್ಮ
ಈ) ಜೋಡು, ಜೊತೆ, ಎರಡರ ಗುಂಪು. ಉದಾ: [illegible] ಯುಗ್ಮ ಬ್ರಾಹ್ಮಣ. (ಸಂ. ಯುಜ್=ಜೋಡಿಸು-ಎಂಬುವ ಧಾತು)

7. [illegible]
[illegible] (bottle[illegible])

8. ದೇವಮಾತೃಕ
ಅ) ಮಳೆಯನ್ನಾಶ್ರಯಿಸಿದ ಕೃಷಿಭೂಮಿ (ನದೀಮಾತೃಕ=ನದೀ ನೀರನ್ನಾಶ್ರಯಿಸಿದ ಭೂಮಿ) ಉದಾ: ಈ ದೇಶದಲ್ಲಿ ದೇವ ಮಾತೃಕ ಭೂಮಿ ಹೆಚ್ಚು (ಸಂ)

9. ಗಾಂಪ
ಇ) ಪೆದ್ದ, ಬುದ್ಧಿಯಿಲ್ಲದವ, ಗಮಾರ. ಉದಾ: ಗಾಂಪರು ಮಾತ್ರ ಇದನ್ನು ನಂಬಿಯಾರು (ಸಂ. ಗ್ರಾಮಪ=ಹಳ್ಳಿಯವ)

10. ಮಂದಾಸನ
ಅ) ದೇವರ ಮಂಟಪ, ದೇವರ ಪೀಠ, ದೇವರ ಪೆಟ್ಟಿಗೆ. ಉದಾ: ಮಂದಾಸನದಲ್ಲಿ ಮೂರ್ತಿಯಿಟ್ಟು ಪೂಜಿಸಿದ. (ಸಂ. ಮಂಜೂಷ=ಮಂದಸ=ಪೆಟ್ಟಿಗೆ+ಆಸನ)

11. ಕೆಕ್ಕಳಿಸು
ಅ) ಕೆಂಗಣ್ಣಿಂದ ನೋಡು, ಕೆಕ್ಕರಿಸು, ಸಿಟ್ಟಿನಿಂದ ದಿಟ್ಟಿಸು. ಉದಾ: ಅವಳನ್ನು ಕಂಡೊಡನೆ ಕೆಕ್ಕಳಿಸುತ್ತಾನೆ (ದೇಶ್ಯ-ಕೆಕ್ಕಳ= ಕೆಂಪೇರಿದ+ಇಸು)

12. ಮರುಕಳಿಸು
ಈ) ಪುನಃ ಉಂಟಾಗು, [illegible] ಉದಾ:ಜಗಳ ಮರುಕಳಿಸಿತು (ದೇಶ್ಯ-ಮರು=ಮತ್ತೆ+ಕಳಿಸು=[illegible]ಗಿಕೊ)

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ [illegible] ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು [illegible]

6- 8	ಸರಿಯಿದ್ದರೆ	[illegible]
9-10	"	[illegible]
11-12	"	[illegible]

ಅವರು ಕರ್ನಾಟಕದ
ಪಂಜು ಪೊತ್ತಿಸಿದರು.

ಕರ್ನಾಟಕತ್ವ
ಅರ್ಥಾತ್
ಆಲೂರ ವೆಂಕಟರಾಯರು

● ದ.ಬಾ. ಕುಲಕರ್ಣಿ ●

ಜಡೆಬೀಳಲವರು ಇವರಾರು ಎಂಬರೆ ಮಂಕೆ! ಕಲ್ಲೆದೆಯ ಸೀಳಿ ಎರಡಕ್ಷರವ ಕಂಡ ವರು ಪ್ರಾಯದೆದೆಯಲಿ ಬಿತ್ತಿ ಅದರ ಬೆಳೆ ಉಂಡವರು ಇವರು ಆಲೂರವರು! ಏಕೆ ಬೇಕೀ ಶಂಕೆ?

— ಅಂಬಿಕಾತನಯದತ್ತ



ಕಳೆದ ವರ್ಷಾರಂಭದಲ್ಲಿ ಹಿರಿಯರಾದ ಗೋವಿಂದ ಪೈಗಳನ್ನು ಕಂಡಾಗ ಮಾತಿನೆಡೆ ಯಲ್ಲಿ "ಈಗ, ಕನ್ನಡ ನುಡಿಯಾಳುಗಳಲ್ಲಿ ಉಳಿದ ಹಿರಿಯನೆಂದರೆ ನಾನೇ"-ಎಂದರು.

ನಾನು ತಟ್ಟನೆ "ಯಾಕೆ, ಆಲೂರವರು?" ಎಂದೆ.

"ಹೌದು ಸ್ವಾಮಿ. ಅವರು ನನಗೆ ಹಿರಿಯರು. ಮುಂಬಯಿ ಸಾಹಿತ್ಯ ಸಮ್ಮೇಳನ ದಲ್ಲಿ ನಾನು ಅಧ್ಯಕ್ಷ ಭಾಷಣ ಮಾಡುವ ಮೊದಲು ಅವರಿಗೆ ಬಾಗಿ ನಮಸ್ಕರಿಸಿದ್ದೆ." ಎಂದು ಅವರು ಗಲ್ಲ ಮುಟ್ಟಿಕೊಂಡರು.

ಆಲೂರ ವೆಂಕಟರಾಯರಿಗೆ ಈಗ ಎಂಬತ್ತೆರಡಕ್ಕೆ ಏರಿದ ಪ್ರಾಯ. ನಾವು ಅವರನ್ನು ಕಂಡಾಗ ಮುದುಕರಾದರಲ್ಲಾ-ಎಂದು ಕೂಗಿ ಮಾತಾಡುತ್ತೇವೆ. ಆದರೆ ಅವರ ಕಿವಿ ಚುರುಕಾಗಿದೆ. ದೃಷ್ಟಿ ಸ್ಪಷ್ಟ ವಾಗಿದೆ. ನೆನಪು ಅಷ್ಟಾಗಿ ಮಾಜಿಲ್ಲ. ತುಂಬ ಹರಡಿದ ಗಡ್ಡ-ಮೀಸೆಗಳೆಡೆಯಲ್ಲಿ ಕಾಣುವ ಮುಖ ನಿರಿಗೆಗಟ್ಟಿದ್ದು ಒಮ್ಮೆಲೆ ಲಕ್ಷ್ಯಕ್ಕೆ ಬರು ವುದಿಲ್ಲ. ಬಡಬಡ ಮಾತಾಡುತ್ತಾರೆ. ಹಲ್ಲು ಗಳು ಕಾಣುತ್ತವೆ. ಅವರ ಓಡಾಟಕ್ಕೆ-ಅದೇಕೆ ನಡೆದಾಟಕ್ಕೆ ಯಾರದೂ ನೆರೆ-ನೆರವು

1962ರ ಮಾರ್ಚ್ ಸಂಚಿಕೆಯಲ್ಲಿ ಪ್ರಕಟವಾದದ್ದು

ಬೇಕಾಗಿಲ್ಲ. ಸಂಜೆ ಒಬ್ಬರೇ ಬ್ಯಾಟ್ರಿ ಹಿಡಿದುಕೊಂಡು ತಿರುಗಾಡ ಹೊರಡುತ್ತಾರೆ, ಕತ್ತಲಾಗುವುದಾದರೂ ತಾನು ಒಬ್ಬನೇ ಮರಳಿ ಮನೆಗೆ ಬರಬಲ್ಲೆ- ಎಂಬಂತೆ. ಇಂದಿಗೂ ವೇದಿಕೆಯ ಭಾಷಣ ನಿಂತೇ ಮಾಡುತ್ತಾರೆ.

ಮೊನ್ನೆ ಬೆಂಗಳೂರಿನ ಕಾರ್ಪೊರೇಷನ್ನಿನವರು ಇವರಿಗೆ ಮಾನಪತ್ರ ಅರ್ಪಿಸಿದರು. ಅದು ರಾಜಧಾನಿಯ ಗೌರವ.

ಶಿವರಾಮ ಕಾರಂತರು ಮೈಸೂರಿನ ಸಾಹಿ[illegible] ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಆಯ್ಕೆಯಾದಾಗ ಆಲೂರರವರಿಗೆ ಮೊದಲು ಪತ್ರ ಬರೆದು ಗೌರವ ಸೂಚಿಸಿ, 'ಪಂಜು ಹಿಡಿದು ಹೋಗು [illegible]

[illegible]

(೧೯೩೦) ಆಲೂರರವರು ಮೈಸೂರಿನಲ್ಲೇ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು- ಎಂದೇನಲ್ಲ. ಅವರ 'ಗತವೈಭವ' ಪುಸ್ತಕ ಓಂದಲೇ ಇಂದು ಪ್ರಸಿದ್ಧರಾದ ಲೇಖಕರು ಮೊದಲು ಸ್ಫೂರ್ತಿ ಪಡೆದದ್ದು.

ಅ.ನ.ಕೃ. ತಮ್ಮ ಮೊದಲ ಬರಹದ ದಿನಗಳ ನೆನಪನ್ನು ಸೂಚಿಸುತ್ತ, "ನನಗೆ ಕನ್ನಡ [illegible] ಗ್ರಂಥವೆಂದರೆ 'ಕರ್ನಾಟಕ-ಗತವೈಭವ' ಎಂದು ಸ್ಮರಿಸಿದ್ದಾರೆ.

'ಕರ್ನಾಟಕ-ಗತವೈಭವ' ಪರಿಪೂರ್ಣ ಇತಿಹಾಸ ಗ್ರಂಥವಲ್ಲ-ಎಂದು ಆಲೂರರವರೇ ಹೇಳುತ್ತಾರೆ. "ಇಗೋ, ಇದೇ ಆ ಪವಿತ್ರವಾದ ದೇವಾಲಯವು. ಇದೋ, ಈ ಬಾಗಿಲು ಕಿಂಡಿಯೊಳಗಿಂದ ಆ ದೇವತೆಯ ದರ್ಶನವನ್ನು ಈಗ ತೆಗೆದುಕೊಳ್ಳಿರಿ" ಎಂದು ಬೊಟ್ಟು ಮಾಡಿ ತೋರಿಸುವುದಷ್ಟೆ ನಮ್ಮ ಕೆಲಸವು ಎನ್ನುತ್ತಾರೆ.

೪-೫-೧೯೦೪ರಂದು ಆಲೂರರು ಆನೆಗೊಂದಿಯಲ್ಲಿ ಒಂದು ಆಕಸ್ಮಿಕವಾದ ದರ್ಶನ ಪಡೆದರು. ಅದು ಅವರೆದುರು ಕನ್ನಡ ತಾಯಿಯ ಉಜ್ವಲ ಕಾಂತಿಯನ್ನು ಮಿಂಚಿಸಿತು. ಅವರು ಸ್ಫುರಣಗೊಂಡರು.

ಆ ಮೊದಲು ಅವರಿಗೆ ಕರ್ನಾಟಕದ ಇತಿ[illegible] ವಿಜಯನಗರವೆಂದರೆ ಆನೆಗೊಂದಿಯ ಬಳಿಗಿರುವ ಹಾಳು ಹಂಪೆಯೆಂದೂ ತಿಳಿಯದು. ನೆಲದಲ್ಲಿ ಹೂತಿದ್ದ ಹಂಪೆಯ ವೈಭವವನ್ನು ಕರ್ಜನ್ ದೊರೆ ಅಗೆಸಿ ತೆಗೆಸುತ್ತಿದ್ದ ಕಾಲವದು. ಆದರೆ ಆಲೂರರವರಿಗೆ ಕಂಡ ದರ್ಶನ-ಪ್ರೇರಣೆ ಅವರನ್ನು ಇತಿಹಾಸಕ್ಕೆ ಕರೆದೊಯ್ದು ಊರೂರು-ಗುಡಿ-ಗುಂಡಾರಗಳನ್ನು ಸುತ್ತಿಸಿತು. ಶಿಲಾ ಲಿಪಿಗಳನ್ನು, ತಾಮ್ರ ಶಾಸನಗಳನ್ನು ಹುಡುಕ ಹಚ್ಚಿತು. ಅದನ್ನು ಓದಲು ಕಲಿಸಿತು. ಒಂದು ಸಾವಿರ ವರುಷದ ಕನ್ನಡಿಗರ ಭವ್ಯ ಜೀವನವನ್ನು ಕಣ್ಮುಂದೆ ನಿಲ್ಲಿಸಿತು. ಅವರ ಹಿಂದೆ ಸರಿದು ಕ್ರಿಸ್ತಶಕಾರಂಭದವರೆಗೆ ಕನ್ನಡಿಗರ ಕಥೆ ಇವರ ಕಣ್ಣೆದುರು [illegible]

ಇದೇ ಆ ಗತವೈಭವ ಗ್ರಂಥ. "ಅದು ಅಪೂರ್ಣವಾಗಿದೆ, ಅವಸರದಲ್ಲಿ ಬರೆದದಾಗಿದೆ. ಇದನ್ನು ಮತ್ತೆ ಮುದ್ರಿಸುವ ಪ್ರಸಂ[illegible] ಎನ್ನೆ ತಾರದೆ, ಕನ್ನಡಿಗರು ಮುಂದುವರಿದು ಒಂದು ದೋಷವರ್ಜಿತವಾದ ನೂತನ ಗ್ರಂಥವನ್ನು [illegible] ಇದನ್ನು (ಕರ್ನಾಟಕ ಗತವೈಭವ) [illegible] ಬೇಕೆಂಬುದೇ ನಮ್ಮ ಮನಃಪೂರ್ವಕವಾದ [illegible]" [illegible]

[illegible] ಗ್ರಂಥವಲ್ಲ; ಕೇವಲ [illegible] ಕನ್ನಡಿಗರ ಮುಂದೆಳೆಗಿನ [illegible] ಬಿಂಬವಾಗಿ ಬಂದದ್ದು ಇದು.

ಕನ್ನಡದ ಜನ ಎಚ್ಚರರಾಗಿರುವಷ್ಟು ಕಾಲ ಈ ಗ್ರಂಥವನ್ನು, [illegible] ಬಾರದು. ಮೂಲೆಗುಂಪು ಮಾಡಬಾರದು [illegible] ಇದು ನಮ್ಮ ಅರಿವಿನಿಂದ ಮರೆಯಾದರೆ ಮುಂದೆ ನಾವು ಸುದೀರ್ಘವಾದ ಕತ್ತಲೆಯನ್ನೇ ಎದುರಿಸಬೇಕಾಗುವುದು.

ಅಂದು-ಆಲೂರರವರು ಬಿ.ಎ. ಎಲ್.ಬಿ. ಪದವಿ ಪಡೆದು ಪುಣೆಯ ಜಾಗೃತ ಲೋಕ[illegible] ದಿಂದ ಕರ್ನಾಟಕಕ್ಕೆ ಬಂದಾಗ ಅವರು ಕಂಡ ಕತ್ತಲೆ ಹರಿಯಲು ಅರ್ಧ ಶತಮಾನ [illegible]

[illegible]

ರಕರರ ಸ್ನೇಹದಲ್ಲಿದ್ದ ಆಲೂರರವರು ಭಾರತ ವ್ಯಾಪ್ತವಾದ ಕಾರ್ಯ ಕ್ಷೇತ್ರವನ್ನು ಬಿಟ್ಟು, [illegible] ಜಾಗ್ರತ ಚೇತನ ಅದಕ್ಕೂ ಮೂಲಭೂತವಾದ ಒಂದು ಸತ್ವವನ್ನು ಕಂಡುಕೊಂಡಿತು. ಅದೇ ಕರ್ನಾಟಕತ್ವ.

ವೆಂಕಟರಾಯರ ಕರ್ನಾಟಕತ್ವವೆಂದರೆ ಇಂದಿನ 'ಇಝಂ'ಗಳಂಥ ಲೋಕಕಲ್ಯಾಣದ ನಾಟಕ-ಸೂತ್ರವಲ್ಲ, ಅದು ರಾಷ್ಟ್ರೀಯ[illegible]ಯನ್ನು ಜಾಗ್ರತಗೊಳಿಸಿ ಮುನ್ನಡೆಸುವ, ಅದಕ್ಕೆ ಪೂರಕವಾದ, ಮೂಲಭೂತವಾದ ಒಂದು ನಿಶ್ಚಿತ ನಿರಾಡಂಬರವಾದ ನಿರಾಕಾರ ಸಂಕೇತ. ಆಲೂರರವರಿಗೆ ಅದು ಸಾಕಾರ [illegible]

ಕರ್ನಾಟಕತ್ವವೆಂದರೆ ಕರ್ನಾಟಕದ ಏಕೀಕರಣ ಮಾತ್ರವಲ್ಲ. ಕರ್ನಾಟಕದ ಸರ್ವಾಂಗೀಣ ಉನ್ನತಿಯ ಸೂತ್ರ-ಮಂತ್ರವದು. ಒಂದು ಇತಿಹಾಸ ಪ್ರಜ್ಞೆಯಲ್ಲ. ಒಂದು ಸಂಸ್ಕೃತಿಯ ನಾಮರೂಪವಲ್ಲ. ಸಾಹಿತ್ಯದ ಒಲುವು ಮಾತ್ರವಲ್ಲ-ವಾಣಿಜ್ಯ, ಕಲೆ, ಇನ್ನೆಲ್ಲ ಕ್ಷೇತ್ರವ್ಯಾಪ್ತಿಯನ್ನು ಪಡೆದ ಧರ್ಮಸೂತ್ರ-ವೆಂಕಟರಾಯರ ಕರ್ನಾಟಕತ್ವ!

ಅದು ತಮಗೆ ಮಾತ್ರ ಕಂಡ ದರ್ಶನವೆಂಬ ಅಭಿಮಾನ ವೆಂಕಟರಾಯರಿಗೆ ಅಂದಿನ ಕಾಲದಲ್ಲಿ ಇದ್ದಿರಬಹುದು. ಆದರೆ ಅದು ಕನ್ನಡಿಗರ ಸಾರ್ವತ್ರಿಕ ದರ್ಶನವಾಗಬೇಕೆಂಬ ಅವರ ಹಟವೇ ಅವರನ್ನು ಭಾರತದ ವಿಶಾಲ ಕ್ಷೇತ್ರದಿಂದ ತಳ್ಳಿದ್ದು.

ವೆಂಕಟರಾಯರಿಗೆ ಭಾರತದರ್ಶನಕ್ಕೆ ದಾರಿ, ಪ್ರಕಾರವೆಂದರೇ ಕರ್ನಾಟಕ ದರ್ಶನ-ಅದೇ ಕರ್ನಾಟಕತ್ವ!

ಆದರೂ ಅವರು ಎಂದಿಗೂ ರಾಷ್ಟ್ರೀಯವಾದಿಗಳೇ. ಮ. ಗಾಂಧಿಯವರ ಅಸಹಕಾರ ಚಳವಳಿಯನ್ನು ಅವರು ಮನಸಾ ಅಂಗೀಕರಿಸಿ ತಮ್ಮ ವಕೀಲಿಗೆ ಶರಣು ಹೊಡೆದರು. (೧೯೨೦). ಅರವಿಂದ ಘೋಷರು No control, No co-operation ಎಂದು ಆ ಮೊದಲೇ ಸಾರಿದ್ದರು. ಅದನ್ನು ಆಲೂರವರು ಮೆಚ್ಚಿಕೊಂಡಿದ್ದರು. ಅದೇ ಕಾರಣದಿಂದ ಹೋಂ-ರೂಲ್ ಲೀಗಿನವರು ಕರ್ನಾಟಕದಿಂದ ಕಾಯ್ದೆ ಕೌನ್ಸಿಲಿಗೆ ನಿಲ್ಲಬೇಕೆಂದು ಒತ್ತಾಯದ ತಂತಿ ಕಳಿಸಿದಾಗ ತಟ್ಟನೆ ನಿರಾಕರಿಸಿದ್ದರು.

ಅಸಹಕಾರ ಯುಗದಲ್ಲಿ ಅವರ ಸುತ್ತುವರಿದ ತರುಣರೇ 'ಗೆಳೆಯರು ಗುಂಪು' ಅವರಿಗೆ ಅರವಿಂದರ ತಾತ್ವಿಕ ವಿಚಾರ ತಿಳಿಸಿ ಹೇಳಿದವರು ಆಲೂರರು.

೧೯೨೧ರ ಧಾರವಾಡ ಗೋಳಿಬಾರು ನಡೆದಾಗ ಎಲ್ಲಾ ಸಂಪಾದಕರ ಕೈಸೆರೆಯಾಯಿತು 'ಭೂರಕ್ಕಸಾಯ ಸ್ವಾಹಾ'' "ಧೃತರಾಷ್ಟ್ರ[illegible]ರೂ ಕುರುಡರೇ" ಮುಂತಾದ ಪ್ರಸಿದ್ಧ [illegible] ಬರಹಗಳು. ಸಂಪಾದಕರು ಸೆರೆಯಾದರೂ ಕೆಲವು ತಿಂಗಳು ಆಲೂರರೆ ನಾಲ್ಕು ಪತ್ರಿಕೆಗಳನ್ನು ನಡೆಸಿದರು.

ಮುಂದೆ ಇವರು ಕಾಂಗ್ರೆಸಿನ ಅಧಿಕಾರಸ್ಥಾನದಲ್ಲಿಯಿಲ್ಲವಾದರೂ ರಾಜಕೀಯ ಸಂಪರ್ಕ [illegible] ಸಿ.ಆಯ್.ಡಿ. ಕಾವಲುಗಾರರ 'ಬೆಂಬಲ'ವಿದ್ದೇ ಇತ್ತು. ಆಲೂರರವರಿಲದಾಗ [illegible]ಯಾಯಿತು. ಇವರಿಗೆ ಬರುವ ಪತ್ರಗಳು ಸೆನ್ಸಾರ್ ಆಗದೇ ಕೈಸೇರುತ್ತಿದ್ದಿಲ್ಲ. ಮುಂದೆ ಓಂಡಲಗಿಯ ವಾಸ ತಪ್ಪಿದರೂ ಕಲಘಟಗಿಯ ದಿಗ್ಬಂಧನ ಒದಗಿ ಬಂತು. (೧೯೩೨). ಅದೇ ಕಾಲಕ್ಕೆ ಅವರಿಗೆ ಗೀತಾಭ್ಯಾಸಕ್ಕೆ ಸಮಯಸಿಕ್ಕಿದ್ದು. ಜಯಕರ್ನಾಟಕವನ್ನು ಬೇಂದ್ರೆಯವರಿಗೆ ಒಪ್ಪಿಸಿದ ನಂತರ (೧೯೩೦) ಅವರು ತಮಗೆ ಪ್ರಿಯವಾದ ಅಧ್ಯಾತ್ಮ-ತತ್ವಚಿಂತನೆಯ ಸಾಧನೆಗಳಿಗೆ ತಮ್ಮನ್ನು ಹೂಡಿಕೊಂಡರು. ಗೀತಾರಹಸ್ಯದ ಅನುವಾದದ ತರುವಾಯ ೧೫ ವರ್ಷಗಳ ನಂತರ ಗೀತೆಯ ಮೇಲೆ ಸ್ವಂತವಾಗಿ ಐದು ಪುಸ್ತಕ ಬರೆಯಲು ಕಲಘಟಗಿ ನಜರಬಂದಿಯೇ ಕಾರಣವಾಯಿತು (೧೯೩೨).

ಆದರೆ ಮನೆ ಗೆದ್ದು ಮಾರು ಗೆಲುವ ಯತ್ನ ಆಲೂರರದು. ಕರ್ನಾಟಕದ ಏಕೀಕರಣ



'ಓ ದೇವರೇ! ಓಡಿ, ಜೀವ ಉಳಿಸಿಕೊಳ್ಳಿ....ಭಾರತೀಯ ವಾಯುಯಾನ ಸಂಸ್ಥೆಯ ವಿಮಾನ!!!

ನಂತರ ಆಗಿರಬಹುದು; ಆದರೆ ಅವರ ಅಂತರಂಗ ಅದನ್ನು ಅಂದೇ ಕಂಡಿತ್ತು. ಅದೇ ತಳಪಾಯದ ಮೇಲೆ ಅವರು ಸ್ವಾತಂತ್ರ್ಯದ ಕನಸನ್ನು ಕಟ್ಟಿ, ನನಸನ್ನು ಕಂಡರು.

ಅಂತೇ ವೆಂಕಟರಾಯರೆನ್ನುವುದು:

"ಕರ್ನಾಟಕವು ನನ್ನ ಕರ್ಮಭೂಮಿ;
ಭಾರತವು ನನ್ನ ಧರ್ಮ ಭೂಮಿ!"

ಅವರ ಆತ್ಮ ಚರಿತ್ರೆ 'ನನ್ನ ಜೀವನಸ್ಮೃತಿಗಳು' ೧೯೪೧ರಲ್ಲಿ ನಾಡು ಅವರ ಅರವತ್ತರ ಉತ್ಸವ ಆಚರಿಸಿದಾಗ ಬರೆದದು. ಅದು ಅವರ ವ್ಯಕ್ತಿವೃದ್ಧಿಯ ಜತೆಯಲ್ಲಿ, ನಾಡಿನ ಸಮೃದ್ಧಿವೃದ್ಧಿಯ ವಿಕಾಸದ ಚರಿತ್ರಾಂಶ.

ಆಲೂರರವರು ಸಮಾಜ ಸೇವಕರಲ್ಲ. ಇತಿಹಾಸ ಸಂಶೋಧಕರಲ್ಲ: ರಾಜಕಾರಣಿಯಲ್ಲ; ಕವಿಯಲ್ಲ; ಸಾಹಿತಿಯಲ್ಲ - "ನಾನು ಏನೂ ಅಲ್ಲ" ಎಂದು ಅವರೇ ಹೇಳಿಕೊಳ್ಳುತ್ತಾರೆ

ಅಂತೇ ಅವರು ಪದ್ಮಭೂಷಣ -ಶ್ರೀ [illegible] ಆಗಲಿಲ್ಲ; ಮಂತ್ರಿಯಾಗಲಿಲ್ಲ; ಯಾ[illegible] ವಿದ್ಯಾಲಯಗಳೂ ಅವರಿಗೆ ಡಾಕ್ಟರೇಟ್ ಪದವಿ ಕೊಡಲಿಲ್ಲ. ಅಕಾಡಮಿಯ ಅವಾರ್ಡೂ ಇಲ್ಲ. ಯಾವುದೂ ಇಲ್ಲ.

ಆದರೆ ಅವರು ಕರ್ನಾಟಕದ ಭವ್ಯ ದೇಶದ ಯಜಮಾನರು! ಅವರ ಎತ್ತರಕ್ಕೆ ಈ ಯಾವ ಶ್ರೇಯ ಲಾಂಛನಗಳೂ ಬೇಕಾಗಿಲ್ಲ.

ಸ್ವದೇಶಿ ಚಳವಳಿ ಬಂತು. ಹಂಚಿನ ಕಾರ್ಖಾನೆಯಿಂದ ಹಿಡಿದು ಪೆನ್ಸಿಲು, ಬಳೆ, ಕಡ್ಡಿ ಪೆಟ್ಟಿಗೆಯವರೆಗೆ ಉದ್ಯಮಕ್ಷೇತ್ರ ರಚಿಸಿದರು. ಸಕ್ಕರೆ ಬಿಟ್ಟರು. ಚಿಮಣಿಯೆಣ್ಣೆ ಉರಿಸುವುದನ್ನು ತಾವು ಬಿಟ್ಟರಲ್ಲದೆ ರೊದ್ದರಾಯರ ಟ್ರೇನಿಂಗ್ ಕಾಲೇಜು ಹಾಸ್ಟೆಲಿನ ದೀಪಗಳೆಲ್ಲ ಹೊಗೆಯೆಣ್ಣೆಯ ಸಮೆಗಳಾದವು.

ರಾಜಕೀಯ ಪರಿಷತ್ತಿನ ಪುಣೆ ಅಧಿವೇಶನದಲ್ಲಿ ಕನ್ನಡ ಮಾತಾಡಿದರು. ಟಿಳಕರು 'ಹೋಂ ರೂಲ್' ವಿಚಾರಧಾರೆಯ ಮುಂಗಾಣಿಕೆಯಂತೆ ಸಮ್ಮತಿಸಿದರು. ಅಲ್ಲಿ ರಾಷ್ಟ್ರೀಯ ಶಾಲೆಗಳು ಹುಟ್ಟಿಕೊಂಡವು. ಇವರನ್ನು ಅಧ್ಯಾಪಕರಾಗಿ ಅಲ್ಲಿನವರು ಕರೆದರು. ಇವರು ಧಾರವಾಡದಲ್ಲೇ ರಾಷ್ಟ್ರೀಯ ಶಾಲೆ ತೆರೆದರು.

ಆದರೆ ಅವರ ಚುಕ್ಕಾಣಿ ಕರ್ನಾಟಕತ್ವ. ಎಲ್ಲಾ ಅಖಿಲ ಕರ್ನಾಟಕವೇ ಆಗಬೇಕವರಿಗೆ.

ಲೇಖಕರ ಪರಿಷತ್ತು, ವಾಚನಾಲಯ ಪರಿಷತ್ತು, ಆದವು.
ವಿದ್ಯಾರಣ್ಯ ಉತ್ಸವ, ಬಸವ ಜಯಂತಿ, ನಿಜಗುಣ ಶಿವಯೋಗಿ ಉತ್ಸವಗಳು ನಡೆದವು.

"ಆದು ಮುಟ್ಟದ ಗಿಡವಿಲ್ಲ; ವೆಂಕಟರಾಯರು ಹಿಡಿಯದ ಕೆಲಸವಿಲ್ಲ" ಎಂದರು ಬೇಂದ್ರೆಯವರು.

[illegible]

ಎಂದುಕೊಳ್ಳುತ್ತಾರೆ. ಅಂತೇ ಬೇಂದ್ರೆಯವರು "ಇವರು ನಾಯಕ ರಾಗದೆ ನೇತೃವಾದರು" ಎಂದದ್ದು.

ತನ್ನ ವೈಯಕ್ತಿಕ ಸೋಲು ಕರ್ನಾಟಕದ ಗೆಲುವಿಗೆ ದಾರಿಯಾಗಲಿ ಎಂಬುದವರ ಸೊಲ್ಲು.

ಅಸಹಕಾರದಲ್ಲಿ ಅಹಿಂಸೆಯ ತೀವ್ರ ವಿಧಾನ ವೆಂಕಟರಾಯರಿಗೆ ಸಮ್ಮತವಾಗಲಿಲ್ಲ. ಅಲ್ಲದೆ ಸಮಾಜ ಸುಧಾರಣೆಯಂಥ ವಿಷಯಗಳನ್ನು ರಾಜಕೀಯ ಕಾರ್ಯಕ್ರಮದಲ್ಲಿ ಹೊಗಿಸು ವುದು-ಸೆರೆಮನೆಗಾಗಿಯೇ ರಾಜಕೀಯ ಮುಂತಾದವು ಬಾಹ್ಯಾಡಂಬರವೆಂಬುದು ಆಲೂರವರ ಮತ. ಧಾರ್ಮಿಕ ವಿಷಯ ದಲ್ಲೂ ಮಹಾತ್ಮರೊಡನೆ ಮತಭೇದವಾಗಿ ಅವರಿಗೆ ರಿಜಿಸ್ಟರ್ಡ್ ಪತ್ರ ಬರೆದು, ಧರ್ಮ ದಲ್ಲಿ ಪ್ರಳಯ ಮಾಡುವುದಕ್ಕಿಂತ ಪುನಃ ಸೃಷ್ಟಿ ಮಾಡುವುದು ಅತ್ಯಂತ ಕಠಿಣ. ಇದರ ಬಗ್ಗೆ ಏನಾದರೂ ವಿಚಾರ ಮಾಡಿರುವಿರಾ?- ಎಂದು ಕೇಳಿದರು. ಹಾಗೇ ಈ ಮತಭೇದದ ಕಾರಣ ದಿಂದ ಅವರ ನೇತೃತ್ವದಲ್ಲಿ ಕೆಲಸ ಮಾಡ ಬೇಕಾದ ಅಧಿಕಾರ ಸ್ಥಾನದಲ್ಲಿರುವುದು ಬೇಡ ವೆಂದು ಕರ್ನಾಟಕ-ಕಾಂಗ್ರೆಸ್ ಉಪಾಧ್ಯಕ್ಷ ಪದಕ್ಕೆ ತ್ಯಾಗಪತ್ರ ಅರ್ಪಿಸಿದರು.

[illegible]

[illegible] ಕಾಂಗ್ರೆಸ್ [illegible] ಕಾಂಗ್ರೆಸ್ [illegible] ಗಂಗಾಧರರಾಯರಿಂದ ವಚನ ತಕ್ಕೊಂಡರು.

ಬೆಂಗಳೂರು-ಮೈಸೂರಿಗೆ ವಿಪತ್ತಾಕಿ ಅಲ್ಲಿ [illegible] ಕಂಠಶೋಷಣೆ ಮಾಡಿಕೊಂಡು [illegible]

'ಕರ್ನಾಟಕ' ಸಾಹಿತ್ಯ ಪರಿಷತ್ತಿನ ಸ್ಥಾಪನೆಗೆ ಕಾರಣರಾದವರು. ಮುಂದೆ ಪರಿಷತ್ತು ಗಡಿ ಪ್ರದೇಶಗಳಲ್ಲಿ ಕನ್ನಡ ಪ್ರಚಾರ ನಡೆಸಲಾಗದಕ್ಕೂ ಅಖಿಲ ಕರ್ನಾಟಕದ ಧ್ವನಿಯನ್ನು ಪ್ರತಿಧ್ವನಿಸಲಾಗದಕ್ಕೂ ಬೇಸತ್ತು ಅದಕ್ಕೂ ತ್ಯಾಗ ಪತ್ರ ಒಪ್ಪಿಸಿದರು. ಮುಂದದು 'ಕನ್ನಡ' ಸಾಹಿತ್ಯ ಪರಿಷತ್ತಾಯಿತು.

ವೆಂಕಟರಾಯರ ಲೆಕ್ಕದಲ್ಲಿ ಸ್ವಲ್ಪ ಬಂದದ್ದು ಸಾಲದು. ಕರ್ನಾಟಕತ್ವದ ವಿಶಾಲಮತಿ ಪ್ರತಿಫಲಿತವಾಗದ ಸಿಟ್ಟು ಅವರಿಗೆ [illegible].

ಅವರಿಗೆ 'ವಿಕ್ಷಿಪ್ತತನ' 'ಮತಭೇದ'ಗಳು ಸಾಮಾನ್ಯ. ಈ ಮತಭೇದಗಳದೂ ಅಖಂಡ ವ್ಯಾಪ್ತಿ. ಮತ ಇರುವಲ್ಲೆಲ್ಲ ಭಿನ್ನ ಮತ. ಅವರದೇ ನವೀನ ವಿಚಾರಧಾರೆ. ಆದರೆ ಅವರು [illegible] ಕಾರ್ಯಗಳಲ್ಲಿ ಅಸಹಕಾರಯೋಗ ತಾಳಿದವರಲ್ಲ.

ಇಂದಿನ ಭಾವೈಕ್ಯ ಚಳವಳಿಯನ್ನು ಅವರೆಂದೋ ಯೋಚಿಸಿದ್ದಾರೆ. ಅವರೆನ್ನುವುದು: "ನನ್ನ ದೃಷ್ಟಿಯಲ್ಲಿ ಐಕ್ಯವೆಂದರೆ ಏಕರೂಪತೆಯಲ್ಲ; ವೈವಿಧ್ಯದಲ್ಲಿ ಏಕತಾನವನ್ನು ಹುಟ್ಟಿಸುವುದೇ ನಿಜವಾದ ಐಕ್ಯ."

ಅವರು ಕರ್ನಾಟಕದಲ್ಲಿ [illegible] ಮಾಡಿಕೊಂಡಾಗ [illegible] ವಿಶ್ವಾಸಕತೆಯ ಪ್ರಥಮಾಕರಣವೆಂದು 'ಜಯ ಕರ್ನಾಟಕ' ಪತ್ರಿಕೆ ಹೊರಡಿಸಿದರು

'ಜಯಕರ್ನಾಟಕ' ಒಂದು ಪತ್ರಿಕೆಯಲ್ಲ, ಅದೊಂದು ಮಂತ್ರ ಎಂದರವರು. ಅವರ ಕರ್ನಾಟಕತ್ವದ ತಪಸ್ಸಿನ ಜಪಮಂತ್ರವದು. ಅವರ ವಾಣಿಗೆ ಅದೇ ಮೂಲ

ಕನ್ನಡ ಲೇಖಕರನ್ನು ಕಂಡರೆ ಅವರಿಗೆ ಬಹಳ ಸಂತೋಷ. ಇಂದಿಗೂ ಮೂಲೆಯ ಒಂದು ಕನ್ನಡ ಪತ್ರಿಕೆಯನ್ನಾಗಲಿ, ಕೇಂದ್ರದ ಒಂದು ಪತ್ರಿಕೆಯ ಮೂಲೆಯನ್ನಾಗಲಿ, ಅವರ ಹದ್ದಿನ ಕಣ್ಣು ನೋಡಿಯೇ ಇರುತ್ತದೆ.

ನನ್ನನ್ನು ಕಂಡಾಗಲೆಲ್ಲ "-ಹಾಂ!ನಿನ್ನದು ಆ ಲೇಖ ಛಲೋ ಅದ. ನೀ ಛಲೋ ಬರೀತೀ. [illegible]" ಎನ್ನುತ್ತಾರೆ.

[illegible] ಕರ್ನಾಟಕ [illegible] ಎಂಬ ಲೇಖನ ರಚಿಸಿದರು. ಆಲೂರರವರು ಅದನ್ನು ಪ್ರಕಟಿಸಿದ್ದರು. ಮುಂದೆ ಕಾರ್ಕಳಕ್ಕೆ ಹೋದಾಗ ಸೇಡಿಯಾಪು ಒಂದು [illegible] ತಮ್ಮ ಪರಿಚಯ [illegible]. ಆಗ ಅವರಿಗೆ [illegible] "ನಿಮ್ಮ ಲೇಖನ ನೋಡಿದಾಗ

[illegible] ಚಿಕ್ಕ [illegible]
ರೆಂದುಕೊಂಡಿರಲಿಲ್ಲ ನಾನು." ಎಂದು
ಆಲೂರರವರು ಕೃಷ್ಣಭಟ್ಟರನ್ನು
[illegible]

ಜಿ.ಪಿ. ರಾಜರತ್ನಂ ಒಂದು ಪ್ರಥಮ ಪ್ರಯತ್ನದ ಕವಿತೆಯನ್ನು ಆಲೂರವರ ಜಯ ಕರ್ನಾಟಕಕ್ಕೆ ಕಳಿಸಿದರು. ಇವರು ಅದನ್ನು ಪ್ರಥಮ ಪುಟದಲ್ಲಿ ಪ್ರಕಟಿಸಿ ಗೌರವಿಸಿದರು.

ರಾಜರತ್ನರಿಗೆ ನಾಚಿಕೆಯಾಯಿತು. "ಮುಂದೆ ನಾನು ಅಹರ್ನಿಶಿ ತಪಸ್ಸು ಮಾಡಿ ಪ್ರಥಮ ಪುಟದ ಗೌರವಕ್ಕೆ ತಕ್ಕುದಾದ ಅರ್ಹತೆಗಳಿಸಿ ಕವಿಯಾದೆ" ಎನ್ನುತ್ತಾರೆ ನಮ್ಮ ಕವಿರತ್ನ!

'ಜಯಕರ್ನಾಟಕ' ಕನ್ನಡದ 'ಮಾಡರ್ನ್ ರಿವ್ಯೂ?', ಆಗಿತ್ತು-ಎಂದು ಇಂದಿನವರು ಅದರ ಗತವೈಭವವನ್ನು ನೆನೆಸುತ್ತಾರೆ. ಮರಾಠಿ ಜ್ಞಾನ ಕೋಶದ ಶ್ರೀ ಕೇತಕರರು ಜಾಗೃತ ಮಹಾ ರಾಷ್ಟ್ರದಲ್ಲೂ ಇಂಥ ಎಂದು ಪತ್ರಿಕೆ [illegible] ಎಂದದ್ದು ಯಥಾರ್ಥವಾದ ಮಾತು.

[illegible]

[illegible] ಮಾತು [illegible]

ಯುದ್ಧಕಾಲದ ಕಾಗದದ ಮುಗ್ಗಟ್ಟಿನ ನೆಪ ದಿಂದ ಅವರ ಸ್ವಂತ ಪ್ರಕಾಶನಕ್ಕೆ ತಡೆ ಬಂತು. ಆಗವರು ಶ್ರೀಮದಾಚಾರರ [illegible] ಮುಂಚೆಯೇ ಶಾಂತಿಪಾಠ ಹಾಗಿ ಗುರುಗಳ ಹತ್ತಿರ ಸೂತ್ರಭಾಷ್ಯ ಓದಿದರು. ಅದರದೇ ಫಲ 'ಮಧ್ವಸಿದ್ಧಾಂತ ಪ್ರವೇಶಿಕೆ' ಮತ್ತು 'ಮಧ್ವರ ಪೂರ್ಣ ಬ್ರಹ್ಮ ಫಿಲಾಸಫಿ' (ಇಂಗ್ಲೀಷಿನಲ್ಲಿ). ಕರ್ನಾಟಕ ರಾಜ್ಯೋದಯದ ನಂತರ ([illegible]) ಅವರು ಬರೆದ ವಿವರಣೆಯ ಗ್ರಂಥ [illegible]



[illegible]

ಗಡಿಯಾರದ ತಾಸಿನ ಮುಳ್ಳು ಮಾತ್ರ ಕಾಣುತ್ತದೆ. ಆದರೆ ಅದರ [illegible] ಯಾವಾಗಲೂ ತಮ್ಮ ಮಾತಿನಲ್ಲಿ ಬರಹಗಳಲ್ಲಿ ಮತ್ತೆ ಮತ್ತೆ ಹೇಳುತ್ತಾರೆ.

[illegible]

ತಾವು ಕಂಡ ಕನಸನ್ನು ನನಸಾಗಿ ಕಾಣುವ ಭಾಗ್ಯ ಎಷ್ಟು ಜನಕ್ಕಿರುತ್ತದೆ? ಈ ಐಕ್ಯಯೋಗ ರಾಷ್ಟ್ರಜೀವನಕ್ಕೆ ಅನ್ವಯಿಸುವಂಥದು. ಒಂದು ವ್ಯಕ್ತಿಜೀವನದ ಶ್ವಾಸೋಚ್ಛ್ವಾಸದಲ್ಲಿ ತನ್ನ ಮಾತನ್ನುಸಿರಿ. ಅದರ ಎಲ್ಲಾ ಯತ್ನಗಳಲ್ಲಿ ತನ್ನನ್ನು ತೇಯ್ದುಕೊಂಡು ಬಾಳಿ-ಬದುಕಿ ಅದರ ಯಶಸ್ಸನ್ನು ಐಕ್ಯವನ್ನು ಕಾಣುವುದಕ್ಕೆ ಸಾಕ್ಷಿಯಾಗಿರುವುದೇನು ಸುಮ್ಮನೆ ಘಟಿಸುವ ಮಾತಲ್ಲ. ಮನುಷ್ಯನ ಯತ್ನಗಳ ಹಿಂದೆ ಒಂದು ದೈವೀಸಂಕಲ್ಪವೂ ಇರುತ್ತದೆನ್ನುತ್ತಾರೆ.

ಅವರ ಮಡದಿ ಸೌ.ಲಕ್ಷ್ಮೀಬಾಯಿಯವರು ಪತಿಯ ಎಲ್ಲ ಚಟುವಟಿಕೆಗಳಿಗೂ ತಮ್ಮ ತಟಸ್ಥ ಧೋರಣೆಯಿಂದ ನೆರವಾದರು. ಅವರು ಹಳೆಯ ಕಾಲದ ಶ್ರದ್ಧಾಜೀವಿ. ಪತಿಯನ್ನು ಅನುಸರಿಸುವುದು ಅದೇ ಧರ್ಮವೆಂದು ನಂಬಿದವರು. ಹಾಗೇ ನಡೆದುಕೊಂಡರು.

ಇವರ ಸುತ್ತಾಟ, ದಿಗ್ಬಂಧನಗಳ ಕಾಲವನ್ನೆಲ್ಲ ಅವರು ಒಂಟಿಯಾಗಿ, ಧೈರ್ಯದಿಂದ ಎದುರಿಸಿದರು. ಗಂಡನ ಪುಣ್ಯಕಾರ್ಯದ ಅರ್ಧಫಲ ಹೆಂಡತಿಗೆ ಯಾಕೆ ಹೋಗುತ್ತದೆಂಬುದನ್ನು ಆಲೂರವರು ತಮ್ಮ ಮಡದಿಯ ಅಚಲನಿಷ್ಠೆಯಿಂದ ಅರಿತುಕೊಂಡರು.

ಚಲೇಜಾವ್ ಚಳವಳಿಯಲ್ಲಿ ಇವರ ಹಿರಿಯ ಮಗ ಭೀಮರಾಯ ನಂತರದ ಮೂರನೆಯ ಮಗ ಕೃಷ್ಣರಾಯ ತಂದೆಯ ಪಾಲಿನ ಸೇವೆಯನ್ನು ಸಕ್ರಿಯವಾಗಿ ಸಲ್ಲಿಸಿದರು.

ಇದಕ್ಕೂ ಅವರ ತಾಯಿಯ ಸಹಕಾರವಿತ್ತು.

ಈಗ ಹತ್ತು ವರುಷವಾಯಿತು ವೆಂಕಟರಾಯರಿಗೆ ಮಡದಿಯ ನೆರೆತಪ್ಪಿ. ಅವರು ಪುಣ್ಯ ಭಾಜನರಾದರು.

ಅವರ ನಾಲ್ವರು ಗಂಡುಮಕ್ಕಳು ಸುಶೀಲರಾಗಿ ಕಾರ್ಯತತ್ಪರರಾಗಿ ಒಳ್ಳೆಯ ಬದುಕನ್ನು ಬಾಳುತ್ತ ತಂದೆಯನ್ನು ಚೆನ್ನಾಗಿ ನೋಡಿಕೊಂಡಿದ್ದಾರೆ. ಇವರಿಗೆ ಒಬ್ಬಳೇ ಮಗಳು. ಆಕೆ ಒಬ್ಬ ಸಾಹಿತಿ-ಶಿಕ್ಷಕನ ಮಡದಿಯಾಗಿ ಪುತ್ರವತಿಯಾಗಿ ಎರಡೂ ಮನೆಯ ಕರುಳಿನ ಬಳ್ಳಿಯಾಗಿದ್ದಾಳೆ.

ಆಲೂರವರಿಗೆ ಭಾರತದ ರಾಜಕೀಯ ಸ್ವಾತಂತ್ರ್ಯದಿಂದ ತೃಪ್ತಿಯಿಲ್ಲ. ಇನ್ನು ಬರಬೇಕಾದದ್ದು ಧರ್ಮ ಸಾಮ್ರಾಜ್ಯ-ಎನ್ನುತ್ತಾರವರು. ಅದಕ್ಕೆ ಅವತಾರಪುರುಷನೇ ಬರಬೇಕು-ಎಂದವರ ಮತ. ಮಾನವನ ಪೌರುಷವನ್ನು ಮೀರಿದ ಕಾರ್ಯವದು. ದೇವರೇ ಅವತರಿಸಬೇಕು!

ಕರ್ನಾಟಕ ಹಿಂದೆ ಅಂಥ ದೈವಯೋಗವನ್ನು ಕಂಡಿತ್ತು. ಮುಂದೆಯೂ ಈ ನಾಡಿನಿಂದಲೇ ರಾಷ್ಟ್ರದ ಧರ್ಮಜಾಗೃತಿಯಾಗಲಿ ಎಂದವರು ಹಾರೈಸುತ್ತಾರೆ.

ಅಲ್ಲಿಯೂ ಅವರು ಕರ್ನಾಟಕದ ಗುರಿಯನ್ನು ಬಿಟ್ಟವರಲ್ಲ. ನಮ್ಮ ಯಜಮಾನರದು ಇನ್ನೊಂದು ಸಣ್ಣ ಆಕಾಂಕ್ಷೆಯಿದೆ. ಹೆಸರಿನಲ್ಲೇನಿದೆ? ಎಂಬುದು ಆತ್ಮಘಾತಕ ಧೋರಣೆ. ಕರ್ನಾಟಕ - ಎಂಬುದು ಹೆಸರು ಮಾತ್ರವಲ್ಲ. ಅದು ನಮ್ಮ ಬದುಕಿನ ಗಾಯತ್ರಿ. ನಮ್ಮ ನಾಡನ್ನು ಹೀಗೆ ಕರೆಯುವ ಬುದ್ಧಿ ಇಂದಿನ ರಾಜಕಾರಣಿಗಳಿಗೆ ಉಂಟಾಗಲಿ ಎಂಬುದೇ ಅವರ ಆಸೆ. ●

[illegible]ದಲ್ಲಿ ಒಬ್ಬ ವ್ಯಕ್ತಿ ಸತ್ತ ಮೂರು ದಿನಗಳ ನಂತರ ಅವನನ್ನು ಹೂಳಲು ಸಿದ್ಧತೆಗಳಾದವು. ಆದರೆ ಸತ್ತ ವ್ಯಕ್ತಿಯ ನಾಯಿ ಅವನ ಶವದ ಹತ್ತಿರವೇ ಕುಳಿತಿತ್ತು. ಅದು ಶವದ ಹತ್ತಿರ ಬಂದವರನ್ನು ಬೊಗಳಿ ಹೆದರಿಸುತ್ತಿತ್ತು. ಶವದ ಪೆಟ್ಟಿಗೆ ಹೊರಲು ಮೇಲೆ ಎತ್ತಿದಾಗ ಅವರ ಕೈಗಳನ್ನು ಕಚ್ಚಲು ಓಡಿತು. ಅದರಿಂದಾಗಿ ಶವದ ಪೆಟ್ಟಿಗೆ ಬಿದ್ದು, ಒಡೆಯಿತು. ಅದರೊಳಗಿಂದ ಆ ವ್ಯಕ್ತಿ ಜೀವಂತವಾಗಿ ಹೊರಬಂದ.

ಕನ್ನಡಿಗರ ನಿರಭಿಮಾನಕ್ಕೆ ಮಿತಿಯುಂಟೆ ?

● ರತ್ನಾ ಮೂರ್ತಿ ●

ಒಂದು ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಮುಂಬಯಿಯ ಮುಲುಂಡದಲ್ಲಿರುವ ರಾಘವೇಂದ್ರ ಸ್ವಾಮಿಗಳ ಮಠಕ್ಕೆ ಹೋಗಿದ್ದೆವು. ಅಲ್ಲಿನ ಆ ಕಾರ್ಯಕ್ರಮ ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ ಸುಮಾರು 3-30ರ ವರೆಗೂ ನಡೆದುದರಿಂದ ಆ ಅವಧಿಯಲ್ಲಿ ನಾಲ್ಕಾರು ಕನ್ನಡಿಗರ ಪರಿಚಯ ಸಹಜವಾಗಿಯೇ ಆಯಿತು.

ಅವರಲ್ಲೊಂದು ಕುಟುಂಬ. ಮಗಳು ಉಷಾ. ನವವಿವಾಹಿತೆ. ತುಂಬ ಉತ್ಸಾಹದಿಂದ ತನ್ನ ಓರಗೆಯ ಹಲವರನ್ನು ಪರಿಚಯಿಸಿದಳು. ಒಬ್ಬಳನ್ನು ಪರಿಚಯಿಸುತ್ತಾ ಹೇಳಿದಳು. "ಮೀಟ್ ಸಂಗೀತಾ. ಮೈ ಕೊ ಸಿಸ್ಟರ್." ಇಬ್ಬರೂ ಪರಸ್ಪರ ಮುಗುಳ್ನಕ್ಕು ಹಲೋ ಎಂದೆವು. ನಂತರ ಅವರಿಬ್ಬರ ಸಂಭಾಷಣೆ ಇಂಗ್ಲಿಷಿನಲ್ಲಿಯೇ ಮುಂದುವರೆಯಿತು.

ಕುತೂಹಲದಿಂದ ಸಂಗೀತಳನ್ನು ಆಕೆಯ ಮಾತೃಭಾಷೆ ಬಹುಶಃ ಮರಾಠಿ ಇದ್ದು ಕನ್ನಡ ಬರಲಾರದಲ್ಲವೆ? ಎಂದು ವಿಚಾರಿಸಿದೆ. ಸಂಗೀತಾ ನಗೆ ಬೀರಿದಳು.

ಉಷಾ ನಕ್ಕು ಹೇಳಿದಳು. "ಇಲ್ಲ, ಈಕೀದು ಬೆಂಗಳೂರು. ನಂದು ಅಸಲೀ ಧಾರವಾಡ. ನಮ್ಮಿಬ್ಬರ ಭಾಷಾದಾಗ ಭಾಳ ಫರಕ್ ಅದರಿ. ಅದ್ದರಿಂದ ರಗಳೀನೆ ಬ್ಯಾಡಂತ ನಾವಿಬ್ರೂ ಹಿಂಗ ಇಂಗ್ಲಿಷನಾಗೇ ಮಾತಾಡ್ತೀವಿ." ಅದಕ್ಕೆ ಸೇರಿದ ಎಳೆಯೊಂದು ಮನದಲ್ಲಿ ಸುಳಿದಾಡಿತು. ನಮ್ಮ ಬಂಗಲೆಯಿದ್ದೂ ಬೇರೆಯವರ ಕಟ್ಟಡದಲ್ಲಿ ಅನಾವಶ್ಯಕವಾಗಿ ಆಸರೆ ಪಡೆಯಬೇಕೆ?

ನಮ್ಮ ಪರಿಚಯದ ಒಂದು ಸಂಸಾರ ತಂದೆ ತಾಯಿ ಇಬ್ಬರೂ ಕೇಂದ್ರ ಹಾಗೂ ರಾಜ್ಯ ಸರಕಾರದ ಉನ್ನತ ಹುದ್ದೆಯಲ್ಲಿರುವವರು. ಬಹಳ ವರ್ಷಗಳ ನಂತರ ಒಂದು ಕೂಸು ಇದೆ. ಆದರೆ ಮಗಳಿಗೆ ಕನ್ನಡ ಮಾತನಾಡಲು ಕಲಿಸುವಲ್ಲಿ ಇಬ್ಬರಿಗೂ ಅತಿ ಉದಾಸೀನ. ಆ ಬಾಲೆಗೆ ಈಗ ಕನ್ನಡವೇ ಬಾರದು. ಕೆಲಸದವಳೊಡನೆ ಒಡನಾಟ ಮರಾಠಿಯನ್ನು ಚೆನ್ನಾಗಿ ಬಲ್ಲಳು. ಹೆತ್ತವರೊಡನೆ ಹಾಗೂ ಇತರರೊಡನೆ ಇಂಗ್ಲೀಷಿನಲ್ಲೇ ವ್ಯವಹಾರ. [illegible] ಇವಳಿಗೆ ಕನ್ನಡ [illegible] ಉತ್ಸಾಹದಿಂದ ಅವಳ ಜೊತೆ ಇಂಗ್ಲಿಷಿನಲ್ಲಿ ಸಂಭಾಷಿಸುವವರೇ ವಿನಾ ಕನ್ನಡ ಕಲಿಸಲು ಪ್ರಯತ್ನ ಮಾಡುವವರೇ ಇಲ್ಲ.

ಇಲ್ಲಿ ನಮ್ಮ ಮನೆಯ ಹತ್ತಿರ ಮಂಗಳೂರು

ಕನ್ನಡಿಗರ ಒಂದು ಕುಟುಂಬ. ತಾಯಿ ಮುಂಬಯಿಗೆ ಬಂದು ಇಂಗ್ಲೀಷ್ ಕಲಿತವಳು. ಮಕ್ಕಳೆಲ್ಲರಿಗೂ ಎಳೆತನದಿಂದ ಇಂಗ್ಲೀಷಿನಲ್ಲಿ ಮಾತು ಕಲಿಸಿ ಈಗ ಅದೊಂದು ಆಂಗ್ಲ ಕುಟುಂಬ ಎಂಬಂತಾಗಿದೆ. ನಾನೊಮ್ಮೆ ಕೇಳಿದೆ. "ನೀವೇಕೆ ಮಕ್ಕಳಿಗೆ ಕನ್ನಡ ಕಲಿಸಲಿಲ್ಲ?"

"ಅಯ್ಯೋ ತಗೊಂಡು ಏನು ಮಾಡುವುದು? any way ನಮ್ಮ ಮಕ್ಕಳೆಲ್ಲ ಇಲ್ಲೆ ಸೆಟಲ್ ಆಗುವವರಲ್ಲವಾ?" ಭಾರವಾದ ನಿಟ್ಟುಸಿರೊಂದು ಹೊರಬಂತು.

ಮತ್ತೊಂದು ಸಂಸಾರ. ಗಂಡ ಹೆಂಡತಿ ಹಾಗೂ ಒಂದು ಮಗು. ಮೂರು ವರ್ಷಗಳಾಗುತ್ತಾ ಬಂದರೂ ಯಾವ ದೋಷದಿಂದಲೋ ಮಗುವಿಗೆ ಮಾತು ಸರಿಯಾಗಿ ಬರುವುದಿಲ್ಲ. ಕಾರಣ ಹೆತ್ತವರು ಅದು ಬಾಯಿ ಬಿಡುವುದಕ್ಕೆ ಮುಂಚಿನಿಂದಲೇ ಇಂಗ್ಲೀಷ್, ಹಿಂದಿ ಭಾಷೆಗಳನ್ನೇ ಉಣಿಸುತ್ತಿರುವುದು. ಆಗೊಮ್ಮೆ ಈಗೊಮ್ಮೆ ಕನ್ನಡ ಮಾತಾಡಲೇ ತೊಡಕಿರುವ ಹಾಗೆ ಮಾಡುವುದು ಆ ಕಂದನಿಗೆ ನೀರಿಳಿಯದ ಗಂಟಲೊಳ್ ಕಡುಬು ತುರುಕಿದಂತೆ ಆಗುತ್ತಿರಬಹುದು ಎಂದು ನಮ್ಮ ಪರಿತಾಪ.

ಇಂಗ್ಲೀಷ್ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿದ್ದಾಗಿನ ಕೆಲವು ಅನುಭವಗಳು. ವೀರೇಶ ಎನ್ನುವ ಹುಡುಗನಿಗೆ ವಯಸ್ಸು 13 ತುಂಬಿದರೂ ಇಂಗ್ಲೀಷಿನಲ್ಲಿ ಒಂದು ಸಣ್ಣ ಪದವನ್ನು ಸ್ವತಂತ್ರವಾಗಿ ಓದಲು ಬರೆಯಲು ಬಾರದು. ಕನ್ನಡದಲ್ಲಿ ಪರವಾಗಿಲ್ಲ. ಚಿಕ್ಕ ವಯಸ್ಸಿನಲ್ಲಿ ಬಡಿದ ಸಿಡುಬಿನಿಂದಾಗಿ ಮುಖದ ತುಂಬಾ ಕಲೆಗಳಿದ್ದುವಲ್ಲದೆ ಆ ರೋಗ ಒಂದು ಕಣ್ಣನ್ನು ಬಲಿ ತೆಗೆದುಕೊಂಡಿತ್ತು. ಸರಕಾರದ ಉತ್ತೇಜಿತ ನೀತಿಗನುಸಾರವಾಗಿ ಅಂತೂ ಇಂತೂ ತಳ್ಳಿಸಿಕೊಂಡು ಐದನೇ ತರಗತಿ ಮುಟ್ಟಿದ್ದ. ತಂದೆ ತಿಂಡಿ ಅಂಗಡಿಯೊಂದನ್ನಿಟ್ಟು, ಜೀವನ ನಿರ್ವಹಣೆಗೆ ಹೆಣಗಾಡುತ್ತಿದ್ದ. ಮಗ ದಡ್ಡನೆಂಬ ಕೊರಗು ಇಬ್ಬರಿಗೂ.

ಒಮ್ಮೆ ವೀರೇಶನ ತಾಯಿಗೆ ಹೇಳಿದೆ. "ಸುಮ್ಮನೆ ಇಂಗ್ಲೀಷ್ ಮಿಡಿಯಂ ಅಂತ ನೂರಾರು ರೂಪಾಯಿ ಫೀಸ್ ತೆರ್ತಿದೀರ. ನಿಮ್ಮ ಮಗನಿಗೆ ಇಂಗ್ಲೀಷ್ ಹತ್ತುವುದೇ ಇಲ್ಲ. ಕನ್ನಡ ಶಾಲೆಗೆ ಸೇರಿಸಿ ಬಿಡಿ. ಹೇಗಾದರೂ ಮುಂದೆಬಂದಾನು. ಅವನ ಭವಿಷ್ಯ ಹಾಳು ಮಾಡ ಬೇಡಿ."

ತಾಯಿಗೆ ಅಪಮಾನ ಎನಿಸಿತೇನೊ. "ಮೇಡಂ ಹೊಟ್ಟೆ, ಬಟ್ಟೆ, ಕಟ್ಟಾದ್ರೂ ಫೀಸು ತುಂಬ್ತಿದೀವಲ್ಲ ಒಂದ ಕಣ್ಣಂತೂ ಇಲ್ಲ. ಇಂಗ್ಲೀಷಾಗಾದ್ರೂ ಕಲೀಲಿ ಅಂತ ನಮ್ಮಾಸೆ ನೋಡ್ರಿ" ಎಂದು ಬಿಟ್ಟಳು. ಎಲ್ಲಿಗೆಲ್ಲಿಗೆ ಸಂಬಂಧ! ಅವರ ಮೌಢ್ಯಪೂರಿತ ವ್ಯಾಮೋಹಕ್ಕೆ ನಗಲೋ ಅಳಲೋ?

ಇನ್ನೊಬ್ಬ ಹುಡುಗ ಆಟದಲ್ಲಿ ಮುಂದು. 15 ವರ್ಷ ಮುಖದಲ್ಲಿ ಮೀಸೆ ಚಿಗುರೊಡೆಯುತ್ತಿತ್ತು. ಇನ್ನೂ ಐದನೇ ತರಗತಿಯಲ್ಲೇ ಮುಗ್ಗರಿಸುತ್ತಿದ್ದ. ತಂದೆ ತಾಯಿಗಳಿಗೆ ಇಂಗ್ಲೀಷ್ ಬೇಕೆಂಬ ಹಟ. ಅವನ ಅಕ್ಕ ಬಂದಾಗೊಮ್ಮೆ ಕನ್ನಡ ಶಾಲೆಗೆ ಸೇರಿಸಲು ಸೂಚಿಸಿದೆ. ಆಕೆ ಹೆಡೆ ತುಳಿಸಿಕೊಂಡ ಹಾವಿನಂತೆ ಬುಸುಗುಟ್ಟಿದಳು. "ಏನ್ ಮೇಡಂ ನಿಂ ಕೈಲಿ ಕಲ್ಸೋಕಾಗ್ದೆ ಇರೋ ಹಣೆಬರಕ್ಕೆ ನಂತಮ್ಮನ್ನಾಕೆ ದಡ್ಡಾಂತೀರಾ? ನಿಂ ಜಾತಿಯೋರು ಮಾತ್ರ ಇಂಗ್ಲೀಷನಾಗ್ ಕಲೀಬೇಕಾ? ನಾವ್ ಕಲ್ತ ಮುಂದ್ವಂದ್ರೆ ನಿಮ್ಗೆ ಹೊಟ್ಟೆ ಉರೀನಾ? ನೋಡ್ತಿರಿ, ಮೇಡಂ ಎಷ್ಟ ವರ್ಷ ಆದರೂ ನಂತಮ್ಮ ಇಂಗ್ಲೀಷ್ ಮೀಡಿಯಂನಾಗೆ ಕಲೀಬೇಕು. ಆ ದರಿದ್ರ ಕನ್ನಡ ಬ್ಯಾಡ."

ಒಂದು ಸಾಲು ಇಂಗ್ಲೀಷ್ ಗೊತ್ತಿಲ್ಲದ ಅವಳ ಬಾಯಿಂದ ಕನ್ನಡದ ನಿಂದೆ ಕೇಳಿ ಛಟೀರನೆ ಕಪಾಳಕ್ಕೆ ಬಾರಿಸಬೇಕೆನಿಸಿತು. ಭಾಷೆ, ಜಾತಿ, ಕಲಿಕೆಗೂ ಸಂಬಂಧವೇನು?

ಕೆಲವು ದಿನಗಳ ಹಿಂದೆ ಚರ್ಚ್‌ಗೇಟ್‌ನಲ್ಲಿ ಟ್ರೈನಿಗೆ ಕಾಯುತ್ತಿದ್ದಾಗ ಕಿವಿಗೆ ಬಿದ್ದ ಇಬ್ಬರು ತರುಣರ ಸಂಭಾಷಣೆ:

"ಐ ಗಾಟ್ ಟ್ರಾನ್ಸ್‌ಫರ್ ಟು ಬ್ಯಾಂಗಲೋರ್ ಯಾರ್."

"ಇಟೀಸ್ ಗುಡ್. ಬ್ಯಾಂಗಲೋರ್ ಈಸ್ ಎ ಫೈನ್ ಪ್ಲೇಸ್ ಟು ಲಿವ್ ಇನ್. ಲರ್ನ್ ಟು ಸ್ಪೀಕ್ ಎ ಲಿಟಲ್ ತಮಿಳ್ ಅಂಡ್ ಯು ಕೆನ್ ಗೆಟ್ ಆನ್."


ಗ್ಯಾಸ್‌ಟ್ರೈಬಲ್
ಗ್ಯಾಸ್ಟ್ರೋಜನ್

ಮಣ್ಣಿನಲ್ಲೂ ಉಂಟಾಗುತ್ತದೊ ಇಲ್ಲವೋ?

ಸಿಲೋನ್ ರೇಡಿಯೋದಲ್ಲಿ ಬರುವ ಕನ್ನಡ ಕಾರ್ಯಕ್ರಮದ ನಿರ್ವಾಹಕಿಯ ಕನ್ನಡ ಉಚ್ಚಾರವನ್ನು ಕೇಳಿದರೆ ಮೈ ಉರಿಯುತ್ತದೆ. ಆ ಬಗ್ಗೆ ರೇಡಿಯೋ ಕೇಂದ್ರಕ್ಕೆ ಒಂದು ಪ್ರತಿಭಟನೆ ಪತ್ರ ಬರೆಯೋಣ ಎಂದು ನಾವೊಂದಿಬ್ಬರು ಗೆಳತಿಯರ ಸೂಚನೆಗೆ ಉಳಿದ ಹತ್ತಾರು ಗೆಳತಿಯರ ಪ್ರತಿಕ್ರಿಯೆ. "ಅಯ್ಯೋ ಬಿಡ್ರೆ, ಇಷ್ಟಾದ್ರು ಕನ್ನಡದಲ್ಲಿ ಹೇಳ್ತಾಳಲ್ಲ!" ಯಾವುದೇ ತರದ ಅಪಮಾನವೂ ಹತ್ತದೇ ಇರುವಷ್ಟು ದಪ್ಪ ಚರ್ಮವೇ? ಭಗವಂತಾ ಎಂಥ ಅವಹೇಳನವನ್ನಾದರೂ ಸಹಿಸಿಕೊಂಡು ಹೋಗುವ ಈ ಅತಿರೇಕದ ಉದಾರತೆ, ಅಭಿಮಾನಹೀನತೆಯನ್ನು ನಮ್ಮವರಿಗೆ ಇಡಿ ಇಡಿಯಾಗಿ ಕೊಟ್ಟೆ, ಏಕೆ ಎಂದು ಹೃದಯ ಮಿಡಿಮಿಡಿ ಒದ್ದಾಡಿತು.

ದೋಷ ಎಲ್ಲಿದೆ? ಕನ್ನಡದ ಮಣ್ಣಿನಲ್ಲಿ ನೀರಿನಲ್ಲಿ ಗಾಳಿಯಲ್ಲಿ ಅಭಿಮಾನ ಹೆಮ್ಮೆಯುಕ್ಕಿಸುವ ಗುಣವೇ ಇಲ್ಲವೇ? ಕನ್ನಡಿಗರ ರಕ್ತವೇ ನಿರಭಿಮಾನವನ್ನು ಪ್ರವಹಿಸುವಂತಹುದೇ?

ಕಡ್ಡಾಯ ಪ್ರಾಥಮಿಕ ಶಿಕ್ಷಣದ ಅಂಗವಾಗಿ ಮಕ್ಕಳ ಗಣತಿ ನಡೆಸುವಾಗ ಮುಸ್ಲಿಂ ಕುಟುಂಬ ಒಂದನ್ನು ಸಂದರ್ಶಿಸಿದ್ದೆವು. ಅವರು ತಮ್ಮ ಮಕ್ಕಳನ್ನು ಕನ್ನಡ ಶಾಲೆಗೆ ಕಳಿಸುತ್ತಿರುವುದು [illegible]

[illegible] ಎಲ್ಲಾ ಮಕ್ಳನ್ನೂ ಕನ್ನಡ ಶಾಲೆಗೆ ಕಳಿಸಿ ಎಂಟನೆಯತ್ತೆಯಿಂದ ಇಂಗ್ಲೀಷ್ ಮಿಡಿಯಂಗೆ ಸೇರಿಸ್ತೀವಿ. ಹಾಗಾಗಿ ಇಂಗ್ಲೀಷ್ ಕನ್ನಡ ಎರಡೂ ಚೆನ್ನಾಗಿ ಕಲೀತಾರೆ. ಇನ್ನು 2-3ನೇ ತರಗತಿಗೆ ಬರೋಹೊತ್ತೆ ಮನೇಲಿ ಉರ್ದು ಪಾಠ ಶುರು ಮಾಡ್ತೀವಿ. 7-8ನೇ ಕ್ಲಾಸಿಗೆ [illegible]

[illegible]

ಅರಿವು ಹಾಗೂ ಮಾತೃಭಾಷೆ ಬಿಟ್ಟುಕೊಡದ ಪ್ರೇಮ ಅನುಕರಣೀಯ.

ಇದೊಂದು ವಿಪರ್ಯಾಸದ ಉದಾಹರಣೆ ನೋಡಿ; ನಮ್ಮ ಹತ್ತಿರದ ನೆಂಟರೊಬ್ಬರ ಮಗ. 20-22ರ ಯುವಕ. ಅವನ ಅಜ್ಜ ಕನ್ನಡ ಹೆಸರಾಂತ ಸಾಹಿತಿಗಳು ಹಲವಾರು ವರ್ಷಗಳ ಅಧ್ಯಯನ ದುಡಿಮೆಯಿಂದ ಕನ್ನಡಕ್ಕೆ ಅತ್ಯಮೂಲ್ಯ ಗ್ರಂಥಗಳನ್ನು ಕೊಟ್ಟಿರುವ ಉದ್ದಾಮ ಪಂಡಿತರು. ಕೇಂದ್ರ ಹಾಗೂ ರಾಜ್ಯ ಸರಕಾರಗಳಿಂದ ಪುರಸ್ಕೃತರು. ಮೊಮ್ಮಗನಿಗೆ ಕನ್ನಡ ಬಾರದು.

"ನಿಮ್ಮ ಅಜ್ಜ ಬರೆದಿರುವ ಪುಸ್ತಕಗಳನ್ನು ಓದೋಕಾದ್ರೂ ಕನ್ನಡ ಕಲೀಬೇಕು ಅನ್ಸಲ್ವೇನೋ?" ಎಂದರೆ ಸೊಟ್ಟ ತಿರಸ್ಕಾರದ ನಗೆಯೊಡನೆ ಅವನ ಉತ್ತರ "ತ್ಚ ಆ ಗೊಡ್ಡು ಪುರಾಣ ಎಲ್ಲ ಯಾರಿಗ್ಬೇಕು? Bond, Chase ಇಂಥವರ thriling novels ಬೇಕು ನಮ್ಗೆ.

ಮಕ್ಕಳು ಮರಳು ಗಾಡಿನಲ್ಲೊಂದು ಓಯಿಸಿಸ್- ನಮ್ಮ ಪರಿಚಯದ ವೈದ್ಯ ದಂಪತಿಗಳು ತಮ್ಮ ಮಗನಿಗೆ ಕನ್ನಡ ಮಾತಾಡಲು ಅಷ್ಟೇ ಅಲ್ಲ, ಓದಿ ಬರೆಯಲು ಸಹ ಕಲಿಸೇ ಕಲಿಸುವುದಾಗ ಹೇಳಿದಾಗ, ಬೆಂದ ಹೃದಯಕ್ಕೇನೊ [illegible]. ●



ಟಿಬೆಟಿನ ಮಹಾಯೋಗಿ

ಮಿಲರೇಪ

ಜಿ. ಜನಾರ್ದನ ಭಟ್

ಮಿಲರೇಪ ಶ್ರೀಮಂತ ಕುಟುಂಬ ದೊಂದರಲ್ಲಿ ಕ್ರಿ.ಶ. 1052ರಲ್ಲಿ ಹುಟ್ಟಿದನು. ನೇಪಾಳಕ್ಕೆ ತಾಗಿಕೊಂಡಿರುವ ಟಿಬೆಟಿನ ಗುಂಗ್ ಥಾಂಗ್ ಪ್ರಾಂತದ ಕ್ಯಾಂಗತ್ಸಾ ಎಂಬ ಊರಿನಲ್ಲಿ ಅವರ ನಾಲ್ಕು ಕೋಣೆ ಎಂಟು ಕಂಭಗಳ ಮೂರು ಮಾಳಿಗೆಯ ಮನೆಯಿತ್ತು: ಪ್ರೋಮಾನ ತ್ರಿಕೋನ ಎಂಬ ಆಸ್ತಿಯಿತ್ತು. ತಂದೆ ಮಿಲ ಶೆರಬ್ ಗ್ಯಾಲ್‌ತ್ಸೆನ್. ತಾಯಿ ಕಾರ್ಮೋ ಕೈನ್ (ರಾಜವಂಶದವಳು). ತಂದೆ ಪಿತ್ರಾರ್ಜಿತ ಆಸ್ತಿ ಮತ್ತು ವ್ಯಾಪಾರದಿಂದ ತುಂಬ ಶ್ರೀಮಂತನಾಗಿದ್ದನು. ಅವರ ವೈಭವಕ್ಕೆ ಸುಖ ಸಂತೋಷಕ್ಕೆ ಎಣೆಯೇ ಇರಲಿಲ್ಲ. ಮಿಲರೇಪನಿಗೆ ನಾಲ್ಕು ವರ್ಷವಾದಾಗ ಅವನಿಗೊಬ್ಬ ತಂಗಿ (ಪೇಟಾ) ಹುಟ್ಟಿದಳು.

ಹೀಗೆ ಈ ಕುಟುಂಬ ನೆಮ್ಮದಿಯಾಗಿರುವಾಗ ಮಿಲಶೆರಬ್ ಕಾಯಿಲೆ ಬಿದ್ದನು. ಇನ್ನು ಬದುಕುವುದಿಲ್ಲ ಎಂದು ಖಾತ್ರಿಯಾದಾಗ ಸಂಬಂಧಿಕರನ್ನು (ಅವರಲ್ಲಿ ಹಲವರು ಅವನ ತಂದೆಯ ಕಾಲದಲ್ಲಿ ಇವರ ಆಶ್ರಯ ಬೇಡಿ ಬಂದವರು) ಮತ್ತು ನೆರೆಯವರನ್ನು ಕರೆದು ತನ್ನ ಅಂತಿಮ ಸೂಚನೆಗಳನ್ನು ತಿಳಿಸಿದನು: ಮಿಲರೇಪ ಸ್ವತಃ ವ್ಯವಹಾರಗಳನ್ನು ನಿಭಾಯಿಸಲು ಶಕ್ತನಾಗುವವರೆಗೆ ಅವನ ಚಿಕ್ಕಪ್ಪ ಮತ್ತು ಅತ್ತೆ (ಅವರು ಅಣ್ಣ ತಂಗಿ) ಎಲ್ಲ ವ್ಯವಹಾರಗಳನ್ನು ನೋಡಿಕೊಳ್ಳಬೇಕು: ಉಳಿದವರು ಅವರಿಗೆ ಸಹಾಯವಾಗಬೇಕು ಎಂದು. ಅವನು ಸತ್ತಿದ್ದೇ ತಡ. ಆ ಅತ್ತೆ ಮತ್ತು ಚಿಕ್ಕಪ್ಪ ಆಸ್ತಿಯನ್ನು ತಮ್ಮ ತಮ್ಮಲ್ಲಿ ಪಾಲು ಮಾಡಿಕೊಂಡು ಮಿಲಶೆರಬ್‌ನ ಕುಟುಂಬ ವನ್ನು ಗುಲಾಮರಿಗಿಂತ ಕಡೆಯಾಗಿ ನೋಡಿ ಕೊಂಡರು. ಕೆಲವು ಒಳ್ಳೆಯ ನೆರೆಯವರ ಸಹಾಯದಿಂದ ತಾಯಿ, ತಂಗಿ ಮತ್ತು ಮಿಲರೇಪ ಹಾಗೂಹೀಗೂ ಬದುಕಿ ಕೊಂಡಿದ್ದರು.

ಮಿಲರೇಪನಿಗೆ ಹದಿನೈದು ವರ್ಷವಾದಾಗ ತಾಯಿಗೆ ಅವಳದೇ ಆದ ಒಂದು ತುಂಡು ಭೂಮಿ ಸಿಕ್ಕಿತು. ಅದರಲ್ಲಿ ಅವಳೂ ಅವಳ ಸೋದರನೂ ದುಡಿದು ಬಂದದ್ದು ದಾ ಕೂಡಿಟ್ಟರು. ಒಂದು ದಿನ ಕುಟುಂಬದ ಮನೆ ಯಲ್ಲಿ ಅತಿಥಿ ಸತ್ಕಾರ ಸಮಾರಂಭವೊಂದನ್ನು ಮಾಡಿದರು. ಮಿಲಶೆರಬ್ ಸತ್ತಾಗ ಕೂಡಿದ್ದ ಜನರನ್ನೆಲ್ಲ ಆಹ್ವಾನಿಸಿದರು. ತಾಯಿ ಮಿಲಶೆ ರಬ್‌ನ ಅಂತಿಮ ಇಚ್ಛೆಯನ್ನು ಎಲ್ಲರಿಗೂ ನೆನಪಿಸಿ ಮಗನಿಗೆ ವಯಸ್ಸಾದುದರಿಂದ ತಮ್ಮ ಆಸ್ತಿಯನ್ನು ಮರಳಿ ಕೊಡಬೇಕೆಂದು ಕೇಳಿ ಕೊಂಡಳು. ಇದನ್ನು ಕೇಳಿ ಚಿಕ್ಕಪ್ಪ ಮತ್ತು ಅತ್ತೆಗೆ ಭಯಂಕರ ಸಿಟ್ಟು ಬಂದಿತು. "ಎಲ್ಲಿದೆ ನೀನು ಹೇಳುವ ಆಸ್ತಿ ಪಾಸ್ತಿ! ನಿಮ್ಮ ಮೂರಂತೆ ಜನಾದರೂ ಯಾವತ್ತಾದರೂ ಇತ್ತೇ! ನಿನ್ನ ಹೊಟ್ಟೆಗಿಲ್ಲದೆ ಸಾಯುವಂತೆ ನೋಡಿಕೊಂಡುದಕ್ಕೆ ಈ ಮಾತು ಕೇಳುವಂತಾಯಿತು! ಈ ಮನೆ ನಮ್ಮದೇ. ನಡೆಯಿರಿ ಹೊರಗೆ" ಎಂದು



ಬೇಡು ತಾಯಿ ಮಕ್ಕಳ ಮುಖಕ್ಕೆ ಮೊಡೆದರು.

ತಾಯಿಯ ಪರವಾಗಿದ್ದ ಕೆಲವು ಸಹೃದಯರು ಅವಳನ್ನು ಸಮಾಧಾನಿಸಿದರು. ಎಲ್ಲರೂ ವಂತಿಗೆ ಹಾಕಿ ಮಿಲರೇಪನಿಗೆ ಶಿಕ್ಷಣ ಕೊಡಿಸುವುದೆಂದು ತೀರ್ಮಾನವಾಯಿತು. ಅಂತೆಯೆ ಮಿಲರೇಪನನ್ನು ಕೆಂಪು ಪಂಥದ ಲು ಬಿಬಿ ಲಾಮಾನ ಬಳಿಗೆ ಶಿಕ್ಷಣಕ್ಕಾಗಿ ಕಳಿಸಲಾಯಿತು. ಅವನ ಸೋದರಮಾವ ಅವನ ತಾಯಿಯನ್ನೂ ತಂಗಿಯನ್ನೂ ನೋಡಿಕೊಂಡನು. ಒಂದು ದಿನ ಮಿಲರೇಪ ಗುರುವಿನೊಂದಿಗೆ ಯಾವುದೋ ಔತಣ ಕೂಟಕ್ಕೆ ಹೋಗಿದ್ದನು. ಗುರು ಶಿಷ್ಯರು ಸ್ವಲ್ಪ ಹೆಚ್ಚಾಗಿಯೇ ಕುಡಿದರು. ಮಿಲರೇಪ ಕುಡಿದ ಮತ್ತಿನಲ್ಲಿ ಖುಷಿಯಾಗಿ ಹಾಡುತ್ತ ಮನೆಗೆ ಬಂದಾಗ ತಾಯಿಗೆ ತಮ್ಮ ಹೀನ ಸ್ಥಿತಿಯ ಅರಿವಿಲ್ಲದಂತೆ ಖುಷಿಯಾಗಿರುವ ಮಗನನ್ನು

ಕಂಡು [illegible] ನೆತ್ತಿಗೇರಿತು. ಅವನ ಮೇಲೆ [illegible] ಒಂದು [illegible] ಅವನನ್ನು [illegible] ಕೊನೆಗೆ [illegible] ಮಿಲರೇಪ [illegible]

ತಾಯಿಯು [illegible] ಮಗ ಕಪ್ಪು ಮಂತ್ರವಾದ ಕಲಿತು ತನ್ನ ವೈರಿಗಳನ್ನು ನಾಶ ಮಾಡ[illegible]. ಅದಕ್ಕಾಗಿ ಆಕೆ ತನ್ನ [illegible] ಅರ್ಧ ಭಾಗ ಮಾರಿ ಮಗನನ್ನು [illegible] ಮತ್ತು [illegible] ಕಳುಹಲು [illegible] ಮಾಡಿದಳು. ಉತ್ತಮ ಕುಟುಂಬಗಳಿಂದ ಬಂದ [illegible] ಮಗನನ್ನು [illegible]. ಅವರೆಲ್ಲ [illegible] ಕಪ್ಪು ಮಂತ್ರವಾದ [illegible] ಸೇರಿ [illegible].

ಕಪ್ಪು ಮಂತ್ರವಾದ

ಒಂದು ವರ್ಷ ಕಳೆದಾಗ [illegible] ಊರಿಗೆ [illegible] ನಿರ್ಧರಿಸಿದರು. [illegible] ಮಾಡಿ ಕೊಲ್ಲುವ ಒಂದು ವಿಧಾನ ಮತ್ತು ಕೆಲವು ಭಯಂಕರ [illegible] ತಂತ್ರಗಳನ್ನು [illegible] ಕಲಿಯಲಿಲ್ಲ. ಗುರುವಿಗೆ [illegible] ಎಂದು ತೀರ್ಮಾನಿಸಿ ಅವರೆಲ್ಲ ಹಿಂದಿರುಗಿದರು. ಆದರೆ ಮಿಲರೇಪ ಗುರುವಿನ [illegible] ತನ್ನ [illegible] ಗುರು ತನ್ನ [illegible] ಮಿಲರೇಪನ ಊರಿಗೆ [illegible]

[illegible]

ದಿನಗಳ ಕಾಲ ಕಠಿಣ ಮಂತ್ರ ಸಾಧನೆ ಮಾಡಿದನು. ಹದಿನಾಲ್ಕನೆಯ ರಾತ್ರಿ ಅವನು ಆವಾಹಿಸಿದ ಮಂತ್ರಾಧಿದೇವತೆಗಳು ಪ್ರತ್ಯಕ್ಷರಾಗಿ ಅವನ ಮೂವತ್ತೈದು ವೈರಿಗಳ ರಕ್ತಸಿಕ್ತ ತಲೆ- ಹೃದಯಗಳನ್ನು ಅವನಿಗೆ ತಂದೊಪ್ಪಿಸಿದರು. ಚಿಕ್ಕಪ್ಪ ಮತ್ತು ಅತ್ತೆಯನ್ನು ಇನ್ನೂ ಗೋಳಾಡಿಸುವ ಸಲುವಾಗಿ ಉಳಿಸಲಾಯಿತು. ಈ ನರಮೇಧ ಅವನ ಊರಿನಲ್ಲಿ ನಡೆದುದು ಹೀಗೆ: ಚಿಕ್ಕಪ್ಪನ ಮಗನ ಮದುವೆಗೆ ನೆರೆದಿದ್ದವರು ಈ ಮೂವತ್ತೈದು ಮಂದಿ (ಮದುಮಕ್ಕಳು ಸೇರಿ). ಮನೆಯ ಹೊರಗೆ ದೈತ್ಯಾಕಾರದ ಚೇಳು, ಜೇಡ, ಹಾವು, ಕಪ್ಪೆ, ಹಲ್ಲಿಗಳು ಕಂಡುಬಂದವು. ಕುದುರೆಗಳು ಭಯದಿಂದ ಚೆಲ್ಲಾಪಿಲ್ಲಿಯಾಗಿ ಓಡಿ ಒಂದು ಕುದುರೆ ಚಪ್ಪರದ ಕಂಬಕ್ಕೆ ಢಿಕ್ಕಿ ಹೊಡೆದಾಗ ಇಡೀ ಚಪ್ಪರ ಕುಸಿದು ಅದರಡಿ ಇದ್ದವರು ಸತ್ತರು.

ಈ ಸುದ್ದಿ ತಿಳಿದ ತಾಯಿ ಖುಷಿಯಿಂದ ತನ್ನ ಮಗನ ಪರಾಕ್ರಮವನ್ನು ಕೊಚ್ಚಿಕೊಂಡಳು. ಸತ್ತವರ ಪೈಕಿಯವರು ರೊಚ್ಚಿಗೆದ್ದು ತಾಯಿ ಮಗನನ್ನು ಮುಗಿಸಿಬಿಡುವ ಹುನ್ನಾರು ಹಾಕಿದರು. ಮಿಲರೇಪನನ್ನು ಮೊದಲು ಕೊಲ್ಲುವುದು ಅಗತ್ಯವೆಂದು ತೀರ್ಮಾನಿಸಿದರು. ತಾಯಿಗೆ ಇದರ ಸುಳಿವು ಸಿಕ್ಕಿ ತನ್ನ ಆಸ್ತಿಯನ್ನು ಮಾರಿ ಮಗನಿಗೆ ಸ್ವಲ್ಪ ಚಿನ್ನ ಕಳಿಸಿದಳು. ಊರಿನ ಪರಿಸ್ಥಿತಿಯನ್ನೂ ತಿಳಿಸಿದಳು. ಮಿಲರೇಪ ಗುರು ಕಾಣಿಕೆ ಅರ್ಪಿಸಿ ಮೊದಲಿನ ಗುರುವಿನ ಬಳಿಗೆ ಬಂದನು. ಅಲ್ಲಿ ಆಲಿಕಲ್ಲು ಚಂಡಮಾರುತ ಎಬ್ಬಿಸುವ ಮಂತ್ರವಿದ್ಯೆಯನ್ನು ಕಲಿತನು. ಊರಿಗೆ ಬಂದು [illegible] ಕೊಂಡು ಆಲಿಕಲ್ಲು ಚಂಡಮಾರುತ ಎಬ್ಬಿಸಿದನು. ಊರಿನವರ ಬದುಕುವ ದಾರಿಯಾದ ಬೆಳೆಗಳು ನಾಶವಾದವು. ಊರಿನವರಿಗೆ ಸುಳಿವು ಸಿಕ್ಕಿ ಅವನನ್ನು ಅಟ್ಟಿಸಿಕೊಂಡು ಬಂದದ್ದರಿಂದ ತಾಯಿಯನ್ನು ಕಾಣದೇ ಗುರುವಿನ ಬಳಿಗೆ ಮರಳಿದನು.

[illegible]

ಮಿಲರೇಪನನ್ನು ನಂತರ ತೀವ್ರವಾದ ಅಶಾಂತಿ, ಪಶ್ಚಾತ್ತಾಪ ಕಾಡಲು ಪ್ರಾರಂಭ[illegible] ಮುಕ್ತಿ ಪಡೆಯಬೇಕೆಂದಾತ ಆಶಿಸಿದನು.

ಅವಕ್ಕೆ ಅನುಕೂಲವಾದ ಒಂದು ಪ್ರಸಂಗ ನಡೆಯಿತು. ಅವನ ಗುರುವಿಗೆ ಬೇಕಾದವನೊಬ್ಬ ಸತ್ತುಹೋದನು. ಇದರಿಂದ ಜೀವನದ ಬಗ್ಗೆ ಆಳವಾಗಿ ಯೋಚಿಸುವ ಸಂದರ್ಭ ಗುರುವಿಗೆ ಒದಗಿತು. ಕಪ್ಪು ಮಾರ್ಗದಿಂದ ತನಗೂ ಶಿಷ್ಯನಿಗೂ ಸಾಕಷ್ಟು ಕರ್ಮದ ಕಳಂಕ ಲೇಪವಾಗಿರುವುದರಿಂದ ಇದರಿಂದ ಮುಕ್ತನಾಗಬೇಕೆಂದು ಯೋಚಿಸಿದನು. ಮಿಲರೇಪನನ್ನು ಕರೆದು ತಮಗಿಬ್ಬರಿಗೂ ಮುಕ್ತಿಯಾಗುವಂತೆ ಶುಭ್ರ ಮಾರ್ಗದಲ್ಲಿ ಸಾಧನೆ ಮಾಡಬೇಕೆಂದು ಹೇಳಿದನು. ಇದರಿಂದ ಮಿಲರೇಪನಿಗೆ ಸಂತೋಷವಾಯಿತು. ಗುರು ಹೇಳಿದಂತೆ ಲಾಮಾ ರೊಂಗ್ಟೋನ್ ಲ್ಹಾಗಾ ಎಂಬಾತನ ಬಳಿ ಶಿಷ್ಯವೃತ್ತಿ ಸ್ವೀಕರಿಸಿದನು.

ಆದರೆ ಅಲ್ಲಿ ಯಾವ ಸಾಧನೆಯನ್ನೂ ಮಾಡದೆ ಕಾಲಹರಣ ಮಾಡಿದ್ದರಿಂದ ಆ ಗುರುವು ಅವನನ್ನು ಸರಿದಾರಿಗೆ ತರಬೇಕಾದರೆ ಲ್ಹೋಬ್ರಾಕ್‌ನಲ್ಲಿರುವ ನರೋಪನ ಶಿಷ್ಯ ಮಾರ್ಪನಿಗೆ 3 ಮಾತ್ರ ಸಾಧ್ಯವೆಂದು ಹೇಳಿದನು. ಮಾರ್ಪನ ಹೆಸರು ಕೇಳಿದಾ ಕ್ಷಣ ಮಿಲರೇಪನಿಗೆ ರೋಮಾಂಚನ ಆಯಿತು. ಅವನು ಕೂಡಲೇ ಮಾರ್ಪನಿದ್ದಲ್ಲಿಗೆ ಹೊರಟನು. ಅತ್ತ ಮಾರ್ಪನಿಗೂ ಈ ಮಹಾಶಿಷ್ಯನ ಆಗಮನದ ಕನಸಾಗಿತ್ತು. ಮಾರ್ಪನ ಹೆಂಡತಿಗೂ ಅಂಥದೇ ಕನಸಾಗಿತ್ತು. ಕನಸನ್ನು ಅರ್ಥ ಮಾಡಿಕೊಂಡ ಮಾರ್ಪ ದಾರಿ ಬದಿಯ ತನ್ನ ಹೊಲವನ್ನು ಉಳುತ್ತಾ ಶಿಷ್ಯನಿಗಾಗಿ ಕಾದು ಕುಳಿತನು.

ಮಿಲರೇಪ ದಾರಿಯುದ್ದಕ್ಕೂ ವಿಚಾರಿಸಿಕೊಂಡು ಕೊನೆಗೆ ಗದ್ದೆ ಉಳುತ್ತಿದ್ದ ಮಾರ್ಪನ ಬಳಿಗ ಬಂದನು. ಬೊಜ್ಜು ಬೆಳೆದ ಆ ವ್ಯಕ್ತಿ ಗುರು ಮಾರ್ಪನೇ ಎಂದು ಅವನಿಗೆ ತಿಳಿಯಲಿಲ್ಲ. "ಈ ಗದೆ ಉತ್ತು ಮುಗಿಸಿದರೆ ಮಾರ್ಪನನು ಪರಿಚಯಿಸುತ್ತೇನೆ" ಎಂದು ಹೇಳಿ ಮಾರ್ಪ ಹೊರಟು ಹೋದನು. ಅವನು ಕೊಟ್ಟ ಚಾಂಗ್ ಪಾನೀಯ ಕುಡಿದು ಮಿಲರೇಪ ಗದ್ದೆಯನ್ನು ಉತ್ತು ಮುಗಿಸಿದನು. ಮಾರ್ಪನ ಮಗ ಅವನನ್ನು ತಂದೆಯ ಬಳಿಗೆ [illegible] ಹೋದನು. ಮಿಲರೇಪ ಗುರು [illegible] ತಾನು [illegible] ಗುರು

ಬಳಿಗೆ [illegible]ಕೊಂಡೆನೆಂದು ಹೇಳಿದನು. ಮಾರ್ಪ ಅವನು ಆಹಾರವನ್ನು ಬೇರೆಲ್ಲಿಯಾದರೂ ಸಂಪಾದಿಸಬೇಕೆಂದೂ, ಸಾಕಷ್ಟು ತಾಳಿಕೊಂಡರೆ ಸತ್ಯವನ್ನು ಬೇಕಾದರೆ ಬೋಧಿಸುವೆನೆಂದೂ ಹೇಳಿದನು.

ಮಿಲರೇಪ ತನ್ನ ಪುಸ್ತಕಗಳನ್ನು ಒಳಗಿಡಲು ಹೋದಾಗ ಮಾರ್ಪ ಅದನ್ನು ನಿರ್ದಾಕ್ಷಿಣ್ಯವಾಗಿ ಹೊರಗೆ ಹಾಕಿದನು. ಅವನು ಭಿಕ್ಷೆ ಬೇಡಿ ಒಂದು ತಾಮ್ರದ ಪಾತ್ರೆ, ಬಾರ್ಲಿಯ ಚೀಲ ತಂದು ಹಾಕಿದಾಗ ಅವನ್ನು ಒದ್ದು ಹೊರ ಹಾಕಿದನು. ಮಿಲರೇಪ ಪಾತ್ರೆಯನ್ನು ಗುರುವಿಗೆ ಅರ್ಪಿಸಿದನು. ತನಗೆ ಬೋಧಿಸಬೇಕೆಂದು ಕೇಳಿಕೊಂಡಾಗ ಗುರು "ನನ್ನ ಶಿಷ್ಯರು ಇಲ್ಲಿಗೆ ಬರುವ ದಾರಿಯಲ್ಲಿ ಕೆಲವು ದುಷ್ಟರು ಅಡ್ಡ ಹಾಕಿ ದೋಚುತ್ತಾರೆ. ಆ ದುರುಳರ ಮೇಲೆ ಆಲಿಕಲ್ಲು ಬಿರುಗಾಳಿ ಬೀಸು. ಆಮೇಲೆ ನೋಡುವ" ಎಂದನು. ಮಿಲರೇಪ ಹಾಗೆಯೇ ಮಾಡಿ ಬಂದನು. ನಂತರ ಮಾರ್ಪ ತನಗೆ ತೊಂದರೆ ಕೊಡುತ್ತಿದ್ದ ಕೆಲವು ದುಷ್ಟರನ್ನು ಮಿಲರೇಪನಿಂದ ಮಂತ್ರ ಪ್ರಯೋಗ ಮಾಡಿಸಿ ನಾಶಮಾಡಿದನು. ಆ ಮೇಲೆ ತನಗೆ ದೀಕ್ಷೆ ಕೊಡಬೇಕೆಂದು ಕೇಳಿದಾಗ ಮಿಲರೇಪನನ್ನು ಹೀಯಾಳಿಸಿ, "ಸಾಧ್ಯವಾದರೆ ನೀನು ನಾಶಮಾಡಿದ್ದನ್ನೆಲ್ಲಾ ಪುನಃ ಉಂಟು ಮಾಡು ನೋಡೋಣ" ಎಂದನು. ಮಿಲರೇಪ ತನ್ನ ಪಾಪಗಳಿಗಾಗಿ ಅತ್ತನು.

ಸಹನೆಯ ಪರೀಕ್ಷೆ-ಪ್ರಾಯಶ್ಚಿತ್ತ

ಮಾರ್ಪ ಮರುದಿನ ಸ್ವಲ್ಪ ಸಮಾಧಾನದಿಂದ ಮಿಲರೇಪನನ್ನು ಕರೆಸಿಕೊಂಡನು. ತನ್ನ ಮಗನಿಗಾಗಿ ಒಂದು ವೃತ್ತಾಕಾರದ ಮನೆ ಕಟ್ಟಬೇಕೆಂದು ಆಜ್ಞೆ ಮಾಡಿದನು. ಮಿಲರೇಪ ಅವನು ತೋರಿಸಿದ ಜಾಗದಲ್ಲಿ ಗೋಡೆ ಕಟ್ಟಲು ತೊಡಗಿದನು. ಆ ದಿನಗಳಲ್ಲಿ ಅವನಿಗೆ ಗುರುವಿನ ಮನೆಯಿಂದ ಆಹಾರ ಬರುತ್ತಿತ್ತು. ಮನೆ ಅರ್ಧ ಕಟ್ಟಿ ಆಗುವಾಗ ಮಾರ್ಪ ಬಂದು ತಾನು ಮನಸ್ಸು ಬದಲಾಯಿಸಿರುವುದಾಗಿ ಕೆಲಸ ನಿಲ್ಲಿಸಿ ಗೋಡೆ ಕೆಡವಿ ಕಲ್ಲು ಮಣ್ಣುಗಳನ್ನು ಎಲ್ಲಿಂದ ತಂದನೋ ಅಲ್ಲಿಯೇ ಹಾಕಬೇಕೆಂದೂ ಅಜ್ಞಾಪಿಸಿದನು. ನಂತರ ಮಿಲರೇಪನಿಂದ ಒಂದು ಅರ್ಧ ಚಂದ್ರಾಕೃತಿಯ ಮನೆ ಕಟ್ಟಿಸಲು ಪ್ರಾರಂಭಿಸಿದನು

ಜೆತ್ಸುನ್ ಕಃಬುಂ

ಜೆತ್ಸುನ್ ಮಿಲರೇಪ (1052-1135) ಟಿಬೆಟಿನ ಮಹಾಯೋಗಿ. ಅಲ್ಲಿನ ಎಲ್ಲ ಪಂಥದವರಿಂದ ಮನ್ನಣೆ ಪಡೆದಿರುವ ಗುರು. ಮಿಲರೇಪನ ಶಿಷ್ಯ ರೇಚಂಗ್ ಬರೆದ 'ಜೆತ್ಸುನ್ ಕಃಬುಂ' (ಮಿಲರೇಪನ ಜೀವನ ಚರಿತ್ರೆ) ಟಿಬೆಟಿನ ಧಾರ್ಮಿಕ, ಸಾಮಾಜಿಕ ಮತ್ತು ಸಾಹಿತ್ಯ ಚರಿತ್ರೆಗಳಲ್ಲಿ ಪ್ರಮುಖ ಸ್ಥಾನ ಪಡೆದಿರುವ ಪುಸ್ತಕ. ಅದರಲ್ಲಿ ಹನ್ನೊಂದು ಮತ್ತು ಹನ್ನೆರಡನೇ ಶತಮಾನದ ಧಾರ್ಮಿಕ, ಸಾಮಾಜಿಕ ಪರಿಸ್ಥಿತಿಯನ್ನು ನೋಡಬಹುದು. ಅದು ಸರಳವಾದ ನೇರವಾದ ಭಾಷೆಯಲ್ಲಿ ಬರೆಯಲ್ಪಟ್ಟಿದೆ. ಹಾಗಿದ್ದರೂ ಶ್ರೇಷ್ಠ ಸಾಹಿತ್ಯಕ ಗುಣಗಳು ಅದರಲ್ಲಿವೆ. ಆದ್ದರಿಂದಲೇ ಟಿಬಿಟನ್ ಭಾಷೆಯ ನಿಘಂಟು ರಚಿಸಿದವರೆಲ್ಲ ಅದನ್ನೊಂದು ಪ್ರಮುಖ ಆಧಾರ ಗ್ರಂಥವಾಗಿ ಗಮನಿಸಿದ್ದಾರೆ. ಜೆತ್ಸುನ್ ಕಃಬುಂ ಟಿಬೆಟಿನ ಜನಪ್ರಿಯ ಗ್ರಂಥಗಳಲ್ಲೊಂದು. ಮಿಲರೇಪನ ಹಾಡುಗಳ ಸಂಗ್ರಹ 'ಗುರ್-ಬುಂ' (ಒಂದು ಲಕ್ಷ ಹಾಡುಗಳು) ಕೂಡ ಜನಪ್ರಿಯವಾಗಿದೆ.

ರೇಚಂಗ್‌ನಿಗೆ ಒಂದು ಕನಸು ಬಿದ್ದು ಗುರು ಮಿಲರೇಪ ದೇವತೆಗಳಿಂದಲೂ ಗೌರವಿಸಲ್ಪಡುವ ಅತ್ಯಂತ ಶ್ರೇಷ್ಠ ಯೋಗಿಯೆಂದು ತಿಳಿಯುತ್ತದೆ. ಗುರುವಿನ ಜೀವನ ಚರಿತ್ರೆಯನ್ನು ಬರೆದಿಡಲು ಇಚ್ಛಿಸಿ ರೇಚಂಗ್ ಗುರುವಿಗೆ ತನ್ನ ಜೀವನ ಕಥೆಯನ್ನು ಹೇಳಬೇಕೆಂದು ಕೇಳುತ್ತಾನೆ. ಮಿಲರೇಪ ಅವನಿಗೆ ಮತ್ತು ಉಳಿದ ಶಿಷ್ಯರಿಗೆ ತನ್ನ ಕಥೆ ಹೇಳಿಕೊಳ್ಳುವ ನಿರೂಪಣಾ ವಿಧಾನ ಪುಸ್ತಕದ ಹೆಚ್ಚಿನ ಭಾಗದ್ದು. ಹಾಗಾಗಿ ಇದಕ್ಕೆ ಆತ್ಮಕಥೆಯ ಸ್ವರೂಪವೂ ಇದೆ. ಉಳಿದ ವಿವರಗಳನ್ನು ರೇಚಂಗ್ ನಿರೂಪಿಸುತ್ತಾನೆ (ಸರ್ವಸಾಕ್ಷಿ ಪ್ರಜ್ಞೆಯಲ್ಲಿ). ಪ್ರಸ್ತುತ ಲೇಖನದಲ್ಲಿ ಮಿಲರೇಪನ ಜೀವನದ ಪರಿಚಯವನ್ನು ಸಂಕ್ಷಿಪ್ತವಾಗಿ ಕೊಡಲಾಗಿದೆ; ಜೆತ್ಸುನ್ ಕಃಬುಮಿನ ನಿರೂಪಣಾ ವಿಧಾನವನ್ನು ಅನುಸರಿಸಿಲ್ಲ.

ಲಾಮಾ ಕಝಿ ದವ ಸಂಡುಪ್ ಎಂಬವರು ಜೆತ್ಸುನ್ ಕಃಬುವನ್ನು ಇಂಗ್ಲೀಷಿಗೆ ಅನುವಾದಿಸಿದರು. ಮೇಜರ್ ಕ್ಯಾಂಪ್‌ಬೆಲ್ (ಟಿಬೆಟಿನ ಬ್ರಿಟಿಷ್ ಅಧಿಕಾರಿ) ಕೂಡ ಇದಕ್ಕೆ ನೆರವಾಗಿದ್ದರು. ಲಾಮಾರು ಸತ್ತನಂತರ ಇವಾನ್ಸ್ ವೆಂಟ್ಸ್ ಎಂಬುವರು ಅನುವಾದದ ಹಸ್ತಪ್ರತಿಯನ್ನು ಲಾಮಾರ ಮಗನಿಂದ ಪಡೆದು ಪ್ರಕಟಿಸಿದರು. (ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, 1928). ಯುರೋಪಿನ ಅನೇಕ ಭಾಷೆಗಳಲ್ಲಿ ಜೆತ್ಸುನ್ ಕಃಬುವಿನ ವಿವಿಧ ಆವೃತ್ತಿಗಳು ಪ್ರಕಟವಾಗಿವೆ.

ಅದೂ ಅರ್ಥ ಆಗುವಾಗ ಅದನ್ನು ಕೆಡವಿ ಕಲ್ಲು ಮಣ್ಣುಗಳನ್ನು ಮೊದಲಿದ್ದ ಕಡೆ ಹಾಕಬೇಕಾಯಿತು. ಮತ್ತೆ ಮಿಲರೇಪ ತ್ರಿಕೋನಾಕೃತಿಯ ಕಟ್ಟಡ ಕಟ್ಟಬೇಕಾಯಿತು. ಗೋಡೆ ಮೇಲೇರುತ್ತಿರುವಾಗ ಗುರು ಬಂದು "ಇಂಥ ಅನಿಷ್ಟದ ಮನೆ ಮಾಟ ಮಾಡಲಿಕ್ಕಾ?" ಎಂದು ಬೈದು ಅದನ್ನು ಕೆಡವಿಸಿ ಕಲ್ಲು ಮಣ್ಣುಗಳನ್ನು ಅವುಗಳ ಸ್ವಸ್ಥಾನದಲ್ಲಿ ಹಾಕಿಸಿದನು. ಇಷ್ಟಾಗುವಾಗ ಮಿಲರೇಪನ ಬೆನ್ನಿನಲ್ಲಿ ದೊಡ್ಡ ವ್ರಣವೊಂದು ಮೂಡಿ ತೊಂದರೆ ಕೊಡುತ್ತಿತ್ತು. ಆದರೂ ಅವನು ಅದನ್ನು ಸಹಿಸಿಕೊಂಡಿದ್ದನು.

ನಂತರ ಮಾರ್ಪ ಒಂದು ಸ್ಥಳ ತೋರಿಸಿ ಅಲ್ಲಿ ಆಯತಾಕಾರದ ಹತ್ತು ಮಾಳಿಗೆಯ ಮನೆ ಕಟ್ಟಬೇಕೆಂದು ತಿಳಿಸಿದನು. ಮಾರ್ಪನ ಇತರ ಮೂವರು ಶಿಷ್ಯರು ಒಮ್ಮೆ ತಮಾಷೆಗೆಂದು ದೊಡ್ಡ ಕಲ್ಲೊಂದನ್ನು ಹೊತ್ತು ತಂದು ಅಲ್ಲಿ ಹಾಕಿದ್ದರು. ಅದನ್ನು ಉಪಯೋಗಿಸಿಕೊಂಡು ಮಿಲರೇಪ ಗೋಡೆ ಕಟ್ಟಿದನು. ಮಾರ್ಪ ಅದನ್ನು ತೆಗೆಸಿ ಮೊದಲಿದ್ದ ಕಡೆಗೆ ಹಾಕಿಸಿದನು. ಪುನಃ ಅದನ್ನು ಮಿಲರೇಪನಿಂದಲೇ ಹೊರಿಸಿಕೊಂಡು ಬಂದು ಗೋಡೆಯನ್ನು ಮೊದಲಿದ ಹಾಗೆ ಕಟ್ಟಿಸಿದನು. ಮನೆ ಮೇಲೇರುತ್ತಿದ್ದ ಹಾಗೆ ಮಿಲರೇಪನ ಬೆನ್ನಿನಲ್ಲಿ ಮೂರು ದೊಡ್ಡ ವ್ರಣಗಳಾದವು. ಆದರೂ ಕೆಲಸ ನಿಲ್ಲಿಸಲು ಅಪ್ಪಣೆ ಸಿಗಲಿಲ್ಲ. ಮನೆ ಏಳು ಮಾಳಿಗೆಯಷ್ಟು ಬೆಳೆಯಿತು.

ಮಾರ್ಪನ ಹೆಂಡತಿಗೆ ಮಿಲರೇಪನ ಬಗ್ಗೆ ಮಾತೃವಾತ್ಸಲ್ಯದಂಥ ಮಮತೆ. ಅವಳು ಮಿಲರೇಪನ ಬಗ್ಗೆ ಗಂಡನ ಮನಸ್ಸು ಮೃದುವಾಗಬೇಕೆಂದು ಬೇಡಿಕೊಳ್ಳುತ್ತಿದ್ದಳು. ಮಾರ್ಪ ಬೇರೆ ಶಿಷ್ಯರಿಗೆ ದೀಕ್ಷೆ ಕೊಡುವ ಸಂದರ್ಭಗಳಲ್ಲಿ ಮಿಲರೇಪನಿಗೂ ಗುರುಕಾಣಿಕೆ ಅರ್ಪಿಸಲು ಏನಾದರೂ ಕೊಟ್ಟು ಕಳಿಸುತ್ತಿದ್ದಳು. ಆದರೆ ಮಾರ್ಪ ನಿರ್ದಾಕ್ಷಿಣ್ಯವಾಗಿ ಮಿಲರೇಪನನ್ನು ಒದ್ದು ಹೊರಗೆ ಹಾಕುತ್ತಿದ್ದನು. ಕೊನೆಗೆ ಮಾರ್ಪನ ಹೆಂಡತಿ ಮಿಲರೇಪನಿಗೆ ದೋರ್ಜೆ ಪಾಮೊ (ಸಂಸ್ಕೃತ: ವಜ್ರ ವಾರಾಹಿ) ದೇವತೆಯ ಧ್ಯಾನದ ಕ್ರಮವನ್ನು ಹೇಳಿಕೊಟ್ಟಳು. ಆದರೂ ಮಿಲರೇಪನಿಗೆ ಮಾರ್ಪನಿಂದ ದೈವಿಕ ನಿತ್ಯ ಸತ್ಯಗಳನ್ನು ತಿಳಿದುಕೊಳ್ಳಬೇಕೆಂಬ ಹಂಬಲ ಪೂರೈಸಲಿಲ್ಲ. ಒಂದು ದಿನ ಗುರುಪತ್ನಿಗೂ ಹೇಳದೆ ಮಾರ್ಪನ ಮನೆಯಿಂದ ಓಡಿ ಹೋದನು. ಪುನಃ ಮನಸ್ಸು ದೃಢ ಮಾಡಿಕೊಂಡು ಗುರುವಿನ ಮನೆಗೆ ಹಿಂದಿರುಗಿದನು. ಮಾರ್ಪ ಉಳಿದ ಮೂರು ಮಾಳಿಗೆಗಳನ್ನು ಕಟ್ಟಿ ಮುಗಿಸುವಂತೆ ಆಜ್ಞಾಪಿಸಿದನು. ಮಿಲರೇಪನಿಗೆ ಆ ಸಮಯಕ್ಕೆ ಮನೆಯ ನೆನಪು ತೀವ್ರವಾಗಿ ಕಾಡಿತು.

ಮಾರ್ಪನ ಪತ್ನಿಗೆ ಹೇಗಾದರೂ ಮಾಡಿ ಮಿಲರೇಪನಿಗೆ ದೀಕ್ಷೆ ಕೊಡಿಸುವ ಆಸೆ. ಅವಳು ಅವನು ಅಲ್ಲಿಂದ ಹೋಗಿ ಮಾರ್ಪನ ಶಿಷ್ಯ ಲಾಮಾ ಗೋಗ್ಗನ್ ಜುದೋರ್‌ನ ಬಳಿ ದೀಕ್ಷೆ ಪಡೆಯುವಂತೆ ಸೂಚಿಸಿದಳು. ಒಂದು ಸಮಾರಂಭದಲ್ಲಿ ಮಾರ್ಪ ಮತ್ತು ಶಿಷ್ಯರು ಚಾಂಗನ್ನು ಚೆನ್ನಾಗಿ ಕುಡಿದು ನಿದ್ರಿಸುವಂತೆ ಮಾಡಿದಳು. ನಂತರ ಗೋಗ್ಗನ್‌ಗೆ ಮಾರ್ಪ ಬರೆದಂತೆ ಒಂದು ಪತ್ರ ಬರೆದು ಮಿಲರೇಪನಿಗೆ ದೀಕ್ಷೆ ಕೊಡಬೇಕೆಂದು ಬರೆದಳು. ಅವನಿಗೆ ಗುರುವಿನ ಉಡುಗೊರೆಯಾಗಿ ನರೋಪನ ಹಾರ, ಮಾಣಿಕ್ಯದ ಜಪಸರ ಇತ್ಯಾದಿಗಳನ್ನು ಕೊಟ್ಟು ಕಳಿಸಿದಳು. ಮಿಲರೇಪ ಅವುಗಳನ್ನು ಹಿಡಿದುಕೊಂಡು ಗೋಗ್ಗನ್‌ನ ಬಳಿಗೆ ಬಂದನು. ಮಾರ್ಪ ಮೊದಲು ಮಾಡಿದಂತೆ ಗೋಗ್ಗನ್ ಕೂಡ ಮಿಲರೇಪನಿಂದ ತನ್ನ ವೈರಿಗಳ ಮೇಲೆ ಆಲಿಕಲ್ಲು ಬಿರುಗಾಳಿ ಎಬ್ಬಿಸಿ ಅವರನ್ನು ನಾಶಮಾಡಿಸಿದನು. ಇಂಥ ಕೆಡುಕು ಶಕ್ತಿ ತನ್ನಲ್ಲಿರುವುದಕ್ಕಾಗಿ ಮಿಲರೇಪನಿಗೆ ಅತೀವ ದುಃಖವಾಯಿತು.

ಗೋಗ್ಗನ್ ಮಿಲರೇಪನಿಗೆ ದೀಕ್ಷೆ ನೀಡಿದನು. ಆದರೆ ಮಾರ್ಪನ ಆಶೀರ್ವಾದ ಇಲ್ಲದ್ದರಿಂದ ಮಿಲರೇಪನಿಗೆ ಯಾವ ಫಲವೂ ಸಿಗಲಿಲ್ಲ. ಆ ಸಮಯಕ್ಕೆ ಮಾರ್ಪ ತನ್ನ ಮಗನ ಮನೆಯನ್ನು ಪೂರ್ತಿ ಕಟ್ಟಿಸಿದ್ದನು. ಮನೆ ಒಕ್ಕಲಿಗೆ ಬರಬೇಕೆಂದು ಗೋಗ್ಗನ್‌ಗೆ ಪತ್ರ ಬರೆದು ಅವನ ಬಳಿ ಇರುವ ಮಿಲರೇಪನೆಂಬ ಕೆಟ್ಟ ಮನುಷ್ಯನನ್ನು ಕರೆತರಬೇಕೆಂದೂ ಸೇರಿಸಿದನು. ಗೋಗ್ಗನ್ ಗುರು ಮಾರ್ಪನ ಮನೆಗೆ ಪರಿವಾರ ಸಮೇತ ಬಂದನು. ಗುರು ನರೋಪನ ವಸ್ತುಗಳನ್ನು ಮಿಲರೇಪ ಅವನಿಗೆ ಕಾಣಿಕೆ ಕೊಟ್ಟಿದ್ದನೆಂದು ತಿಳಿದು ಮಾರ್ಪ ಕಿಡಿ ಕಿಡಿಯಾದನು. ಅವುಗಳನ್ನು ಕೊಟ್ಟ ಮಾರ್ಪನ ಪತ್ನಿ ಓಡಿ

[illegible] ಪತ್ನಿಗೊಂಪ್ಪಿಸಿ. ಗೋಂಗ್‌ಪ ಅವನ್ನು ಕೂಡಲೇ ತರಲು ಹೊರಟನು. [illegible] ಮಾಡಿಕೊಳ್ಳಲು ಪ್ರಯತ್ನಿಸಿದನು. ಗೋಂಗ್‌ಪ ಮಿಲರೇಪನನ್ನು ತಡೆದು [illegible]

ದೀಕ್ಷೆ-ಜ್ಞಾನೋದಯ

[illegible] ಮಾರ್ಪ [illegible] ಎಲ್ಲರನ್ನೂ ಒಳಗೆ ಕರೆದನು. "ಇವತ್ತು ನಮ್ಮ ಮುಖ್ಯ ಅತಿಥಿ ಮಹಾಮಾಂತ್ರಿಕ (ಮಿಲರೇಪ)" ಎಂದು ಘೋಷಿಸಿ ತಾನು ಮಿಲರೇಪನ ಪಾಪಗಳನ್ನು ತೊಳೆಯಲು ಅವನನ್ನು ಕಠಿಣ ಶ್ರಮಗಳಿಗೆ ಒಳಪಡಿಸಿದುದಾಗಿ [illegible] ತಿಳಿಸಿದನು. ಅದೇ ರಾತ್ರಿ ಮಿಲರೇಪನಿಗೆ ದೀಕ್ಷೆ ಕೊಟ್ಟನು. ಮಿಲರೇಪನ ತಲೆಗೂದಲು ಕತ್ತರಿಸಿ [illegible] ಉಡುಪು ಕೊಡಲಾಯಿತು. ಗುರು ನರೋಪ [illegible] ಒಂದು ಕನಸಿನಲ್ಲಿ ಮಿಲರೇಪನನ್ನು ಮಿಲದೋರ್ಜೆ ಗ್ಯಾಲ್‌ತ್ಸೇನ್ (ಸಂ: [illegible]) ಎಂದು ಹೆಸರಿಸಬೇಕೆಂದು ಮಾರ್ಪ ಹೇಳಿದನು. ದೋರ್ಜೆಚಾಂಗ್ (ಸಂ: ವಜ್ರಧರ) ಮಂಡಲವನ್ನು ಬರೆದು ಅದರಲ್ಲಿದ್ದ ದೇವತೆಗಳನ್ನು ಆವಾಹಿಸಿದನು. ದೇವತೆಗಳು ಮತ್ತು ಮಾರ್ಪ ಒಟ್ಟಿಗೆ ಮಿಲರೇಪನಿಗೆ [illegible] ದೋರ್ಜೆ (ಸಂ. ಶ್ರೀ [illegible]) [illegible] ನಾಮ ನೀಡಿದರು.

ಗುರು ಮಾರ್ಪ ಮಂತ್ರಯಾನದ ವಿವಿಧ [illegible] ಮಿಲರೇಪನಿಗೆ [illegible] ಹೇಳಿದನು. ನಂತರ ಮಿಲರೇಪ ಒಂದು ಬಂಡೆಗಲ್ಲಿನ ಗವಿಯೊಳಗೆ ಸುತ್ತ ಗೋಡೆ ಕಟ್ಟಿಕೊಂಡು ಕಠಿಣ ತಪಸ್ಸು ಮಾಡಿದನು. ತಲೆಯ ಮೇಲೆ ಒಂದು ದೀಪ ಹಚ್ಚಿಸಿಟ್ಟು ಅದು ಆರುವವರೆಗೆ ತಪಸ್ಸು ಮಾಡಬೇಕಿತ್ತು. ಹನ್ನೊಂದು ತಿಂಗಳ ನಂತರ ಗುರು [illegible] ತಪಸ್ಸಿನಿಂದ ಹೊರ ಬರಲು ಹೇಳಿ[illegible] ಕುರಿತು ಒಂದು ಹಾಡು ಹೇಳಿದನು. (ಪ್ರತಿ [illegible]

ಗುರು ಮಾರ್ಪನಿಗಾಗ ಮಿಲರೇಪ ತನಗಾದ ಜ್ಞಾನೋದಯದ ಕುರಿತು ಹೇಳಿದನು. [illegible] ಮಹತ್ವ ಅವನಿಗೆ ಅರಿವಾಯಿತು. [illegible] ಮುಕ್ತಿಗಾಗಿ [illegible] ಧ್ಯಾನವೇ ಮುಖ್ಯ. ಧ್ಯಾನದಲ್ಲಿ [illegible] ಕೊಂಡರೆ ಅದು ವ್ಯರ್ಥ ಕಾಲಹರಣ. ಧ್ಯಾನದಲ್ಲಿ ಪ್ರಜ್ಞೆ ಉಳಿಸಿಕೊಂಡಿರಬೇಕು. ಧ್ಯಾನದ ಸಮಯದಲ್ಲಿ ದೇವತೆಗಳನ್ನು ಕಾಣುವುದು ಮುಖ್ಯವಲ್ಲ. ಅಂಥ ದರ್ಶನಗಳು ಸಾಧನೆಯ ದಾರಿಯಲ್ಲಿ ಸಾಧಕ ಮುಂದುವರಿಯುತ್ತಿದ್ದಾನೆಂಬುದಕ್ಕೆ ಸೂಚನೆಗಳಷ್ಟೆ. [illegible] ಹೆಸರು ಕೇಳಿದಾಕ್ಷಣ ಹಸಿವೆ ಹಿಂಗದು. ಅದಕ್ಕೆ ಆಹಾರವೇ ಬೇಕು. ಹಾಗೆಯೇ ಶೂನ್ಯತೆಯ ಕುರಿತು ತಿಳಿದುಕೊಂಡರೆ ಸಾಲದು. ಅದನ್ನು ಧ್ಯಾನಿಸಿ ಅನುಭವಿಸಬೇಕು. [illegible] ಸತ್ಯಗಳು ಮಿಲರೇಪನಿಗೆ ಅರಿವಾಗಿದ್ದವು.

ಸ್ವಲ್ಪ ಸಮಯದ ನಂತರ ಮಿಲರೇಪನಿಗೆ ಕನಸಿನಲ್ಲಿ [illegible] ಅದು ದ್ರೋಂಗ್ ಜುಗ್ [illegible] ಶರೀರದೊಳಗೆ [illegible] ಯೋಗವನ್ನು ಕಲಿಯಬೇಕೆಂದು [illegible] ಅದರ ಬಗೆ ಗುರುವನ್ನು [illegible] ಮಿಲರೇಪ ಗೊಂದಲದಲ್ಲಿ [illegible] ಹೊರ ಬಂದನು. ಮಾರ್ಪನಿಗೆ ತನ್ನ ಗುರು ನರೋಪ ಆ ಬಗೆ [illegible] ರಿಂದ ಅವನು ಕೂಡಲೇ ಭಾರತಕ್ಕೆ ಹೊರಟನು. [illegible] ಹೋದ ಹಾಗೂ ಆಯಿತು.

[illegible] ಪರಂಪರೆ ಅವನ ಶಿಷ್ಯರಿಂದ ಮುಂದುವರಿಯಬೇಕಿತ್ತು. ಆ ಶಿಷ್ಯರು ಯಾರು [illegible] ಎಲ್ಲರೂ ಕಾದರು. ಮಿಲರೇಪನ [illegible] ಒಂದು ಕನಸಿನಿಂದಾಗಿ [illegible] ಗುರು [illegible] ಮಿಲರೇಪನಿಗೆ ಎಂಥ [illegible]

[illegible]ದನು. ಅವನಿಗೆ ಗುರುವಿನ ಮನೆಯಿಂದ [illegible] ಬಿಟ್ಟಿತು.

[illegible] ಕಠಿಣವಾಯಿತು. [illegible] ಬಂದು [illegible]ರಿಗೆ [illegible]ಗಳು [illegible] ಅವನು ತಾಯಿಯನು [illegible] ಅಸಂಭವವೆಂದು [illegible]

[illegible] ಬರೆದನು. [illegible] ಅರ್ಥ[illegible] ತಂತ್ರ [illegible] ಮುಂದೆ [illegible]ಗೆ [illegible] ಹೇಳಬೇಕೆಂದನು. ಲೌಕಿಕ [illegible]ಗಾಗಿ ಅವುಗಳನು ಉಪಯೋಗಿಸಬಾರದೆಂದು [illegible] ಮಿಲರೇಪನಿಗೆ ಪ್ರದ[illegible] ಎಂದು ಮಿಲರೇಪನಿಗೆ ತಿಳಿಸುವುದೆ [illegible]

ಆತ್ಮನಿಂದೆಯ ಹಾಡು

[illegible] ರೂಪದಲ್ಲಿರುವ [illegible]
[illegible]

[illegible] ಮಿಲರೇ[illegible]!
[illegible]

[illegible] ನಡೆಸಬಯಸಿದಾದ
[illegible]

[illegible] ಬಂಟಿ [illegible] ಅವ [illegible]
[illegible]

[illegible]

—[illegible]

ಮಿಲರೇಪ ಕೈಲಾಸ, ಎವರೆಸ್ಟ್ ಮುಂತಾದ ಶಿಖರಗಳಲ್ಲಿ ತಪಸ್ಸು ಮಾಡಬೇಕೆಂದು ಮಾರ್ಪ ಹೇಳಿದನು. ಮಿಲರೇಪನಿಗೆ ಮುಂದೊಮ್ಮೆ ಮಹಾವಿಪತ್ತು ಬಂದಾಗ ತೆರೆದು ನೋಡಬೇಕೆಂದು ಮೊಹರು ಮಾಡಿದ ಒಂದು ಕೈಬರಹದ ಕಟ್ಟನ್ನು ಕೊಟ್ಟನು. ಅವನೂ ಅವನ ಹೆಂಡತಿಯೂ ತುಂಬ ದೂರದ ವರೆಗೆ ಮಿಲರೇಪನ ಜತೆಗೆ ಹೋಗಿ ದುಃಖದಿಂದ ಬೀಳ್ಕೊಂಡರು. ಅವರ ಅಗಲಿಕೆ ತಂದೆ ತಾಯಿಗಳನ್ನು ಮಗ ಅಗಲುವಂತಿತ್ತು. ಅನೇಕ ತಿಂಗಳುಗಳ ಪ್ರಯಾಣವನ್ನು ಮಿಲರೇಪ ಯೋಗಬಲದಿಂದ ಮೂರು ದಿನಗಳಲ್ಲಿ ಮುಗಿಸಿ ಊರಿಗೆ ಹೋದನು.

ಸಾಧನೆ-ಸಿದ್ಧಿ

ಮಿಲರೇಪ ಊರಿಗೆ ಬಂದು ನೋಡುವಾಗ ಅವನ ಮನೆ ಪಾಳು ಬಿದ್ದಿತ್ತು. ಅಲ್ಲಿ [illegible] ಒಂದು [illegible] ಇರಲಿಲ್ಲ. ಅವನ [illegible] ತಾಯಿ ಸತ್ತಿದ್ದಳು. ತಾಯಿ ಸತ್ತಾಗ ತಂಗಿ ಪಾರಿ ಕಾಣದೆ ಊರು ಬಿಟ್ಟು ಹೋಗಿದ್ದಳು. ಅವಳಲ್ಲಿ [illegible] ಯಾರಿಗೂ [illegible] ತಾಯಿಯ ಎಲುಬುಗಳು ಮನೆಯೊಳಗೆ ಒಂದು ಗುಪ್ಪೆಯಾಗಿ ಮಣ್ಣಿನ ರಾಶಿಯಲ್ಲಿ ಮಿಲರೇಪನಿಗೆ ಸಿಕ್ಕಿದವು. ಅವನು ಎಲುಬುಗಳನ್ನು ಒಟ್ಟು ಮಾಡಿ ಅವರ ಮೇಲೆ ಏಳು ದಿನ ಏಳು ರಾತ್ರಿ ಸಮಾಧಿ ಸ್ಥಿತಿಯಲ್ಲಿ ಧ್ಯಾನಿಸಿದನು. ಅವನ ಧ್ಯಾನಬಲದಿಂದ ಅವನ ತಂದೆ ತಾಯಿಗಳಿಗೆ ಮುಕ್ತಿಯಾಯಿತು. ನಂತರ ಅವನು ಡ್ರಾಗ್‌ಕಾರ್ ತಾಸೊ ಗುಹೆಯಲ್ಲಿ ತಪಸ್ಸಿಗೆ ಕುಳಿತನು. ಅವನ [illegible] ಗುರುವಿನ ಮಗ [illegible] ಬಿಟ್ಟು ಕೊಟ್ಟನು. ಇದರಿಂದ ಕೆಲವು ತಿಂಗಳುಗಳ ಆಹಾರದ [illegible]ಯಾಯಿತು.

ಅದು ಮುಗಿದ ನಂತರ ಅವನು ಬೇರೆ [illegible] ಹೋದನು. ಒಂದು [illegible] ಭಿಕ್ಷೆ [illegible] ಹೊರಬಂದವಳು ಅವನ ಅತ್ತೆ. ಅವಳು ಅವನನ್ನು ಗುರುತಿಸಿ ಅವನ ಮೇಲೆ ನಾಯಿಗಳನ್ನು ಛೂ ಬಿಟ್ಟು [illegible] ಕುಳಿತ. ಹಾಡಿದಾಗ ಅವಳ ಮನಕರಗಿ ಸ್ವಲ್ಪ ಆಹಾರ ಕೊಟ್ಟಳು. ಇನ್ನೊಮ್ಮೆ ಮಿಲರೇಪ ಅವನ ಚಿಕ್ಕಪ್ಪನ ಕೈಗೇ ಸಿಕ್ಕಿಬಿದ್ದನು. ಅವನೂ ಅವನ ಸಂಗಡಿಗರೂ ಮಿಲರೇಪನನ್ನು ಕಲ್ಲಿನಿಂದ ಹೊಡೆದು ಓಡಿಸಿ ಕೊಂಡು ಬಂದರು. ಅವರಿಂದ ತಪ್ಪಿಸಿಕೊಳ್ಳಲಿಕ್ಕಾಗದ ಮಿಲರೇಪ ಅವರನ್ನು ಭಯಪಡಿಸುವುದಕ್ಕಾಗಿ ರಕ್ತ ಕುಡಿಯುವ ತನ್ನ ರಕ್ಷಕ ದೇವತೆಗಳನ್ನು ಕರೆದನು. ಅವನ ಮಂತ್ರವಾದದ [illegible] ಅವರೆಲ್ಲ ಹಿಂದೆ ಸರಿದರು. ಕೆಲವರು ಅವನಿಗೆ ಆಹಾರ ಕೂಡ ತಂದು ಕೊಟ್ಟರು.

ಅವನ ಅತ್ತೆ ಅವನ ಗುಹೆಗೆ ಬಂದು ಅವನ ಆಸ್ತಿಯನ್ನು ತನಗೆ ಕೊಡಬೇಕೆಂದು ಕೇಳಿಕೊಂಡಳು. ಅವನಿಗೆ ಯಾವ ಪ್ರಾಪಂಚಿಕ ವ್ಯಾಮೋಹ ಇಲ್ಲದ್ದರಿಂದ ಅವನು ಒಪ್ಪಿದನು. ಅತ್ತೆ ಕೆಲವು ದಿನಗಳಿಗಾಗುವಷ್ಟು ಆಹಾರದ ಚೀಲ ಕೊಟ್ಟು ಹೊರಟು ಹೋದಳು. ಕೆಲವು ಕಾಲ ತಪಸ್ಸು ಮಾಡಿದ ಮಿಲರೇಪನಿಗೆ ಮರಳಿ ಜನರ ನಡುವೆ ಹೋಗಬೇಕೆಂದು ಆಸೆಯಾಯಿತು. ಕೂಡಲೇ ಅವನಿಗೆ ತನ್ನ ಧ್ಯೇಯದ ನೆನಪಾಗಿ ತನಗೇ ಆತ್ಮನಿಂದೆಯ ಹಾಡನ್ನು ಹಾಡಿಕೊಂಡು (ಆ ಹಾಡಿನ ಛಾಯಾನುವಾದ ಕೊಡಲಾಗಿದೆ) ಪುನಃ ತಪಸ್ಸಿಗೆ ಕುಳಿತನು.

ಅವನ ಆಹಾರದ ದಾಸ್ತಾನೆಲ್ಲ ಮುಗಿದು ಬರೀ ಕುರುಚಲು ಗಿಡಗಳನ್ನು ತಿನ್ನಲು ಪ್ರಾರಂಭಿಸಿದನು. ಇದರಿಂದ ಅವನ ದೇಹ ಕ್ಷೀಣವಾಗಿ, ಹಸಿರಾಗಿ, ಮೈಮೇಲೆ ಹಸಿರು ರೋಮಗಳು ಬೆಳೆದು ಪ್ರಾಣಿಯಂತೆ ಅಥವಾ ದೆವ್ವದಂತೆ ಕಾಣುತ್ತಿದ್ದನು. ಅಲ್ಲಿಗೆ ಒಮ್ಮೊಮ್ಮೆ ಕೆಲವು ಬೇಟೆಗಾರರು ಬರುತ್ತಿದ್ದರು. ಮೊದಲು ಅವನನ್ನು ಪಿಶಾಚಿ ಎಂದು ತಿಳಿದು ಓಡಿಹೋಗುತ್ತಿದ್ದರು. ಮಿಲರೇಪ ಮಾನವ [illegible] ಮಿಲರೇಪ ನಗುತ್ತ "ನನಗಿಲ್ಲಿ ಹಗಲು ಹೊತ್ತೇ ಕಾರ್ಗತ್ತಲಾದರು [illegible]


ಹೋದನು.

ಅವನು ಆ ಗವಿಯಲ್ಲಿ ಇರುವುದು ತಿಳಿದು ತಂಗಿ ಪೇಟಾ ಮತ್ತು ಅವನಿಗೆ ನಿಶ್ಚಯವಾಗಿದ್ದ ಹುಡುಗಿ ಝೆಸೇ ಆಗಾಗ ಅವನಿಗೆ ಸ್ವಲ್ಪ ಆಹಾರ ತಂದು ಕೊಡುತ್ತಿದ್ದರು. ಮೈಮೇಲೆ ಬಟ್ಟೆ ಇಲ್ಲದ ಅವನಿಗೆ ಬಟ್ಟೆಯ ತುಂಡು ಕೊಟ್ಟರು. ಅವರು ಕೊಟ್ಟ ಒಳ್ಳೆಯ ಆಹಾರ ಅವನ ದೇಹ ಮನಸ್ಸುಗಳಿಗೆ ಒಗ್ಗದೆ ಧ್ಯಾನ ಮುಂದುವರಿಸಲಾಗದ ಸ್ಥಿತಿ ಬಂತು. ಆಗ ಗುರು ಮಾರ್ಪ ಕೊಟ್ಟಿದ್ದ ಬರಹದ ಕಟ್ಟು ತೆರೆದು ಓದಿದನು. ಅದರಲ್ಲಿ ಅವನ ಸದ್ಯದ ತೊಂದರೆಗಳಿಗೆ ಪರಿಹಾರ ಮಾರ್ಗ ಸೂಚಿಸಿತ್ತು. ನಂತರ ಧ್ಯಾನದಲ್ಲಿ ಮನಸ್ಸು ಕೇಂದ್ರೀಕರಿಸಿದ ಅವನಿಗೆ ವಿವಿಧ ಅತೀಂದ್ರಿಯ ಶಕ್ತಿಗಳು ಸಿದ್ಧಿಯಾಗುತ್ತ ಬಂದವು. ಯಾವ ರೂಪವನ್ನು ಬೇಕಾದರೂ ಹೊಂದಬಲ್ಲ ಶಕ್ತಿ ಪ್ರಾಪ್ತವಾಯಿತು. ಮೊದಲು ತಾನು ಹಾರುವಂತೆ ಕಲ್ಪಿಸಿಕೊಂಡು ಕೊನೆಗೆ ನಿಜವಾಗಿಯೂ ದೇಹ ಸಮೇತ ಗಾಳಿಯಲ್ಲಿ ಹಾರಿಕೊಂಡು ಹೋಗಬಲ್ಲವನಾದನು. 4 ಅವನ ಕುಂಡಲಿನೀ ಶಕ್ತಿ ಜಾಗ್ರತ ವಾಯಿತು.

ಮಿಲರೇಪನಿಗೆ ಹಾರುವ ಶಕ್ತಿ ಸಿದ್ಧಿಯಾದೊಡನೆ ಜನರು ತಮ್ಮ ಸ್ವಂತದ ಕೆಲಸಗಳ ಯಶಸ್ಸಿಗಾಗಿ ಅವನಿಗೆ ದುಂಬಾಲು ಬೀಳತೊಡಗಿದರು. ಅವನಿಗೆ ಏಕಾಂತ ಸಿಗದೆ ತೊಂದರೆಯಾಯಿತು. ಆದ್ದರಿಂದ ಅವನು ಎವರೆಸ್ಟ್ ಪರ್ವತದತ್ತ ಹೊರಟನು. ದಾರಿಯಲ್ಲಿ ಅನೇಕ ಚಿಟ ಗವಿಗಳಲ್ಲಿ ಸಾಧನೆ ಮಾಡಿದನು. (ಮಿಲರೇಪ ಎವರೆಸ್ಟ್ ಅಲ್ಲದೆ ಆರು ಪ್ರಸಿದ್ಧ ಗುಹೆಗಳಲ್ಲಿ, ಆರು ಅಪ್ರಸಿದ್ಧ ಗುಹೆಗಳಲ್ಲಿ ಆರು ಗುಪ್ತ ಗುಹೆಗಳಲ್ಲಿ ತಪಸ್ಸು ಮಾಡಿದ್ದನು. ಅವೆಲ್ಲ ಈಗ ಟಿಬೆಟನರಿಗೆ ಪುಣ್ಯ ಸ್ಥಳಗಳಾಗಿವೆ) ಕ್ಯಿಟ್ ಫುಗ್ ಎಂಬ ಬೆಟ್ಟದಲ್ಲಿ ಕೆಲವು ತಿಂಗಳುಗಳಿದ್ದನು. ತಂಗಿ ಪೇಟಾ ಅವನನ್ನು ಹುಡುಕಿಕೊಂಡು ಬಂದು ಒಂದು ಕಂಬಳಿ ಕೊಟ್ಟಳು. ಅವನು ಚಳಿಯಿಂದ ರಕ್ಷಣೆ ಪಡೆಯಲು ಅದನ್ನು ತುಂಡುಗಳಾಗಿ ಮಾಡಿ ದೇಹಕ್ಕೆಲ್ಲ ನೇತಾಡಿಸಿಕೊಂಡಿದ್ದನು. ಅದನ್ನು ಕಂಡು ತಂಗಿಗೆ ಅವನ ಮಾನಸಿಕ ಸ್ಥಿಮಿತದ ಬಗ್ಗೆ ಸಂಶಯವೂ ಬಂತು. ಅವನು ಅಲ್ಲಿದ್ದಾಗ ಅಣ್ಣನನ್ನು ಕಳೆದುಕೊಂಡ ಅತ್ತೆ ಅಲ್ಲಿಗೆ ಬಂದು ಅವನ ಕ್ಷಮೆ ಕೇಳಿದಳು. ಮಿಲರೇಪ ಅವಳನ್ನು ಕ್ಷಮಿಸಿದನು.

ಧರ್ಮ ಬೋಧನೆ – ನಿರ್ವಾಣ

ಮಿಲರೇಪನ ಮೊದಲ ಶಿಷ್ಯರು ಅತಿಮಾನುಷ ಶಕ್ತಿಗಳು. ಅವುಗಳಲ್ಲಿ ಹೆಚ್ಚಿನವು ಮೊದಲು ಅವನಿಗೆ ತೊಂದರೆ ಕೊಡಲು ಬಂದವುಗಳು. ಎವರೆಸ್ಟಿನಲ್ಲಿ ಅವನು ಗಣಪತಿಯನ್ನು ಒಲಿಸಿಕೊಂಡನು. ಗುಂಗ್ತಾಂಗಿನ ಗವಿಗಳಲ್ಲಿ ಅಪ್ಸರಾದೇವಿಯೊಬ್ಬಳನ್ನು, ಸ್ಥಳೀಯ ದೇವತೆಗಳನ್ನು ಶಿಷ್ಯರನ್ನಾಗಿಸಿಕೊಂಡನು. ಮಾನವ ಶಿಷ್ಯರಲ್ಲಿ ಕರ್‌ಗ್ಯುಟ್ಪ ಪಂಥದ ಮುಂದಿನ ಗುರುವಾಗಲಿದ್ದ ಗಾಂಪೋಪ ಒಬ್ಬನು. ರೇಚುಂಗ್



(ಅವನ ಜೀವನ ಚರಿತ್ರೆ ಬರೆದವನು). ಶಿವ ಪ್ರೆಡ್ ರೇಪ, ಗಾಮ್ ಪೋಂಗ್ ರೇಪ, ಸಬಾನ್ ರೇಪ, ಪ್ರಿಯ ರೇಪ, ಪ್ರಿ ಗೊಮ್ ರೇಪ ಮುಂತಾದವರು ಅವನ ಪ್ರಸಿದ್ಧ ಶಿಷ್ಯರು. ಅಸಂಖ್ಯಾತ ಜನರನ್ನು ಮಿಲರೇಪ ಮುಕ್ತಿಯ ದಾರಿಯಲ್ಲಿ ನಡೆಸಿದನು.

ಭೂಮಿಯಲ್ಲಿ ಮಿಲರೇಪನ ಕಾರ್ಯ ಮುಗಿಯುತ್ತ ನಿರ್ವಾಣದ ಸಮಯ ಸಮೀಪಿಸಿತು. ಬ್ರಿನ್‌ನಲ್ಲಿ ಲಾಮಾ [illegible] ಪಂಡಿತನಿದ್ದನು. ಲೌಕಿಕ ವ್ಯಾಮೋಹಗಳಿಗೆ ತುತ್ತಾಗಿದ್ದ ಅವನಿಗೆ ಮಿಲರೇಪನ ಪ್ರಸಿದ್ಧಿ ಸಹಿಸದಾಯಿತು. ತನ್ನ ಸೂಳೆಯ ಕೈಯಲ್ಲಿ ವಿಷ ಹಾಕಿದ ಮೊಸರನ್ನು ಮಿಲರೇಪನಿಗೆ ಕೊಡಿಸಿದನು. ಅದು ಗೊತ್ತಿದ್ದೂ ಮಿಲರೇಪ ವಿಷ ಸ್ವೀಕರಿಸಿದನು. ಅವನಿಗೆ ತೀವ್ರ ಅಸೌಖ್ಯ ಕಾಡಿತು. ತನ್ನ ಶಿಷ್ಯರನ್ನೆಲ್ಲ ಕರೆಯಿಸಿ ಅವರಿಗೆಲ್ಲ ಅಂತಿಮ ಬೋಧನೆ ಮಾಡಿದನು.

ಅವನಿಗೆ ವಿಷ ಹಾಕಿದ್ದ ಪಂಡಿತ ಬಂದು ವ್ಯಂಗ್ಯವಾಗಿ "ನಿಮ್ಮಲ್ಲಿ ಅಷ್ಟು ಶಕ್ತಿ ಇರುವುದಾದರೆ ನಿಮ್ಮ ನೋವನ್ನು ನನಗೆ ದಾಟಿಸಿ" ಎಂದನು. ತನ್ನ ನೋವಿನ ಒಂದಂಶವನ್ನು ಪಂಡಿತನಿಗೆ ವರ್ಗಾಯಿಸಿದಾಗ ಅವನು ಕಿಟಾರನೆ ಕಿರುಚಿಕೊಂಡು ನರಳಲಾರಂಭಿಸಿದನು. ಮಿಲರೇಪ ಅವನನ್ನು ನೋವಿನಿಂದ ಮುಕ್ತಗೊಳಿಸಿ ಅದನ್ನು ಪುನಃ ಸ್ವೀಕರಿಸಿದನು. ಆ ಪಂಡಿತ ಪಶ್ಚಾತ್ತಾಪ ಪಟ್ಟು, ಅವನ ಶಿಷ್ಯನಾದನು.

ಕಿ.ಶ. 1135ರಲ್ಲಿ ಮಿಲರೇಪ ಚೂಬಾರ್‌ನಲ್ಲಿ ಸಮಾಧಿ ಸ್ಥಿತಿಯಲ್ಲಿ ದೇಹವನ್ನು ತ್ಯಜಿಸಿದನು. ಅವನ ನಿರ್ವಾಣದ ಸಂದರ್ಭದಲ್ಲಿ ಅನೇಕ ಪವಾಡಗಳಾದವು. ಅವನ ದೇಹಕ್ಕಾಗಿ ಜಗಳಾಡಿದ ನ್ಯಾನಮ್ ಮತ್ತು ಬ್ರಿನ್ ಪ್ರಾಂತ್ಯದ ಜನರಿಗೆ ಒಂದೊಂದು ದೇಹ ಸಿಕ್ಕಿತು! ಅವರು ಅವುಗಳ ಅಂತ್ಯ ಸಂಸ್ಕಾರ ನೆರವೇರಿಸಿದರು. ಚೂಬಾರ್‌ನಲ್ಲಿದ್ದ ದೇಹವನ್ನು [illegible] ಜೀವಂತ ಮಿಲರೇಪನನ್ನು ಕಂಡು ವಂದಿಸಿ ಬಂದಿದ್ದನು! ರೇಚುಂಗ್‌ನನ್ನು ಮಿಲರೇಪನ ಮೂವರು ಶಿಷ್ಯರು ದೇಹದ ಸಮೀಪಕ್ಕೆ ಬಿಡದಿದ್ದಾಗ ರೇಚುಂಗ್ ದುಃಖಿತನಾಗಿ ಒಂದು ಹಾಡು ಹಾಡಿದನು. ಅವನು ಬರುವವರೆಗೆ ಚಿತೆಗೆ ಬೆಂಕಿ ಹತ್ತಿರಲಿಲ್ಲ. ಅವನ ಸ್ವರ ಕೇಳಿದ ಕೂಡಲೇ ಬೆಂಕಿ ಭಗನೆ ಉರಿಯಿತು. ಮಿಲರೇಪ ಚಿತೆಯಿಂದಲೇ ಉಳಿದ ಶಿಷ್ಯರಿಗೆ ಬುದ್ಧಿಮಾತು ಹೇಳಿ ರೇಚುಂಗ್‌ನನ್ನು [illegible] ಬೆಳಗಿನ ಜಾವ ರೇಚುಂಗ್‌ಗೆ ಅಕಸ್ಮಾತ್ ಎಚ್ಚರವಾಯಿತು. ಅವನು ಚಿತೆಯತ್ತ ನೋಡಿದಾಗ ಐವರು ಪ್ರಮುಖ ಡಾಕಿನಿಯರು ಮಿಲರೇಪನ ಚಿತಾಭಸ್ಮ, ಅಸ್ಥಿಗಳನ್ನು ಆರಿಸಿಕೊಂಡೊಯ್ಯುತ್ತಿರುವುದನ್ನು ಕಂಡನು. ಶಿಷ್ಯರಿಗೆ ಗುರುವಿನ ಅಸ್ಥಿಗಳು ಸಿಗಲೇ ಇಲ್ಲ.

ಮಿಲರೇಪನ ಅಂತಿಮ ಇಚ್ಛೆಯ ಪ್ರಕಾರ ಶಿಷ್ಯರೆಲ್ಲ ಅವನು ಹೇಳಿದ್ದ ಜಾಗವನ್ನು ಅಗೆದು ನೋಡಿದರು. ಅಲ್ಲಿ ಮಿಲರೇಪ ಧರಿಸಿದ್ದ ಒಂದು ಹತ್ತಿ ಬಟ್ಟೆಯ ತುಂಡು. ಅದರಲ್ಲಿ ಸುತ್ತಿದ ಒಂದು ಚೂರಿ ಮತ್ತು ಕಂದು ಸಕ್ಕರೆಯ ಅಚ್ಚು ಇಷ್ಟೆಲ್ಲ ಇದ್ದವು. ಒಂದು ಪತ್ರದಲ್ಲಿ ಆ ಚೂರಿಯಿಂದ ತುಂಡು ಮಾಡಿದರೆ ಆ ಬಟ್ಟೆ ಮತ್ತು ಸಕ್ಕರೆ ಮುಗಿಯುವುದೇ ಇಲ್ಲ ಎಂದು ಬರೆದಿತ್ತು. ಹಾಗೆಯೇ ಶಿಷ್ಯರು ಬಟ್ಟೆ ಮತ್ತು ಸಕ್ಕರೆಯನ್ನು ಅಸಂಖ್ಯಾತ ತುಂಡುಗಳಾಗಿ ತುಂಡರಿಸಿ [illegible] ಹಂಚಿದರು. ಶಿಷ್ಯರು ತಮ್ಮ ತಮ್ಮ ಪಾಲಿನ ಗುರುವಿನ ನೆನಪಿನ ವಸ್ತುಗಳನ್ನು ಪಡೆದುಕೊಂಡು ತಮ್ಮ ತಪಸ್ಸನ್ನು ಮುಂದುವರಿಸಲು ಹೋದರು. ರೇಚುಂಗ್ ಗಾಂಪೋಪನಿಗೆ ಅವನಿಗೆ ಸಲ್ಲಬೇಕಿದ್ದ ವಸ್ತುಗಳನ್ನು ತಲುಪಿಸಿ ಗುರುವಿನ ನಿರ್ವಾಣದ ಸುದ್ದಿಯನ್ನು ತಿಳಿಸಿದನು.

ಇದು ನಿರಂತರ ತಪಸ್ಸಿನಿಂದ ಜ್ಞಾನ ಸಂಪಾದಿಸಿದ, ಧರ್ಮಚಕ್ರವನ್ನು ಚಲನೆಗೆ ಹಚ್ಚಿದ, ಸಂಸಾರ ಚಕ್ರದಿಂದ ಬಿಡುಗಡೆ [illegible]

ಟಿಪ್ಪಣಿಗಳು:

* [illegible]

[illegible] ನಾರ ಪ[illegible]ನು. ಅವನಿಗೆ ಮಗ ಹುಟ್ಟಿದ ಸುದ್ದಿ ಕೇಳಲು ಖುಷಿಯಾದದ್ದರಿಂದ ಮಗನಿಗೆ ತೋಪ ಗಾ (ಕೇಳಲು ಖುಷಿ) ಎಂದು ಹೆಸರಿಟ್ಟನು. ಮಿಲರೇಪ ತುಂಬ ಒಳ್ಳೆಯ ಹಾಡುಗಾರನಾಗಿದ್ದುದರಿಂದಲೂ ಅವನ ಸ್ವರ ಸುಮಧುರವಾಗಿದ್ದುದರಿಂದಲೂ ಅವನನ್ನು 'ಕೇಳಲು ಖುಷಿ' [illegible]ಗಾದವರಿಗೆ. ಮಿಲ ಎನ್ನುವುದು ಕುಟುಂಬದ ಹೆಸರು. ಅವರ ಪೂರ್ವಜನೊಬ್ಬ ದೊಡ್ಡ ಮಂತ್ರವಾದಿ. ಅವನೊಮ್ಮೆ ಒಂದು ಪಿಶಾಚಿಯನ್ನು ಉಚ್ಚಾಟಿಸಲು ಹೋದಾಗ ಅದು ಬೆದರಿ 'ಅಪಾ! ಅಪಾ! ಮಿಲ! ಮಿಲ!' (ಮಿಲ=ಅಯ್ಯೋ ಮನುಷ್ಯ) ಎಂದು ಕೂಗಿದ್ದರಿಂದ ಅವನಿಗೂ ವಂಶಕ್ಕೂ ಮಿಲ ಎನ್ನುವ ಹೆಸರು ಅಂಟಿಕೊಂಡಿತು. ರೇಪ ಅಂದರೆ ಟಿಬೆಟನ್ ಭಾಷೆಯಲ್ಲಿ ಹತ್ತಿ ಬಟ್ಟೆ ಧರಿಸಿದವನು ಎಂದರ್ಥ. ಮಿಲರೇಪನೂ ಅವನ ಶಿಷ್ಯರೂ ಬಿಳಿ ಹತ್ತಿ ಬಟ್ಟೆ ಮಾತ್ರ ಧರಿಸಿಕೊಳ್ಳುತ್ತಿದ್ದರು. ಮಿಲರೇಪನನ್ನು ಜೆಟ್ಸುನ್ ಮಿಲರೇಪ ಎಂದೇ ಗೌರವದಿಂದ ಎಲ್ಲರೂ ಕರೆಯುತ್ತಿದ್ದರು. ಅವನು ಸಂನ್ಯಾಸಿಯಾದ ಮೇಲೆ ಮಾತ್ರ ಮಿಲರೇಪ ಎಂದು ಕರೆಯುತ್ತಿದ್ದರು. ಅವನು ಸಂನ್ಯಾಸಿಯಾದ ಮೇಲೆ ಮಾತ್ರ ಮಿಲರೇಪ ಎಂದು ಕರೆಯಿಸಿಕೊಳ್ಳುತ್ತಿದ್ದರೂ ಜೀವನದ ಉದ್ದಕ್ಕೂ ಅವನನ್ನು ಮಿಲರೇಪ ಎಂದೇ ಕರೆಯಲಾಗಿದೆ.

2. ಕೆಂಪು ಪಂಥ:

★ ಟಿಬೆಟಿನ ಬೌದ್ಧ ಧರ್ಮದ ಮುಖ್ಯ ಪಂಥಗಳು [illegible] ಪಂಥ. ತಂತ್ರ ಧರ್ಮವನ್ನು ಅನುಸರಿಸುವ ಇವರ ಧರ್ಮಗುರು ದಲಾಯಿ [illegible] 'ಮಹಾಮುದ್ರ' ಪಂಥದವರನ್ನು ಕರ್‌ಗ್ಯುಟ ಸಂಪ್ರದಾಯದವರೆನ್ನುತ್ತಾರೆ. ಇವರು ಗುರು ಪರಂಪರೆಯನ್ನು ನೆಚ್ಚಿಕೊಂಡವರು. ಮಿಲರೇಪ ಈ ಪಂಥಕ್ಕೆ ಸೇರಿದವನು. 'ಆದಿಯೋಗ' ಪಂಥದವರು ಕೆಂಪು ಟೋಪಿಯವರು. ಅವರನ್ನು ನಿಂಗ್‌ಮಾಪರೆನ್ನುತ್ತಾರೆ. ಹಳದಿ ಮತ್ತು ಕೆಂಪು ಪಂಥದವರಿಗೆ ತೀವ್ರ ಭಿನ್ನಾಭಿಪ್ರಾಯವಿದೆ. ಆದರೆ ಕರ್‌ಗ್ಯುರು ಯಾರೊಡನೆಯೂ ದ್ವೇಷ ಕಟ್ಟಿ[illegible]

3. ಗುರು [illegible]

★ ಕರ್‌ಗ್ಯು [illegible] ಗುರುಗಳು [illegible] ಮಿಲರೇಪ. ಇವರಿಗಿಂತಲೂ ಹಿಂದಿನ ಅಲೌಕಿಕ ಬುದ್ಧ ದೋರ್ಜೆ ಚಾಂಗ್ (ವಜ್ರಧರ) ಮತ್ತು ಮಿಲರೇಪನ ಶಿಷ್ಯ ಗಾಂಪ್ರೋಪನ [illegible] ಕರ್‌ಗ್ಯುಟ ಪರಂಪರೆಯಲ್ಲಿ ಆರು ಮಂದಿ ಶ್ರೇಷ್ಠ ಗುರುಗಳು. ಗಾಂಪ್ರೋಪನ ನಂತರವೂ ಈ ಗುರು ಪರಂಪರೆ ಮುಂದುವರಿಯುತ್ತಾ ಬಂದಿದೆ.

ಗುರು ನರೋಪ ಭಾರತೀಯ ಯೋಗಿ. ಅವನ ಶಿಷ್ಯ ಮಾರ್ಪ 'ಅನುವಾದಕ ಮಾರ್ಪ' ಎಂದೇ ಪ್ರಸಿದ್ಧ. ಅವನು ಭಾರತದಲ್ಲಿ ಸಂಚರಿಸಿ ತಂತ್ರ ಯೋಗದಂಥ ಪುಸ್ತಕಗಳನ್ನು ಸಂಗ್ರಹಿಸಿ ಟಿಬೆಟನ್ ಭಾಷೆಗೆ ಅನುವಾದಿಸಿದ್ದರಿಂದ ಈ ಹೆಸರು ಬಂತು. ಅವನು ಸಾಂಸಾರಿಕ ಜೀವನದಲ್ಲಿದ್ದುಕೊಂಡೇ ಆಧ್ಯಾತ್ಮಿಕ ಸಾಧನೆ ಮಾಡಿದವನು. (ಮಿಲರೇಪ ಮಾತ್ರ ಕಟ್ಟಾ ಬ್ರಹ್ಮಚಾರಿ). ಮಾರ್ಪನೇ ಕರ್‌ಗ್ಯುಟ ಸಂಪ್ರದಾಯದ ಪ್ರವರ್ತಕ. ಅವನ ಗುರು ಮತ್ತು ಗುರುವಿನ ಗುರು ಸಹಜವಾಗಿ ಅವರ ಪ್ರಥಮ ಇಬ್ಬರು ಗುರುಗಳೆಂದು ನಂತರ ಪರಿಗಣಿಸಲ್ಪಟ್ಟರು.

★**4. ಜೆಟ್ಸುನ್ ಕಃಬುಮಿನ** ಈ ಭಾಗ ತುಂಬ ಸಾಂಕೇತಿಕವಾಗಿಯೂ ಇದೆ. ಮಿಲರೇಪ ತಾನು 'ಹಿಮದ ಪರ್ವತದ ತುದಿಯಿಂದ ಬುಡದವರೆಗೆ [illegible] ಸೂಕ್ಷ್ಮ ಶರೀರದಲ್ಲಿ ಸಂಚರಿಸಬಲ್ಲವನಾದೆನೆಂದು; ಕನಸಿನಲ್ಲಿ ತನ್ನನ್ನು ನೂರಾರು ವಸ್ತುಗಳಾಗಿಸಿಕೊಂಡು ಏಕ ಕಾಲದಲ್ಲಿ ಅನೇಕ ಕ್ರಿಯೆಗಳನ್ನು ಮಾಡಬಲ್ಲವನಾಗಿದ್ದೆನೆಂದು; ತನ್ನ ದೇಹವನ್ನು ಭಗ್ಗನೆ ಉರಿಯುವ ಬೆಂಕಿಯನ್ನಾಗಿ ಶಾಂತವಾಗಿ ಹರಿಯುವ ನೀರನ್ನಾಗಿ ರೂಪಾಂತರಿಸಬಲ್ಲವನಾದೆನೆಂದು ಹೇಳುತ್ತಾನೆ. [illegible] ಇವಾನ್ಸ್ ವೆಂಟ್ಸ್ ಇವೆಲ್ಲ ಕುಂಡಲಿನೀ [illegible] 'ಜ್ಞಾನ ಚಕ್ರ' (ಭ್ರೂಮಧ್ಯ) ಇರುವುದೆಂದು [illegible] ಬರೆಯುತ್ತಾರೆ.

[illegible]

ಇದುವೇ ಜೀವ ಇದು ಜೀವನ

ಎಸ್.ಎಸ್.ಎಲ್.ಸಿ. ಪಿ.ಯು.ಸಿ. ಪರೀಕ್ಷೆಗಳ ಫಲಿತಾಂಶ ಆಗಷ್ಟೆ ಹೊರಬಿದ್ದಿತ್ತು. ಕಾಲೇಜುಗಳಲ್ಲಿ ಪ್ರವೇಶಕ್ಕಾಗಿ ಪರದಾಟ. ಪ್ರಿನ್ಸಿಪಾಲರ ಕೊಠಡಿಯ ಮುಂದೆ ಒಂದು ದೊಡ್ಡ ಸಾಲೇ ನಿಂತಿತ್ತು. ಕಳೆದ ವರ್ಷ ಈ ಕಾಲೇಜಿನ ಮಟ್ಟಿಗೆ ನಡೆದ ಹಲವಾರು ಮುಷ್ಕರಗಳಿಂದಾಗಿ ಪ್ರಿನ್ಸಿಪಾಲರು ಬೇಸತ್ತಿದ್ದರು. ಇದಕ್ಕೆ ಮುಖ್ಯ ಕಾರಣನಾದ ಶ್ರೀನಿವಾಸನಿಗಂತೂ ಪುನಃ ಪ್ರವೇಶ ಕೊಡಬಾರದೆಂದೇ ತೀರ್ಮಾನಿಸಿದರು. ದುರಾದೃಷ್ಟಕ್ಕೆ ಅವನು ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಬೇಕೆ? ಈ ಪರಿಸ್ಥಿತಿಯಲ್ಲಿ ಅವನಿಗೆ ಪ್ರವೇಶ ಕೊಡದೆ ಇರಲು ಕಾರಣವೇ ಇಲ್ಲಗದೆ ಪ್ರಿನ್ಸಿಪಾಲರು ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡರು. ಕೊಡದೇ ಹೋದರೆ ಅವನ [illegible]ಪಾಲಕರಿಂದ ದೊಡ್ಡ ಮುಷ್ಕರವಾಗುವುದು ಖಚಿತವಾಗಿತ್ತು. ಕೊನೆಗೆ ಅವನ ತಂದೆ [illegible] ಅವನಿಗೆ [illegible] [illegible]. [illegible] ಅವನು [illegible] ಹಾಗೇ [illegible] [illegible] ಮಾಡ್ತಿದೆ. ಜೈಲಿಗೆ [illegible]ಬೇಕಾಗುತ್ತದೆ ಹುಷಾರ್" ಆ ಮಾತು ತನಗೆ [illegible] "ಅವನೇನಂತೆ [illegible] [illegible] ಮುಂದೇನು [illegible] [illegible] ಅವನು [illegible] [illegible] ಮಾರನೆಯ ದಿನ ಅವ ಅವರ [illegible] ಪಾಲರ ಮುಂದೆ ಹಾಜರಾದ [illegible] ಮಾಡ್ತೀರಿ! "[illegible]

ಮುಚ್ಚಿಕೊಂಡಿತ್ತು. ತೆಂಗಿನ ಕಾಯಿ ವ್ಯಾಪಾರ ಮಾಡ್ತಿದ್ದೀವಿ". 'ಸರಿ ನೋಡಿ ನಿಮ್ಮ ಮಗ, ಕೀರ್ತಿ ತಾನು ಕೆಡೋದಲ್ಲದೆ ವನೇನೆಲ್ಲ ಕೆಡಿಸ್ತು ಅನ್ನೊ ಹಾಗೆ ಕಾಲೇಜಿನ ವಾತಾವರಣಾನೇ ಹಾಳು ಮಾಡ್ತಿದ್ದಾನೆ. ನೀವು ಮನೇಲಿರೋರು. ನಿಮಗೆ ಹೇಗೆ ತಾನೆ ಅವನ ವ್ಯವಹಾರ ಅರ್ಥವಾದೀತು? ಅವನಿಗೆ ಸೀಟ್ ಕೊಡೋದು ಸಾಧ್ಯವಿಲ್ಲ.." "ಹಿರೋರು ದೊಡ್ಡೋರು ನೀವು ಕ್ಷಮಿಸಬೇಕು. ನೀವು ಅವನಿಗೆ ಜೈಲಿಗೆ ಹೋಗಬೇಕಾಗ್ತದೆ ಎಂದ್ರಂತೆ ಅವನಿಗೆ ಸೀಟು ಕೊಡದೆ ಹೋದರೆ ನೀವು ಕೋರ್ಟಿಗೆ ಹೋಗಬೇಕಾಗುತ್ತದೆ. ಅವನು ಗಲಾಟೆ ಮಾಡ್ತಾನೆ ಅನ್ನೋದಕ್ಕೆ ಏನು ಇದೆ [illegible] ತಾವು ದಾಖಲೆ?" ಎಂದೆಂದು ಅವರ ಉತ್ತರಕ್ಕೂ ಕಾಯದೆ ಹೊರಟು ಹೋದರು.

[illegible]

[illegible] [illegible] ವಿದ್ಯಾರ್ಥಿಗಳು ಅಲ್ಲಿ ಕಾಯುತ್ತಾಗ [illegible] [illegible] [illegible] ವಾಗುವುದೇ ಬೇಡ ಒಂದು ಬೇಗ ಬೆಂಗಳೂರಿನ ಒಂದು ಯಾತ್ರಾ ತಂಡ ಅಲ್ಲಿಗೆ ಆಗಮಿಸಿತು [illegible] [illegible] [illegible] [illegible] ಮತ್ತು ಹಿರಿಯ ಮಹಿಳೆಯರು ಇದ್ದರು. ಅವರು [illegible] ಅಸಕ್ತಿಯಿಂದ [illegible] ಸ್ನಾಪ್‌ಶಾಟ್' ಕ್ಲಿಕ್ ಮಾಡುತ್ತಿದ್ದರು [illegible]

ಹುಡುಗರಿಗೆ ತಮಾಷೆ ಮಾಡೋಣ ಅನಿಸಿತೇನೋ? ತುಳು, ಕನ್ನಡದಲ್ಲಿ ಏನೇನೋ— ಹೇಳಿಕೊಂಡು ನಗಲು ಆರಂಭಿಸಿದರು. ಆ ಹೆಣ್ಣು ಮಕ್ಕಳ ಎದುರು ಕೊಂಚ ಮಿತಿಮೀರಿ ವರ್ತಿಸಿದರು. ಅವರಲ್ಲಿ ಒಬ್ಬ ನಮ್ಮ ಫೋಟೋ ತೆಗೆಯುತ್ತೀಯಾ? ಎಂದು ತುಳುವಿನಲ್ಲಿ ಕೇಳಿದ "ನೀನು ಆ ಹುಡುಗಿ ಜೊತೆ ನಿಲ್ಲು- ನಾನು ಹುಡುಗಿಯರ ನಡುವೆ ನಿಲ್ಲುತ್ತೇನೆ" ಎಂದ ಇನ್ನೊಬ್ಬನು. ಹೀಗೆ ತಮಾಷೆ ಮುಂದುವರಿಯುತ್ತ ಸಾಗಿತು. ಕೊನೆಗೆ ಒಬ್ಬ ಫೋಟೋ ಪ್ಲೀಸ್ ಅಂದ ಕೂಡಲೇ ಆಕೆ 'ಯೆಸ್' ಅಂದಳು. ಹುಡುಗರೆಲ್ಲ ಖುಷಿಯಾಗಿ ನಿಂತರು. ಫೋಟೋ ತೆಗೆದ ಬಳಿಕ ಆಕೆ "ಫೋಟೋ ಕಳಿಸಲು ನಿಮ್ಮ ವಿಳಾಸ ಕೊಡಿ" ಎಂದಳು ತಡವರಿಸುತ್ತ!. ಹುಡುಗರೆಲ್ಲ ಮೂಕವಿಸ್ಮಿತರಾದರು. "ನ...ನಂ..ಗೆ ಕನ್ನಡ ಬರು..ತ್ತದೆಯೆಂದು ಆಶ್ಚರ್ಯ? ನಾನು... ಒಂದು ರಿಸರ್ಚಿಗಾಗಿ ಬೆಂಗಳೂರಿನಲ್ಲಿ ಎರಡೂ ವರ್ಷ ಇದ್ದೆ. ಹಾಗೆ ಸಲುಪ ಸಲುಪ ಕನ್ನ..ಡ ಕಲಿತೆ ತಪ್ಪು ಆದರೆ ಕ್ಷಮಿಸಿರಿ" ಎಂದಳು. ಹಾಗೆ ತನ್ನ ಇಬ್ಬರು ಮಕ್ಕಳ ಪರಿಚಯವನ್ನು ಮಾಡಿಕೊಟ್ಟಳು.

ನಮ್ಮ ಹುಡುಗರು ಕ್ಷಮೆಯಾಚಿಸಲು ಮುಂದೆ ಬಂದಾಗ "ಇಷ್ಟು ಸಣ್ಣ ವಿಷಯಕ್ಕೆ ಸಾರಿಯೇ" ಎಂದಳು. ಕೊನೆಗೆ ಬೀಳ್ಕೊಡುವಾಗ" ನೀವು ಚೆನ್ನಾಗಿ ಓದಿ, ಸಮಯ ಹಾಳು ಮಾಡಬೇಡಿ. ನಿಮ್ಮ ಎಕ್ಸಾಮ್‌ಗೆ ಬೆಸ್ಟ್ ಆಫ್ ಲಕ್" ಎಂದು ಶುಭ ಹಾರೈಸಿದಳು. ನಾವೆಲ್ಲ ನೋಡುತ್ತಲೇ ನಿಂತೆವು.

ಇರ್ಶಾದ್ ಮೂಡುಬಿದ್ರೆ.

ಇದು ನಡೆದು ಎರಡು ವರ್ಷಗಳು ಕಳೆದಿವೆಯಾದರೂ ನನ್ನ ನೆನಪಿನಲ್ಲಿ ಮಾತ್ರ ತೀರ ಹಸಿರಾಗಿಯೇ ಉಳಿದಿದೆ.

ಅದೊಂದು ದಿನ ನಾಯಿಯಿಂದ ತಪ್ಪಿಸಿಕೊಳ್ಳಲೋಸುಗ ಮಂಗವೊಂದು ಸರಸರನೇ ರಸ್ತೆಯಲ್ಲಿರುವ ವಿದ್ಯುತ್ ಕಂಬವನ್ನು ಏರಿತು. ಸರ್ರನೆ ವಿದ್ಯುತ್ ತಂತಿಗೆ ಜೋತು ಬಿದ್ದೊಡನೆಯೇ ಆಘಾತವಾಗಿ ಕಿರುಚುತ್ತಾ ಕೆಳಗೆ ಬಿತ್ತು. ಆದರೆ ಸುದೈವದಿಂದ ಅದಕ್ಕೆ ಸ್ಮೃತಿ ತಪ್ಪಿತೇ ಹೊರತು ಅದಿನ್ನೂ ಸತ್ತಿರಲಿಲ್ಲ. ನೆರೆದವರೆಲ್ಲ ಬಾಯ್ಮಾತಿನಿಂದ ಸಹಾನುಭೂತಿ ತೋರಿಸುವವರೇ ಹೊರತು ಅದರ ನೆರವಿಗೆ ಧಾವಿಸಬೇಕೆಂದು ಒಬ್ಬರಿಗೂ (ನನ್ನನ್ನೊಳಗೊಂಡು) ಅನಿಸಿರಲಿಕ್ಕಿಲ್ಲ. ಆದರೆ ರುದ್ರಪ್ಪ ಮಾತ್ರ ಸಮೀಪದ ತನ್ನ ಮನೆಗೋಡಿ ಒಂದು ತಂಬಿಗೆ ನೀರು ತಂದು ಆ ನಿಶ್ಚೇಷ್ಟ ಮಂಗನ ತಲೆಗೆ ಚೆನ್ನಾಗಿ ನೀರುಜ್ಜಿದನಲ್ಲದೆ ಅದನ್ನು ತೊಡೆಯ ಮೇಲಿರಿಸಿಕೊಂಡು ತುಟಿಗಳನ್ನು ಬಿಡಿಸಿ ಬಾಯಿಗೆ ಸ್ವಲ್ಪ ನೀರು ಹಾಕಿ ಕಾತರತೆಯಿಂದ ನೋಡುತ್ತ ಕುಳಿತನು. ತುಸು ಹೊತ್ತಿನಲ್ಲಿಯೇ ಅದಕ್ಕೆ ಪ್ರಜ್ಞೆ ಮರುಕಳಿಸಿದಾಗ ರುದ್ರಪ್ಪ ನಯವಾಗಿ ಅದರ ಮೈ ತಡವುತ್ತ ಕುಳಿತಿದ್ದನು. ಅಗಲೇ ಮಬ್ಬುಗತ್ತಲಾಗತೊಡಗಿತ್ತು. ಸುತ್ತಲೂ ನೆರೆದ ಜನಗಳನ್ನು ನೋಡಿ ಭಯಗೊಂಡ ಮಂಗ ರುದ್ರಪ್ಪನನ್ನು ಗಟ್ಟಿಯಾಗಿ ಅಪ್ಪಿಕೊಂಡು ಬಿಟ್ಟಿತು. ಮರು ಮಾತಿಲ್ಲದೆ ಆತ ಅದನ್ನೆತ್ತಿಕೊಂಡು ಮನೆಯ ಕಡೆಗೆ ನಡೆದ.

ಮರುದಿನ ಬೆಳಿಗ್ಗೆ ಆ ಮಂಗದ ಅವಸ್ಥೆ ಏನಾಗಿದೆಯೆಂದು ನೋಡಲೋಸುಗ ನಾನೂ ನನ್ನ ಗೆಳೆಯರೂ ರುದ್ರಪ್ಪನ ಮನೆಗೆ ಹೋದೆವು. ಹಿಂದಿನ ರಾತ್ರಿಯಿಡೀ ತಾನು ಮಲಗಿದಾಗಲೂ ಮಂಗ ಮಾತ್ರ ತನ್ನ ಹಾಸಿಗೆಯ ಬಳಿಯೇ ಕುಳಿತಿತ್ತೆಂದು ಆತ ಹೇಳಿದ. ಅದಕ್ಕಷ್ಟು ಆಹಾರವಿತ್ತ ನಂತರ ಅದನ್ನು ಮಂಗಗಳ ಗುಂಪಿಗೆ ಹಿಂತಿರುಗಿಸಬೇಕೆಂದುಕೊಂಡು ರುದ್ರಪ್ಪ ಅದನ್ನು ಊರ ಹೊರಗಿನ ಮಾವಿನ ತೋಪಿನೆಡೆಗೆ ನಡೆದ. ಅಲ್ಲಿ ಹತ್ತಾರು ಮಂಗಗಳು ಕುಳಿತಿದ್ದುವಾದರೂ ಈ ಮಂಗ ಮಾತ್ರ ಅವುಗಳ ಬಳಿ ಹೋಗಲು ಸಿದ್ಧವಾಗಿರಲಿಲ್ಲ. ಅದು ಮತ್ತೆ ಮತ್ತೆ ಬಂದು ರುದ್ರಪ್ಪನ ಮೈಗೆ ಅಂಟಿಕೊಂಡೇ ನಿಲತೊಡಗಿತು. ಕೊನೆಗೆ ಏನೋ ಯೋಚಿಸಿ ರುದ್ರಪ್ಪ ಆ ಮಂಗಗಳು ಕುಳಿತಿದ್ದ ಗಿಡವನ್ನು ಏರತೊಡಗಿದ. ಆ ಮಂಗವೂ ಏರತೊಡಗಿತು. ಅಂತೂ ಬಹಳ ಹೊತ್ತಿನ ನಂತರ ಆ ಮಂಗನ ಕಣ್ಣು ತಪ್ಪಿಸಿ ಮರಳಿ ಮನೆಗೆ ಮರಳಬೇಕಾದರೆ ರುದ್ರಪ್ಪ ತುಂಬ ಕಷ್ಟಪಡಬೇಕಾಯಿತಂತೆ. ಕಣ್ಮರೆಯಾಗುವವರೆಗೆ ಅದನು ಗಿಡದಲ್ಲೇ [illegible] [illegible].

ಜಗದೀಶ ಮಠಪತಿ



ಸಿಡ್ನಿ ಪಾಯ್ಟಿರ್

● ಎಸ್. ಪಂಕಜ

ಈತ ಹುಟ್ಟಿದ ಕೂಡಲೇ ಸಂಭ್ರಮಿಸುವ ಬದಲು ತಾಯಿ ಸಂಕಟಪಟ್ಟರೆ. ತಂದೆ ಪಾದರಕ್ಷೆಗಳ ಪೆಟ್ಟಿಗೆಯಂಥ ಶವಪೆಟ್ಟಿಗೆಯೊಂದನ್ನು ತಂದಿಟ್ಟುಕೊಂಡನಂತೆ. ನಾಲ್ಕು ಗಂಡು. ಎರಡು ಹೆಣ್ಣುಮಕ್ಕಳ ನಂತರ ಏಳನೇ ತಿಂಗಳಲ್ಲಿಯೇ ಹುಟ್ಟಿದ ಈ ರೋಗಗ್ರಸ್ತ ಶಿಶು "ದೊಡ್ಡವನಾಗಿ ರಾಜಸಮಾನ ಜೀವನ ನಡೆಸುತ್ತಾನೆ"ಂದು ಒಬ್ಬಳು ಕಣಿ ನುಡಿದಾಗಲೇ ಅವರಿಬ್ಬರಿಗೂ ಸಮಾಧಾನ.

ಬಹಾಮ್ಸ್‌ನ 'ಬೆಕ್ಕಿನ ದ್ವೀಪ'ದ ಅವಿದ್ಯಾವಂತ ಬಡರೈತನ ಆರನೆಯ ಮಗ ರಾಜಸಮಾನ ಜೀವನ ನಡೆಸುವುದೇ? ಟೊಮ್ಯಾಟೋ ಹಣ್ಣುಗಳನ್ನು ಬೆಳೆದು ಮಾರುತ್ತಿದ್ದ ತಂದೆ. ಮಿಯಾಮಿಯ ಪೇಟೆಗೆ [illegible] ವ್ಯಾಪಾರ ಮಾಡುತ್ತಿದ್ದ ತಾಯಿ [illegible] ಹದಿನೈದು ವರ್ಷಗಳವರೆಗೆ ಮುದ್ದಿನ ಮಗನಾಗಿ ಬೆಳೆದ ಸಿಡ್ನಿ, ಅಸಂಖ್ಯಾತ ಬಾವಲಿಗಳು ವಾಸಿಸುತ್ತಿದ್ದ [illegible]

ಹೊಕ್ಕು ಅವುಗಳ ಹಕ್ಕೆ (ಮಲ) ಹೆಕ್ಕಿ ತಂದು ತನ್ನ ಹೊಲಕ್ಕೆ ಗೊಬ್ಬರ ಹಾಕುತ್ತಿದ್ದ ತಂದೆಯೊಂದಿಗೆ ಆ ಕಟುವಾಸನೆ ಕುಡಿದು ಬರುತ್ತಿದ್ದ ಈ ಕರಿ ಹುಡುಗನಿಗೆ ಹೊಂಗನಸುಗಳು ಶುರುವಾಗಿದ್ದ ಕಾಲವದು.

ಅಮೇರಿಕದ ಪ್ರಜೆಯಾಗಿದ್ದ ಸಿಡ್ನೆ ಒಳ್ಳೆಯ ಬದುಕನ್ನರಸಿ ಹೊರಟಾಗ ಆತನಿಗೆದುರಾದ ಅಡ್ಡಿ ಆತಂಕಗಳು ನೂರಾರು. ದೋಣಿಯಲ್ಲಿ ಊರಿಂದ ಹೊರಟು, ಎಂಟು ವರ್ಷಗಳ ಕಾಲ ನಾಪತ್ತೆಯಾಗಿದ್ದ ಸಿಡ್ನೆ ತನ್ನ ಇಪ್ಪತ್ತಮೂರರ ಪ್ರಾಯದಲ್ಲಿ ಹುಟ್ಟೂರಿಗೆ ಬಂದಿಳಿದದು ವಿಮಾನದಲ್ಲಿ! ಊರಿಂದ ಹೊರಡುವಾಗ ಇನ್ನೂ ಮೀಸೆ ಮೂಡದಿದ್ದ, ಧ್ವನಿಭಂಗವಾಗದಿದ್ದ ಈತ ಈಗ ಅಂದವಾದ ಮೀಸೆಯ ಗಡಸು ಧ್ವನಿಯ ಕಟ್ಟು ಮಸ್ತಾದ ಗಂಡಸು. ಯಾರಿಗೆ ತಾನೆ ಈತನ ಗುರುತು ಸಿಕ್ಕೀತು? ತಾಯಿಗೂ ಅದೇ ಪೇಚು. ತಂದೆಯದೂ ಅದೇ ಸ್ಥಿತಿ.

ಅದಾಗಲೇ ಕೆಲವು ಚಲನಚಿತ್ರಗಳಲ್ಲಿ ನಟಿಸಿ ಹೆಸರು ಪಡೆದ ನಟ, ಸಿಡ್ನೆ ಪಾಯ್ಟರ್ ತಮ್ಮೂರವನೇ-ಇಂಥ ಹೋಟಲಿನಲ್ಲಿಳಿದಿದ್ದಾನೆ ಎಂದು ಸುದ್ದಿ ಹಬ್ಬುವುದೇ ತಡ, ಆತನ ಕೋಣೆಯ ಹೊರಗೆ ಸಾವಿರಾರು ಜನರ ಗುಂಪುಗೊಂದಲ. ಸಿಡ್ನೆಯ ಬಾಲ್ಯಸ್ನೇಹಿತರು, ಅಕ್ಕರೆಯ ಅಕ್ಕಂದಿರು, ಓಣಿಯ ಹಿರಿಯರು ಜತೆಗೆ ಅವರ ಮಕ್ಕಳು-ಮೊಮ್ಮಕ್ಕಳು. ಸಿಡ್ನೆ ಎಲ್ಲರೊಂದಿಗೂ ನಡೆದಾಡಿದ, ನಲಿದಾಡಿದ. ನಾಲ್ಕು ದಿನ ತನ್ನೂರಲ್ಲಿದ್ದು ತಾನು ಗಳಿಸಿದ್ದರಲ್ಲಿ ಮುಕ್ಕಾಲು ಪಾಲು ಹಣವನ್ನು ತಾಯಿ-ತಂದೆಯರ ಕೈಗೆ ಹಾಕಿ ಮತ್ತೊಂದು ಚಿತ್ರದ ಶೂಟಿಂಗಿಗಾಗಿ ಆಫ್ರಿಕಕ್ಕೆ ಹೊರಟು ನಿಂತ. "ಅದು ನಮ್ಮ ಪೂರ್ವಜರ ನಾಡು ಸಿಡ್ನೆ. ನಾವು ನೋಡದ ಜಾಗಕ್ಕೆ ನೀನು ಹೊರಟಿದ್ದೀಯಾ. ನಮಗೆ ಇದಕ್ಕಿಂತ ಹೆಚ್ಚಿನ ಸಂತಸ ಮತ್ತಾವುದಿದೆ?" ಎಂದು ತಾಯಿ-ತಂದೆಯರಿಬ್ಬರೂ ಮಗನನ್ನು ಆಶೀರ್ವದಿಸಿ ಕಳಿಸಿದರು.

ಈವರೆಗೆ ನಲವತ್ತೆರಡು ಹಾಲಿವುಡ್ ಚಿತ್ರಗಳಲ್ಲಿ ನಟಿಸಿರುವ ಪಾಯ್ಟರ್‌ಗೆ 'ಡೆಡ್ಲಿ ಪರ್ಸೂಟ್' (ತೀರ ಇತ್ತೀಚಿನ ಚಿತ್ರ) ತುಂಬ ಸವಾಲೊಡ್ಡಿತಂತೆ. ಯಾಕೆಂದರೆ ಈವರೆಗೂ [illegible] ವಹಿಸಿರಲಿಲ್ಲ. ಅರವತ್ತೊಂದರ ವಯಸ್ಸಿನಲ್ಲಿ. ಈ ಚಿತ್ರದಲ್ಲಿ ರೋಮಾಂಚಗೊಳಿಸುವ ಹೊಡೆದಾಟದ ಸನ್ನಿವೇಶಗಳಲ್ಲಿ ಭಾಗವಹಿಸಿ ಅಪಾರ ಪ್ರೇಕ್ಷಕರ ಮನಗೆದ್ದ ಪಾಯ್ಟರ್.

ಹಾಲಿವುಡ್ ಆತನನ್ನು 'ಕನಸು ಕಾಣುವ ವಯಸ್ಸಿನಲ್ಲೇ' ಆಕರ್ಷಿಸಿತು. ಆದರೆ ಪ್ರತಿಭೆಯಾಗಲಿ, ಪರಂಪರೆಯಾಗಲಿ ಅವನು ನಟನಾಗಲು ಅನುಕೂಲಕರವಾಗಿರಲಿಲ್ಲ. ಕೌಬಾಯ್ ಚಿತ್ರಗಳನ್ನೆಲ್ಲ ತನ್ನೂರಿನ ಟೆಂಟ್ ಸಿನಿಮಾಗಳಲ್ಲಿ ಕದ್ದು ನೋಡುತ್ತಿದ್ದ. ಹಾಲಿವುಡ್ಡೆಂದರೆ ಕೌಬಾಯ್‌ಗಳಿರುವ ತಾಣ. ತಾನೂ ಅವರಂತಾಗಬೇಕು ಎಂಬುದಷ್ಟೇ ಆತ ಹಾಲಿವುಡ್ಡ್‌ಗೆ ಹೋಗಬೇಕೆಂದು ಬಯಸಿದುದರ ಹಿನ್ನೆಲೆ. ಹೀಗೆ ಒಮ್ಮೆ ಕದ್ದು ಸಿನಿಮಾ ನೋಡುತ್ತಿದ್ದಾಗ ಸಿಕ್ಕುಬಿದ್ದ ಈ ಕರಿ ಹುಡುಗನನ್ನು ಚಿತ್ರಮಂದಿರದವರು ಹಿಡಿದು ಪೊಲೀಸಿನವರಿಗೊಪ್ಪಿಸಿದ್ದರು.
ಆದರೆ-ಬಡವನಾದರೂ-ತಪ್ಪು ಮಾಡದ ಹಾಗೆ ಎಚ್ಚರದಿಂದ ನಡೆದುಕೊಳ್ಳುವ ಪ್ರಾಮಾಣಿಕ ತಂದೆಗೆ ಈ ಸುದ್ದಿ ಗೊತ್ತಾದರೆ ಎಂಬುದಷ್ಟೇ ಆಗ ಪಾಯ್ಟರ್‌ನಿಗಿದ್ದ ಭಯ. ತಂದೆ "ಇನ್ನೊಮ್ಮೆ ಸಿನಿಮಾದ ಸಹವಾಸಕ್ಕೆ ಹೋಗಬೇಡ" ಎಂದು ಎಚ್ಚರಿಸಿ ಕ್ಷಮಿಸಿಬಿಟ್ಟಿದ್ದನಂತೆ.

ಮನೆಯಿಂದ ಓಡಿಹೋಗಿ ಬ್ರಾಡ್‌ವೇಯ ಬಳಿ ಹೋಟಲುಗಳಲ್ಲಿ ಡಿಶ್‌ಗಳನ್ನು ತೊಳೆಯುತ್ತಿದ್ದ ಸಿಡ್ನೆಗೆ ಒಮ್ಮೆ ಆ ಕೆಲಸವೂ ತಪ್ಪಿಹೋಗಿ ಅಲೆಯುತ್ತಿದ್ದಾಗ ಪತ್ರಿಕೆಯೊಂದರ ಜಾಹೀರಾತು ಕಣ್ಣಿಗೆ ಬಿತ್ತು. "ಸಿನಿಮಾದಲ್ಲಿ ಸೇರಲು ಅವಕಾಶ" ಹೀಗೆ ಬಂದದ್ದು ನೋಡಿ ಆಸೆಯಿಂದ ಆ ವಿಳಾಸಕ್ಕೆ ಹೋದವನಿಗೆ ಸಿಕ್ಕಿದ್ದು [illegible] ಅವಮಾನ. "ನಿನಗೆ ಅಭಿನಯದ ಗಂಧವೇ ಇಲ್ಲ"ವೆಂಬ ವ್ಯಂಗ್ಯ ನುಡಿಗಳು ಬೇರೆ. ಆದರೆ ಅದೇ ಹುಡುಗ ಛಲಬಿಡದ ತ್ರಿವಿಕ್ರಮನಂತಾಗಿ ಅಭಿನಯವೆಂದರೇನೆಂಬುದನ್ನು ತನ್ನನ್ನು ಅವಮಾನಿಸಿದವರಿಗೆ ಹೇಳಿಕೊಟ್ಟ. 'ಗೆಸ್, ಹೂ ಈಸ್ ಕಮಿಂಗ್ ಟು ಡಿನರ್?' 'ಟು ಸರ್ ವಿತ್ ಲವ್' 'ಲಿಲ್ಲೀಸ್ ಆಫ್ ದಿ ಫೀಲ್ಡ್' 'ಕ್ರೈ, ದ ಬಿಲವೆಡ್ ಕಂಟ್ರಿ' 'ಗೋ [illegible] ಆಫ್ ನೈಟ್' ಮುಂತಾದುವು ಸಿಡ್ನೆ

ಆತ್ಮಮೋಘ ಅಭಿನಯ ನೀಡಿದ ಚಿತ್ರಗಳು. ಆಸ್ಕರ್ ಸೇರಿದಂತಹ ಹಲವಾರು ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡ ಸಿಡ್ನೆ ಬಿಳಿಯ ಪ್ರೇಕ್ಷಕರಿಗೆ ಅಚ್ಚುಮೆಚ್ಚಿನ ನಟನಾದರೂ ಅವರು ತನ್ನನ್ನು "ಬ್ಲ್ಯಾಕ್ ಆ್ಯಕ್ಟರ್" ಎಂದು ಕರೆಯುವುದನ್ನು ಎಂದಿಗೂ ಆತ ಇಷ್ಟಪಡುವುದಿಲ್ಲ. ಇಲ್ಲೂ ವರ್ಣಭೇದ ನೀತಿಯೆ? ತಮ್ಮ ಚಿತ್ರಗಳ ಯಶಸ್ಸಿಗೆ ಕರಿಯ ನಟರನ್ನು ಬಳಸಿಕೊಳ್ಳುವ ನಿರ್ದೇಶಕರು ಮಾತ್ರ ಎಂದಿಗೂ ಈ ಭೇದಭಾವವನ್ನು ಮಾಡುವುದಿಲ್ಲವೆಂದಾತ ಹೇಳುತ್ತಾನಾದರೂ ನಟನಟಿಯರು, ಕೆಲ ತಂತ್ರಜ್ಞರು ಮಾತ್ರ ಹೀಗೆ ವರ್ತಿಸುವುದು ಸಿಡ್ನೆಗೆ ಸಿಟ್ಟು ತರಿಸುತ್ತದೆ.

ಈತನ ರಾಜಸಮಾನ ಜೀವನವನ್ನು ತಂದೆ ನೋಡಲಿಲ್ಲವಾದರೂ ತಾಯಿ ಕೆಲಕಾಲ ಮಗನ ಮನೆಯಲ್ಲಿ ಬಂದು ಇದ್ದು ಮರಳಿ ಹೋಗಿ ಗಂಡನಿಗೆ ಸವಿಸ್ತಾರ ವರ್ಣಿಸಿದ್ದಳು. ಆದರೆ ತನಗೆ ಅಕಾಡೆಮಿ ವಾರ್ಡ್‌ಗಳು ಬರುವ ವೇಳೆಗೆ ತಂದೆ-ತಾಯಿ ಇಬ್ಬರೂ ಕಣ್ಣು ಮುಚ್ಚಿದ್ದು ಸಿಡ್ನೆಗೆ ಇಂದಿಗೂ ಕೊರಗನ್ನುಂಟು ಮಾಡುತ್ತದೆ.

ಹತ್ತು ವರ್ಷದ ಹಿಂದೆ ಈ ಮಹಾನ್ ನಟ ತನ್ನ ಜೀವನ ಚರಿತ್ರೆ 'ದಿಸ್ ಲೈಫ್' ಬರೆಯಲು ಚಿತ್ರರಂಗದಿಂದ ದೂರವಾದ. ಅದಾಗಲೇ ವೈವಾಹಿಕ ಜೀವನದ ಏರುಪೇರುಗಳು, ಮೊದಲ ಪತ್ನಿಯಿಂದ ಅಸಹಕಾರದ ಕಾರಣದಿಂದ ವಿವಾಹವಿಚ್ಛೇದನ. ಸಹ ನಟಿಯೊಬ್ಬಳನ್ನು ಮದುವೆ, ಆಕೆಯೂ ಕೈಕೊಟ್ಟಿದ್ದು, ದೀರ್ಘಕಾಲದ ಒಂಟಿ ಜೀವನ, ಚಿತ್ರರಂಗದಲ್ಲಿ ಎದುರಿಸಬೇಕಾದ ವರ್ಣಭೇದ ನೀತಿಯಿಂದಾಗಿ ಸಿಡ್ನೆ ಸಾಕಷ್ಟು ಅನುಭವ ಪಡೆದ. ವಿವಾಹ ವಿಚ್ಛೇದನ ಮಾಡಿಕೊಂಡರೂ ಮೊದಲ ಹೆಂಡತಿಯಿಂದ ಹುಟ್ಟಿದ ಮಕ್ಕಳು-ಎರಡನೆ ಮದುವೆಯಿಂದ ಪಡೆದ ಮಕ್ಕಳೊಂದಿಗೆ ಒಂದೇ ಮನೆಯಲ್ಲಿ ವಾಸಿಸುತ್ತಿರುವ ಪಾಯ್ಟರ್ ಸ್ವಾತ್ಮ ಚರಿತ್ರೆಯನ್ನು ಮುಖ್ಯವಾಗಿ ತನ್ನ ಮಕ್ಕಳಿಗೋಸ್ಕರವೇ ಬರೆದನಂತೆ. ಎಂಟು ವರ್ಷಗಳ ಹಿಂದೆ ಪ್ರಕಟ ವಾದ 'ದಿಸ್ ಲೈಫ್' ಒಂದು ವಿಭಿನ್ನವಾದ ಆತ್ಮ ಚರಿತ್ರೆ.

"ನನ್ನ ಆರು ಜನ ಪುತ್ರಿಯರು ಮತ್ತು ಇಬ್ಬರು ಮೊಮ್ಮಕ್ಕಳಿಗೆ ಅಮೇರಿಕದಲ್ಲಿ ನನ್ನ ಚಿತ್ರ ಜೀವನ ಹೇಗಿತ್ತು ಎಂಬುದನ್ನು ನಾನೇ ತಿಳಿಸಿಕೊಡುವುದಕ್ಕಾಗಿ ಈ ಪುಸ್ತಕವನ್ನು ಬರೆದೆ. ಯಾಕೆಂದರೆ ನನ್ನ ಮಕ್ಕಳಾಗಲಿ ಮೊಮ್ಮಕ್ಕಳಾಗಲಿ ನನ್ನ ಬಗ್ಗೆ ಇತರರು ಹೇಳುವ ಅತಿರಂಜಿತ ಘಟನೆಗಳನ್ನಾಗಲಿ, ಉಪೇಕ್ಷಾಭಾವದ ಹೇಳಿಕೆಗಳನ್ನಾಗಲಿ ಕೇಳಿಕೊಂಡು ಒಂದು ತಪ್ಪು ಅಭಿಪ್ರಾಯವನ್ನು ರೂಪಿಸಿಕೊಳ್ಳದಿರಲಿ ಎಂಬ ಉದ್ದೇಶವೂ ಇದರ ಹಿಂದಿದೆ. ಹಾಲಿವುಡ್ ಅಲ್ಪಸಂಖ್ಯಾತರನ್ನು ವಿಚಿತ್ರವಾಗಿಯೇ ನಡೆಸಿಕೊಳ್ಳುತ್ತದೆ. ನಾನು ಚಿತ್ರವೃತ್ತಿ ಪ್ರಾರಂಭಿಸಿದಾಗಲಂತೂ ಪರಿಸ್ಥಿತಿ ತುಂಬ ವಿಚಿತ್ರವಾಗಿತ್ತು."

ಸಿಡ್ನೆ ಎಂದೂ ಸಿಟ್ಟಿನ ತರುಣನಾಗಿರಲಿಲ್ಲ. "ಯಾಕೆಂದರೆ ಸಿಟ್ಟು ನಿರುಪಯೋಗಿ ಉದ್ವೇಗ".

ಸಿಡ್ನೆ ಸದಾ ಸಹಕರಿಸುವ ನಟ ಎಂದು ಹಾಲಿವುಡಿನ ನಿರ್ದೇಶಕರೇ ಒಪ್ಪಿಕೊಂಡಿದ್ದಾರೆ. ಹತ್ತು ವರ್ಷಗಳ ನಂತರ ಮತ್ತೆ ಮರಳಿರುವ ಈತ ಈಗ "ಮತ್ತದೇ ರೀತಿಯ" ಪಾತ್ರಗಳಲ್ಲಿ ಕಾಣಿಸಿಕೊಳ್ಳುವ ಬದಲು "ಸ್ವತಃ ಸಿನಿಮಾ ಬರೆಯಬೇಕು". ಎಂದುಕೊಂಡಿದ್ದಾನೆ. ●

[illegible] ಸರ್ಕಾರಿ ಕಚೇರಿಯೊಂದಕ್ಕೆ ತುರ್ತು ವಿಷಯಕ್ಕೆ ಸಂಬಂಧಿಸಿದ ಕಾಗದಪತ್ರವೊಂದರ ಮೇಲೆ ಒಂದು ಸಂಜೆ ಬಂದಾಗ ಕಚೇರಿಯಲ್ಲಿ ವ್ಯವಸ್ಥಾಪಕನ [illegible] ಇರಲಿಲ್ಲ.

"ಏನಿದು? ಸಂಜೆ ಇಲ್ಲಿ ಕೆಲಸ ನಡೆಯುವುದಿಲ್ಲವೆ?" ಎಂದು ಆತ ಕೇಳಿದಾಗ ವ್ಯವಸ್ಥಾಪಕ ನಗುತ್ತ ಉತ್ತರಿಸಿದ. "ಇಲ್ಲ ಸ್ವಾಮಿ. ನೀವು ತಪ್ಪು ತಿಳಿದಿದ್ದೀರಿ. ಬೆಳಿಗ್ಗೆ ಇಲ್ಲಿನ ನೌಕರರು ಕೆಲಸ ಮಾಡುವುದಿಲ್ಲ. ಸಂಜೆ ಅವರು ಕಚೇರಿಗೆ ಬರುವುದಿಲ್ಲ." ●



ನಿಮ್ಮ ಮಗುವಿಗೆ ತರಕಾರಿಗಳ ಪೌಷ್ಟಿಕ ಆಹಾರ ಉಣಿಸಿರಿ.
ಮೊದಲೇ-ಬೇಯಿಸಿದ
ಫೆರೆಕ್ಸ್- ವೆಜ್
6 ತಿಂಗಳಿಂದ.
ಹೊಸ ಫೆರೆಕ್ಸ್ - ವೆಜ್‌ನಲ್ಲಿ ವಿಟಮಿನ್ ಸಮೃದ್ಧವಾದ ತರಕಾರಿಗಳ – ಕ್ಯಾರೆಟ್, ಟೊಮ್ಯಾಟೋ ಮತ್ತು ಹೆಸರುಬೇಳೆಯ ನೈಸರ್ಗಿಕ ಪೌಷ್ಟಿಕತೆ ತುಂಬಿದೆ.
ನಿಮ್ಮ ಮಗುವಿನ ಕೋಮಲ ಪಚನಶಕ್ತಿಗೆ ಸಹಕಾರಿಯಾಗುವಂತೆ ಇದನ್ನು ಮೃದುವಾಗಿ ಮೊದಲೇ ಬೇಯಿಸಲಾಗಿದೆ.
ಫೆರೆಕ್ಸ್ - ಬೆಳೆಯಲು ರುಚಿಕರ ಸಾಧನ
farex-veg

ಜೀವನದರ್ಶನ-11 ★ ಕೆ.ಟಿ. ಪಾಂಡುರಂಗಿ

ಹಟ-ಸಂಧಾನ ಮನೋಭಾವ

ನಾವು ನಿತ್ಯವೂ ವ್ಯವಹರಿಸುವ ನಮ್ಮ ಸುತ್ತಲಿನ ಜನರ ಸ್ವಭಾವವನ್ನು ಪರಿಶೀಲಿಸಿದರೆ ಎರಡು ವರ್ಗದ ಜನರು ಒಡೆದು ಕಾಣುತ್ತಾರೆ. ಕೆಲವರು ಹಟಮಾರಿಗಳು, ಕೆಲವರು ಸಂಧಾನ ಮನೋಧರ್ಮದವರು. ಹಟಮಾರಿತನ ಅತಿ ಯಾಗಿರುವವರ ಸಂಖ್ಯೆ ಬಹಳ ಇರುವದಿಲ್ಲ. ಆದರೆ ಏನೂ ಹಟ ಮಾರಿತನ ಇಲ್ಲದವರೂ ಇರುವದಿಲ್ಲ. ಅದರಂತೆಯೇ ಎಲ್ಲ ವಿಷಯಗಳಲ್ಲಿಯೂ ಸಂಧಾನ ಮನೋಭಾವ ಇರುವವರು ಇರುವುದಿಲ್ಲ. ಆದರೆ ಕಿಂಚಿತ್ತು ಸಂಧಾನ ಮನೋಭಾವವೇ ಇಲ್ಲದವರೂ ಇರುವುದಿಲ್ಲ.

ಹಟಕ್ಕೆ ಮುಖ್ಯ ಕಾರಣ ನಂಬಿಕೆ ಅಹಂಕಾರ ಮತ್ತು ಪ್ರಚೋದನೆಗಳು. ಕೆಲವರಿಗೆ ಕೆಲವು ವಿಷಯಗಳಲ್ಲಿ ಬಾಲ್ಯದಿಂದಲೇ ಬಲವಾದ ನಂಬಿಕೆ ಮೂಡಿ ಬಿಟ್ಟಿದ್ದರೆ ಅವರು ಏನು ಮಾಡಿದರೂ ಅದೇ ರೀತಿಯಾಗಿ ಇರುವದನ್ನು ಬಿಡುವುದಿಲ್ಲ. ಅದೇ ಆದರ್ಶವನ್ನು ಬಿಡುವದಿಲ್ಲ. ಅದನ್ನು ಬಿಟ್ಟು ಬೇರೆ ಎಲ್ಲವೂ ಅವರಿಗೆ ತಪ್ಪೆನಿಸುವದು. ಬೇರೆ ರೀತಿಯಿಂದ ನಡೆದುಕೊಳ್ಳುವದು ಅಪಚಾರ ವೆನಿಸುವದು. ಧಾರ್ಮಿಕ ಸಾಮಾಜಿಕ ಕ್ಷೇತ್ರಗಳಲ್ಲಿ ಇಂಥ ಅನೇಕ ಹಟವಾದಿಗಳನ್ನು ನಾವು ಕಾಣುತ್ತೇವೆ. ಉಪವಾಸ ಬಿದ್ದರೂ ಟೇಬಲ್ಲಿನ ಮೇಲೆ ಊಟ ಮಾಡುವದಿಲ್ಲ ಎಂದು ಒಬ್ಬರು ಹಟ ಮಾಡಿದರೆ ಟೇಬಲಿಲ್ಲದೆ ಊಟವನ್ನೇ ಮಾಡುವದಿಲ್ಲ ಎಂಬಷ್ಟು ಸಣ್ಣ ವಿಷಯಗಳಲ್ಲಿಯೂ ಹಟವನ್ನು ಕಾಣುತ್ತೇವೆ. ಇದಕ್ಕೆ ನಂಬಿಕೆ ರೂಢಿಗಳೇ ಕಾರಣ.

ಅಹಂಕಾರ ಹಟಕ್ಕೆ ಇನ್ನೊಂದು ಕಾರಣ. ನಾನೇ ಶ್ರೇಷ್ಠ ನನ್ನ ಮಾತೇ ನಡೆಯಬೇಕು ನಾನು ಹೇಳಿದ್ದೇ ಪೂರ್ವ ಎನ್ನುವ ಹಟ ಕೆಲವರಿಗೆ ಸ್ವಭಾವವಾಗಿ ಬೆಳೆದು ಬಂದಿರುತ್ತದೆ. ಕುಟುಂಬದ ಪರಿಸರ ಕೆಲವರಿಗೆ ಇಂಥ ಅಹಂಕಾರವನ್ನು ಒದಗಿಸಿರುತ್ತದೆ. ಸರ್ವನಾಶವಾದರೂ ನನ್ನ ಶ್ರೇಷ್ಠತೆ ಕುಗ್ಗಬಾರದು ಎಂಬ ದುರ್ಯೋಧನ ಸ್ವಭಾವ ಕೆಲವರಿಗಿರುತ್ತದೆ.

ಇನ್ನು ಕೆಲವರು ಸ್ವಭಾವತಃ ಹಟಮಾರಿಗಳಾಗಿರುವದಿಲ್ಲ. ಆದರೆ ಬೇರೆಯ ವರು ಮತ್ತೆ ಮತ್ತೆ ಅವರನ್ನು ಹೀಯಾಳಿಸಿ ಅಥವಾ ಅವರ ನ್ಯಾಯವಾದ ಅಗತ್ಯಗಳಿಗೂ ಅಡ್ಡಿ ಮಾಡಿ ಹಟ ಬರುವಂತೆ ಮಾಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಹಟವಿಲ್ಲದೇ ಯಾವ ಕೆಲಸವೂ ಆಗದಂಥ ಉದಾಸೀನ ವಾತಾವರಣವೂ ಹಟಕ್ಕೆ ಕಾರಣವಾಗುತ್ತದೆ.

ಹೀಗೆ ಹಟವು ಯಾವ ಕಾರಣದಿಂದ ಇದ್ದರೂ ಅದು ಹಿತಕರವಾದ ಸನ್ನಿವೇಶವಲ್ಲ. ಯಾವ ವ್ಯಕ್ತಿಯೂ ಜೀವನದಲ್ಲಿ ಬೇರೆಯವರ ಭಾವನೆಗಳನ್ನು ಸಂಪೂರ್ಣವಾಗಿ ಅಲ್ಲಗಳೆದು ತನ್ನ ಇಚ್ಛೆಯಂತೆಯೇ ವರ್ತಿಸಲು ಆಗುವದಿಲ್ಲ. ಆದ್ದರಿಂದ ಸಂಧಾನ ಮನೋಭಾವ ಜೀವನದಲ್ಲಿ ಹೆಚ್ಚು ಉಪಯುಕ್ತವಾಗುವದು. ನಮ್ಮ ಮತ್ತು ನಾವು ವ್ಯವಹರಿಸಬೇಕಾದ ಇತರರ ಹಿತ ಅನುಕೂಲಗಳಲ್ಲಿ ಇಬ್ಬರಿಗೂ ಗ್ರಾಹ್ಯವಾದುದನ್ನೇ ಆಯ್ಕೆ ಮಾಡುತ್ತ ಹೋಗಿ ಇನ್ನೊಬ್ಬರಿಗೆ ಪ್ರತಿಕೂಲವಾದುದನ್ನು ಬಿಡುತ್ತ ಹೋದರೆ ಇಬ್ಬರ ಜೀವನವೂ ಸಮರಸವಾಗುವದು. ಇಂಥ ಸಂಧಾನ ಮನೋಭಾವ ಬೆಳೆಯಬೇಕಾದರೆ ಸ್ವಲ್ಪ ತ್ಯಾಗ ಬುದ್ಧಿ ಅವಶ್ಯ. ಆಕ್ರಮಣ ಮನೋಭಾವ ಸಂಧಾನ ಮನೋಭಾವಕ್ಕೆ ಸಹಾಯಕವಲ್ಲ. ಜೀವನದಲ್ಲಿ ಕೊಡು ತೆಗೆದುಕೊಳ್ಳುವ ಮನೋಭಾವ ಬೆಳೆಸಿಕೊಂಡಷ್ಟೂ ಜೀವನವು ಸುಗಮವಾಗುವದು. ಹಟದಿಂದ ತಾವೂ ಹಾಳಾಗಿ ಇತರರನ್ನು ಕಷ್ಟಕ್ಕೆ ಸಿಲುಕಿಸಿದ ಅನೇಕ ಉದಾಹರಣೆಗಳನ್ನು ನಾವು ನಿತ್ಯವೂ ಕಾಣುತ್ತೇವೆ. ವ್ಯಕ್ತಿ ಸಂಘರ್ಷಕ್ಕೆ ಹಟವೇ ಕಾರಣ. ವ್ಯಕ್ತಿ ಸಂಘರ್ಷವು ಹೆಚ್ಚಾದಷ್ಟೂ ಸಮಾಜ ಸ್ವಾಸ್ಥ್ಯವು ಕಡಿಮೆಯಾಗು ವದು. ●

ಇಂಗ್ಲೀಷ್ ಕಥೆ

ಪಿಶಾಚಿ ಸುಂದರಿ

ಮೂಲ: ಥಿಯೋಫಿಲ್ ಗೋತಿಯರ್

ಸಂಗ್ರಹಾನುವಾದ:

ಮೂರ್ತಿ ರಾಮನಾಥಪುರ

ನೀನು ಯಾವಾಗಲಾದರೂ ಪ್ರೀತಿಸಿದ್ದೀಯಾ ಎಂದು ತಾವು ನನ್ನನ್ನು ಕೇಳದಿದ್ದರೆ ಈ ಚಿತ್ರ ವಿಚಿತ್ರವಾದ ಪ್ರೇಮಕಥೆಯನ್ನು ಬರೆಯುವ ವಿಚಾರ ನನ್ನ ಮನಸ್ಸಿನಲ್ಲಿ ಎಂದಿಗೂ ಬರುತ್ತಿರಲಿಲ್ಲ. ಆದರೆ ತಾವು ಪ್ರೀತಿಯ ಮಾತನ್ನು ಛೇಡಿಸಿ, ನನಗೆ ಹಳೆಯ ನೆನಪುಗಳ ಬೂದಿಯನ್ನು ಕೆದಕುವ ಅವಕಾಶ ಕೊಟ್ಟಿದ್ದೀರಿ.

63ನೇ ವಯಸ್ಸಿನಲ್ಲಿ ನನ್ನ ಜೀವನದಲ್ಲಿ ನಡೆದ ಈ ಭೀಕರ ಕಥೆಯನ್ನು ಹೇಳುವ ಸಮಯದಲ್ಲಿ ತಮಗೆ ನನ್ನ ಅಲ್ಲ, ಬೇರೆ ಯಾರದೋ ಜೀವನದಲ್ಲಿ ಘಟಿಸಿದ ಕಥೆಯನ್ನು ಹೇಳುತ್ತಿರುವಂತೆ ಅನಿಸುತ್ತದೆ.

ನಾನು ಒಂದು ಹಳ್ಳಿಯ ಚರ್ಚಿನ [illegible] ಪಾದ್ರಿ. ಮೂರು ವರ್ಷಗಳವರೆಗೆ [illegible] ಪ್ರತ್ಯಾಘಾತಗಳಿಗೆ ತುತ್ತಾಗಿದ್ದೆ ಮತ್ತು [illegible] ಘೋರ ಸುಂದರಿಯ ಪ್ರೇಮದ ಬಲೆಯಲ್ಲಿ ಸಿಲುಕಿದೆನೋ. ಅವಳು [illegible] ಒಬ್ಬ ಮಾಯಾವಿನಿಯಾಗಿದ್ದಳು. ಅವಳ ಸಂಗದ ಇದ್ದ ನನ್ನ ಪ್ರೇಮ ಸಂಬಂಧಗಳನ್ನು ನೆನೆಸಿಕೊಂಡರೆ ಯಾವುದೋ ಕನಸನ್ನು ನೆನೆದು ಕೊಂಡಂತಾಗುತ್ತದೆ.

ಯಾರೇ ಮಾಯಾವಿ ಮತ್ತು ರಾಕ್ಷ[illegible] [illegible] ಚೆಲುವೆಯೊಂದಿಗೆ ಸಂಗದ ಪ್ರಥಮ [illegible] ಯಲ್ಲಿಯೇ ಪ್ರೇಮ ಉಂಟಾಗುತ್ತದೆ [illegible] ನನ್ನ ಅನುಭವಗಳಿಂದ ನಾನು [illegible]



ಹೇಳುತ್ತೇನೆ. ಈ ಪ್ರೇಮದ ಅನುಭೂತಿ ಎಷ್ಟು ಘನೀಭೂತವಾಗಿರುತ್ತದೆಂದರೆ ಅದರಲ್ಲಿ ಮುಳುಗಿರುವವರೆಗೆ ನನಗೆ ಎಚ್ಚರವಿರುವುದಿಲ್ಲ. ಈ ಮೋಹನಿದ್ರೆಯಿಂದ ಎದಾಗ, ನನ್ನ ಪ್ರಿಯ ಭಕ್ತನ ಮೂರ್ತಿಯ ಮುಂದೆ ತಲೆ ಬಾಗಿ ಕುಳಿತು, ನನ್ನನ್ನು ಆ ಸುಂದರಿಯಿಂದ ಬಿಡಿಸು ಎಂದು ಕ್ಷಮೆಯಾಚಿಸುತ್ತೇನೆ.

● ●

ತಮಗೆ ಮೇಲಿನ ನನ್ನ ಕತೆಯಿಂದ ಆ ಸುಂದರ ಡಾಕಿನಿಯನ್ನು ನಾನು ಪ್ರೀತಿಸುತ್ತಿರಲಿಲ್ಲ ಎಂದು ಅನ್ನಿಸಬಹುದು. ಆದರೆ ಎಷ್ಟು ಉತ್ಕಂಠೆಯಿಂದ ಅವಳನ್ನು ನಾನು ಪ್ರೀತಿಸಿದ್ದೇನೋ ಅಷ್ಟು ಬೇರೆ ಯಾವ ವ್ಯಕ್ತಿಯನ್ನೂ ಪ್ರೀತಿಸಿರಲಿಲ್ಲ. ಅವಳ ಸಂಗಡ ಕಳೆದ ಸಂವೇದಶೀಲ ಮತ್ತು ವಾಸನಾಮಯ ರಾತ್ರಿಗಳ ನೆನಪು ಬರುತ್ತಲೇ ಇಂದಿಗೂ ನಡುಕ ಉಂಟಾಗುತ್ತದೆ.

ಆ ಚೋರ ಸುಂದರಿಯು ನನ್ನ ಜೀವನದಲ್ಲಿ ಇದ್ದಷ್ಟು ಕಾಲವೂ ನಾನು ಜೀವನವನ್ನು ಗೆಲ್ಲುತ್ತಾ ಇದ್ದೆ. ದಿನವೆಲ್ಲಾ ಒಬ್ಬ ಪಾದರಿಯ ರೂಪದಲ್ಲಿದ್ದು ಧಾರ್ಮಿಕ ಕೆಲಸ ಮತ್ತು ಅನುಷ್ಠಾನಗಳಲ್ಲಿ ತಲ್ಲೀನನಾಗಿರುತ್ತಿದ್ದೆ. ಆದರೆ ರಾತ್ರಿಯಾಗುತ್ತಲೇ ಒಬ್ಬ ಶಿಕಾರಿಯಂತೆ, ಪ್ರಿಯ ಕರನಂತೆ, ಸ್ತ್ರೀಲೋಲುಪನಂತೆ ಧೈರ್ಯದಿಂದ ಕುಡಿಯುವ ಕುಲೀನ ವ್ಯಕ್ತಿಯಂತೆ ಆಗಿಬಿಡುತ್ತಿದ್ದೆ. ಆಗೆಲ್ಲಾ ಇದೇ ನನ್ನ

ವಾಸ್ತವಿಕ ಜೀವನವೆನಿಸುತ್ತಿತ್ತು. ನಾನು ನಡೆಸುತ್ತಿದ್ದ ಪಾದರಿಯ ಜೀವನವೊಂದು ಸ್ವಪ್ನವೆನಿಸುತ್ತಿತ್ತು.

ಬಾಹ್ಯ ಜಗತ್ತಿನೊಡನೆ ನನಗೆ ನೇರವಾದ ಸಂಬಂಧ ಯಾವಾಗಲೂ ಇರುತ್ತಿರಲಿಲ್ಲ. ಬಾಲ್ಯಾವಸ್ಥೆ ಹಾಗೂ ಕಿಶೋರಾವಸ್ಥೆಯನ್ನು ಓದಿನಲ್ಲೂ ಮತ್ತು ಪಾದರಿಯಾಗುವ ಪ್ರತಿಕ್ಷಣ ಪಡೆಯುವುದರಲ್ಲೂ ಕಳೆದೆ. ಪಾದರಿಯಾದ ನಂತರ ಈ ಸಂಬಂಧ ಪೂರ್ಣವಾಗಿ ಮುರಿದು ಹೋಯಿತು. ವರ್ಷದಲ್ಲಿ ಒಂದೆರಡು ಬಾರಿ ನನ್ನ ವೃದ್ಧ, ಅಶಕ್ತ ತಾಯಿಯನ್ನು ಭೇಟಿಯಾಗಲು ಹೋಗುತ್ತಿದ್ದೆ. ನಾನು ಹೊರಗಿನ ಪ್ರಪಂಚವನ್ನು ಪ್ರವೇಶಿಸುತ್ತಿದ್ದುದರಿಂದ ಅದೊಂದು ಶೂನ್ಯ ಜಗತ್ತೆಂದು ನನಗೆ ಅನಿಸುತ್ತಿತ್ತು.

('ದಿ ಬ್ಯೂಟಿಫುಲ್ ವ್ಯಾಂಪಾಯರ್' ಕಾದಂಬರಿಯ ಸಾರಸಂಗ್ರಹ)

ನನ್ನನ್ನು ಇಷ್ಟು ವರ್ಷಗಳವರೆಗೆ ತನ್ನ ಪ್ರೇಮ ಜಾಲದಲ್ಲಿ ಬಂಧಿಸಿದ್ದ ಆ ಸುಂದರಿಯ ಮತ್ತು ನನ್ನ ಸರ್ವಪ್ರಥಮ 'ಭೇಟಿ' ನಾನು ಪಾದರಿಯಾಗಿ ಹಿರಿಯ ಪಾದರಿಯವರಿಂದ ಆಶೀರ್ವಾದವನ್ನು ಪಡೆಯುವುದಕ್ಕೆ ಹೋಗಿದ್ದಾಗ ಆಯಿತು. ಅವರು ಆಶೀರ್ವದಿಸುತ್ತಿದ್ದಾಗ ನಾನು ತಲೆ ಬಾಗಿದ್ದೆ. ಆದರೆ, ಅವರ ಆಶೀರ್ವಾದ ಪೂರ್ಣವಾಗುತ್ತಲೇ ನಾನು ತಲೆ ಮೇಲೆತ್ತಿದಾಗ ನೋಡಿದ್ದೇನು? ನನಗೆ ಎದುರಾಗಿ ಬೇಲಿಯ ಆ ಕಡೆ, ಒಬ್ಬ ಸುಂದರ ಯುವತಿ ನಿಂತು ತದೇಕ ದೃಷ್ಟಿಯಿಂದ ನನ್ನನ್ನು ನೋಡುತ್ತಿದ್ದಾಳೆ. ಮೆಲ್ಲಮೆಲ್ಲನೆ ನನ್ನ ಅಕ್ಕಪಕ್ಕ ನಿಂತಿದ್ದ ಎಲ್ಲಾ ವ್ಯಕ್ತಿಗಳೂ ಮಾಯವಾಗುತ್ತಾರೆ. ನನಗೆ ಅವಳೊಬ್ಬಳೇ ಕಾಣುತ್ತಿದ್ದಾಳೆ.

★ ★

ಅವಳ ವರ್ಣನೆ ಮಾಡಲು ನಾನು ಅಸಮರ್ಥ. ಕವಿ ಅಥವಾ ಲೇಖಕನಾಗಿದ್ದರೆ, ಆಗಿದರೂ ಅವಳ ಅಪ್ರತಿಮ ಸೌಂದರ್ಯವನ್ನು ವರ್ಣಿಸಲು ಆಗುತ್ತಿರಲಿಲ್ಲ. ಕಲಾಕಾರನಾಗಿದರೂ, ಅವಳ ಸ್ವರ್ಗೀಯ ರೂಪದ ರೇಖೆಯನ್ನು ಚಿತ್ರಕಲೆ ಅಥವಾ ಮೂರ್ತಿ ಕಲೆಯ ಮಾಧ್ಯಮದಲ್ಲಿ ಸೆರೆಹಿಡಿಯುವುದರಲ್ಲಿ ನಾನು ಅಸಮರ್ಥನಾಗುತ್ತಿದ್ದೆ. ಸಾಕು, ಇಷ್ಟಂತೂ ಹೇಳಬಲ್ಲೆ, ಅವಳೊಬ್ಬಳು ಆದರ್ಶ ಸುಂದರಿಯಾಗಿದ್ದಳು. ಮತ್ತು ಅವಳ ಅಂಗಪ್ರತ್ಯಂಗಗಳು ಅಚ್ಚಿನಲ್ಲಿ ಒತ್ತಿದಂತೆ ಇದ್ದವು. ಅವಳು ಮನುಷ್ಯಳಲ್ಲ, ಬದಲು ಒಬ್ಬ ದೇವತೆಯೆ. ಅಂತೆಯೇ ಒಬ್ಬ (ಹೃದಯ) ಚೋರಿಣಿಯ ಅಂಶಗಳೂ ಅವಳಲ್ಲಿ ಸೇರಿರುವಂತೆ ನನಗನಿಸಿತು.

ಅವಳನ್ನು ನೋಡುತ್ತಿರುವಂತೆ ನನ್ನ ಒಳಗಿನ ಬಾಗಿಲು ತೆರೆದಂತೆ ನನಗೆ ಭಾಸವಾಯಿತು. ತಿಳಿಯದ ಅಪರಿಚಿತ ದೃಶ್ಯ ಕಾಣಬರತೊಡಗಿತು.

ಆಗಲೇ ಒಂದು ವಿಚಿತ್ರ ಘಟನೆ ನಡೆಯಿತು. ಕವಿತೆಯ ಸಮಾನ ಅಭಿವ್ಯಂಜಕವಾದ ಅವಳ ನೇತ್ರಗಳು ನನಗೆ "ದೇವರಿಗೆ ಶರಣಾಗುವುದರ ಬದಲು ನೀನು ನನಗೆ ಶರಣಾದರೆ, ನಾನು ನಿನಗೆ ನಿನ್ನ ಕಲ್ಪನಾತೀತ ಪ್ರೇಮ ಸುಖವನ್ನು ಕೊಡುತ್ತೇನೆ. ಪಾದರಿಯ ವಸ್ತ್ರ ತ್ಯಜಿಸಿ, ನನ್ನ ಬಳಿ ಬಾ, ನನ್ನ ಚಿರಯೌವನವನ್ನೂ ಉನ್ನತ್ತ ಸೌಂದರ್ಯವನ್ನೂ ಮನಸಾರೆ ಭೋಗಿಸು. ಪಾದರಿಯಾಗಿ ನಾನು ನಿನಗೆ ಕುಡಿಸುವ ಪ್ರೇಮದ ಮಧುರತೆಯನ್ನು ಸವಿಯಲು ನಿನಗೆ ಸಾಧ್ಯವೆ? ಬಾ, ನನ್ನ ಬಳಿ ಬಾ, ನಿನ್ನನ್ನು ಕನಸಿನ ಬೀಸಣಿಗೆಯಲ್ಲಿ ಕುಳ್ಳಿರಿಸಿಕೊಂಡು ಯೌವನ, ಸೌಂದರ್ಯ, ಶಾಶ್ವತವಾದ ಪ್ರೇಮ ಲೋಕದತ್ತ ಕೊಂಡೊಯ್ಯುವೆ" ಎಂದು ಹೇಳಿದ ಅನುಭವವಾಗುತ್ತದೆ.

ನನ್ನ ಸ್ಥಿತಿ ವಿಚಿತ್ರವಾಗಿತ್ತು. ನನಗೆ ಅವಳ ಈ ಮಧುರವಾದ ಶಬ್ದಗಳನ್ನು ಬಿಟ್ಟು ಬೇರೇನೂ ಕೇಳಿಬರುತ್ತಿರಲಿಲ್ಲ. ಅವಳನ್ನು ಬಿಟ್ಟು ನನ್ನ ಕಣ್ಣುಗಳು ಮತ್ತ್ಯಾವ ವಸ್ತುಗಳನ್ನೂ ಕಾಣುತ್ತಿರಲಿಲ್ಲ.

ನಾನಂತೂ ಪಾದರಿಯಾದೆ. ಆದರೆ ಪಾದರಿಯ ಹೊಣೆಯನ್ನು ನಿರ್ವಹಿಸುವ ಸಮಯದಲ್ಲಿ ಮಾತ್ರ, ನಾನು ಮಾಡಬಾರದಂತಹ ಯಾವುದೋ ಕೆಲಸವನ್ನು ಮಾಡುತ್ತಿರುವಂತೆ ಅನ್ನಿಸುತ್ತಿತ್ತು. ನಾನು ಯಾವುದೋ ತಪ್ಪು ಮಾಡುತ್ತಿರುವಂತೆ ಚರ್ಚಿನಲ್ಲಿ ನನ್ನ ಕೈಗಳು ಕಟ್ಟುತ್ತಿರುವಂತಿರುತ್ತದೆ. ಪದೇ ಪದೇ ಎಲ್ಲವನ್ನೂ ಬಿಟ್ಟು ಎಸೆದು ಹೋಗಿ ನನ್ನ ಪ್ರಿಯ

ತಮೆಯ ಬಾಹುಗಳಲ್ಲಿ ಒಂದಾಗುವ ಮನಸ್ಸಾಗುತ್ತಿತ್ತು. ಆದರೆ ಪ್ರಿಯತಮೆ ನನ್ನೊಡನೆ ಅಪ್ರಸನ್ನತೆಯಿಂದಿದ್ದಳು. ಅದಕ್ಕೆ ಕಾರಣ ನಾನು ಅವಳ ಮಾತನ್ನು ಕೇಳದೆ ಪಾದರಿಯಾಗಲು ಒಪ್ಪಿದ್ದು. ಆಗಾಗ್ಗೆ ಏಕಾಂತದಲ್ಲಿ ಬಂದು ನನ್ನ ಕೈಹಿಡಿದು ಕಿವಿಯಲ್ಲಿ ಪಿಸುಗುಟ್ಟುತ್ತಾ "ನೀನು ದುಃಖಿಯಾಗಬೇಡ! ಸಂಪೂರ್ಣ ಮನಸ್ಸಿನಿಂದ ನನ್ನನ್ನು ನಿನ್ನವಳನ್ನಾಗಿ ಮಾಡಿಕೊಳ್ಳದೆ ಇದೇ ರೀತಿ ದುಃಖಿಯಾಗಿ ನರಕಾಗ್ನಿಯಲ್ಲಿ ಬೇಯಬೇಡ. ಸ್ವರ್ಗದ ಸುಖವನ್ನು ಪಡೆಯಲು ಬಯಸಿದರೆ ನೀನು ಎಲ್ಲವನ್ನೂ ಬಿಟ್ಟು ನನಗೆ ಶರಣಾಗು" ಎಂದು ಹೇಳಿದುದರ ಸ್ಪಷ್ಟ ಅನುಭವವಾಗುತ್ತದೆ.

ನನ್ನ ಮನಸ್ಸಿನಲ್ಲಿ ಅವಳ ಪ್ರೇಮದ ಬೀಜ ನೆಟ್ಟಿದೆ. ಅದು ಮೆಲ್ಲ ಮೆಲ್ಲನೆ ಸುಗಂಧ ಬೀರುವ ಒಂದು ಗಿಡದ ರೂಪದಲ್ಲಿ ವಿಕಸಿತವಾಗುತ್ತಾ ಇದೆ. ಈಗ ಆ ಗಿಡ ಎಷ್ಟು ದೊಡ್ಡದಾಗಿದೆಯೆಂದರೆ, ಎಷ್ಟು ಸಶಕ್ತವಾಗಿದೆಯೆಂದರೆ ಅದನ್ನು ನಾಶ ಮಾಡಲು ಸಾಧ್ಯವಿಲ್ಲದಾಗಿದೆ.

ನನ್ನ ಜೀವನ ಈಗ ನನ್ನದಾಗಿಲ್ಲ. ಅದರ ಮೇಲೆ ನನ್ನ ಪ್ರೇಯಸಿಯ ಅಧಿಕಾರ ನಿರಂತರವಾಗಿ ಹೆಚ್ಚಾಗುತ್ತಿದೆ. ರಾತ್ರಿಯಂತೂ ಸರಿ. ಅವಳು ನನ್ನ ಸಂಗಡ ಇರುತ್ತಲೇ ಇದ್ದಳು. ಆದರೆ ಹಗಲಲ್ಲೂ ಅವಳ ಸಾಕ್ಷಾತ್ಕಾರ ಪಡೆಯಲು ನಾನು ನನ್ನ ಕಣ್ಣನ್ನು ಮುಚ್ಚಿಕೊಳ್ಳಬೇಕಾಗುತ್ತಿತ್ತು. ಆಗೆಲ್ಲ ಅವಳು ನನ್ನ ಮುಂದೆ ಪ್ರತ್ಯಕ್ಷವಾಗುತ್ತಿದ್ದಳು. ಅವಳ ಪ್ರೇಮದ ಕೈಗಳು ನನ್ನನ್ನು ಸವರುತ್ತಿದ್ದುವು. ಕಣ್ಣು ತೆರೆದಾಗಲೂ ಅವಳ ಕಮನೀಯ ಕೈಗಳ ಸ್ಪರ್ಶದ ಮಧುರ ಅನುಭವ ನನ್ನ ಮನಸ್ಸಿನಲ್ಲಿ ವ್ಯಾಪ್ತವಾಗಿರುತ್ತಿತ್ತು. ನಾನು ನನ್ನ ಕೈಗಳಿಂದ ಅವಳ ಸ್ಪರ್ಶದ ಸುಖ ಅನುಭವಿಸಿದ ಅಂಗಗಳನ್ನು ಸವರುತ್ತಿದೆ.

ನಾನು ಪಾದರಿಯಾಗಿದ್ದಾಗ ನನಗೆ ಪ್ರೇಮ ಮತ್ತು ಸೌಂದರ್ಯಕ್ಕೆ ನನ್ನ ಜೀವನದಲ್ಲಿ ಯಾವ ಸ್ಥಾನವೂ ಇರಲಿಲ್ಲ. ಪಾದರಿಗೆ ಪ್ರೇಮ ಹಾಗೂ ಸೌಂದರ್ಯದಿಂದ ಕಲಿತುಕೊಳ್ಳುವುದೇನಿದೆ? ಇದರ ಮೇಲೆ ನನ್ನ ಪೂರ್ಣ ಜೀವನ ಅವಳ ಪ್ರೇಮ ಮತ್ತು ಸೌಂದರ್ಯ



"ಸದ್ಯ ನಿಮ್ಮ ತಲೆಮೇಲಲ್ಲ ನಿಮ್ಮ ಪ್ರತಿಮೆ ತಲೇ ಮೇಲೇ ಗಲೀಜು ಮಾಡಿದೆ..."

ಒಂದ ಅಪ್ಯಾಯಿತವಾಗುತ್ತಿರುತ್ತಿತ್ತು. ನಾನು ಈ ಪ್ರಕ್ರಿಯೆಯನ್ನು ತಡೆಯಲು ಅಸಮರ್ಥನಾದೆ.

★ ★

ಒಂದು ದಿನ, ಹಿರಿಯ ಪಾದರಿಯವರು ನನ್ನ ಚರ್ಚನ್ನು ಅವಲೋಕಿಸಲು ಬಂದಾಗ ಒಂದು ವಿಚಿತ್ರ ಘಟನೆ ನಡೆಯಿತು. ಒಬ್ಬ ನೀಗ್ರೋ ನೌಕರ ಹಿರಿಯ ಪಾದರಿಯವರ ಮುಂದೆಯೇ, ನನಗೆ ಒಂದು ಕಾಗದದ ತುಂಡನ್ನು ಕೊಟ್ಟು ಹೋದ. ಆ ತುಂಡಿನಲ್ಲಿ ಇಷ್ಟನ್ನು ಮಾತ್ರ ಬರೆದಿತ್ತು. "ಕ್ಲೇರಿಮೋಂದ್ ಕಾನ್‌ಸಿನೀಮಹಲ್" ಈ ಮಹಲ್ ಯಾರದು, ಎಲ್ಲಿದೆ ಎಂದು ನನಗೆ ತಿಳಿದಿರಲಿಲ್ಲ.

ನೀಗ್ರೋ ನೌಕರ ಹೊರಟುಹೋದನಂತರ ಹಿರಿಯ ಪಾದರಿಯವರು ಭರ್ತ್ಸನೆ ಮಾಡುತ್ತಿರುವಂತೆ ದುರುಗುಟ್ಟುತ್ತಾ ನನ್ನತ್ತ ನೋಡಿದರು. ನನ್ನ ಮುಖ ಬಿಳಿಚಿಕೊಂಡಿತ್ತು. ಅವರು ಅಲ್ಲಿದ್ದಷ್ಟು ಹೊತ್ತು. ಅವರತ್ತ ನೋಡುವ ಸಾಹಸವನ್ನು ನಾನು ಮಾಡಲಿಲ್ಲ. ಒಂದು ಗಾಢವಾದ ವಿಷಾದದ ಛಾಯೆ ನನ್ನ ಮನಸ್ಸಿನ ಮೇಲೆ ಹರಡಿತ್ತು. ಯಾವುದೋ ಶಕ್ತಿ ನನ್ನನ್ನು ನನ್ನ ರಹಸ್ಯಮಯ ಪ್ರೇಮಿಯಿಂದ ದೂರ ಮಾಡುವ ಪ್ರಯಾಸ ಮಾಡುತ್ತಿರುವಂತೆ

ನನಗನ್ನಿಸಿತು. ನನ್ನ ಸ್ಥಿತಿ ಒಂದು ನಿರ್ಜೀವ ಬೊಂಬೆಯಂತೆ ಆಗುತ್ತಿತ್ತು.

ಹಿರಿಯ ಪಾದರಿಯವರು ಹೊರಟು ಹೋದ ನಂತರ, ನಾನು ನನ್ನ ಕೊಠಡಿಯ ಕಿಟಕಿಯ ಬಳಿನಿಂತು ಹೊರಗೆ ನೋಡತೊಡಗಿದೆ. ಹೊರಗೆ ಮೌನವಿತ್ತು. ಬಹಳ ವೇಗವಾಗಿ ಮುಂದೋಡುತ್ತಿದ್ದ ಜೀವನ ಸಂತೋಷ ಹಾಗೂ ಹರ್ಷದಿಂದ ಕೂಡಿತ್ತು. ಆದರೆ ನನ್ನೊಳಗೆ ಮಾತ್ರ ಕತ್ತಲೆ ಇತ್ತು. ಪೊಳ್ಳುತನ ಮತ್ತು ಕಷ್ಟಗಳ ಮುಳ್ಳಿನ ಬೇಲಿ ಸುತ್ತಲ್ಪಟ್ಟು ಜೀವನ ನಡೆಸುವುದೇ ನನಗೆ ಅಸಾಧ್ಯವೆನಿಸುತ್ತಿತ್ತು.

ಕೊನೆಗೆ ನಾನು, ಜಗಮಗಿಸುವ ಜೀವನದ ಈ ದೃಷ್ಟಿಯನ್ನು ಮತ್ತೆ ಹೆಚ್ಚು ನೋಡಲು ಸಾಧ್ಯವಾಗಲಿಲ್ಲ. ಸುಮ್ಮನೆ ಬಂದು ಹಾಸಿಗೆಯ ಮೇಲೆ ಮಲಗಿದೆ. ಒಂದು ಕತ್ತಲೆಯ ಹಾಗೂ ಕೊನೆಯಿಲ್ಲದ ಹಳ್ಳದಲ್ಲಿ ಎಷ್ಟು ಜಿರಳೆ, ಹಾವುಗಳು ಒಡಾಡುತ್ತಿದ್ದುವು. ಅದರಲ್ಲಿ ನಾನು ಬಿದ್ದಂತೆ ಅನಿಸಿತು.

ಇದ್ದಕ್ಕಿದಂತೆ ಯಾರದೋ ಸ್ಪರ್ಶದಿಂದ ನನ್ನ ಕಣ್ಣುಗಳು ತೆರೆದುವು. ನನ್ನ ಎದುರು ಹಿರಿಯ ಪಾದರಿಯವರು ನಿಂತಿರುವುದನ್ನು ಕಂಡೆ. ಅವರು "ಅಯ್ಯೊ ಮಿತ್ರ ನಿನಗೆ ಏನಾಗಿದೆ? ನಿನ್ನ ಆರೋಗ್ಯ ಸರಿಯಿಲ್ಲವೆ? ನಿನ್ನಂಥ ಶಾಂತ ಸಜ್ಜನನಿಗೆ ಬಂದ ಇಂತಹ ಸ್ಥಿತಿಯನ್ನು ನೋಡಿ ನನಗೆ ಬಹಳ ಕಷ್ಟವಾಗುತ್ತಿದೆ. ನೀನು ಸೈತಾನನ ವಶವಾದಂತೆ ನನಗನ್ನಿಸುತ್ತಿದೆ. ನಿನ್ನ ಈಗಿನ ಮನಃಸ್ಥಿತಿಯಲ್ಲಿ ಸೈತಾನನೇ ಇದ್ದಾನೆ ದೇವರಿಗೆ ಶರಣಾದಾಗಲೇ ನಿನಗೆ ಸೈತಾನನಿಂದ ಮುಕ್ತಿ ಸಿಕ್ಕುತ್ತದೆ. ಮತ್ತು ದೇವರಿಗೆ ಶರಣಾಗುವುದಕ್ಕೆ ಏಕಮಾತ್ರ ಉಪಾಯವೆಂದರೆ ಪ್ರಾರ್ಥನೆ. ದೇವರ ಪ್ರಾರ್ಥನೆಯಲ್ಲಿ ಮನಸ್ಸನ್ನೂ ತೊಡಗಿಸು ಮಿತ್ರನೇ ! ಸೈತಾನನ ಕಪ್ಪು ಛಾಯೆ ನಿನ್ನಿಂದ ಹೊರಟುಹೋಗುತ್ತದೆ," ಎಂದು ಹೇಳುತ್ತಿದ್ದರು. ಹಿರಿಯ ಪಾದರಿಯವರ ಮಾತಿನಿಂದ ನಾನು ಸ್ವಸ್ಥಚಿತ್ತನಾದೆ. ಆದರೆ, ಅವರು ಮುಂದೆ ಹೇಳಿದುದರಿಂದ ಅಶಾಂತನಾದೆ.

ಅವರು ಹೋಗುವ ಮೊದಲು, ಕ್ಲೇರಿಮೋಂದ್‌ನ ಪಾದರಿಯವರು ನಿಧನರಾದದ್ದು, ಹಾಗೂ ನಾನು ಶೀಘ್ರವೇ ಅಲ್ಲಿಗೆ ಹೋಗಿ ಅವರ ಸ್ಥಾನವನ್ನು ಪಡೆದುಕೊಳ್ಳಬೇಕಾದುದನ್ನು ತಿಳಿಸಿದರು.

ಈ ಸೂಚನೆಯನ್ನು ಕೇಳಿ ನನ್ನ ಮನಸ್ಸು ಜೋರಾಗಿ ಹೊಡೆದುಕೊಳ್ಳತೊಡಗಿತು. ಕ್ಲೇರಿಮೋಂದ್ ಮತ್ತು ಅದರ ಕಾನ್‌ಸಿನಿ ಮಹಲ್‌ನ ಸಂಬಂಧ ನನ್ನ ಆ ರಹಸ್ಯಮಯಿ ಪ್ರೇಮಿಗಳೊಂದಿಗೆ ಏಕಿತ್ತೋ ಗೊತ್ತಿಲ್ಲ. ಅದು ನನಗೆ ತಿಳಿದೂ ತಿಳಿಯದಂತೆ ಇತ್ತು.

ಮರುದಿನ ನಾನು ಹಿರಿಯ ಪಾದರಿಯವರ ಸಂಗಡ ಕ್ಲೇರಿಮೋಂದ್‌ಗೆ ಹೊರಟೆ. ಸಾಮಾನುಗಳನ್ನು ಹೊತ್ತು ಎರಡು ಅಶ್ವಗಳು ನಮ್ಮ ಹಿಂದೆ ಬರುತ್ತಿದ್ದವು.

ಒಂದು ದೊಡ್ಡ ಮಹಲನ್ನು ಕಾಣುತ್ತಲೇ "ಈ ಭವ್ಯ ಮಹಲ್ ಯಾರದು ?" ಎಂದು ಹಿರಿಯ ಪಾದರಿಯವರನ್ನು ಕೇಳಿದೆ.

"ಈ ಮಹಲ್ ರಾಜಕುಮಾರ ಕಾನ್‌ಸೀನಿಯದು. ಆದರೆ, ಇದನ್ನು ತನ್ನ ಪ್ರೇಮಿಕೆ ಕ್ಲೇರಿಮೋಂದಾಳಿಗೆ ಉಡುಗೊರೆ ಕೊಟ್ಟಂದಿನಿಂದ ಇದು ಕ್ಲೇರಿಮೋಂದಾ ಕಾನ್‌ಸೀನಿ ಮಹಲ್ ಎಂದೂ ಮತ್ತು ಈ ಸ್ಥಾನ ಕ್ಲೇರಿಮೋಂದಾ ಎಂದೂ ಕರೆಸಿಕೊಳ್ಳುತ್ತಿದೆ. ಈ ಮಹಲಿನ ಹೆಸರು ಪರಿವರ್ತನೆಯಾದಂದಿನಿಂದ ಇಲ್ಲಿ ಚಿತ್ರ ವಿಚಿತ್ರವಾದ ಮತ್ತು ಭೀಕರ ಘಟನೆಗಳು ನಡೆಯುತ್ತಿದೆ ಎಂದು ಕೇಳಿದ್ದೇನೆ" ಎಂದರು.

ನನ್ನ ಕಿವಿಗಳು ಹಿರಿಯ ಪಾದರಿಯವರ ಮಾತುಗಳನ್ನು ಕೇಳುತ್ತಿದ್ದವು. ಆದರೆ ಕಣ್ಣುಗಳು ಸಂಪೂರ್ಣ ಮಹಲಿನ ಮೇಲೆ ನೆಟ್ಟಿದ್ದವು.

ತಕ್ಷಣ ನಾನು ಮಹಡಿಯ ಮೇಲೆ ಒಬ್ಬ ಸುಂದರ ಯುವತಿಯನ್ನು ನೋಡಿದೆ. ಅವಳೇ ಕ್ಲೇರಿಮೋಂದಾಳಾಗಿದ್ದಳೆಂದು ಹಿರಿಯ ಪಾದರಿಯವರು ಹೇಳಿದರು.

ಕ್ಲೇರಿಮೋಂದಾ. ನನ್ನ ಪ್ರೇಯಸಿ. ನನ್ನ ಕನಸಿನ ರಾಣಿ !

ಒಂದು ಕ್ಷಣ ತನ್ನ ಸುಳಿವು ತೋರಿಸಿ ಅವಳು ಎಲ್ಲಿ ಮಾಯವಾದಳೋ ತಿಳಿಯದು ?

ಅವಳು ನನ್ನನ್ನು ನೋಡಿದಳೆ? ಒಂದು ಕ್ಷಣ ಕಂಡು ಮಾಯವಾಗುವುದು ಅವಳ ಸ್ವಭಾವವಾಗಿತ್ತೇ ?

ಹಳ್ಳಿಯ ನಿವಾಸಿಗಳಿಗೆ ನನ್ನನ್ನು ಪರಿಚಯಿಸಿ, ನನ್ನನ್ನು ಚರ್ಚಿನಲ್ಲಿ ವಿಧಿವತ್ತಾಗಿ ಪ್ರತಿಷ್ಠಿತ ಗೊಳಿಸಿದ ನಂತರ ಹಿರಿಯ ಪಾದರಿ ಹೊರಟು ಹೋದರು.

ಅವರು ಹೋಗುತ್ತಲೇ ನನ್ನ ಮನಸ್ಸು, ನನ್ನ ಪ್ರೇಯಸಿಯ ನಾಲ್ಕೂ ಕಡೆ ಸುತ್ತತೊಡಗಿತು. ನಾನಂತೂ ಒಂಟಿಯಾಗಿದ್ದೆ, ಅವಳು ನನ್ನ ಸಮೀಪವೇ ಇದ್ದಾಳೆ ಮತ್ತು ಸುಮ್ಮನೆ ನಗುತ್ತಾ ನನ್ನ ಎಲ್ಲಾ ಕೆಲಸಗಳನ್ನು ಬಹಳ ಗಮನವಿಟ್ಟು ನೋಡುತ್ತಿದ್ದಾಳೆನಿಸುತ್ತಿತ್ತು. ಆಗಾಗ್ಗೆ ಮಿಂಚಿನಂತೆ ಅವಳ ಕಣ್ಣುಗಳು ನನ್ನ ಮುಂದೆ ಹೊಳೆಯುತ್ತಿದ್ದವು.

ಸಂಜೆ ನಾನು ಚರ್ಚಿನ ಮುಂದೆ ಇದ್ದ ಚಿಕ್ಕ ಉದ್ಯಾನವನದಲ್ಲಿ ಸುಮ್ಮನೆ ಕುಳಿತು ಅವಳ ವಿಷಯವಾಗಿ ಯೋಚಿಸುತ್ತಿದ್ದೆ. ಆಗ ನನ್ನ ಮುಂದೆ ಮಣ್ಣಿನಲ್ಲಿ ಯಾವುದೋ ಯುವತಿಯ ಪಾದದ ಗುರುತುಗಳು ಸ್ಪಷ್ಟವಾಗಿ ಕಂಡು ಬಂದವು. ಇದು ಆಶ್ಚರ್ಯವಾಗಿತ್ತು. ಏಕೆಂದರೆ ಚರ್ಚ್ ಮತ್ತು ಅದರ ಉದ್ಯಾನವನ ಮನುಷ್ಯನ ಭುಜಕ್ಕಿಂತಲೂ ಎತ್ತರವಾದ ಗೋಡೆಗಳಿಂದ ಆವೃತವಾಗಿದ್ದವು. ಅದನ್ನು ಹಾರಿ ಉದ್ಯಾನವನದಲ್ಲಿ ಬರುವುದು ಯಾವ ಯುವತಿಗೂ ಸುಲಭ ಸಾಧ್ಯವಿರಲಿಲ್ಲ. ಹಿರಿಯ ಪಾದರಿಯವರು ಹೋಗುತ್ತಲೇ ನಾನು ಚರ್ಚಿನ ಬಾಗಿಲನ್ನು ಮುಚ್ಚಿ ಅದಕ್ಕೆ ಒಳಗಿನಿಂದ ಒಂದು ದಪ್ಪ ಬೀಗ ಹಾಕಿದ್ದೆ-ರಾತ್ರಿಯ ವೇಳೆ ಯಾವ ಕಳ್ಳನೂ ಚರ್ಚನ್ನು ಪ್ರವೇಶಿಸ ಬಾರದೆಂದು.

ಅವಳು ಚರ್ಚಿನ ಒಳಗೆ ಎಲ್ಲೂ ಅವಿತುಕೊಂಡಿಲ್ಲವೆಂಬುದನ್ನು ನಿಶ್ಚಯಪಡಿಸಲು ನಾನು ಚರ್ಚಿನ ಮೂಲೆ ಮೂಲೆಯನ್ನೂ ಹುಡುಕಿದೆ, ಆದರೆ ಅವಳು ಎಲ್ಲೂ ಕಂಡುಬರಲಿಲ್ಲ.

ಹಾಗಾದರೆ ಆ ಹೆಜ್ಜೆಯ ಗುರುತು ನನ್ನ ಭ್ರಮೆಯೋ ?

ಇಲ್ಲ, ಏಕೆಂದರೆ, ಹೆಜ್ಜೆಯ ಗುರುತು ಮಣ್ಣಿನ ಮೇಲೆ ಸ್ಪಷ್ಟವಾಗಿ ಮೂಡಿತ್ತು. ನಾನು ಹಿರಿಯ ಪಾದರಿಯವರ ಸಂಗಡ ಮೊದಲು ಬಂದಾಗ ಅದು ಇರಲಿಲ್ಲ.

ಇದೊಂದು ಚಮತ್ಕಾರವೆಂದು ನನಗನಿಸಿತು.

ಅವಳಿಗೆ ನಾನು ಕ್ಲೇರಿಮೋಂದಾಗೆ ಬರುವ ಪೂರ್ವಸೂಚನೆ ಇತ್ತೇನು ? ನಾನು ಬೇಗನೆ ಅವಳ ಬಳಿಗೆ ಬರಬೇಕಾಗುವುದೆಂದು ತಿಳಿಸುವುದಕ್ಕಾಗಿಯೇ ಅವಳು ನೀಗ್ರೋ ನೌಕರನ ಸಂಗಡ ಕಾಗದದ ಚೀಟಿಯನ್ನು ಕಳುಹಿಸಿದ್ದಳೇನು?

ಅವಳ ಕ್ಷೀಣ ದೃಷ್ಟಿಯನ್ನು ಕಂಡು ಬಹಳ ಪ್ರಶ್ನೆಗಳು ನನ್ನ ಮನಸ್ಸಿನಲ್ಲಿ ಏಳುತ್ತಿದ್ದವು. ಆದರೆ ನನ್ನ ಹತ್ತಿರ ಯಾವುದೇ ಪ್ರಶ್ನೆಗೂ ಯಾವ ಉತ್ತರವೂ ಇರಲಿಲ್ಲ.

★ ★

ಆಗ ತಾನೆ ನನಗೆ ಎಲ್ಲಾ ಪ್ರಶ್ನೆಗಳ ಉತ್ತರ ಸಿಕ್ಕವು. ಬಹಳ ಮೊದಲೇ ನಾವಿಬ್ಬರೂ ಒಂದಾಗಿದ್ದರಿಂದ ಬಹುಶಃ ನನ್ನ ಅವಳ ಆತ್ಮಗಳು ಅಭಿನ್ನವಾಗಿದ್ದವು. ಅವಳು ಯೋಚಿಸುವುದು ನನಗೆ ತಿಳಿಯುತ್ತಿತ್ತು. ನಾನು ಯೋಚಿಸುವುದರ ಸುಳಿವು ದೂರಾನುಭೂತಿಯ ಮೂಲಕ ಅವಳಿಗೆ ತಿಳಿಯುತ್ತಿತ್ತು.

ನಾನು ಕ್ಲೇರಿಮೋಂದಾಗೆ ಬರುವ ಕಾರಣ ಮತ್ತು ನಾನು ಅಲ್ಲಿಗೆ ಹೋಗುವುದರ ಹಿಂದೆ ಅವಳ ಕೈವಾಡವಿದೆ ಎಂಬುವುದರಲ್ಲಿ ಯಾವ ಸಂದೇಹವೂ ಉಳಿಯಲಿಲ್ಲ. ಅವಳ ಪ್ರೇರಣೆ ನನ್ನನ್ನು ಇಲ್ಲಿಯವರೆಗೂ ಎಳೆದು ತಂದಿತ್ತು.

ಅವಳ ಸಾನಿಧ್ಯದಲ್ಲಿ ಘಟಿಸುವ ಉತ್ತೇಜಕ ಘಟನೆಗಳ ಕಲ್ಪನೆಯಿಂದ ನನ್ನ ಇಡೀ ಶರೀರದಲ್ಲಿ ನಡುಕ ಉಂಟಾಯಿತು.

ಆದರೆ ಹಿರಿಯ ಪಾದರಿ ಮಹಾಶಯರು ನನ್ನನ್ನು ಕಲ್ಪನೆಯ ಜಗತ್ತಿನಲ್ಲಿ ಹೆಚ್ಚು ಸಮಯ ವಿಹರಿಸಲು ಅವಕಾಶ ಕೊಡಲಿಲ್ಲ. ಅವರು ನನ್ನನ್ನು ಕ್ಲೇರಿಮೋಂದಾದ ಚರ್ಚಿನ ಕಡೆಗೆ ಕರೆದುಕೊಂಡು ಹೋಗುವಾಗ ಅದರ ಬಗ್ಗೆಯೇ ಮಾತನಾಡುತ್ತಾ ಹೋಗುತ್ತಿದ್ದರು. ನನಗೆ ನನ್ನ ಪ್ರೇಮಿಯ ಬಗ್ಗೆ ಯೋಚಿಸಲು ಹೆಚ್ಚು ಸಮಯ ಕೊಡುತ್ತಿರಲಿಲ್ಲ.

ಚರ್ಚ್ ಸಾಕಷ್ಟು ಹಳೆಯದು ಹಾಗೂ ಸಾಕಷ್ಟು ಜೀರ್ಣಾವಸ್ಥೆಯಲ್ಲೂ ಇತ್ತು. ಅಲ್ಲಿ ಒಂದು (ಶವದಂತಿದ್ದ) ದುರ್ಬಲ ನಾಯಿ ತನ್ನ ನಿರ್ಜೀವ ಕಣ್ಣಿನಿಂದ ನನ್ನ ಸ್ವಾಗತವನ್ನು ಮಾಡಿತು. ಕೆಲವು ಕೋಳಿಗಳೂ ತಮ್ಮ ಹಾಜರಿ ಹಾಕಿದುವು.

ಯಲ್ಲಿದ ಕುರ್ಚಿಯ ಮೇಲೆ ಕುಳ್ಳಿರಿಸಿದಾಗ, ನನ್ನ ಪ್ರೇಮಿ, ಯಾರನ್ನು ನಾನು ಮಹಾನ್ ...ಯೆಂದು ತಿಳಿದಿದ್ದೆನೋ "ಅವಳಿಗೆ ಕೊನೆಯ ಗಳಿಗೆ ಬಂದಿದೆ. ಅವಳು ತಕ್ಷಣ ಒಬ್ಬ ಪಾದರಿಯನ್ನು ಕಾಣುವ ಇಚ್ಛೆ ವ್ಯಕ್ತ ಮಾಡಿದ್ದಾಳೆ. ತಾವು ದಯವಿಟ್ಟು ಈಗ ನನ್ನ ಸಂಗಡ ಬಂದು ಅವಳ ಈ ಕೊನೆಯ ಇಚ್ಛೆಯನ್ನು ಪೂರ್ಣಮಾಡುವ ಕಷ್ಟ ತೆಗೆದುಕೊಳ್ಳುವಿರಾ ?"

ನಾನು ತಕ್ಷಣ ಅವನ ಸಂಗಡ ಹೊರಡಲು ತಯಾರಾದೆ.

ಹೊರಗೆ ಎರಡು ಕುದುರೆಗಳು ನಮ್ಮನ್ನು ನಿಶ್ಚಯಿಸಿದ ಸ್ಥಳಕ್ಕೆ ಕೊಂಡೊಯ್ಯಲು ತಯಾರಾಗಿ ನಿಂತಿದ್ದವು.

ಕತ್ತಲೆ ಎಷ್ಟು ಭಯಂಕರವಾಗಿತ್ತೆಂದರೆ, ನನಗೆ ನನ್ನ ಕೈಯೂ ಕಾಣುತ್ತಿರಲಿಲ್ಲ. ಆದರೆ, ಕುದುರೆಗಳಿಗೆ ಮಾರ್ಗದ ಪೂರ್ಣ ಪರಿಚಯ ಇದ್ದಂತಿತ್ತು. ಅವು ವೇಗವಾಗಿ ಓಡುತ್ತಾ ಹೋಗುತ್ತಿದ್ದವು.

ಸ್ವಲ್ಪ ಸಮಯದ ನಂತರ, ಎರಡೂ ಕುದುರೆಗಳು ಒಂದು ಮಹಲಿನ ಮುಂದೆ ನಿಂತವು. ನಮ್ಮಿಬ್ಬರನ್ನು ನೋಡುತ್ತಲೇ, ಮಹಲಿನ ಕೆಲವು ನೌಕರರು ಕೈಯಲ್ಲಿ ದೀವಟಿಗೆ ಹಿಡಿದು ನಮ್ಮ ಕಡೆಗೆ ಓಡಿ ಬಂದರು. ಆ ನೌಕರರಲ್ಲಿ ವಿಳಾಸದ ಚೀಟಿಯನ್ನು ನನ್ನ ಬಳಿಗೆ ತಂದಿದ್ದ ನೀಗ್ರೋವನ್ನು ಕಂಡು ನಾನು ಚಕಿತಗೊಂಡೆ. ಅವನೇ ಕುದುರೆಯಿಂದ ಇಳಿಯಲು ನನಗೆ ಸಹಾಯ ಮಾಡಿದ.

ಕುದುರೆಯಿಂದ ಇಳಿಯುತ್ತಲೇ ಕಪ್ಪು ಉಡುಪು ಧರಿಸಿದ್ದ ಕುಲೀನ ವಂಶದವನಂತೆ ಕಾಣುತ್ತಿದ್ದ ಒಬ್ಬ ವ್ಯಕ್ತಿ ಗದ್ಗದ ಕಂಠದಿಂದ ನನ್ನನ್ನು ಸ್ವಾಗತಿಸಿದ. ಅವನ ಕಣ್ಣುಗಳಿಂದ ನೀರು ಸುರಿಯುತ್ತಿದ್ದವು. ಅವನು ಸಾಕಷ್ಟು ವಿಚಲಿತನೂ, ದುಃಖಿಯೂ ಆದವನಂತೆ ಕಂಡು ಬರುತ್ತಿದ್ದ.

ಅವನು ತಲೆ ಅಲುಗಾಡಿಸುತ್ತಾ "ಅದೃಷ್ಟದಲ್ಲಿ ಬರೆದಂತೆ ಆಗುತ್ತದೆ. ಅದರ ಮುಂದೆ ಯಾವುದೂ ನಡೆಯುವುದಿಲ್ಲ. ತಾವು ಸ್ವಲ್ಪ ತಡವಾಗಿ ಬಂದಿರಿ. ಪಾದರಿ ಮಹಾಶಯರೇ, ತಮಗೆ ಸತ್ತವರ ಆತ್ಮವನ್ನು ಉಳಿಸಲು



"ಮುಖದ ಮೇಲಿನ ಗಾಯಗಳಿಗೆ ಬ್ಯಾಂಡೇಜ್ ಹಾಕೋವಾಗ ಬಾಯಿನೂ ಸೇರ್ಸಿ ಬ್ಯಾಂಡೇಜ್ ಮಾಡ್ಬಿಡಿ ಸಾರ್."

ಆದರೆ ಇದಕ್ಕಿಂತಲೂ ಹೆಚ್ಚು ಚಮತ್ಕಾರದ ಘಟನೆಗಳು ನಡೆಯಲಿವೆಯೆಂದು ನನಗೇನು ಗೊತ್ತಿತ್ತು ?

ಒಂದು ರಾತ್ರಿ ನಾನು ಮಲಗುವ ತಯಾರಿ ನಡೆಸುತ್ತಿದ್ದಾಗ, ಬಾಗಿಲಿನ ಕರೆಗಂಟೆ ಕಿರುಚುತ್ತಿರುವಂತೆ ಜೋರಾಗಿ ಹೊಡೆದುಕೊಳ್ಳ ತೊಡಗಿತು.

ಚರ್ಚಿನ ಮುದುಕಿ ಆಳು ಬಾರ್‌ಬರಾ ಓಡುತ್ತೋಡುತ್ತಲೇ ಬಾಗಿಲು ತೆಗೆಯಲು ಹೋದಳು. ಅವಳ ಹಿಂದೆ ನಾನೂ ಹೋದೆ.

ಬಾಗಿಲು ತೆಗೆಯುತ್ತಲೇ ಹೊಳೆಯುವ ವಸ್ತ್ರವನ್ನು ಧರಿಸಿದ ಬಿಳಿಯ ಬಣ್ಣದ ಒಬ್ಬ ಪುರುಷ ಎದುರು ನಿಂತಿರುವುದನ್ನು ನಾನು ಕಂಡೆ. ಅವನ ಸೊಂಟದಲ್ಲಿ ಉದ್ದವಾದ ಒರೆಯ ಒಂದು ಕತ್ತಿ ತೂಗುತ್ತಿತ್ತು.

ಬಾರ್‌ಬರಾ ಅವನನ್ನು ನೋಡಿ, ಹೆದರಿಕೆಯಿಂದ ನಡುಗತೊಡಗಿದಳು. ಆದರೆ, ಆ ಪುರುಷನು ಅವಳನ್ನು ಸಾಂತ್ವನಗೊಳಿಸುತ್ತಾ "ಹೆದರುವುದಕ್ಕೆ ಏನೂ ಇಲ್ಲ, ಮುದುಕಿ ! ನನಗೆ ಪಾದರಿ ಮಹಾಶಯರಲ್ಲಿ ಒಂದು ಮುಖ್ಯ ಕೆಲಸವಿದೆ" ಎಂದನು.

ಅವನನ್ನು ಕರೆತಂದು ಒಳಗಿನ ಕೊಠಡಿ

ಸಾಧ್ಯವಿಲ್ಲ. ಆದರೂ ಅವರ ಶವದ ಬಳಿ ಹೋಗಿ ಅವರ ಆತ್ಮಕ್ಕಾಗಿ ಪ್ರಾರ್ಥನೆಯನ್ನಂತೂ ಮಾಡುತ್ತೀರಿ" ಎಂದು ಹೇಳಿದ.

ಶವವನ್ನು ನೋಡಿ, ನಾನು ಬಿಕ್ಕಳಿಸಿ ಬಿಕ್ಕಳಿಸಿ ಅಳತೊಡಗಿದೆ. ಏಕೆಂದರೆ, ಈ ಶವ ಮತ್ತಾರದೂ ಅಲ್ಲ, ಸ್ವಂತ ನನ್ನ ಪ್ರೇಯಸಿ ಕ್ಲೇರಿ ಮೋಂಟಾಳದು. ನೆರೆದ ಎಲ್ಲರೂ ಶವ ವನ್ನು ನೋಡಿ ಅಳುತ್ತಿದ್ದರು. ಆದರಿಂದ ಯಾರಿಗೂ ನಾನು ಬಿಕ್ಕಳಿಸಿ ಅತ್ತಿದರಲ್ಲಿ ಆಶ್ಚರ್ಯವಾಗಲಿಲ್ಲ.

★ ★

ನನ್ನ ಪ್ರಿಯತಮೆಯ ಮೃತ್ಯು ನನಗೆ ತಿಳಿಸಿದಂತೆ ಅಸ್ವಾಭಾವಿಕವಾಗಿತ್ತು. ಅವಳು ಒಂದು ನೃತ್ಯ ಸಮಾರೋಪದಲ್ಲಿ ಭಾಗವಹಿಸಿದ್ದಾಗ ಮೃತ್ಯು ಬಂದು ಅವಳನ್ನು ಅಪ್ಪಿತು.

ಶವವನ್ನು ಮಲಗಿಸಿದ್ದ ಮಂಚದ ಮೇಲೆ ಕುಳಿತು, ಕತ್ತು ಬಗ್ಗಿಸಿ ಮೃತ ವ್ಯಕ್ತಿಯ ಆತ್ಮವನ್ನು ಶಾಂತಿಗೆ ಕೊಂಡೊಯ್ಯುವ ಉದ್ದೇಶದಿಂದ ನಡೆಸುವ ಪ್ರಾರ್ಥನೆಯ ಪಾಠವನ್ನು ಆರಂಭಿಸಿದೆ.

ಮನಸ್ಸಿನಲ್ಲಿಯೇ ನಾನು ದೇವರಿಗೆ ಕೃತಜ್ಞನಾಗಿದ್ದೆ. ಅವನು ನನಗೆ ಮರ್ಮಾಂತಕ ಘಟನೆಗಳ ಮಾಧ್ಯಮದಿಂದ ಒಂದು ಅಮೂಲ್ಯ ಅವಕಾಶ ಕೊಟ್ಟಿದ್ದ. ನಾನು ಅವಳ ಆತ್ಮಶಾಂತಿಗಾಗಿ ಪ್ರಾರ್ಥಿಸುತ್ತಾ ಅವಳಿಗೆ ಚಿರಶಾಂತಿ ಕೊಡುವ ಮಾಧ್ಯಮವಾಗಿದ್ದೆ.

ಪ್ರಾರ್ಥನೆ ಮಾಡುತ್ತಾ ಸಾಕಷ್ಟು ಸಮಯ ಕಳೆಯಿತು. ಆದರೆ ಒಂಟಿಯಾಗಿ ಅಲ್ಲಿ ಪ್ರಾರ್ಥನೆ ಮಾಡುವಾಗ ಒಂದು ವಿಚಿತ್ರ ಅನುಭವವಾಗತೊಡಗಿತು.

ಶವವನ್ನು ಸುರಕ್ಷಿತವಾಗಿಡಲು ಯಾವ ಉಪಾಯವನ್ನೂ ಮಾಡಿರಲಿಲ್ಲ. ಆದ್ದರಿಂದ ಅದರಿಂದ ಈಗಾಗಲೇ ದುರ್ವಾಸನೆ ಬರಬೇಕಾಗಿತ್ತು. ಆದರೆ ಆ ದುರ್ಗಂಧದ ಬದಲು ಕೊಠಡಿಯಲ್ಲಿ ಒಂದು ರೀತಿ ಸವಿಯಾದ ಪ್ರೇಮ ವರ್ಧಕ ಸುಗಂಧ ವ್ಯಾಪ್ತವಾಗಿತ್ತು. ಮತ್ತೊಂದು ವಿಚಿತ್ರ, ಆಜ್ಞೆಯ ಅನುಭೂತಿ ಎಂದರೆ ನನ್ನ ಪ್ರೇಯಸಿ ಸತ್ತಿಲ್ಲ. ಜೀವಂತವಾಗಿದ್ದಾಳೆ. ಒಮ್ಮೆ ಅವಳನ್ನು ಕಳೆದುಕೊಂಡು ಮತ್ತೆ ಪಡೆದ ಅನುಭವವಾಗಲೆಂಬ ಉದ್ದೇಶದಿಂದ ನಾಟಕವಾಡಿದ್ದಳು. ಈ ಅನುಭೂತಿ ಆಗ ಮತ್ತಷ್ಟು ಪ್ರಗಾಢವಾಯಿತು. ನಾನೊಂದು ನೀಳ ಉಸಿರು ಬಿಟ್ಟೆ. ಪ್ರತಿಕ್ರಿಯೆಯೆಂಬಂತೆ ಅವಳ ನೀಳ ಉಸಿರಿನ ಧ್ವನಿಯೂ ನನಗೆ ತಕ್ಷಣ ಕೇಳಿ ಬಂತು.

ನಾನು ಹಲವಾರು ಬಾರಿ ನನ್ನ ಕಣ್ಣುಗಳನ್ನು ಉಜ್ಜಿಕೊಂಡೆ, ನಾನು ಕನಸು ಕಾಣುತ್ತಿಲ್ಲವೇ ಅಥವಾ ನನಗೆ ದೃಷ್ಟಿಭ್ರಮೆಯಾಗಿಲ್ಲವೇ ಎಂದು ತಿಳಿಯಲು, ಮೆಲ್ಲಮೆಲ್ಲಗೆ ಕಣ್ಣು ತೆರೆದೆ. ಅದೇ ದೃಶ್ಯ-ನಾನು ಕೊಠಡಿಯನ್ನು ಪ್ರವೇಶಿಸುವಾಗ ಕಂಡದ್ದೆ. ತನ್ನ ವಕ್ಷದ ಮೇಲೆ ಎರಡೂ ಕೈ ಇಟ್ಟು, ಮೃತ ಮಹಿಳೆ ಅರ್ಧ ಗಂಟೆ ಮೊದಲು ನಾನು ಕೊಠಡಿಯನ್ನು ಪ್ರವೇಶಿಸುವಾಗ ಮಲಗಿದ್ದಂತೆಯೇ ಮಲಗಿದ್ದಾಳೆ. ಹಂಸದ ಕತ್ತಿನಂತಿದ್ದ ಅವಳ ಉದ್ದವಾದ ಕತ್ತು ಈಗಲೂ ಅದೇ ಪ್ರಕಾರ ಅರ್ಧ ಗಂಟೆಯ ಮೊದಲಿದ್ದಂತೆಯೇ ವಾಲಿಕೊಂಡಿತ್ತು. ಸಾವಿನ ಯಾವ ಲಕ್ಷಣವೂ ಅವಳ ದೇಹದಲ್ಲಿ ಕಂಡು ಬರುತ್ತಿರಲಿಲ್ಲ. ಅವಳು ಗಾಢವಾದ ನಿದ್ದೆಯಲ್ಲಿದ್ದಂತೆ ಭಾಸವಾಗುತ್ತಿತ್ತು.

ಕೊಠಡಿಯಲ್ಲಿ ನಾನೊಬ್ಬನೇ ಇದ್ದೆ. ಪ್ರಾರ್ಥನೆ ಮಾಡುವುದನ್ನು ಬಿಟ್ಟು ಕೊಠಡಿಯಲ್ಲಿ ಅಡ್ಡಾಡುತ್ತಿದ್ದೆ. ಸುಂಟರಗಾಳಿಯಂತೆ ಅನೇಕ ವಿಚಿತ್ರ ಪ್ರಶ್ನೆಗಳು ಮತ್ತೆ ನನ್ನ ಮನಸ್ಸಿನಲ್ಲಿ ವೇಗವಾಗಿ ಸುತ್ತತೊಡಗಿದವು.

ನನ್ನ ಮುಂದೆ ಮಲಗಿರುವ ಯುವತಿ ನನ್ನ ಪ್ರೇಯಸಿಯೋ ಇಲ್ಲವೇ ಅವಳದೇ ರೂಪವುಳ್ಳ ಬೇರೆ ಯುವತಿಯೋ ?

ನೀಗ್ರೋ ನೌಕರ ನನ್ನ ಪ್ರೇಮಿಯ ನೌಕರಿ ಬಿಟ್ಟು ಈ ಯುವತಿಯ ಸೇವೆ ಮಾಡುತ್ತಿಲ್ಲವಷ್ಟೇ ?

ಈ ಯುವತಿ ನಿಜವಾಗಿಯೂ ನನ್ನ ಪ್ರೇಯಸಿಯೇ ಆಗಿದಲ್ಲಿ ಅವಳು ಜೀವಂತವಾಗಿದ್ದು, ನನ್ನನ್ನು ಕರೆಸಿಕೊಳ್ಳಲು ಸಾಯುವಂತೆ ನಾಟಕ ಮಾಡುತ್ತಿಲ್ಲವಷ್ಟೇ ? ಈ ರೀತಿ ನಿಷ್ಪ್ರಯೋಜಕವಾದ ಬೇಡದ ಪ್ರಶ್ನೆಗಳು ನನ್ನ ಮನಸ್ಸಿನಲ್ಲಿ ಏಳುತ್ತಿದ್ದವು. ನಾನು ಹುಚ್ಚನಾದಂತೆ ಅನಿಸುತ್ತಿತ್ತು. ಅಲ್ಲದೆ ನನ್ನ ಎಚ್ಚರವನ್ನು ಸಂಪೂರ್ಣ ಕಳೆದುಕೊಂಡವನಾಗಿದೆ.

ಇದಕ್ಕಿಂತಲೂ ನಾನು ನನ್ನ ಸಂಪೂರ್ಣ

ಎಚ್ಚರ ಕಳೆದುಕೊಂಡೆ. ಆ ಕೋಮಲ ಶರೀರದ ಮೇಲೆ ಬಾಗಿ ಮೆಲ್ಲ ಮೆಲ್ಲನೆ ಅದನ್ನು ನೇವರಿಸತೊಡಗಿದೆ.

ಅವಳ ಸುಂದರವಾದ ಶರೀರ ಈಗಲೂ ಸಾಕಷ್ಟು ಬಿಸಿಯಾಗಿತ್ತು. ನಾಡಿಯೂ ಚಲಿಸುತ್ತಿತ್ತು. ಜೀವಂತವಾಗಿದ್ದಾಳೆ ಎಂಬುದನ್ನು ಸಾರಿ ಹೇಳುವಂತೆ ಮಹಲಿನವರ ಅಭಿಪ್ರಾಯದಂತೆ ಅವಳಿನ್ನೂ ಸತ್ತಿಲ್ಲ. ಅವಳ ಶರೀರದಲ್ಲಿ ಹರಿಯುವ ರಕ್ತದ ಶಬ್ದ ಸ್ಪಷ್ಟವಾಗಿ ಕೇಳಿಬರುತ್ತಿತ್ತು.

ನನ್ನ ಮನಸ್ಸು ವೇಗವಾಗಿ ಹೊಡೆದುಕೊಳ್ಳ ತೊಡಗಿತು.

ಅವಳ ಬಗ್ಗೆ ನನ್ನ ನಿಷ್ಕಾಮ ಪ್ರೇಮ ಈಗ ಕಾಮವಾಗಿ ಪರಿಣಮಿಸುತ್ತಿದೆ. ನನ್ನನ್ನು ತಡೆಯಲು ನನಗೀಗ ಸಾಧ್ಯವಾಗಲಿಲ್ಲ. ಮುಂದೆ ನುಗ್ಗಿ ಅವಳ ಸುಮಧುರವಾದ ತುಟಿಗಳನ್ನು ಚುಂಬಿಸಿದೆ.

ಆ ಚುಂಬನದಲ್ಲಿ ನನ್ನೆಲ್ಲಾ ಪ್ರೇಮವನ್ನು ಹರಿಸಿದ್ದೆ.

ಚುಂಬಿಸುತ್ತಲೇ ಒಂದು ಚಮತ್ಕಾರ ನಡೆಯಿತು.

ನನ್ನ ತುಟಿಗಳು ಅವಳ ತುಟಿಗಳಲ್ಲಿ ಸೇರುತ್ತಲೇ ಅವಳು ಮೆಲ್ಲ ಮೆಲ್ಲನೆ ತನ್ನ ಕಣ್ಣುಗಳನ್ನು ತೆರೆದಳು. ನನ್ನನ್ನು ನೋಡಿ, "ಅರೆ ನೀನು ರೋಮ್ಯೂ" ಎಂದಳು.

"ಹೂಂ ನಾನೇ ನಿನ್ನ ರೋಮ್ಯೂ ?"

"ಆದರೆ ನೀನು ಇಲ್ಲಿ ಏನು ಮಾಡುತ್ತಿದ್ದೀ ? ಓಹ್ ರೋಮ್ಯೂ, ನಿನಗೆ ಗೊತ್ತಿಲ್ಲ, ನಿನ್ನನ್ನು ನಿರೀಕ್ಷಿಸುತ್ತಾ ನನ್ನ ಪ್ರಾಣವೇ ಹೊರಟು ಹೋಗಿತ್ತು. ಆದರೆ ಈಗ ನಮ್ಮಿಬ್ಬರ ಮಿಲನವಾಗುತ್ತಲೇ, ನಾನು ಪೂರ್ಣ ಸ್ವಾತಂತ್ರ್ಯದಿಂದ ನಿನ್ನ ಹತ್ತಿರ ಬಂದು ಹೋಗಬಹುದಾಗಿದೆ. ಬರಲೇ ರೋಮ್ಯೂ ! ಬರಲೇ ! ನಾನು ಮತ್ತೆ ಮೃತ್ಯು ಲೋಕಕ್ಕೆ ಹೋಗುವ ಮೊದಲು, ನಿನ್ನನ್ನು ಪ್ರೀತಿಸುವೆನೆಂದು ಹೇಳಲು ಇಚ್ಛಿಸುತ್ತೇನೆ. ನಿನ್ನ ಪ್ರೇಮಪೂರ್ಣ ಚುಂಬನವೇ ಮತ್ತೆ ಒಂದು ಬಾರಿ ಕೆಲವು ಕ್ಷಣಗಳವರೆಗೆ ನಿಜ ಜೀವನಕ್ಕೆ ಹಿಂತಿರುಗಿಸಿದೆ. ಬರಲೇ !"

ಇಷ್ಟು ಹೇಳಿ ಮತ್ತೆ ಎಚ್ಚರ ತಪ್ಪಿ ಶಾಂತವಾದಳು. ಆದರೆ ಈಗಲೂ ಅವಳು ನನ್ನನ್ನು ತನ್ನ ಬಾಹುಗಳಲ್ಲಿ ಸೆರೆ ಹಿಡಿದಿದ್ದಳು. ಸ್ನೇಹದ ಅಗಲುವುದು ಅಸಾಧ್ಯವೆಂಬಂತೆ.

★ ★

ಅವಳು ಎಚ್ಚರ ತಪ್ಪುತ್ತಲೇ ನಾನೂ ಎಚ್ಚರ ತಪ್ಪಿದೆ.

ನನಗೆ ಎಚ್ಚರ ಬಂದಾಗ, ನಾನು ಚರ್ಚಿನ ಕೊಠಡಿಯೊಂದರ ಮಂಚದ ಮೇಲೆ ಮಲಗಿದ್ದುದನ್ನು ಕಂಡೆ. ನನ್ನ ಒಂದು ಕೈ ಶರೀರದ ಮೇಲಿದ್ದ ಕಂಬಳಿಯಿಂದ ಹೊರಗೆ ಬಂದಿತ್ತು. ಅದನ್ನು ದುರ್ಬಲವಾದೊಂದು ನಾಯಿ ಪ್ರೀತಿಯಿಂದ ನೆಕ್ಕುತ್ತಿತ್ತು. ಬಾರ್ ಬರಾ ಕೊಠಡಿಯನ್ನು ಗುಡಿಸುವುದರಲ್ಲಿ ನಿರತಳಾಗಿದ್ದಳು.

ನಾನು ಕಣ್ಣು ತೆರೆದುದನ್ನು ಕಂಡು ಅವಳು ಸಂತೋಷದಿಂದ ಕಿರುಚಿದಳು. ಆ ದುರ್ಬಲ ನಾಯಿ ಕೂಡ ಹರ್ಷಾತಿರೇಕದಿಂದ ಕುಣಿದಾಡಿತು.

ನಾನು ಮಂಚದಿಂದ ಏಳುವ ಪ್ರಯತ್ನ ಮಾಡಿದೆ. ಆದರೆ ದುರ್ಬಲತೆಯ ಕಾರಣ ಏಳುವುದು ಸಾಧ್ಯವಾಗಲಿಲ್ಲ. ದುರ್ಬಲತೆ ಎಷ್ಟು ಅಧಿಕವಾಗಿತ್ತೆಂದರೆ ನನ್ನ ಬಾಯಿಂದ ಯಾವ ಶಬ್ದವೂ ಹೊರಡುತ್ತಿರಲಿಲ್ಲ. ನಂತರ ನನಗೆ ಮೂರು ದಿನಗಳಿಂದಲೂ ನಾನು ದುರ್ಬಲ ಸ್ಥಿತಿಯಲ್ಲಿ ಮಂಚದ ಮೇಲೆ ಮಲಗಿದ್ದುದು ತಿಳಿಯಿತು. ಈ ಮೂರು ದಿನಗಳಲ್ಲಿ ನನ್ನ ಉಸಿರು ನಿಂತು ಹೋಗಿತ್ತು. ಮತ್ತು ಜನರು ನಾನು ಸತ್ತು ಹೋಗಿದ್ದೇನೆಂದು ಭಾವಿಸಿದ್ದರು. ಮೂರು ದಿನಗಳವರೆಗೆ ನನಗೆ ಸ್ಮೃತಿ ಇರಲಿಲ್ಲ. ಈ ದಿನಗಳಲ್ಲಿ ನನ್ನ ಆತ್ಮ ನನ್ನ ಶರೀರದಲ್ಲಿತ್ತೊ ಇಲ್ಲವೊ ಅದನ್ನು ನಾನು ನಿಶ್ಚಯವಾಗಿ ಹೇಳಲಾರೆ; ನನ್ನ ಆತ್ಮ ನನ್ನ ಶರೀರದಲ್ಲಿರಲಿಲ್ಲವೆಂದೂ ಹೇಳಲಾರೆ. ಹಾಗಾದರೆ ಎಲ್ಲಿ ವಿಹರಿಸುತ್ತಿತ್ತು ?

ನನ್ನನ್ನು ಕುದುರೆಯ ಮೇಲೆ ಕರೆದುಕೊಂಡು ಹೋಗಿದ್ದ ಬಿಳಿಯ ಮನುಷ್ಯನೇ ನನ್ನನ್ನು ಅಚೇತನಾವಸ್ಥೆಯಲ್ಲಿ ಇಲ್ಲಿಗೆ ಕರೆತಂದು ಬಿಟ್ಟನೆಂದು ಬಾರ್‌ಬರಾಳಿಂದ ತಿಳಿಯಿತು. ಆದರೆ ಆಶ್ಚರ್ಯವೆಂದರೆ ಹಳ್ಳಿಯ ಯಾವ ಮನುಷ್ಯನಾಗಲಿ, ಅವನು ಕರೆದುಕೊಂಡು ಹೋಗಿದ್ದ ಮಹಲಿನವರಾಗಲೀ ಯಾರೂ ಆ ಬಿಳಿಯ

ವ್ಯಕ್ತಿಯನ್ನು ಆವರೆಗೂ ನೋಡಿರಲಿಲ್ಲ.

ಹಾಗಾದರೆ, ಈ ದಿನಗಳಲ್ಲಿ ನಾನು ಒಂದೇ ಸಮನೆ ಕನಸು ಕಾಣುತ್ತಿದ್ದೆನೇ ? ಅಥವಾ ಮತಿಭ್ರಮೆಗೆ ಒಳಗಾಗಿದ್ದೆನೇ ?

ಬಹಳ ಯೋಚಿಸಿದ ನಂತರವೂ ಸ್ವಲ್ಪವೂ ಪರಿಣಾಮವಾಗಲಿಲ್ಲ. ಅನುಮಾನದಲ್ಲಿಯೇ ತೂಗುತ್ತಿದ್ದೆ.

ಆಗಲೇ, ಒಂದು ದಿನ ಹಿರಿಯ ಪಾದರಿಯವರು ಬಂದು ನನ್ನ ಸುಪ್ತ ಚೇತನವನ್ನು ಹೋಗಲಾಡಿಸಿ ನನಗೆ ನನ್ನ ರಹಸ್ಯಮಯಿ ಪ್ರೇಯಸಿಯ ಬಗ್ಗೆ ಒಂದು ಹೊಸ ತಿಳುವಳಿಕೆಯನ್ನು ಕೊಟ್ಟರು.

ಸಾಕಷ್ಟು ಹೊತ್ತು ಸುತ್ತಿ ಬಳಸಿ ನನ್ನ ಆರೋಗ್ಯ ಮತ್ತು ಕುಶಲ ಕ್ಷೇಮದ ಬಗ್ಗೆ ತೋರಿಕೆಗೆ ಸಹಾನುಭೂತಿಯಿಂದ ಕೂಡಿದ ಪೂರ್ಣ ಪ್ರಶ್ನೆಗಳ ನಂತರ, ನನ್ನ ಮೇಲೆ ಆಕಸ್ಮಿಕ ವಜ್ರಾಘಾತವನ್ನು ಮಾಡುತ್ತಾ, "ತಿಳಿದಿದೆಯೋ ನಿನಗೆ, ಕುಖ್ಯಾತಳಾದ ವಾರಾಂಗನೆ ಕ್ಲೇರಿ ಮೋಂದಾ ಈಗಿಲ್ಲ. ಎಂಟು ದಿನಗಳವರೆಗೆ ಒಂದು ಮದನೋತ್ಸವದಲ್ಲಿ ಭಾಗವಹಿಸಿ ಕೊನೆಗೆ ಸತ್ತು ಹೋದಳು. ವಾರಾಂಗನೆಯರ ವಾರಾಂಗನೆಯಾಗಿದ್ದಳು ಅವಳು. ಎಣಿಸಲಾರದಷ್ಟು ಪ್ರೇಮಿಗಳಿದ್ದರು ಅವಳಿಗೆ. ಅವಳು ಮನುಷ್ಯಳಲ್ಲ, ಡಾಕಿನಿ ಎಂದು ಜನರು ಹೇಳುತ್ತಿದ್ದರು" ಎಂದು ಹಿರಿಯ ಪಾದರಿಯವರು ಹೇಳಿದರು.

ಕ್ಲೇರಿಮೋಂದಾಳ ಬಗ್ಗೆ ಹೇಳುತ್ತಾ ಹಿರಿಯ ಪಾದರಿಯವರ ಕಣ್ಣುಗಳು ಪದೇ ಪದೇ ನನ್ನ ಕಣ್ಣುಗಳಲ್ಲೇ ನೆಟ್ಟಿದ್ದವು. ನನಗೂ ಕ್ಲೇರಿ ಮೋಂದಾಳಿಗೂ ಏನು ಸಂಬಂಧವೆಂದು ಬಹುಶಃ ಆ ಕಣ್ಣುಗಳು ತಿಳಿಯ ಬಯಸಿದ್ದವು. ಆದರೆ ನಾನು ನಿರ್ವಿಕಾರನಾಗಿದ್ದೆ ಮತ್ತು ಅವರಿಗೆ ನನ್ನ ಮತ್ತು ಕ್ಲೇರಿಮೋಂದಾಳ ಸಂಬಂಧದ ಬಗ್ಗೆ ಏನನ್ನೂ ಹೇಳಲಿಲ್ಲ. ಆದರೂ, ಅವರಿಗೆ ಸ್ವಲ್ಪ ಗೊತ್ತಿತ್ತೆನಿಸುತ್ತದೆ.

ಹೋಗುವಾಗ ಅವರು ನನಗೆ ಉಪದೇಶ ನೀಡಲು ಮರೆಯಲಿಲ್ಲ, "ನನ್ನ ಮಿತ್ರ, ನಿನಗೆ ಈ ಎಚ್ಚರಿಕೆಯನ್ನು ಕೊಡುವುದು ನನ್ನ ಕರ್ತವ್ಯವೆಂದು ತಿಳಿಯುತ್ತೇನೆ. ನೀನೀಗ ಧಿಣ್ಣೆಯ ಮೇಲೆ ನಿಂತಿದ್ದೀಯಾ, ಯಾವುದೇ ಕ್ಷಣದಲ್ಲಾ



"ನೀವು ಮಾಡಿದ ಕಜ್ಜಾಯದಲ್ಲಿ ಇಷ್ಟು,ದ ಕೂದಲು ಹ್ಯಾಗ್ರೀ ಬಂತು?"

[illegible] ಕೆಳಗೆ ಹಬ್ಬಿರುವ ಸೈತಾನನ ಪಂಜಗಳು ಬಹಳ ಉದ್ದವಾಗಿವೆ ಎನ್ನುವುದನ್ನು ಮರೆಯಬೇಡ. ನನ್ನ ಸಂಗಡ ಬಂದರೆ, ನಾನು ಕ್ಲೇರಿಮೋಂದಾಳ ಸಮಾಧಿಯನ್ನು ಮೂರು ಬಾರಿ ಸೀಲು ಮಾಡುವೆನು. ನಿನ್ನ ಸವಾಲ್ ಇರುವವರೆಗೆ ನಾನು ದೇವರಲ್ಲಿ ನಿನಗಾಗಿ ಪ್ರರ್ಥನೆ ಮಾಡುತ್ತಾ ಇರುವೆನು."

ಅವರು ಹೋದನಂತರವೂ ಹಲವಾರು ದಿನಗಳವರೆಗೆ ಅವರ ಶಬ್ದಗಳು ನನ್ನ ಕಿವಿಗಳಲ್ಲಿ ಪ್ರತಿಧ್ವನಿಸುತ್ತಿದ್ದವು. ಅವರು ನನ್ನ ಶುಭಚಿಂತಕರೂ, ಹಿತೈಷಿಗಳೂ ಎಂದು ನನಗೆ ಅನಿಸಿತು. ನಾನು ಕ್ಲೇರಿಮೋಂದಾಳನ್ನು ಮರೆಯುವ ಪ್ರಯಾಸ ಮಾಡತೊಡಗಿದೆ. ವಿಶೇಷರೂಪವಾಗಿ ಅವಳು ಈಗ ಸತ್ತುಹೋಗಿದ್ದರಿಂದ ಮತ್ತು ಅವಳ ನೆನಪಿನಲ್ಲಿ ಕಣ್ಣೀರು ಹರಿಸುತ್ತಾ ಇರುವುದರಿಂದ ಏನೂ ಪ್ರಯೋಜನವಿಲ್ಲ. ಆದರೆ, ಕ್ಲೇರಿಮೋಂದಾ ನನ್ನನ್ನು ಬಿಡಲು ತಯಾರಿಲ್ಲವೆಂದು ಅನಿಸುತ್ತಿತ್ತು. ಒಂದು ರಾತ್ರಿ ಅವಳು ನನ್ನ ಕನಸಿನಲ್ಲಿ ಬಂದು "ನಾನು ಬಹಳ ದಿನಗಳ ನಂತರ ನಿನ್ನನ್ನು ಭೇಟಿಯಾಗುತ್ತಿದ್ದೇನೆ—ನನ್ನ ಪ್ರಿಯ ರೋಮ್ಯೂ, ಆದರೆ ಇದರಿಂದ ನಾನು ನಿನ್ನನ್ನು ಮರೆತಿದ್ದೇನೆಂದು ತಿಳಿಯಬೇಡ. ನೋಡು, ನಾನು ಸಾಧಾ

ರಣವಾಗಿ ಯಾರೂ ವಾಪಸ್ಸು ಬಾರದಂತಹ ಲೋಕದಿಂದ ನಿನ್ನ ಹತ್ತಿರ ಬಂದಿದ್ದೇನೆ. ಆ ಲೋಕದಲ್ಲಿ ಸೂರ್ಯನಾಗಲಿ, ಚಂದ್ರನಾಗಲಿ, ಇಲ್ಲ. ಕೇವಲ ಆಕಾಶ ಮತ್ತು ನೆರಳು, ಅಲ್ಲಿ ರಸ್ತೆಯಾಗಲಿ ಮಾರ್ಗವಾಗಲಿ, ಭೂಮಿಯಾಗಲಿ ವಾಯುವಾಗಲೀ ಇಲ್ಲ, ಆದರೂ ನಾನು ಅಂತಹ ಲೋಕದಿಂದ ನಿನ್ನ ಹತ್ತಿರ ಬಂದಿದ್ದೇನೆ. ಇದಕ್ಕೆ ಒಂದೇ ಕಾರಣವೆಂದರೆ ಪ್ರೇಮ ಮೃತ್ಯುವಿಗಿಂತ ಹೆಚ್ಚು ಶಕ್ತಿ ಶಾಲಿಯಾಗಿದೆ. ಅದು ಯಾವಾಗಲೂ ಸಾವಿನ ಮೇಲೆ ಗೆಲುವು ಸಾಧಿಸುತ್ತದೆ. ಆ ಲೋಕದಿಂದ ಇಲ್ಲಿಗೆ ಬರಲು ನನಗೆ ಎಷ್ಟೆಷ್ಟು ಯಾತನೆಗಳನ್ನು ಎದುರಿಸಬೇಕಾಯಿತು ಎಂಬುದನ್ನು ನಿನಗೆ ಹೇಗೆ ಹೇಳಲಿ ? ಮತ್ತು ಇಲ್ಲಿಗೆ ಬಂದ ನಂತರವೂ ನನ್ನ ಯಾತನೆಗಳ ಕೊನೆಯಾಗಲಿಲ್ಲ. ನನ್ನ ಕೈಯನ್ನು ನೋಡು ಎಷ್ಟೊಂದು ಗಾಯಗಳಾಗಿವೆ" ಎನ್ನುತ್ತಾ ಅವಳು ತನ್ನ ಗಾಯವಾದ ಕೈಯನ್ನು ನನ್ನ ಕೈಯಲ್ಲಿಟ್ಟಳು. ನಾನು ಭಾವವಿಹ್ವಲನಾಗಿ ಅದನ್ನು ಚುಂಬಿಸತೊಡಗಿದೆನು. ನನಗೆ ಹಿರಿಯ ಪಾದರಿಯವರ ಉಪದೇಶವಾಗಲೀ, ನಾನು ಕ್ಲೇರಿಮೋಂದಾಳನ್ನು ನೆನೆಯುವುದಿಲ್ಲವೆಂದು ಮಾಡಿದ ನಿಶ್ಚಯವಾಗಲಿ ನೆನಪಾಗಲಿಲ್ಲ.

★ ★

ಕ್ಲೇರಿಮೋಂದಾಳನ್ನು ಪ್ರೇಮಿಸುವುದು ನನಗೆ ಸಹಜ ಹಾಗೂ ಸ್ವಾಭಾವಿಕವೆನಿಸುತ್ತಿತ್ತು. ಅವಳು ಕೂಡ ಯಾವ ಆಂತರಿಕ ನೋವೂ ಇಲ್ಲದೆ ನನ್ನನ್ನು ಪ್ರೇಮಿಸುತ್ತಾ "ನಿನ್ನನ್ನು ನೋಡಿದಾಗಿನಿಂದಲೂ ನಾನು ನಿನ್ನನ್ನು ಪ್ರೀತಿಸುತ್ತಾ ಇದ್ದೇನೆ. ಆಗಿನಿಂದಲೇ ನಿನ್ನನ್ನು ಹುಡುಕುತ್ತಾ ಇದ್ದೆ. ಏಕೆಂದರೆ, ನಾನು ನಿನ್ನನ್ನು ನನ್ನ ಆದರ್ಶ ಪ್ರೇಮಿಯ ರೂಪದಲ್ಲಿ ಸ್ವೀಕರಿಸಿದೆ. ನೀನು ಪಾದರಿ ಪದವಿಯನ್ನು ಸ್ವೀಕರಿಸುತ್ತಿದ್ದಾಗ ನನಗೆ ಬಹಳ ನಿರಾಶೆಯಾಗಿತ್ತು. ಅದನ್ನು ತಪ್ಪಿಸಲು ಬಹಳ ಪ್ರಯತ್ನಿಸಿದೆ. ಆದರೆ, ಅಸಫಲಳಾದೆ. ನೀನು ನನಗಿಂತಲೂ ಹೆಚ್ಚು ದೇವರನ್ನು ...ದೇವರನ್ನು ಪ್ರೀತಿಸುತ್ತಿದ್ದೆ" ಎಂದಳು.

"ಈಗ ನಾನು ನಿನ್ನನ್ನು ಮತ್ತು ದೇವರನ್ನು ಸಮಾನವಾಗಿ ಇಷ್ಟ ಪಡುತ್ತೇನೆ" ಎಂದು ಬಿಕ್ಕಳಿಸುತ್ತಾ ಹೇಳಿದೆ. ನನ್ನ ಈ ಮಾತು ಕೇಳಿ ಅವಳ ಮುಖ ಅರಳಿತು. ಅವಳು "ನಿಜವಾಗಿ!" ಎಂದು ಕೇಳಿದಳು. "ನೀನು ನಿಜವನ್ನೇ ಹೇಳುತ್ತಿದ್ದರೆ, ನಡಿ ನನ್ನ ಸಂಗಡ. ಈಗ ನಾನು ನಿನ್ನನ್ನು ಒಂಟಿ ಇರಲು ಬಿಡುವುದಿಲ್ಲ."

ಮುಂದಿನ ದಿನ, ನನ್ನನ್ನು ಸಂಗಡ ಕರೆದುಕೊಂಡು ಅವಳು ಪ್ರೇಮಿಗಳ ನಗರವಾದ ವೆನಿಸ್ ತಲುಪಿದಳು. ಅಲ್ಲಿ ಒಂದು ಭವ್ಯ ಭವನದಲ್ಲಿ ಇಬ್ಬರೂ ಉಳಿದುಕೊಂಡೆವು. ಅಲ್ಲಿ ನಾನೇ ರಾಜಕುಮಾರ, ಅವಳೇ ರಾಜಕುಮಾರಿ. ನಮ್ಮೆಲ್ಲಾ ವೇಳೆಯೂ ಸರಸ ಸಲ್ಲಾಪಗಳಲ್ಲಿ ಕಳೆಯಿತು.

ಕ್ಲೇರಿಮೋಂದಾಳನ್ನು ಪ್ರೀತಿಸುವುದು, ಒಟ್ಟಿಗೆ ಇಪ್ಪತ್ತು ಮಂದಿ ಪ್ರೇಯಸಿಯರನ್ನು ಪ್ರೇಮಿಸುವುದರ ಸಮಾನವೆಂದು ಶೀಘ್ರವೇ ನನಗನ್ನಿಸಿತು. ಅವಳ ಪ್ರೇಮಿಯಾಗಿರುವುದು ವಿಶ್ವದ ಪ್ರೇಯಸಿಯ ಪ್ರೇಮಿಯಾಗುವುದರ ಸಮಾನವೆಂದು ಹೇಳುವುದರಲ್ಲಿ ಅತಿಶಯೋಕ್ತಿ ಏನಿರಲಿಲ್ಲ. ಅವಳ ಪ್ರೀತಿಯ ದಾಹ ಅಧಿಕವಾಗಿತ್ತು. ಅವಳು ತಾನು ಪಡೆಯುತ್ತಿದ್ದ ಪ್ರೀತಿಯ ನೂರರಷ್ಟನ್ನು ಹಿಂತಿರುಗಿಸುತ್ತಿದ್ದಳು. ಅವಳ ಹತ್ತಿರ ಹಣಕ್ಕಾಗಲಿ ಅಧಿಕಾರಕ್ಕಾಗಲಿ ಆರೋಗ್ಯಕ್ಕಾಗಲಿ, ಯೌವನಕ್ಕಾಗಲಿ ಕೊರತೆ ಇರಲಿಲ್ಲ. ಅವಳು ಪ್ರೇಮಕ್ಕಾಗಿಯೇ ಜೀವಿಸುವಂತಿದ್ದಳು. ಅವಳು ಯಾವಾಗಲೂ ಪ್ರೇಮದಲ್ಲಿ ತೃಪ್ತಳಾದಂತೆ ಕಂಡುಬರುತ್ತಿರಲಿಲ್ಲ.

ಒಂದು ದಿನ ಅವಳು ತನ್ನ ಆರೋಗ್ಯ ಬಹಳ ತೀಕ್ಷ್ಣವಾಗಿ ಕೆಡುತ್ತಿದೆ ಎಂದು ಹೇಳಿದಳು. ನಾನು ಹಲವಾರು ಡಾಕ್ಟರರನ್ನು ಕರೆಸಿದೆ. ಆದರೆ ಅವರಲ್ಲಿ ಯಾರೂ ಅವಳ ರೋಗದ ಸರಿಯಾದ ಕಾರಣವನ್ನು ಕಂಡುಹಿಡಿಯಲಿಲ್ಲ. ಅವಳು ದಿನೇ ದಿನೇ ಕೃಶಳಾಗುತ್ತಿದ್ದಳು. ನನಗೆ ಅವಳು ಬಹಳ ದಿನ ಬದುಕುವುದಿಲ್ಲವೆಂದು ಹೆದರಿಕೆಯಾಗತೊಡಗಿತು. ಅವಳಿಗೂ ತಾನು ಬಹಳ ದಿನಗಳವರೆಗೆ ಅತಿಥಿಯಾಗಿರುವುದಿಲ್ಲವೆಂದು ಅನಿಸತೊಡಗಿತು.

ಆಗಲೇ ಒಂದು ಘಟನೆ ಘಟಿಸಿತು. ಅದರ ಕಾರಣ ಅವಳ ಆರೋಗ್ಯದಲ್ಲಿ ಬಹಳ ಬೇಗ ಸುಧಾರಣೆಯಾಗತೊಡಗಿತು. ಬದುಕುವ

ಅವಳ ಆಸೆ ಜಾಗೃತವಾಗತೊಡಗಿತು.

ನಾವಿಬ್ಬರೂ ಒಂದು ದಿನ ಕುಳಿತು ಉಪಾಹಾರ ಸೇವಿಸುತ್ತಿದ್ದೆವು. ಇದ್ದಕ್ಕಿದಂತೆಯೇ ಒಂದು ಹಣ್ಣು ಕತ್ತರಿಸುವಾಗ, ಚಾಕುವಿನಿಂದ ನನ್ನ ಒಂದು ಬೆರಳು ಕೊಯ್ದು ರಕ್ತ ಸುರಿಯತೊಡಗಿತು. ರಕ್ತ ನೋಡುತ್ತಲೇ ನಾನು ಹಿಂದೆಂದೂ ನೋಡದಂತಹ ಹೊಳಪು ಕ್ಲೇರಿಮೋಂದಾಳ ಕಣ್ಣಿನಲ್ಲಿ ಗೋಚರಿಸಿತು. ಅವಳು ಚಿರತೆಯಂತೆ ಮೇಲೆ ಹಾರಿದಳು. ನನ್ನ ಬೆರಳಿನಿಂದ ಹರಿಯುತ್ತಿದ್ದ ರಕ್ತವನ್ನು ಬಹಳ ಆಸೆಯಿಂದ ಕುಡಿಯತೊಡಗಿದಳು. ರಕ್ತ ನಿಂತ ಮೇಲೂ ಬಹಳ ಹೊತ್ತಿನವರೆಗೆ ಅವಳು ಕತ್ತರಿಸಿದ ಸ್ಥಳವನ್ನು ತುಟಿಯಿಂದ ಚೀಪುತ್ತಿದ್ದಳು. ನಂತರ ಅವಳು ಮುಗುಳ್ನಗುತ್ತಾ "ಈಗ ನಾನು ಸಾಯುವುದಿಲ್ಲ, ಖಂಡಿತಾ ನಾನೀಗ ಸಾಯುವುದಿಲ್ಲ. ಈಗ ನನಗೆ ಸಾಕಷ್ಟು ಸಮಯ ಪ್ರೇಮಿಸಲು ಸಿಗುವುದು. ಓಹ್ ! ನಾನೆಷ್ಟು ಅದೃಷ್ಟವಂತಳು. ನಿನ್ನ ರಕ್ತದ ಕೆಲವೇ ಹನಿಗಳು ನನಗೆ ಹೊಸ ಜೀವನ ಒದಗಿಸಿದೆ" ಎಂದಳು.

ಆ ರಾತ್ರಿ, ನಾನು ಕನಸಿನಲ್ಲಿ ಹಿರಿಯ ಪಾದರಿಯವರು ಗದರಿಸುತ್ತಾ ಇದ್ದುದನ್ನು ಕೇಳಿದೆ "ನಿನಗೇನಾಗಿದೆ, ನನ್ನ ಮಿತ್ರ ! ಮೊದಲು ನೀನು ನಿನ್ನ ಆತ್ಮವನ್ನು ಆ ಚಾಂಡಾಲಿಗೆ ಮಾರಿದೆ. ಈಗ ಶರೀರವನ್ನು ಮಾರಲು ಹೊರಟಿದ್ದೀಯಾ, ಕೊನೆಗೆ ನಿನಗೇನಾಗಿದೆ ?

ಆದರೆ, ನನಗೆ ಏನಾಗಿದೆ ಎನ್ನುವುದು ನನಗೇ ತಿಳಿದಿರಲಿಲ್ಲ. ನಾನು ಸಂಪೂರ್ಣವಾಗಿ ಅವಳ ಕೈಯಲ್ಲಿ ಆಡುತ್ತಿದ್ದೇನೆ ಎಂಬುದನ್ನು ಮಾತ್ರ ತಿಳಿದಿದ್ದೆ.

ಆದರೆ, ನನ್ನ ಶರಾಬಿನಲ್ಲಿ ಆಕೆ ಪೌಡರ್ ಹಾಕುತ್ತಿರುವುದನ್ನು ಕನ್ನಡಿಯಲ್ಲಿ ನೋಡಿದಾಗ ನನ್ನ ಕಣ್ಣು ತೆರೆಯಿತು. ನನ್ನನ್ನು ಮೂರ್ಛೆಗೊಳಿಸಿ ನನ್ನ ರಕ್ತವನ್ನು ಕುಡಿಯಲು ಇಚ್ಛಿಸುತ್ತಿದ್ದಾಳೆಂದು ನಾನು ತಿಳಿದೆ. ಅವಳು ಮಾನವಿಯಲ್ಲ, ಡಾಕಿನಿ ಎಂಬುದು ನನಗೆ ಮನವರಿಕೆಯಾಯಿತು.

ನಾನು ಅವಳ ಕೆಲಸ ಸಫಲವಾಗಲು ಬಿಡಲಿಲ್ಲ. ಪೌಡರ್ ಬೆರೆಸಿದ ಶರಾಬನ್ನು ಸಮಯ




ನೋಡಿ ಚೆಲ್ಲಿಬಿಟ್ಟೆನು. ಈ ವಿಷಯ ನಾನು ಅವಳಿಗೆ ಹೇಳಲಿಲ್ಲ.

ಒಂದು ರಾತ್ರಿ ನಾನು ನಿದ್ರಿಸುವುದರಲ್ಲಿದ್ದಾಗ, ಅವಳು ಒಂದು ಚಿನ್ನದ ಪಿನ್ನಿನಿಂದ ನನ್ನ ತೋಳಿನಿಂದ ಸ್ವಲ್ಪ ರಕ್ತ ತೆಗೆದು ಅದನ್ನು ನೆಕ್ಕುತ್ತಾ ಅಸ್ಪಷ್ಟ ಸ್ವರದಲ್ಲಿ ಹೇಳಿದಳು.

"ಓ ನನ್ನ ಪ್ರಿಯತಮ ! ನಿನ್ನ ರಕ್ತದ ಈ ಹನಿಗಳ ಕಾರಣ ನನಗೆ ಹೊಸ ಜೀವನ ಸಿಗುವುದು. ನನಗೆ ಈ ರೀತಿಯ ಪುಷ್ಟಿಯಿಂದ ರಕ್ತ ಸಿಗದಿದ್ದಾಗ, ನಾನು ಸತ್ತು ಹೋಗುತ್ತೇನೆ. ಈ ಪ್ರಕಾರ ನಾನು ಪದೇ ಪದೇ ಸತ್ತಿದ್ದೇನೆ. ಮತ್ತು ನಿನ್ನ ಪುಷ್ಟಿಯಾದ ರಕ್ತವನ್ನು ಪಡೆದು ನನಗೆ ಹೊಸ ಜೀವನ ಪ್ರಾಪ್ತವಾಗಿದೆ. ಒಂದು ಮಾತನ್ನು ಕೇಳು ಪ್ರಿಯತಮ ! ನಾನು ಕೇವಲ ನನಗೆ ಯಾರ ರಕ್ತ ಅನುಕೂಲವೆನಿಸುತ್ತದೋ, ಅಂತವರನ್ನೇ ಪ್ರೇಮಿಯನ್ನಾಗಿ ಮಾಡಿಕೊಳ್ಳುತ್ತೇನೆ."

ಇಷ್ಟನ್ನು ಹೇಳಿ ಅವಳು ಅಳತೊಡಗಿದಳು. ನನಗೀಗ ಅವಳು ಮಾನವಿಯಲ್ಲ ಒಬ್ಬ


ದಾವಣಗೆರೆ
ಪಾಲಿಯೆಸ್ಟರ್ ಸೂಟಿಂಗ್ಸ್, ಶರ್ಟಿಂಗ್ಸ್
ಸೂಟಿಂಗ್ಸ್: ಎಮರಾಲ್ಡ್, ಮಾನಸಿಯರ್, ಗೇಲಾರ್ಡ್, ರಾಮ್‌ಸನ್
ಶರ್ಟಿಂಗ್ಸ್: ರಾಕಿ, ದಾವನ್‌ಲೈಟ್, ದಾವರಿನ್
ಹೊಸ ಶೈಲಿಯಲ್ಲಿ ಸುಖಕರ ಮನಮೋಹಕ ಶ್ರೇಷ್ಠ ಆಯ್ಕೆ
ದಾವಣಗೆರೆ
ಫ್ಯಾಷನ್
ಫ್ಯಾಬ್ರಿಕ್ಸ್
ದಿ ದಾವಣಗೆರೆ ಕಾಟನ್ ಮಿಲ್ಸ್ ಲಿಮಿಟೆಡ್, ದಾವಣಗೆರೆ 577 002.
ಸೀರೆಗಳು, ಸೂಟಿಂಗ್ಸ್, ಶರ್ಟಿಂಗ್ಸ್, ಡ್ರೆಸ್ ಮೆಟೀರಿಯಲ್ಸ್, ಲಾಂಗ್‌ಕ್ಲಾತ್ ಹಾಗೂ ಧೋತರಗಳ ತಯಾರಕರು
ಷೋರೂಮ್‌ಗಳು: ● ಕಾವೇರಿ ಭವನ್ ಬೆಂಗಳೂರು 560 009 ● ದಾಜೀಬಾನ್ ಪೇಟೆ, ಹುಬ್ಬಳ್ಳಿ 580 020
● ಹೊಳಲ್ಕೆರೆ ರೋಡ್ - ಚಿತ್ರದುರ್ಗ 577 501 ● ಚಿತ್ರದುರ್ಗ ರೋಡ್ - ದಾವಣಗೆರೆ 577 022
MAP DCM 54 KAN

ಚೋರಿಣಿಯೇ, ಮಾನವರ ಶುದ್ಧ ರಕ್ತವನ್ನು ಕುಡಿದು ಜೀವನ ನಡೆಸುತ್ತಿದ್ದ ರಕ್ಕಸಿಯೆಂದು ಮನವರಿಕೆಯಾಯಿತು.

ಆದರೆ ಈ ವಿಶ್ವಾಸದ ಕಾರಣದಿಂದಾಗಿ ನನಗೆ ಅವಳಿಂದ ಬಿಡುಗಡೆ ಸಿಗುತ್ತಿರಲಿಲ್ಲ. ನನ್ನ ಪರಿಸ್ಥಿತಿ ಮತ್ತು ಆರೋಗ್ಯದ ಬಗ್ಗೆ ತಿಳಿದ ಹಿರಿಯ ಪಾದರಿಯವರೇ ನನ್ನನ್ನು ಅವಳಿಂದ ಬಿಡುಗಡೆ ಮಾಡಿಸಿದರು.

ಒಂದು ದಿನ ಅವರು ಬಂದು, "ಮಿತ್ರ ಆ ಚೋರಿಣಿಯ ಬಗೆಗೆ ನಿನ್ನ ಮೋಹಗ್ರಸ್ತತೆಯ ನಿವಾರಣೆಗೆ ಕೇವಲ ಒಂದೇ ಒಂದು ಉಪಾಯ ಇದೆ. ನೀನು ನನ್ನ ಸಂಗಡ ಬಂದು ಕ್ಲೇರಿ ಮೋಂದಾಳ ಸಮಾಧಿಯನ್ನು ನೋಡು. ಅದನ್ನು ನೋಡಿ ನಿನಗೆ ಅವಳು ಸತ್ತಿದ್ದಾಳೆಂದು ವಿಶ್ವಾಸವುಂಟಾಗುತ್ತದೆ. ಯಾವ ಕ್ಲೇರಿಮೋಂದಾಳನ್ನು ನೀನು ಪ್ರೀತಿಸುತ್ತೀಯೋ ಅದೊಂದು ಕಲ್ಪನೆ. ಒಂದು ಕನಸು. ಅದಕ್ಕೆ ಯಾವ ಅಸ್ತಿತ್ವವೂ ಇಲ್ಲ" ಎಂದು ಹೇಳಿದರು.

ಅವರು ನನ್ನನ್ನು ಸ್ಮಶಾನಕ್ಕೆ ಕರೆತಂದರು. ಅಲ್ಲಿ ಅವರು ನನಗೆ ಒಂದು ಗೋರಿಯನ್ನು ತೋರಿಸಿದರು. ಅದರ ಮೇಲೆ ಬರವಣಿಗೆ ಈ ರೀತಿ ಇತ್ತು.

"ಇಲ್ಲಿ ಸುಂದರಿ ಕ್ಲೇರಿಮೋಂದಾ' ಚಿರನಿದ್ರೆಯಲ್ಲಿ ಮಲಗಿದ್ದಾಳೆ" ಇನ್ನೂ ನಂಬಿಕೆ ಉಂಟಾಗದಿದ್ದರೆ ಈ ಸಮಾಧಿಯನ್ನು ಅಗೆದು ನೋಡು" ಎಂದು ಹಿರಿಯ ಪಾದರಿಯವರು ಹೇಳಿದರು. ನನ್ನ ಮೌನವನ್ನು ಸಮ್ಮತಿಯ ಸೂಚನೆ ಎಂದು ತಿಳಿದು ಸಮಾಧಿಯನ್ನು ಅಗೆಯತೊಡಗಿದರು.

ಅಗೆಯುವುದು ಪೂರ್ಣವಾದ ನಂತರ ನಾನು ಸಮಾಧಿಯ ಒಳಗೆ ಮಲಗಿದ್ದ ಕ್ಲೇರಿಮೋಂದಾಳನ್ನು ನೋಡಿದೆ. ಅದನ್ನು ನೋಡಿ ಹಿರಿಯ ಪಾದರಿಯವರು ಕೂಗಿ ಹೇಳಿದರು. "ಇವಳೇ ನಿನ್ನ ಚೋರಿಣಿ, ಪ್ರೇಯಸಿ. ಅವಳ ಶರೀರ ತಣ್ಣಗಾಗಿದೆ. ಮಣ್ಣಿನಲ್ಲಿ ಸೇರಿ ಮಣ್ಣಾಗುವಳು. ನೀನು ಯಾರನ್ನು ಪ್ರೀತಿಸುತ್ತೀಯೋ ಅದೊಂದು ಕನಸು."

ಅವರ ಈ ಶಬ್ದವನ್ನು ಕೇಳಿ ನಾನು ಮೋಹ ನಿದ್ರೆಯಿಂದ ಎಚ್ಚೆತ್ತೆ.

ಆ ರಾತ್ರಿ ಕೊನೆಯ ಬಾರಿ ಕನಸಿನಲ್ಲಿ ಕ್ಲೇರಿ ಮೋಂದಾಳೊಡನೆ ಭೇಟಿಯಾಯಿತು. ಅವಳು ಅಳುತ್ತಾ ನನ್ನೊಡನೆ ನೀನು ಇದೇನು ಮಾಡಿದೆ ? ನನ್ನ ಪ್ರಿಯತಮ ! ಆ ಮೂರ್ಖ ಪಾದರಿಯ ನಿಷ್ಪ್ರಯೋಜಕ ಮಾತಿನಲ್ಲಿ ಹೇಗೆ ವಿಶ್ವಾಸ ವಿಟ್ಟೆ? ನೀನು ನನ್ನೊಡನೆ ಸುಖವಾಗಿರ ಲಿಲ್ಲವೆ? ನಾನೇನು ತಪ್ಪುಮಾಡಿದ್ದೆ ಎಂದು ನೀನು ನನ್ನ ಸಮಾಧಿಯನ್ನು ಅಗೆದು, ನನ್ನ ಶವಕ್ಕೆ ಕಷ್ಟವನ್ನು ಕೊಟ್ಟೆ? ಏನಾದರಾಗಲಿ. ಇಂದಿನಿಂದ ನನ್ನ ಆತ್ಮ ನಿನ್ನ ಆತ್ಮವನ್ನು ಸಂಪರ್ಕಿಸುವುದಿಲ್ಲ ಅಥವಾ ನಮ್ಮಿಬ್ಬರ ಭವಿಷ್ಯದಲ್ಲಿ ಎಂದಿಗೂ ಶಾರೀರಿಕ ಮಿಲನ ವಾಗುವುದಿಲ್ಲ. ಬರಲೇ ! ಆದರೆ ಹೋಗುವ ಮೊದಲು ಅವಶ್ಯಕವಾಗಿಯೂ ಹೇಳುತ್ತೇನೆ. ನನ್ನನ್ನು ಕಳೆದುಕೊಂಡು ನೀನು ಯಾವಾಗಲೂ ಬಹಳ ಪಶ್ಚಾತ್ತಾಪ ಪಡುತ್ತೀಯೆ" ಎಂದು ಹೇಳಿದಳು.

ಅವಳ ಈ ಎಚ್ಚರಿಕೆ ನಿಜವಾಯಿತು. ಅವ ಳನ್ನು ಕಳೆದುಕೊಂಡು ನಾನು ಇಂದಿಗೂ ಪಶ್ಚಾತ್ತಾಪ ಪಡುತ್ತಿದ್ದೇನೆ. ಅವಳು ನನ್ನ ಜೀವನದಲ್ಲಿ ಇದ್ದಷ್ಟು ದಿನ, ನನ್ನ ಜೀವನ ಬೆಳಕಿನಿಂದ ಜಗಮಗಿಸುತ್ತಿತ್ತು. ಇಂದು ಅದ ರಲ್ಲಿ ಘೋರ ಕತ್ತಲೆ ತುಂಬಿದೆ.

ಇಂಗಿದೆ ನನ್ನ ಯೌವನದ ಕತೆ. ಯಾವಾಗಿ ನಿಂದ ನೆನಪಿನ ರೂಪದಲ್ಲಿ ನನ್ನ ಮನಸ್ಸಿನಲ್ಲಿ ಸುಮ್ಮನೆ ನೆನೆಯುತ್ತಿದ್ದೆನೋ ತಿಳಿಯದು.

ಏನು ನಡೆದಿತ್ತೊ ಅದನ್ನು ನಾನು ಪ್ರಾಮಾ ಣಿಕವಾಗಿ ನೇರವಾಗಿ ವರ್ಣಿಸಿದ್ದೇನೆ. ಈಗ ಅದರ ಮೇಲೆ ನಂಬಿಕೆ ಇಡುವುದು ಬಿಡುವುದು. ನಿಮಗೇ ಸೇರಿದ್ದು. ●

ಗುಲಾಮಗಿರಿ ಅಪರಾಧ ಅಲ್ಲವೆಂದಾದರೆ ಈ ಜಗತ್ತಿನಲ್ಲಿ ಬೇರಾವುದೂ ಅಪರಾಧವಲ್ಲ.

— ಅಬ್ರಹಾಂ ಲಿಂಕನ್

ಶಬ್ದಾರ್ಥ ಚಿಂತಾಮಣಿ

• ಪಾವೆಂ •

— : 118 : —

ಶಬ್ದ ವ್ಯಾಪಾರಗಳಲ್ಲಿ ಇದೊಂದು ಸೋಜಿಗ. ಒಂದು ಶಬ್ದ ಒಂದು ಪ್ರದೇಶದಲ್ಲಿ ಒಂದರ್ಥದಲ್ಲಿ ಪ್ರಯೋಗದಲ್ಲಿರುತ್ತದೆ; ಆದರೆ ಐತಿಹಾಸಿಕವಾಗಿಯೂ ಪ್ರಾದೇಶಿಕವಾಗಿಯೂ ಅದಕ್ಕೆ ಸಂಬಂಧಿತವಾದ ಹತ್ತಿರದ ಬೇರೆ ಭಾಷೆಗಳಲ್ಲಿ ಅದರ ಪ್ರಸಾರ ಕಾಣಿಸುವುದಿಲ್ಲ; ಬದಲಾಗಿ ದೂರದ ಪ್ರದೇಶಗಳಲ್ಲಿ ಸಂಬಂಧಿತವಲ್ಲದ ಭಾಷೆ ಅಥವಾ ಭಾಷೆಗಳಲ್ಲಿ ಅದೇ ಶಬ್ದ ಅದೇ ಅರ್ಥದಲ್ಲಿ ನಡೆಯುತ್ತಿರುತ್ತದೆ. ಇದು ಹೇಗೆ, ಯಾಕೆಂಬುದು ತಿಳಿಯುವುದಿಲ್ಲ. ಕೆಲ ಉದಾಹರಣೆಗಳನ್ನು ಇಲ್ಲಿ ಚರ್ಚಿಸುವ.

ಕರ್ನಾಟಕದ ಕರಾವಳಿಯಲ್ಲಿ, ಅದೂ ದಕ್ಷಿಣ ಕನ್ನಡದಲ್ಲಿ 'ಬೊಜ್ಜ' ಎಂಬ ಪದ ಸತ್ತವರ ಅಂತ್ಯಕ್ರಿಯೆ. ಅದರ ಸಂಬಂಧವಾಗಿ ನಡೆಯುವ ಭೋಜನ ಇದಕ್ಕೆಲ್ಲ ಸೇರಿ ಅನ್ವಯಿಸುತ್ತದೆ. ಬಹುತರವಾಗಿ ತುಳು ಜನರಲ್ಲಿ- ಬ್ರಾಹ್ಮಣೇತರರಲ್ಲಿ, ಬ್ರಾಹ್ಮಣರಲ್ಲಿ ಕೂಡ ಮತ್ತೆ ಕನ್ನಡ ಮನೆಮಾತಿನ ನೆರೆಯ ಜನರಲ್ಲಿ ಅದು ಬಳಕೆಯಲ್ಲಿದೆ. ಈ ಶಬ್ದದ ಮೂಲಕ್ಕೆ ಹೆಚ್ಚು ತಡಕಾಡಬೇಕಾಗಿಲ್ಲ. ಅದು ಸಂಸ್ಕೃತದ ಭೋಜ್ಯ, ಭೋಗದ ತದ್ಭವ. ಅರ್ಥ: ಊಟ, ಊಟದ ಪದಾರ್ಥಗಳು, ದೇವರಿಗಿಡುವ ನೈವೇದ್ಯ. 'ಬೊಜ್ಜ ತಿನ್ನು' ಅಂದರೆ ಉತ್ತರಕ್ರಿಯೆಯ ಭೋಜನಕ್ಕೆ ಹೋಗು ಎಂಬ ಪ್ರಯೋಗದಿಂದ ಬೊಜ್ಜ ಎಂಬುದು ಅಪರ ಕರ್ಮದ ಊಟಕ್ಕೆ ಮೊದಲು ಅನ್ವಯಿಸಿ ಅನಂತರ ಉತ್ತರಕ್ರಿಯೆಯ ಎಲ್ಲ ಪ್ರಕ್ರಿಯೆಗಳಿಗೆ ಸಲ್ಲತೊಡಗಿತೆಂಬಲ್ಲಿ ಸಂಶಯವಿಲ್ಲ.

ಸರಿ. ಆದರೆ ಕನ್ನಡದ ಇತರ ಪ್ರದೇಶಗಳಲ್ಲಿ, ಆ ಜಿಲ್ಲೆಗೆ ತಗಲಿರುವ ಶಿವಮೊಗ್ಗ [illegible] ಜಿಲ್ಲೆಗಳಲ್ಲಿ ಕೂಡ ತುಳು ವಲಸೆಗಾರರಲ್ಲಿ ಹೊರತು ಉತ್ತರಕ್ರಿಯೆಗಳಿಗೆ ಬೊಜ್ಜ ಎಂಬ ಹೆಸರಿಲ್ಲ. ಆದರೆ ಈಚೆಗೆ ಬಂಗಾಳಿಗರ ಮರಣದ ನಂತರ ಅವರ ಅಪರ ಕರ್ಮಗಳಿಗೆ ಸಂಬಂಧಿಸಿದ ಸುದ್ದಿಯಲ್ಲಿ ಭೋಗ, ಭೋಜ ಶಬ್ದಗಳನ್ನು ಗುರುತಿಸಿ ನಾನು ಚಕಿತನಾದೆ. ಪಂಜಾಬಿನಲ್ಲಿ, ಅಲ್ಲಿಯ ಸಿಖರಲ್ಲಿಯೂ ಇದೇ ಶಬ್ದಗಳು ಇವೆಯೆಂದು ತಿಳಿಯಿತು. ಒಂದು ಬಂಗಾಳಿಗಳಲ್ಲಿ ಕೂಡ ಉತ್ತರಕ್ರಿಯೆಗೆ ವಿಶೇಷವಾಗಿ ಅನ್ವಯವಾಗುವ ಭೋಗ, ಭೋಜ ಶಬ್ದಗಳು ನೈವೇದ್ಯ, ಭೂರಿ ಭೋಜನಗಳಿಗೆ ಅನ್ವಯಿಸುತ್ತವೆ. ಆದರೆ ಹತ್ತಿರದ ಕನ್ನಡ ಪ್ರದೇಶಗಳಲ್ಲಿ ಇವು ಯಾಕೆ ಜನಜನಿತವಾಗಿಲ್ಲ? ಉತ್ತರದಿಂದ ಒಂದು ಕಪ್ಪೆ ಜಿಗಿತ ಮಾಡಿದಂತೆ ಕರಾವಳಿಗೆ ಬೊಜ್ಜ ಹೇಗೆ ಬಂತು? ನನಗೆ ಗೊತ್ತಿಲ್ಲ.

ಇಂಥದೇ ಇನ್ನೊಂದು ಶಬ್ದ 'ಸಂಕ'. ಅರ್ಥ ಚಿಕ್ಕ ಸೇತುವೆ ಅಥವಾ [illegible] ಉತ್ತರ ಕರ್ನಾಟಕ ಪ್ರದೇಶದಲ್ಲಿ, ಹಿಂದಿಯಲ್ಲಿ ಕೂಡ 'ಪೂಲ್' (ಇಂಗ್ಲಿಷಿನಲ್ಲಿ briege culvert). [illegible] ಪ್ರದೇಶಗಳಲ್ಲಿ ಬಳಕೆಯಲ್ಲಿಲ್ಲ. [illegible] 15 16ನೇ ಶತಮಾನದ [illegible] (ಸಂಕಟು) [illegible] ಇದೆ. ಈಗಲೂ [illegible] 'ಸಾಂಕವ' 'ಸಾಂಕವ' ಎಂದೂ, ಹಿಂದಿಯಲ್ಲಿ 'ಸಾಕೂ' ಎಂದೂ, ಬಂಗಾಲಿಯಲ್ಲಿ 'ಸಾಂಕೋ' ಎಂದೂ ಇದು [illegible] ಸಂಸ್ಕೃತದ 'ಸಂಕ್ರಮ' [illegible]

ದಕ್ಷಿಣ ಕನ್ನಡದಲ್ಲಿ ನಾಯಿಗೆ ನಾಯಿಯೆಂಬುದಲ್ಲದೆ ಗಂಡಿಗೆ 'ಬೊಗ್ರ' ಎಂದೂ ಹೆಣ್ಣಿಗೆ 'ಬೊಗ್ಗಿ'ಯೆಂದೂ ಹೆಸರುಂಟು. ತುಳುವಿನಲ್ಲಿ ಹೆಚ್ಚಾಗಿ, ಕನ್ನಡದಲ್ಲಿ ಕ್ವಚಿತ್ತಾಗಿ ಈ ಪದ ಬಳಕೆಯಲ್ಲಿದೆ. ಹರಿಜನ ಪಂಗಡಗಳಲ್ಲಿ ಒಂದಾದ ಕೊರಗರಲ್ಲಿ ಹುಡುಗರಿಗೆ ಬೊಗ್ರ ಎಂದೂ ಹುಡುಗಿಯರಿಗೆ ಬೊಗ್ಗಿಯೆಂದೂ ಸಾಮಾನ್ಯ ಸಂಬೋಧನೆ ಇದೆ. ದಲಿತ ಜಾತಿಗಳಲ್ಲಿ ತಮ್ಮನ್ನೇ ಕೀಳಾಗಿಸಿಕೊಳ್ಳುವುದು ಎಷ್ಟು ರಕ್ತಗತವಾಗಿದೆಯೆಂಬುದಕ್ಕೆ ಇದೊಂದು ಸಾಕ್ಷಿ; ಅವರ ಮೇಲಿನ ಜಾತಿಯವರಲ್ಲಿ ಕೂಡ, ಯಾವುದೊಂದು ಸಂಭಾವ್ಯ ಅನಿಷ್ಟವನ್ನು ನಿವಾರಿಸಿಕೊಳ್ಳಲು ಮಕ್ಕಳಿಗೆ ಅನಿಷ್ಟ ಹೆಸರಿಡುವ ಸಂಪ್ರದಾಯವನ್ನು ಅನುಸರಿಸಿ ಬೊಗ್ಗು, ಬೊಗ್ರ ಎಂಬ ಹೆಸರಿಟ್ಟು ಕರೆಯುವುದುಂಟು. ಡಾ. ಶಂ.ಬಾ. ಜೋಶಿಯವರು 'ಕರ್ನಾಟಕದ ವೀರಕ್ಷತ್ರಿಯರು' ಗ್ರಂಥದಲ್ಲಿ ಇಲ್ಲಿನ ಮಲ್ಲಯ್ಯ ದೇವರ ಭಕ್ತರು ತಮ್ಮನ್ನು ಆ ದೇವರ ನಾಯಿಗಳೆಂದು ಭಾವಿಸಿಕೊಂಡು (ಅನು-ನಾಯಿಗಳು) 'ವಗ್ಗಯ್ಯ' ಎಂದು ಕರೆದುಕೊಳ್ಳುತ್ತಾರೆಂದು ದಾಖಲಿಸಿದಾರೆ. ದಾಖಲಿಸಿದಾರೆ. ತುಳುನಾಡಿನ ಬೊಗ್ಗಗಳೂ ಈ 'ವಗ್ಗಯ್ಯಗಳೂ ಒಂದೇ ಎಂದಾಯಿತು. ಆದರೆ ನಾಯಿಗಳಿಗೆ ವಗ್ಗಯ್ಯ, ಬೊಗ್ರ ಎಂಬ ಅಭಿಧಾನ ಹೇಗೆ ಬಂತು? ಅದು 'ವ್ಯಾಘ್ರ' ಎಂಬ ಸಂಸ್ಕೃತ ಪದದ ತದ್ಭವ. ವ್ಯಾಘ್ರ=ಹುಲಿ. ವ್ಯಾಘ್ರ-ಬಾಘ-ಬಗ್ಗ-ಬೊಗ್ರ. ನಾಯಿ ಎಂದರೆ 'ಗ್ರಾಮಸಿಂಹ' ತಾನೆ! ಈಗಿನವರು ನಾಯಿಗಳಿಗೆ Tiger ಎಂದು ಹೆಸರಿಡುತ್ತಾರಲ್ಲ. ಹಾಗೆ ಹಿಂದಿನವರು ಮನುಷ್ಯರಿಗೆ ನಾಯಿಗಳೆಂದು ಹೆಸರು ಕೊಡುತ್ತಿದ್ದರು !

ನಾಯಿಗಿರುವ ಒಂದು ಸಂಸ್ಕೃತ ಹೆಸರು 'ಕುರ್ಕುರ' ಅಥವಾ 'ಕುಕ್ಕುರ'. ಇದು ದ್ರಾವಿಡರ ಬಹುತರ ಭಾಷೆಗಳಲ್ಲಿ ಕಾಣಿಸುವ ಗೊರೆ, ಕೊರೆ ಎಂಬ ಅನುಕರಣ ಧಾತುವಿನಿಂದ ಸಂಸ್ಕೃತ ಸ್ವೀಕರಿಸಿರಬಹುದಾದ ಪದವೆಂದು ಗಣಿಸಲಾಗಿದೆ. ತೆಲುಗಿನಲ್ಲಿ, ತಮಿಳಿನಲ್ಲಿ 'ಕುಕ್ಕ' ಎಂಬೊಂದು ಹೆಸರು ನಾಯಿಗಿದೆ. ಆದರೆ ಇತರ ದ್ರಾವಿಡ ಭಾಷೆಗಳಲ್ಲಿ ನಾಯಿಯನ್ನು 'ಕುರೋ ಕುರೋ' ಇತ್ಯಾದಿಯಾಗಿ ಕರೆಯುವುದಿದ್ದರೂ ನಾಯಿಗೇ ಅದನ್ನು ಪ್ರಯೋಗಿಸುವುದಿಲ್ಲ. ತುಳುವಿನಲ್ಲಿ ಮಾತ್ರ 'ಕೂಕುರು' ಎಂದು ನಾಯಿಯ ಮರಿಗೆ ಹೆಸರುಂಟು. ಅಂತ್ಯ ರಕಾರ ಸಹಿತವಾಗಿ ಸಂಸ್ಕೃತದಲ್ಲಿ ಈ ಶಬ್ದ ಕಾಣಿಸುವುದರಿಂದ ಅದನ್ನು ತುಳುವಿನಿಂದ ಸಂಸ್ಕೃತ ಸ್ವೀಕರಿಸಿತೆ? ನಂಬಲು ಕಷ್ಟ. ಆದರೆ ತುಳುವನ್ನೇ, ತಮಿಳು, ಕನ್ನಡದಂಥ ನೆರೆಯ ದಕ್ಷಿಣ ದ್ರಾವಿಡ ಗುಂಪಿಗೆ ಸೇರಿಸದೆ, ದೂರದ ತೆಲುಗು ಇತ್ಯಾದಿ ಮಧ್ಯ ದ್ರಾವಿಡ ಗುಂಪಿಗೆ ಭಾಷಾಶಾಸ್ತ್ರಗಳು ಸೇರಿಸುತ್ತಿರುವುದನ್ನು ನಂಬಬಹುದಾದರೆ ಸಂಸ್ಕೃತ ತುಳುವಿನಿಂದ ಸ್ವೀಕರಿಸಿತೆನ್ನುವುದು ಅಸಂಭವ ಹೇಗಾದೀತು?

ನನ್ನನ್ನು ಸೋಜಿಗಗೊಳಿಸಿದ ಇನ್ನೊಂದು ಶಬ್ದ. ತುಳುವಿನ 'ಶಿಮ' ಶಬ್ದ ಸಂಸ್ಕೃತದಲ್ಲಿ ಹಿಮ ಹೇಗೊ ಹಾಗೆ ಚಳಿ, Snow ಎಂಬರ್ಥಗಳನ್ನು ತುಳುವಿನಲ್ಲಿ 'ಶಿಮ' ಕೂಡ ಕೊಡುತ್ತದೆ. ದ್ರಾವಿಡ ಭಾಷಾಶಾಸ್ತ್ರಿಗಳು, 'ಚಿಮ್ಮಲ್' =(ತಮಿಳಲ್ಲಿ ಸೀನು, ಇತರ ದ್ರಾವಿಡ ಭಾಷೆಗಳಲ್ಲಿ ಒದ್ದೆತನ, ಜವುಳು) ನೊಡನೆ ತುಳುವಿನ 'ಶಿಮ'ವನ್ನು ಸಾಲುಗಟ್ಟಿಸುತ್ತಾರೆ. ಹಾಗಾದರೆ ಸಂಸ್ಕೃತವೇ ದ್ರಾವಿಡದಿಂದ ಕೊಂಡಿತೊ ಎಂದರೆ ಸಂಸ್ಕೃತದಲ್ಲಿ ಋಗ್ವೇದದಲ್ಲೇ ಇದರ ಪ್ರಯೋಗವಿದೆಯಲ್ಲದೆ ಇರಾಣದ ಪ್ರಾಚೀನ ಜೆಂಡ್ ಭಾಷೆಯಿಂದಾರಂಭಿಸಿ ಯುರೋಪಿನ ಲ್ಯಾಟಿನ್‌ವರೆಗೆ ಭಾರೋಪ್ಯ ಭಾಷೆಗಳಲ್ಲೆಲ್ಲ 'ಹಿಮ'ದ ಸಂವಾದಿಗಳಿವೆ. ಭಾಷೆಗಳಲ್ಲಿ ಕೆಲವೊಮ್ಮೆ ಇಂಥ ಚಿದಂಬರ ರಹಸ್ಯಗಳು ತಲೆ ಕೆಡಿಸುತ್ತವೆ.

★ ★ ★

'ಪಥ್ಯ' ಎಂದೊಡನೆ ಹೆಚ್ಚಾಗಿ ಅಸ್ವಸ್ಥರಾದವರಿಗೆ ವೈದ್ಯರು ನಿಯಮಿಸುವ ಹಿತಕರ ಆಹಾರಗಳು ಎಂದು ತಿಳಿಯುತ್ತೇವೆ. ಇದು ಹೊರಟಿದ್ದು ಮಾತ್ರ 'ದಾರಿ' ಎಂಬರ್ಥದ ಸಂಸ್ಕೃತ 'ಪಥ' ಶಬ್ದದಿಂದ. ದಾರಿ, ಅಂದರೆ ಸರಿದಾರಿಯಲ್ಲಿ ಸಾಗುವಂಥದ್ದು, ಅದರಲ್ಲಿ ನಡೆಯುವವರು ಸ್ವೀಕರಿಸುವಂಥದು ಎಂಬಿತ್ಯಾದಿಯಾಗಿ ಈ ಪದದ ಹಿಂದಿರುವ ಆಲೋಚನೆ.

★ ★ ★

ದಕ್ಷಿಣ ಕನ್ನಡಕ್ಕೆ ಹೋಗಿ, ನಾಲ್ಕು ದಿನ ನಿಂತಿದರೆ 'ನಂಬರ' ಅಥವಾ 'ನಂಬ್ರ' ನಿಮ್ಮ ಕಿವಿಗೆ ಬಿದ್ದೇ ಬೀಳುತ್ತದೆ. 'ನಾನೇನೋ ಒಳ್ಳೇದಕ್ಕೆ ಹೇಳಿದೆ. ಅದನ್ನ ದೊಡ್ಡ ನಂಬ್ರ ಮಾಡಿಬಿಟ್ಟ' ಎಂದು ಸಾತ್ವಿಕ ಪರಿತಾಪ ಪಡುವವರಾಗಲಿ, 'ರಸ್ತೇಲಿ ನಿನಪ್ಪ ನಿಮ್ಮ ನಂಬ್ರ?' ಎಂದು ಕೇಳುವವರಾಗಲಿ ನಿಮಗೆ ಸಿಗುತ್ತಾರೆ. ಸ್ವಲ್ಪ ದಿನದಲ್ಲಿ ನಿಮಗೆ 'ನಂಬ್ರ' ಎಂದರೆ ದೂರು, ತಕರಾರು, ಜಗಳ ಎಂದು ತಿಳಿಯುತ್ತದೆ. ನೀವು ಎಷ್ಟೇ ಕಮ್ಮಿ ಇಂಗ್ಲೀಷನ್ನು ಬಲ್ಲವರಾಗಿದ್ದರೂ ಇಂಗ್ಲೀಷಿನಲ್ಲಿರುವ ನಂಬರ್ (Number) ನಿಮಗೆ ಗೊತ್ತಿರುತ್ತದೆ. ಆದರೆ ಮೇಲೆ ಹೇಳಿದ ನಂಬ್ರವೂ ಇದೂ ಒಂದೆ ಎಂದರೆ ನಿಮಗೆ ಆಶ್ಚರ್ಯವಾಗುತ್ತದೆ. ಆದರೆ ಈ ಶಬ್ದ ಈ ಅರ್ಥ ಪಡೆಯಲು ಕಾರಣ ನ್ಯಾಯಾಲಯಗಳು. ನ್ಯಾಯಾಲಯಗಳಲ್ಲಿ ಫಿರ್ಯಾದುಗಳು (=ದೂರುಗಳು) ದಾಖಲಾದಲ್ಲಿ ಅವುಗಳಿಗೊಂದು ನಂಬರು (=ಸಂಖ್ಯೆ) ಕೊಡುತ್ತಾರೆ ತಾನೆ? ವಿಚಾರಣೆಗೆ ತೆಗೆದಾಗ ಆ ನಂಬರನ್ನು ಕೋರ್ಟಿನ ಪೇದೆ ಕೂಗುತ್ತಾನಲ್ಲವೆ? ಅದರಿಂದ ನಂಬರು ಎಂದರೆ ದೂರು!

ಅಕ್ಯುಪಂಕ್ಚರ್ ಚಿಕಿತ್ಸೆ ರಾಮಬಾಣವೇ ?

★ ಡಾ|| ಆನಂದ ದೇಶಪಾಂಡೆ ★

ಅಕ್ಯುಪಂಕ್ಚರ್ ಇತ್ತೀಚೆಗೆ ಜಗತ್ತಿನಾದ್ಯಂತ ಜನಪ್ರಿಯವಾಗುತ್ತಿದೆ. ಆದರೆ ಇದೊಂದು ನವೀನ ಶಾಸ್ತ್ರವೇನಲ್ಲ. ಅದರ ಬಗೆಗೆ ಆಸಕ್ತಿ ಹೆಚ್ಚಿದ್ದು ಮಾತ್ರ ಇತ್ತೀಚೆಗೆ ಸುಮಾರು ನಾಲ್ಕು ಸಾವಿರ ವರ್ಷಗಳ ಹಿಂದೆ. ಚೀನಿಯರು ಅಕ್ಯುಪಂಕ್ಚರ್ ಶಾಸ್ತ್ರವನ್ನು ಅಭಿವೃದ್ಧಿಗೊಳಿಸಿ ತಮ್ಮ ವೈದ್ಯ ಶಾಸ್ತ್ರದಲ್ಲಿ ಅಳವಡಿಸಿದರೆಂದು ದಾಖಲೆಗಳಿವೆ. ಅಕ್ಯುಪಂಕ್ಚರ್ ಚಿಕಿತ್ಸಾ ಪದ್ಧತಿ ಹೇಗೆ ಹುಟ್ಟಿತೆಂಬುದಕ್ಕೆ ಐತಿಹಾಸಿಕ ಹೇಳಿಕೆಗಳಿವೆ. ಯುದ್ಧಗಳಲ್ಲಿ ಗಾಯಗೊಂಡ ಸೈನಿಕರು ನೋವಿನಿಂದ ಬಳಲುತ್ತಿದ್ದಾಗ ಅವರ ದೇಹದಲ್ಲಿ ಕೆಲವು ನಿಶ್ಚಿತ ಸ್ಥಾನಗಳಲ್ಲಿ ನೆಟ್ಟ ಬಾಣಗಳಿಂದ ವೇದನೆ ಕಡಿಮೆಯಾಗಿದ್ದುದನ್ನು ಚೀನಿಯರು ಗುರುತಿಸಿದರು. ಇಂಥ ಒಂದು ನಿರೀಕ್ಷಣೆಯೇ ಅಕ್ಯುಪಂಕ್ಚರ್ ಶಾಸ್ತ್ರಕ್ಕೆ ಬುನಾದಿ ಹಾಕಿತು. ಸಾವಿರಾರು ವರ್ಷ ಅದರಲ್ಲಿ ಸುಧಾರಣೆಗಳನ್ನು ಮಾಡುತ್ತ ಬಂದರಾದರೂ ಚಿಂಗ್ ವಂಶದ ಆಳ್ವಿಕೆಯ ನಂತರ, ಅಂದರೆ 1644 ರಿಂದ 1911 ರವರೆಗೆ ಅದು ಅವನತಿಗೊಳಗಾಯಿತು. ಕಮ್ಯುನಿಸ್ಟ್ ರಾಜ್ಯ ಕ್ರಾಂತಿಯ ನಂತರ ಅದರ ಬಳಕೆ ಚೀನಾದಲ್ಲಿ ಮತ್ತೆ ಹೆಚ್ಚಿದೆ

ಅಕ್ಯುಪಂಕ್ಚರ್ ಎಂಬ ನಾಮಕರಣ ಪಾಶ್ಚಾತ್ಯರಿಂದ ಬಂದಿದೆ (ಆಕ್ಯುಸ್-ಸೂಜಿ ಪಂಕ್ಚರ್-ಚುಚ್ಚುಗೊಳಿಸುವುದು) ಡಾ|| ವಿಲಿಯಮ್ ರೈನ್ ಎಂಬ ಡಚ್ ವೈದ್ಯ 1671-79ರಲ್ಲಿ ಈ ಶಾಸ್ತ್ರವನ್ನು ಜಪಾನಿನಿಂದ ಯುರೋಪ್ ಖಂಡಕ್ಕೆ ತಂದ. ಚೀನಾದಲ್ಲಿ ಅಕ್ಯುಪಂಕ್ಚರ್ ಸೂಜಿಗಳ ಹಿಡಿಕೆಗಳು ಬೆಳ್ಳಿ ಇಲ್ಲವೆ ಬಂಗಾರದವಾಗಿದ್ದು ಶ್ರೀಮಂತರಿಗೆ ಬಂಗಾರದ ಹಿಡಿಕೆಯ ಸೂಜಿಗಳಿಂದಲೂ, ಇತರ ಸಾಮಾನ್ಯರಿಗೆ ಬೆಳ್ಳಿಯ ಹಿಡಿಕೆಯ ಸೂಜಿಗಳಿಂದಲೂ ಚಿಕಿತ್ಸೆ ಕೊಡಲಾಗುತ್ತಿತ್ತಂತೆ. ಹಸ್ತಿದಂತ, ಕಟ್ಟಿಗೆಯ ಸೂಜಿಗಳನ್ನೂ ಬಳಸಲಾಗುತ್ತಿತ್ತು. ವಿವಿಧ ಧಾತುಗಳಿಂದ ತಯಾರಿಸಿದ್ದ ಸೂಜಿಗಳನ್ನು ಪಯೋಗಿಸಿದಾಗ ಚಿಕಿತ್ಸೆಯ ಪರಿಣಾಮದಲ್ಲಿ ಯಾವ ಭೇದವೂ ಕಂಡುಬರದು. ಸದ್ಯಕ್ಕೆ ಬಳಕೆಯಲ್ಲಿರುವ ಸೂಜಿಗಳು ಬಹುತರವಾಗಿ ಸ್ಟೇನ್‌ಲೆಸ್ ಸ್ಟೀಲಿನಿಂದ ತಯಾರಿಸಲ್ಪಟ್ಟಿರುತ್ತವೆ.

ದೇಹದ ನಿಶ್ಚಿತ ಸ್ಥಾನಗಳಲ್ಲಿ ಈ ಸೂಜಿಗಳನ್ನು ಚುಚ್ಚಿ ನೋವಿನ ನಿಯಂತ್ರಣ ಮಾಡುವುದು ಅಕ್ಯುಪಂಕ್ಚರಿನ ಮುಖ್ಯ ಕಾರ್ಯ. ಈ ನಿರ್ದಿಷ್ಟ ಸ್ಥಾನಗಳಿಗೆ ಅಕ್ಯುಪಂಕ್ಚರ್ ಸ್ಥಾನಗಳೆಂದು ಹೆಸರು. ಈ ಸ್ಥಾನಗಳಲ್ಲಿ ಹಾಯ್ದು ನಿರ್ದಿಷ್ಟವಾಗಿ ವಿವಿಧ ಸ್ಥಾನಗಳಲ್ಲಿ ಜೋಡಿಸುವ ಕಾಲ್ಪನಿಕ ರೇಖೆಗಳಿಗೆ 'ಅಕ್ಯುಪಂಕ್ಚರ್ ಮೆರಿಡಿಯನ್'ಗಳೆನ್ನುವರು. (ಚಿತ್ರ 1 ನೋಡಿರಿ) ದೇಹದ ಎಡ ಭಾಗದಲ್ಲಿ ಹನ್ನೆರಡು ಬಲ ಭಾಗದಲ್ಲಿ ಹನ್ನೆರಡು ಮತ್ತು ದೇಹದ ಮಧ್ಯದಲ್ಲಿ [illegible] ಮುಂಭಾಗದಲ್ಲೊಂದು







ಪಿತ್ತಕೋಶದ ಮೆರಿಡಿಯನ್

ಕಣ್ಣಂಚಿನಿಂದ ಪ್ರಾರಂಭವಾಗಿ, ದೇಹದ ಕೆಳಗಿಳಿದು ಸಣ್ಣ ಕಾಲ್ಬೆರಳಂಚಿನಲ್ಲಿ ಮುಕ್ತಾಯವಾಗುತ್ತದೆ. ದೇಹದ ಎರಡೂ ಬದಿಗೆ ಒಂದೊಂದು ಪಿತ್ತಕೋಶದ ಮೆರಿಡಿಯನ್ ಇವೆ.


…ಭಾಗಗಳೆಂದು ಹೀಗೆ ಒಟ್ಟು ಇಪ್ಪತ್ತಾರು ಮೆರಿಡಿಯನ್‌ಗಳಿವೆ. ಎಡ ಮತ್ತು ಬಲ ಬದಿಗಳಲ್ಲಿರುವ ಹನ್ನೆರಡರಲ್ಲಿ ಆರು ಮೆರಿಡಿಯನ್‌ಗಳು ಮೇಲಿನಿಂದ ಕೆಳಕ್ಕೆ, ಉಳಿದ ಆರು ಕೆಳಗಿನಿಂದ ಮೇಲಕ್ಕೆ ಸಾಗುತ್ತವೆ. ಅಕ್ಯುಪಂಕ್ಚರ್ ಸ್ಥಾನಗಳು ನರ ತಂತುಗಳಿಗೆ ಸಂಬಂಧಿಸಿವೆಯಲ್ಲದೇ ಈ ಸ್ಥಾನಗಳಲ್ಲಿನ ತ್ವಚೆಯಲ್ಲಿ ಸುತ್ತಲಿನ ತ್ವಚೆಯಲ್ಲಿರುವುದಕ್ಕಿಂತ ಕಡಿಮೆ ವಿದ್ಯುತ್ ನಿರೋಧತೆ ಇದೆಯೆಂದು ಪ್ರಮಾಣೀಕರಿಸಲ್ಪಟ್ಟಿದೆ. ಅಂಗ ರಚನಾಶಾಸ್ತ್ರ, ಅಂಗಕ್ರಿಯಾಶಾಸ್ತ್ರದ ಆಧಾರದಿಂದ ಮೇರಿಡಿಯನ್‌ಗಳ ಅಸ್ತಿತ್ವವನ್ನು ತೋರಿಸಲಾಗಿಲ್ಲ. ದೇಹದಲ್ಲಿನ ಯಾವ ಅಂಗವನ್ನು ಈ ಮೆರಿಡಿಯನ್ ಪ್ರತಿನಿಧಿಸುವುದೋ ಆ ಅಂಗದ ಹೆಸರನ್ನೇ ಈ ಮೆರಿಡಿಯನ್‌ಗಳಿಗೆ ಕೊಡಲಾಗಿದೆ. ಉದಾ: ಪಿತ್ತಕೋಶದ ಮೆರಿಡಿಯನ್, ಜಠರದ ಮೆರಿಡಿಯನ್, ಹೃದಯದ ಮೆರಿಡಿಯನ್, ಇತ್ಯಾದಿ ಇತ್ಯಾದಿ....


ಚೀನಿಯರ ವೈದ್ಯಶಾಸ್ತ್ರದಲ್ಲಿ ವಿವರಿಸಿರುವ 'ಜೀವಶಕ್ತಿ' ಇಲ್ಲವೇ 'ಚೇತನಾಶಕ್ತಿ' ಈ ಮೆರಿ

ಪ್ರಿಯಿನ್‌ಗಳಲ್ಲಿ ಹರಿದಾಡುತ್ತಿದೆ. ಚೇತನಾಶಕ್ತಿಯಲ್ಲಿ ಕೂಡ 'ಯಿನ್' ಮತ್ತು 'ಯಾಂಗ್' ಎಂಬ ಪ್ರಭೇದಗಳಿದ್ದು ಅವು ಪರಸ್ಪರ ಪೂರಕವಾಗಿವೆ. ಹೀಗೆ ಯಿನ್ ಮತ್ತು ಯಾಂಗ್ ಶಕ್ತಿಗಳ ಸಮತೋಲನವಿದ್ದಾಗ ವ್ಯಕ್ತಿಯು ನಿರೋಗಿಯಾಗಿರುತ್ತಾನೆ. ಯಾವಾಗ ಈ ಸಮತೋಲನ ತಪ್ಪುವುದೋ ಆಗ ವ್ಯಕ್ತಿಯು ಅನಾರೋಗ್ಯಕ್ಕೆ ಬಲಿಯಾಗುತ್ತಾನೆ. ಅಕ್ಕುಪಂಕ್ಚರನ್ನು ಬಳಸಿ ಈ ಶಕ್ತಿಗಳ ಸಮತೋಲನ ತರಲು ಸಾಧ್ಯ ಎಂಬುದು ಚೀನಿ ವೈದ್ಯ ಶಾಸ್ತ್ರದ ಸಂಕ್ಷಿಪ್ತ ತಿರುಳು.

ಆದರೆ ಆಧುನಿಕ ವೈದ್ಯಶಾಸ್ತ್ರದಲ್ಲಾದ ಸುಧಾರಣೆಗಳು, ಪ್ರಯೋಗಗಳು, ಜ್ಞಾನಗಳಿಂದಾಗಿ ಅಕ್ಕುಪಂಕ್ಚರ್ ಹೇಗೆ ಕಾರ್ಯ ಮಾಡಬಲ್ಲದೆಂಬುದಕ್ಕೆ ಆಧಾರಗಳಿವೆ. ವಿವರಣೆಗಳಿವೆ. ಅನೇಕ ಬಗೆಯ ರೋಗಗಳಲ್ಲಿ ಅಕ್ಕುಪಂಕ್ಚರನ್ನು ಬಳಸಲಾಗುತ್ತಿದೆಯಾದರೂ ನೋವಿನ ಶಮನಕ್ಕೆ ಅದನ್ನು ಬಳಸುವುದು ಮುಖ್ಯವಾಗಿದೆ. ಎಲ್ಲ ಸಂದರ್ಭಗಳಲ್ಲಿ ಅಕ್ಕುಪಂಕ್ಚರ್ ಚಿಕಿತ್ಸೆ ನೋವಿನ ಶಮನ ಮಾಡದು! ಅಕ್ಕುಪಂಕ್ಚರ್ ಚಿಕಿತ್ಸೆಯ ಕಾರ್ಯವನ್ನು ಅರಿಯಲು ನೋವಿನ ಅನುಭವ ನಮಗೆ ಹೇಗೆ ಆಗುತ್ತದೆಯೆಂದು ಮೊದಲು ತಿಳಿಯವುದು ಅವಶ್ಯ.

ನೋವು ಎಂದರೆ ಏನೆಂದು ವಿವರಿಸುವುದು ಸುಲಭವಲ್ಲ. 1965ರಲ್ಲಿ ಡಾ|| ಮೆಲ್ಜಾಕ್ ಮತ್ತು ವಾಲ್ ನೋವಿನ ಸಂಜ್ಞೆಗಳು ಹೇಗೆ ಮೆದುಳಿಗೆ ಪಸರಿಸುತ್ತವೆ ಎಂಬುದನ್ನು ವಿವರವಾಗಿ ಪ್ರತಿಪಾದಿಸಿದರು. ಅದನ್ನು ಸಂಕ್ಷಿಪ್ತದಲ್ಲಿ ನೋಡುವಾ. ನಿಮ್ಮ ಕಾಲ್ಬೆರಳ ಮೇಲೊಂದು ಕಲ್ಲು ಬಿದ್ದಿತೆಂದು ತಿಳಿಯಿರಿ. ಗಾಯದ ಸ್ಥಾನದಿಂದ ಜ್ಞಾನತಂತುಗಳ ಮುಖಾಂತರ ನರ ಸಂವೇದನೆ ನಮ್ಮ ದೇಹದ ಹಿಂಭಾಗದ ಮಧ್ಯದಲ್ಲಿರುವ ಮಿದುಳು ಬಳ್ಳಿಗೆ ಹೋಗುತ್ತದೆ. ಅದಕ್ಕೆ ಮೊದಲು ಹಿಂಬದಿಯ ನರಮೂಲದ ನರಗಂಟಿನಲ್ಲಿ ಸಂವೇದನೆಯನ್ನು ತಲುಪಿಸುತ್ತವೆ. (ಚಿತ್ರ 2 ನೋಡಿರಿ). ಇಲ್ಲಿಂದ ಹಿಂಬದಿಯ ನರ ಮೂಲದ ಮುಖಾಂತರ ಜ್ಞಾನತಂತುಗಳು ಚಿತ್ರದಲ್ಲಿ ತೋರಿಸಿರುವಂತೆ ಮಿದುಳುಬಳ್ಳಿಯ ಹಿಂಭಾಗದಲ್ಲಿರುವ ಸಬಸ್ಟಾನ್ಶಿಯಾ ಜಿಲೇಟಿನೋಸಾ ಎಂಬ ಅಂಗಾಂಶದಲ್ಲಿ ಸೇರಿ ಮತ್ತೆ ಅಲ್ಲಿ ಟಿಸಿಲೊಡೆದು ವಿರುದ್ಧ ಬದಿಗೆ ಸಾಗಿ ಸ್ಪೈನೊರೆಟಿಕ್ಯುಲರ್ ಮತ್ತು ಸ್ಪೈನೋಥಲಮಸ್ ನರ ಸಮೂಹಗಳಾಗಿ ಮಿದುಳುಬಳ್ಳಿಯನ್ನು ಏರುತ್ತವೆ. ಈಗ ಅವು ನರ ಸಂವೇದನೆಗಳನ್ನು ತಲೆ ಬುರುಡೆಯಲ್ಲಿರುವ ಮೆದುಳಿನ ಒಂದು ಭಾಗವಾದ ಥಲಮಸ್‌ನಲ್ಲಿ ತಲುಪಿಸುತ್ತವೆ. (ನೋವು, ಉಷ್ಣ, ಶೀತ, ಸ್ಪರ್ಶ ಇತ್ಯಾದಿ ಸಂವೇದಗಳು). ಇಲ್ಲಿಂದ ಈಗ ಮೂರನೆಯ ಹಂತದಲ್ಲಿನ ಜ್ಞಾನತಂತುಗಳ ಮುಖಾಂತರ ನರಸಂವೇದನೆಗಳು ಮೆದುಳಿನ ಹೊರ ಭಾಗದಲ್ಲಿರುವ 'ಕಾರ್ಟೆಕ್ಸ್' (ಪಿಂಡಕ್ಕೆ ಅಂಟಿದ ತೊಗಟೆಯ ತೆರದಲ್ಲಿರುವ ಬೂದುಬಣ್ಣದ ಭಾಗ) ವನ್ನು ಸೇರುತ್ತವೆ. ಮೆದುಳಿನ ಈ ಭಾಗದಲ್ಲಿ ನರ ಸಂವೇದನೆಗಳನ್ನು ಅರ್ಥ ಮಾಡಿಕೊಳ್ಳಲಾಗುತ್ತದೆ. ಮೊದಲು ತಿಳಿಸಿದ ರೀತಿಯಲ್ಲಿ ಮಿದುಳುಬಳ್ಳಿಯ ಹಿಂಭಾಗದಲ್ಲಿನ ಅಂಗಾಂಶವಾದ ಸಬಸ್ಟಾನ್ಶಿಯಾ ಜಿಲೇಟನೋಸಾದಲ್ಲಿ ನರಸಂವೇದನೆಗಳು ತಲುಪಿದಾಗ, ಈ ಎಲ್ಲ ಸಂವೇದನೆಗಳನ್ನು ಮೆದುಳುಬಳ್ಳಿಯ ಮೇಲೇರಲು ನಿಷೇಧಿಸಲು ಅಥವಾ ನಿಗ್ರಹಿಸಲು ಬೇರೆ ಕೆಲವು ನಿಷೇಧಾತ್ಮಕ ಸಂಜ್ಞೆಗಳು ಬೇರೆ ನರತಂತುಗಳ ಮುಖಾಂತರ ಮೆದುಳಿನಿಂದ ಕೆಳಗಿಳಿದು ಬಂದು ಎಷ್ಟು ನೋವನ್ನು ನಾವು ಅನುಭವಿಸುತ್ತೇವೆ ಎಂಬುದನ್ನು ನಿರ್ಧರಿಸುತ್ತವೆ. ಈ ರೀತಿ ನೋವಿನ ಸಂಜ್ಞೆಗಳನ್ನು ಮೆದುಳುಬಳ್ಳಿಯಲ್ಲಿ ನಿಯಮಿತದಲ್ಲಿಡುವುದೇ ಡಾ|| ಮೆಲ್ಜಾಕ್ ಮತ್ತು ವಾಲ್ ಅವರು ಪ್ರತಿಪಾದಿಸಿದ 'ಬಾಗಿಲು ನಿಯಂತ್ರಣ' ಸಿದ್ಧಾಂತ ಇಷ್ಟೆಲ್ಲ ಆಗುವುದು ಕ್ಷಣಾರ್ಧದಲ್ಲಿ ಮಾತ್ರ! ನೋವಿನ ಪ್ರಜ್ಞೆಗೆ ನಾವು ತೋರುವ ಪ್ರತಿಕ್ರಿಯೆ ವ್ಯಕ್ತಿಗತವಾಗಿದ್ದು. ನೋವನ್ನುಂಟು ಮಾಡುವ ರೋಗ ಇಲ್ಲವೆ ಸಂದರ್ಭ, ವ್ಯಕ್ತಿಗೆ ಅದರ ಬಗೆಗಿರುವ ಜ್ಞಾನ, ಇತರರು ತೋರುವ ಲಕ್ಷ್ಯ ಅಥವಾ ಅಲಕ್ಷ್ಯ, ಗೊತ್ತಿರುವ ಇಲ್ಲವೇ ಗೊತ್ತಿರದ ಭವಿತವ್ಯ, ವ್ಯಕ್ತಿಯ ಸಾಮಾಜಿಕ, ಧಾರ್ಮಿಕ, ಆರ್ಥಿಕ ಸ್ಥಿತಿಗ ನರ ಮೇಲೆ ಪ್ರಭಾವ ಬೀರುತ್ತವೆ. ಕಳವಳ ಕೊರಗು ದಣಿಗಳು ನೋವನ್ನು ಹೆಚ್ಚಿಸುತ್ತವೆ. ಅನುಕಂಪ, ವಿಶ್ರಾಂತಿ, ಹರ್ಷಾತಿರೇಕಗಳು





ಮಿದುಳು ಬಳ್ಳಿಯನ್ನು ಅಡ್ಡಕ್ಕೆ ಸೀಳಿದಾಗ
ಕಾಣುವ ರೀತಿ.

ನೋವಿನ ಪ್ರಜ್ಞೆಯನ್ನು ಕಡಿಮೆ ಮಾಡುತ್ತವೆ.

ಅಕ್ಯುಪಂಕ್ಚರ್ ಹೇಗೆ ಕಾರ್ಯ ಮಾಡುತ್ತದೆ?

ಅಕ್ಯುಪಂಕ್ಚರ್ ಚಿಕಿತ್ಸೆ ಯಾವ ರೀತಿಯಲ್ಲಿ ಕಾರ್ಯ ಮಾಡುತ್ತದೆಂಬುದುರ ಬಗೆಗಿನ ಚೀನಿಯರ ಸಾಂಪ್ರದಾಯಿಕ ವಿವರಣೆ ನಂಬಲಸಾಧ್ಯ. ಆದರೆ ಆಧುನಿಕ ವೈದ್ಯಶಾಸ್ತ್ರದಲ್ಲಿ ಇದರ ಬಗೆಗೆ ಕೆಲವು ವಿವರಣೆಗಳಿವೆ.

ನಮ್ಮ ಮಿದುಳಿನಲ್ಲಿ 'ಎಂಡಾರ್ಫಿನ್' ಎಂಬ ರಾಸಾಯನಿಕ ಪದಾರ್ಥಗಳು ಸ್ವಯಂ ಉತ್ಪಾದಿತವಾಗುತ್ತವೆ. ಈ ಅಫೀಮನಂಥ ರಾಸಾಯನಿಕಗಳು ನೋವನ್ನು ಸಹಿಸುವಲ್ಲಿ ನಮಗೆ ಸಹಾಯ ಮಾಡುತ್ತವೆ. ಅಕ್ಯುಪಂಕ್ಚರ್ ಚಿಕಿತ್ಸೆಯು ನಮ್ಮ ಮಿದುಳಿನಲ್ಲಿ ಈ ರಾಸಾಯನಿಕಗಳ ಉತ್ಪಾದನೆಯನ್ನು ತಾತ್ಕಾಲಿಕವಾಗಿ ಹೆಚ್ಚಿಸುತ್ತವೆಯೆಂದು ಪ್ರಯೋಗಗಳಿಂದ ಸಿದ್ಧವಾಗಿದೆ. ಇಷ್ಟೇ ಅಲ್ಲದೇ ಅಕ್ಯುಪಂಕ್ಚರ್ ಚಿಕಿತ್ಸೆಯು ದೊಡ್ಡ ಗಾತ್ರದ ನರ ತಂತುಗಳನ್ನು ಪ್ರಚೋದಿಸಿ ಮೆದುಳು ಬಳ್ಳಿಯ ಹಿಂಭಾಗದಲ್ಲಿರುವ 'ಬಾಗಿಲು ನಿಯಂತ್ರಣ'ವನ್ನು ಹೆಚ್ಚಿಸಿ ನೋವಿನ ಸಂವೇದನೆಗಳನ್ನು ಕಡಿಮೆ ಮಾಡುವಲ್ಲಿ ಯಶಸ್ವಿಯಾಗಬಹುದಾಗಿದೆ. ಇನ್ನೂ ಸಂಪೂರ್ಣವಾಗಿ ವಿವರಣೆಗಳು ನಮ್ಮಲ್ಲಿ ಸದ್ಯಕ್ಕಿಲ್ಲ. ಈ ವಿವರಣೆಗಳನ್ನು ಕೆಲವರು ಸಂದೇಹದಿಂದ ನೋಡುತ್ತಾರೆ. ಸಂಮೋಹಿನಿಯ ರೂಪಾಂತರವೇ ಅಕ್ಯುಪಕಂಚರ್ ಚಿಕಿತ್ಸೆ ಎಂದೂ ಆಪಾದಿಸಿದ್ದಾರೆ. ಅಕ್ಯುಪಂಕ್ಚರ್ ಚಿಕಿತ್ಸೆಯಿಂದ ಶಮನ ಮಾಡಿದ ನೋವನ್ನು ನೆಲಕ್ಸಾನ್ (Naloxone) ಎಂಬ ಅಫೀಮಿನ ಪ್ರತಿವಿಷ (Antidote) ಇಂಜೆಕ್ಷನ್ ಕೊಟ್ಟು ತಿರುಗಿಸಬಹುದಾಗಿದೆ. ಆದರೆ ಸಂಮೋಹಿನಿಯಿಂದ ಶಮನ ಮಾಡಿದ ನೋವನ್ನು ಈ ರೀತಿ ಮರು [illegible] ಎಂದರೆ ಅಕ್ಯುಪಂಕ್ಚರ್ ಕೇವಲ ಮಾನಸಿಕ ಪರಿಣಾಮ ಬೀರಿರಬಹುದು ಎಂಬುದು. ಪ್ರತಿಶತ 30 ರಷ್ಟು ಸಂದರ್ಭಗಳಲ್ಲಿ ಇದು ಸಾಧ್ಯವಿದೆ. ಪ್ರಾಣಿಗಳಲ್ಲಿ ಕೂಡ ಅಕ್ಯುಪಂಕ್ಚರ್ ಚಿಕಿತ್ಸೆಯಿಂದ ನೋವು ನಿವಾರಣೆ ಸಾಧ್ಯ. ನಮಗೆ ಇರುವಂತೆ ಪ್ರಾಣಿಗಳಲ್ಲಿ ಮಾನಸಿಕ ಪರಿಣಾಮ ಇರಲಾರದು.

ಅಕ್ಯುಪಂಕ್ಚರ್ ಸೂಜಿಗಳು, ಯಂತ್ರಗಳು, ಚಿಕಿತ್ಸೆ

ಅಕ್ಯುಪಂಕ್ಚರ್ ಸೂಜಿಗಳು ನಮ್ಮ ಕೂದಲಿನಷ್ಟು ತೆಳ್ಳಗಿದ್ದು ಅವುಗಳ ಉದ್ದಳತೆ ಅರ್ಧ ಇಂಚಿನಿಂದ ಎರಡು ಇಂಚಿನಷ್ಟು ಇರಬಹುದು, ಮತ್ತು ಅವುಗಳಿಗೆ ದಪ್ಪವಾದ ಹಿಡಿಕೆಗಳಿವೆ. ಬೇರೆ ಬೇರೆ ದೇಶಗಳಲ್ಲಿ (ಚೀನಾ, ಜಪಾನ್, ಕೋರಿಯಾ) ಇವುಗಳನ್ನು ಉತ್ಪಾದಿಸಲಾಗುತ್ತದೆ. ಈ ಸೂಜಿಗಳನ್ನು ತ್ವಚೆಯಾಳದಲ್ಲಿ ಚುಚ್ಚುವ ಬಗೆಯಲ್ಲಿ ಪರಿಣತಿ ಬೇಕಲ್ಲದೆ ಅಕ್ಯುಪಂಕ್ಚರ್ ಸ್ಥಾನಗಳ ಮಾಹಿತಿ ಇರಬೇಕಾಗುತ್ತದೆ. ವಿವಿಧ ರೋಗಗಳಿಗೆ ವಿವಿಧ ಸಂದರ್ಭಗಳಲ್ಲಿ ಬೇರೆ ಬೇರೆ ಸ್ಥಾನ ಸಮೂಹಗಳಲ್ಲಿ ಹಲವಾರು ಸೂಜಿಗಳನ್ನು ಚುಚ್ಚಲಾಗುವದು. ಈ ಸೂಜಿಗಳನ್ನು ಚುಚ್ಚುವಾಗ ಆಗುವ ನೋವು ಅತ್ಯಂತ ಕಡಿಮೆ. ಔಷಧಿಗಾಗಿ ಸ್ನಾಯುಗಳಲ್ಲಿ ಚುಚ್ಚುವಾಗ (ಇಂಜೆಕ್ಷನ್) ಆಗುವ ನೋವಿಗಿಂತ ಎಷ್ಟೋ ಪಾಲು ಕಡಿಮೆ. ಕೆಲವು ಸಲ ಸೂಜಿಯನ್ನು ಚುಚ್ಚಿದ್ದು ಸಹ ಗೊತ್ತಾಗದು. ಅಕ್ಯುಪಂಕ್ಚರ್ ಸ್ಥಾನಗಳು ತ್ವಚೆಯಡಿಯಲ್ಲಿಯೇ ಇರುವವಾದರೂ ಹಲವು ಸಂದರ್ಭಗಳಲ್ಲಿ ಸೂಜಿಗಳನ್ನು 1/4 ದಿಂದ 1 ಅರ್ಧ ಇಂಚು ಆಳಕ್ಕೆ ಚುಚ್ಚಲಾಗುತ್ತದೆ. ತ್ವಚೆಯಡಿಯಲ್ಲಿನ ಬೊಜ್ಜಿನ ಸಂಗ್ರಹಕ್ಕೂ ಇದು ಸಂಬಂಧಿಸಿದೆ. ಹೆಚ್ಚು ಆಳಕ್ಕೆ ಚುಚ್ಚಿದರೆ ಹೆಚ್ಚು ಪರಿಣಾಮಕಾರಿ ಎಂದು ಬಗೆಯಲಾಗದು. ಇಷ್ಟೇ ಅಲ್ಲದೇ ಕಿವಿಯಾಲೆಯಲ್ಲಿ ಚುಚ್ಚುವ ಸೂಜಿಗಳ ಉದ್ದಳತೆ ಕೆಲವು ಮಿಲಿಮೀಟರು ಮಾತ್ರ ಅವುಗಳ ಹಿಡಿಕೆ ವರ್ತುಳಾಕಾರದಲ್ಲಿದ್ದು ಇವುಗಳನ್ನು ಒತ್ತು ಸೂಜಿಗಳೆಂದು ಕರೆಯುತ್ತಾರೆ.

ಅಕ್ಯುಪಂಕ್ಚರ್ ಚಿಕಿತ್ಸೆ ಸುಮಾರು 20-30 ನಿಮಿಷಗಳ ಕಾಲ ನಡೆಯುತ್ತದೆ. ಆರಂಭದಲ್ಲಿ ಈ ರೀತಿ ವಾರಕ್ಕೆ [illegible] ಗಳನಂತರ ವಾರಕ್ಕೊಂದಾವರ್ತಿ ಚಿಕಿತ್ಸೆ [illegible] ಬೇಕು. ಸುಮಾರು 8-10 ಚಿಕಿತ್ಸೆಗಳನ್ನು [illegible] ಬೇಕಾಗುವದಲ್ಲದೇ ಮೊದಲ ಮೂರು ಅಥವಾ ನಾಲ್ಕು ಚಿಕಿತ್ಸೆಗಳಿಂದ ಯಾವ ಪರಿಣಾಮವೂ ಕಂಡುಬರದಿದ್ದಲ್ಲಿ ಅಕ್ಯುಪಂಕ್ಚರ್ ಚಿಕಿತ್ಸೆ ಮುಂದುವರೆಸುವದು [illegible]

ಹಣದ ಅಪವ್ಯಯವೇ ಸರಿ! ಅಕ್ಯುಪಂಕ್ಚರ್ ಚಿಕಿತ್ಸೆ ನಡೆದಾಗ ವ್ಯಕ್ತಿಗೆ ಜೊಂಪು ಬರಬಹುದಾಗಿದೆ.

ಅಕ್ಯುಪಂಕ್ಚರಿನಿಂದ ದುಷ್ಪರಿಣಾಮಗಳು ಇಲ್ಲದಿಲ್ಲ. ಆದರೆ ಅಂಥ ಸಂದರ್ಭಗಳು ಅತ್ಯಂತ ವಿರಳ. ಕೆಲವು ಸಲ ಒಂದೆರಡು ಹನಿ ರಕ್ತ ಬರಬಹುದು. ಎದೆಯ ಮೇಲೆ ಸೂಜಿಯನ್ನು ಚುಚ್ಚಿದಾಗ ಆಕಸ್ಮಾತ್ತಾಗಿ ಪುಪ್ಪುಸದ ಪೊರೆಯನ್ನು ಗಾಯಗೊಳಿಸಿ ಗಾಳಿದುಂಬಿದೆ (Pneumothorax) ಆಗುವ ಸಾಧ್ಯತೆ ಇದೆ. ಕೆಲವರು ಗಾಬರಿಯಾಗಿ ಮೂರ್ಛೆ ಹೋಗಬಹುದಾಗಿದೆ. ಚಿಕಿತ್ಸೆಯ ಸೂಜಿಗಳನ್ನು ಪ್ರತಿಸಲ ರೋಗಾಣು ರಹಿತ ಮಾಡುವಲ್ಲಿ ವಿಶೇಷ ಜಾಗ್ರತೆ ವಹಿಸಬೇಕಾಗುತ್ತದೆ. ಇಲ್ಲದಿದ್ದಲ್ಲಿ ಹೆಪೆಟೈಟಿಸ್ (ಕಾಮಾಲೆ) ಏಡ್ಸ್‌ನಂಥ ಭಯಂಕರ ರೋಗಗಳು ಒಬ್ಬ ರೋಗಿಯಿಂದ ಇನ್ನೊಬ್ಬ ರೋಗಿಗೆ ಪಸರಿಸಬಹುದು. ಆದರೆ ತ್ವಚೆಯಾಳದಲ್ಲಿ ಚುಚ್ಚಿದ ಸೂಜಿ ಮುರಿದುಕೊಳ್ಳುವುದು ಅತ್ಯಂತ ವಿರಳ.


ಅಕ್ಯುಪಂಕ್ಚರ್ ಚಿಕಿತ್ಸೆಯ ಪರಿಣಾಮವನ್ನು ಹೆಚ್ಚಿಸಲು ಹಲವು ವಿಧಾನಗಳನ್ನು ಬಳಸಲಾಗುತ್ತಿದೆ. ತ್ವಚೆಯಾಳದಲ್ಲಿ ನೆಟ್ಟ ಸೂಜಿಗಳನ್ನು ಕೈಬೆರಳಿನಿಂದ ತಿರುಗಿಸುವುದು. ಸೂಜಿಯ ಹಿಡಿಕೆಗೆ (ಮೋಕ್ಸಿ ಬಶ್ಚನ್) ಉಷ್ಣವನ್ನು ಕೊಡುವುದು. ಶ್ರವಣಾತೀತ ಧ್ವನಿಯಲೆಗಳನ್ನು ಉಪಯೋಗಿಸುವುದು. ಸೂಜಿಗಳಲ್ಲಿ ವಿದ್ಯುತ್ ಹರಿಸುವುದು, ಇತ್ಯಾದಿ. ಅರ್ಟೆಮೇಸಿಯಾ ವಲ್ಗಾರಿಸ್ ಎಂಬ ಸಸ್ಯದ ಎಲೆಗಳನ್ನು ಸುರುಳಿಸುತ್ತಿ ಒಣಗಿಸಿದಾಗ ಅದು ಸಿಗಾರಿನಂತೆ ಕಾಣುತ್ತದೆ. ಇದರ ಒಂದು ತುದಿಗೆ ಬೆಂಕಿ ಹಚ್ಚಿದಾಗ ಅದು ಸಣ್ಣದಾಗಿ ಸಿಗರೇಟಿನಂತೆ ಉರಿಯುತ್ತದೆ. ಇಂಥ ಉರಿಯುತ್ತಿರುವ ತುದಿಯಿಂದ ಅಕ್ಯುಪಂಕ್ಚರ್ ಸೂಜಿಯ ಹಿಡಿಕೆಗೆ ಶಾಖವನ್ನು ಕೊಡುವುದೇ 'ಮೋಕ್ಸಿಬಶ್ಚನ್.'

ತ್ವಚೆಯಾಳದಲ್ಲಿ ನೆಟ್ಟ ಸೂಜಿಗಳ ಹಿಡಿಕೆಗಳಿಗೆ ವಿದ್ಯುದಗ್ರಗಳನ್ನು ಅಂಟಿಸಿ ತಂತಿಗಳ ಮುಖಾಂತರ (ವಿದ್ಯುತ್ ಯಂತ್ರದಲ್ಲುತ್ಪಾದಿಸಿದ) ವಿದ್ಯುತ್ತನ್ನು ಹರಿಸುವುದೇ 'ವಿದ್ಯುತ್ ಅಕ್ಯುಪಂಕ್ಚರ್.' ಪುಟ್ಟದಾದ ಈ ವಿದ್ಯುತ್ ಯಂತ್ರಗಳು ಸುಮಾರು 90 ವೋಲ್ಟ್ ಅಳೆಯುತ್ತವೆ. ತಂತಿಗಳಲ್ಲಿ ಮತ್ತು ತ್ವಚೆಯಲ್ಲಿ ವಿದ್ಯುತ್ ನಿರೋಧ ಇರುವುದರಿಂದ, ಪೊಟೆನ್ಸಿಯೋಮೀಟರನ್ನು ಈ ಯಂತ್ರಗಳಲ್ಲಿ ಅಳವಡಿಸಿದ್ದು ವೋಲ್ಟೇಜನ್ನು ಕ್ರಮೇಣವಾಗಿ ಹೆಚ್ಚಿಸಬಹುದಾಗಿದೆ. ಚೀನಾ, ಜಪಾನಿನ ಅನೇಕ ಕಂಪನಿಗಳು ಇಂಥ ಯಂತ್ರಗಳನ್ನು ತಯಾರಿಸಿವೆ. ಕೆಲವು ಸಂದರ್ಭಗಳಲ್ಲಿ ವಿದ್ಯುತ್ ಅಕ್ಯುಪಂಕ್ಚರ್ ಚಿಕಿತ್ಸೆಯನ್ನು ನಿಷೇಧಿಸಲಾಗಿದೆ. ಉದಾ: ಅಪಸ್ಮಾರ ರೋಗಿಗಳು, ಗರ್ಭಿಣಿಯರಲ್ಲಿ ಮೊದಲ ಮಾಸಗಳಲ್ಲಿ ಹೃದಯದಲ್ಲಿ ವಿದ್ಯುತ್ ಗತಿಚಾಲಕವನ್ನು ಯಾವುದೇ ಕಾರಣಕ್ಕಾಗಿ ಈ ಮೊದಲೇ ಅಳವಡಿಸಿದವರಲ್ಲಿ, ಇತ್ಯಾದಿ. ಚಿಕ್ಕ ಪ್ರಮಾಣದಲ್ಲುಪಯೋಗಿಸಲಾಗುವ ಈ ವಿದ್ಯುತ್ಪ್ರವಾಹವು ಯಾವುದೇ ಶಾಶ್ವತ ಧಕ್ಕೆಯನ್ನುಂಟು ಮಾಡುವುದಿಲ್ಲ.

ಹೆರಿಗೆಯ ಸಮಯದಲ್ಲಿ ವಿದ್ಯುತ್ ಅಕ್ಯು




ಚೀನಾ



ಚೀನಾ



ಕೆ. ಸೂಜಿ (ಜಪಾನ್)





ಒತ್ತು ಸೂಜಿಗಳು

ಅಕ್ಯುಪಂಕ್ಚರ್ ಸೂಜಿಗಳು (ಮಾದರಿಗಳು)



"ನೀವು ಫೋನಿನಲ್ಲಿ ನಿಮ್ಮ ಹಳೆ ಗಿರಾಕಿ ಚಂಚಲೆ ಜೊತೆ ಸರಸವಾಗಿ ಮಾತಾಡಿದ್ದನ್ನು ಕೇಳಿಸಿಕೊಂಡೆ."

ಪಂಕ್ಚರ್ ಉಪಯೋಗಿಸಿ ಹೆರಿಗೆ ನೋವನ್ನು ಕಡಿಮೆ ಮಾಡುವಲ್ಲಿ ಕೆಲವರು ಯಶಸ್ವಿಯಾಗಿದ್ದಾರೆ. ಗರ್ಭಿಣಿಯರು ಮೊದಲ ಕೆಲವು ತಿಂಗಳುಗಳಲ್ಲಿ ಅನುಭವಿಸುವ ವಾಂತಿ ಓಕರಿಕೆಗಳನ್ನು ಅಕ್ಯುಪಂಕ್ಚರ್ ಚಿಕಿತ್ಸೆಯಿಂದ ಕಡಿಮೆ ಮಾಡಬಹುದು. ಅನೆಸ್ತೇಸಿಯಾ ಬಳಸದೇ ವಿದ್ಯುತ್ ಅಕ್ಯುಪಂಕ್ಚರನ್ನು ಉಪಯೋಗಿಸಿ ಶಸ್ತ್ರಚಿಕಿತ್ಸೆ ಮಾಡುವಲ್ಲಿ ಚೀನಿ ವೈದ್ಯರು ಸಫಲರಾಗಿದ್ದಾರೆಂದು ಕೆಲವು ವರದಿಗಳಾಗಿವೆ.

ಒತ್ತು ಸೂಜಿಗಳನ್ನು (ಚಿತ್ರ 3ನೋಡಿ) ಬಳಸಿ ಕಿವಿಯಾಳೆಯಲ್ಲಿನ ವಿವಿಧ ಅಕ್ಯುಪಂಕ್ಚರ್ ಸ್ಥಾನಗಳಲ್ಲಿ ಚುಚ್ಚುವುದು ಮುಖ್ಯವಾಗಿ ಧೂಮಪಾನ ತ್ಯಜಿಸಲು ಹಾಗೂ ಬೊಜ್ಜಿನ ನಿಯಂತ್ರಣಕ್ಕೆ ಸೀಮಿತವಾಗಿದೆ. ಧೂಮಪಾನವನ್ನು ತ್ಯಜಿಸಲು ದೃಢ ನಿರ್ಧಾರ, ಬೊಜ್ಜಿನ ನಿಯಂತ್ರಣಕ್ಕೆ ಆಹಾರ ಸೇವನೆಯಲ್ಲಿ ಕಟ್ಟು ಮಾಡುವ ಮನೋನಿರ್ಧಾರಗಳು ಅತ್ಯವಶ್ಯ. ಹೀಗೆ ನಿರ್ಧಾರ ಮಾಡಿ ಆ ದಿಸೆಯಲ್ಲಿ ಪ್ರಯತ್ನಿಸುತ್ತಿದ್ದಾಗ ಮೊದಲ ಹಲವು ವಾರಗಳಲ್ಲಿ ಸಹಾಯಮಾಡಲು ಕಿವಿಯಾಳೆಯ ಅಕ್ಯುಪಂಕ್ಚರ್ ಬಳಸಬಹುದಾಗಿದೆ. ಈ ರೀತಿ ಮನೋನಿರ್ಧಾರ ಪ್ರಯತ್ನ ಇಲ್ಲದೆ ಕೇವಲ ಕಿವಿಯಲ್ಲಿ ಅಕ್ಯುಪಂಕ್ಚರ್ ಒತ್ತು ಸೂಜಿಗಳನ್ನು ಚುಚ್ಚಿಸಿಕೊಳ್ಳುವುದರಿಂದ ಯಾವ ಲಾಭವೂ ಇಲ್ಲ.

ಅರೆತಲೆಶೂಲೆ, ಟ್ರೈಜೆಮಿನಲ್ ನರಶೂಲೆಗಳ ನೋವಿನ ನಿಯಂತ್ರಣಕ್ಕೂ ಅಕ್ಯುಪಂಕ್ಚರನ್ನು ಯಶಸ್ವಿಯಾಗಿ ಬಳಸಬಹುದಾಗಿದೆ.

ಇನ್ನು ಕೆಲವು ಅಕ್ಯುಪಂಕ್ಚರ್ ತಜ್ಞರು ಈ ಚಿಕಿತ್ಸೆಯನ್ನು ಅನೇಕಾನೇಕ ರೋಗಗಳಿಗೆ ಬಳಸುತ್ತಾರೆ. ಉದಾಹರಣೆಗೆ: ಅಸ್ತಮಾ, ಬ್ರಾಂಕೈಟಿಸ್, ಮಲಬದ್ಧತೆ, ಮೂಲವ್ಯಾಧಿ, ಜಠರದ ಹುಣ್ಣು, ಪಕ್ಷವಾತ, ವೆ[illegible] ಮುಟ್ಟಿನ ರೋಗಗಳು, ಇತ್ಯಾದಿ. ಅವರ ಹೇಳಿಕೆಗಳೇನೇ ಇರಲಿ ಈ ಎಲ್ಲ ರೋಗಗಳಿಗೆ ಅಕ್ಯುಪಂಕ್ಚರ್ ರಾಮಬಾಣವಲ್ಲ! ಇಷ್ಟೇ ಅಲ್ಲದೆ ಇಂಥ ರೋಗಗಳಿಗೆ ಉತ್ತಮ ಔಷಧಗಳಿವೆ. ಇನ್ನೊಂದು ಎಚ್ಚರಿಕೆಯ ಮಾತನ್ನು ಹೇಳಬೇಕು. ಯಾವ ರೋಗಗಳಿಗೆ ಔಷಧೋಪಚಾರ ಅಥವಾ [illegible] ಯಾವ ಸಂದರ್ಭಗಳಲ್ಲಿ ಶಸ್ತ್ರಚಿಕಿತ್ಸೆ ಅವಶ್ಯವೋ ಅಂಥ ಸಂದರ್ಭಗಳಲ್ಲಿ ಅಕ್ಯುಪಂಕ್ಚರ್ ಚಿಕಿತ್ಸೆಗೆ ಹಾತೊರೆಯುವುದು ಸರಿಯಲ್ಲ. ಇಷ್ಟೇ ಅಲ್ಲದೆ ಅದರಿಂದ ರೋಗ ನಿದಾನಕ್ಕೆ ವಿಳಂಬವಾಗಿ ಗಂಭೀರ[illegible]ವಾಗಿ ಪರಿಣಮಿಸಬಹುದಾಗಿದೆ! ★

ಯಾತನೆಯ ಪ್ರತಿಯೊಂದು ನಲಿಯೂ ಮಹಾ ಭಾವನೆಗಳನ್ನು ಚೇತರಿಸುವುದೋ [illegible] ಮಹಾನುಭಾವ.

● [illegible]

– ಡಾ॥ ವರದರಾಜ ಹುಯಿಲಗೋಳ

[illegible]

ಸುಮಾರು 1963ರಲ್ಲಿ ಗದಗಿನಲ್ಲಿ ನಡೆದು ಹೋದ ಸಂಗತಿ. ನಾನು ಸಮೀಪದ ನಾಗಾವಿ ಎಂಬ ಹಳ್ಳಿಗೆ ಹೋದವನು ಸಾಯಂಕಾಲ ಐದು ಗಂಟೆಗೆ ಮನೆಗೆ ಬಂದೆ. ಹತ್ತು ಕಿಲೋಮೀಟರಿನಷ್ಟು ದಾರಿ ನಡೆದುಬಂದ ನನಗೆ ದಣಿವೂ ಆಗಿತ್ತು.

ನಾನು ವಿಶಾಲವಾದ ಪಡಶಾಲೆಯಲ್ಲಿ ಕಾಲಟ್ಟ ಕೂಡಲೇ ಮೊಲಗಳೆರಡು ಜಿಗಿಯುತ್ತ ಒಳಗೆ ಓಡಿದವು. ಕಟ್ಟಿಹಾಕಿದ ನರಿಯೊಂದು ನನ್ನ ಕಡೆಗೆ ಬಿರಬಿರನೇ ನೋಡಿತು. ಸಮೀದಲ್ಲಿಯೇ ಇದ್ದ ಮಂಗವೊಂದು ಕಿಸಕ್ಕನೆ ಹಲ್ಲು ಕಿರಿಯಿತು. ಒಂದು ನಾಯಿಯಂತೂ ಓಡಿ ಬಂದು, ನನಗೇ 'ಗುರ್...' ಎಂದಿತು. ಮನೆಯ ಒಡೆಯರಲ್ಲಿ ಒಬ್ಬನಾದ ನನಗೇ ಹೀಗೆ ಮಾಡಿದರೆ...?

ಇದು ನಮ್ಮ ಮನೆಯೇ? ಮೃಗಾಲಯವೇ? ಒಂದು ಕ್ಷಣ ಯಾವುದೂ ತಿಳಿಯದಂತಾಯಿತು. ಮರುಕ್ಷಣವೇ, ನನಗೆ ಜ್ಞಾನೋದಯವಾಯಿತು.

ನಮ್ಮ ಬೀಗರು (ಅಣ್ಣನ ಹೆಂಡತಿಯ ಅಣ್ಣ) ಪರಿವಾರ ಸಮೇತ ಅಂದು ಮಧ್ಯಾಹ್ನ ಊರಿಂದ ಬಂದಿದ್ದರು. ಅಡಿಗೆ ಮನೆಯೊಳಗೆ ಹೋಗಿ ನೋಡಿದೆ. ಎಲ್ಲರೂ ಉಪಾಹಾರ ನಡೆಸಿದ್ದರು. ನನ್ನ ಆಗಮನದಿಂದ ನಮಸ್ಕಾರ ಚಮತ್ಕಾರ ಎಲ್ಲವೂ ಆದವು- ಕುಶಲ ವಾರ್ತೆಗಳ ವಿನಿಮಯ ಕೂಡ. ಎಲ್ಲೆಲ್ಲಿಯೂ ನಗೆ... ನಗೆ... ನಗೆ! ನಮ್ಮ ಅತ್ತಿಗೆಯ ಹೆಗಲ ಮೇಲೆ ಗಿಳಿಯೊಂದು ಕುಣಿಯುತ್ತ ಕುಳಿತಿತ್ತು. ಅವರ ಬಾಯೊಳಗಿನ ತುತ್ತಿಗಾಗಿ ಅದಕ್ಕೆ ತವಕ. ಅವರ ನಾಲಗೆಯ ಮೇಲೆ ತನ್ನ ಚುಂಚನ್ನು ಚಾಚಿ ಅಲ್ಲಿಂದ ಆಹಾರವನ್ನು ತೆಗೆದುಕೊಳ್ಳುತ್ತಿತ್ತು.

ನಮ್ಮ ಬೀಗರ ಹೆಸರು ಶ್ಯಾಮರಾವ್ ನಾಯಿಕ; ರಾಣೇಬೆನ್ನೂರು ತಾಲ್ಲೂಕಿನವರು. ಅವರಿಗೂ, ಅವರ ಮನೆಯವರಿಗೂ ಪಶು-ಪಕ್ಷಿಗಳ ಮೇಲೆ ಅಪಾರ ಪ್ರೀತಿ. ಅವರ ಮಕ್ಕಳೂ ಹಾಗೆಯೇ.....

ಹಲವು ತಿಂಗಳುಗಳ ಹಿಂದೆ ನಾನು ಅವರ ಮನೆಗೆ ಹೋಗಿದ್ದಾ. ಬೆಕ್ಕು, ನಾಯಿ, ಮಂಗ, ಗಿಳಿ, ಮೊಲ.. ಅವರ ಮನೆಯೊಂದು ಬೇರೆ ಜಗತ್ತಾಗಿಯೇ ನನಗೆ ಕಂಡಿತು. ಶ್ಯಾಮರಾಯರ ಮಕ್ಕಳೆಲ್ಲರೂ ಆ ಪಶು-ಪಕ್ಷಿಗಳ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದರು. ಬಹಳ ಸಲುಗೆಯಿಂದ ಅವರೆಲ್ಲರೂ ಅವುಗಳ ಕೂಡ ಚೆನ್ನಾಟವಾಡುತ್ತಿದ್ದರು. ನನಗೆ ಏನೋ ಆಶ್ಚರ್ಯ! ರಾತ್ರಿ ಮಲಗಿಕೊಳ್ಳುವಾಗ ಒಬ್ಬರು ಬೆಕ್ಕನ್ನು, ಇನ್ನೊಬ್ಬರು ನಾಯಿಯನ್ನು, ಮತ್ತೊಬ್ಬರು ಮೊಲವನ್ನು ಹೀಗೆ ಎಲ್ಲರೂ ಒಂದೊಂದನ್ನು ತಮ್ಮ ಬಳಿ ಮಲಗಿಸಿಕೊಂಡರು. ಮಂಗವೊಂದು ಮಾತ್ರ ಗೋಡೆಯ ಮೇಲೆ ಏಕಾಕಿಯಾಗಿ ಕುಳಿತಿತ್ತು... ರಾತ್ರಿ ನನಗೆ ನಿದ್ದೆ ಹತ್ತಿದಾಗ, ಒಮ್ಮೆಲೆ ಜಿಗಿದು ಅದು ನನ್ನ ಹತ್ತಿರವೇ ಬಂದರೆ..? ಅಬ್ಬಾ! ಏನೋ ಭಯ! ತುಂಬ ಮುಸುಕಿಹಾಕಿ

ಕೊಂಡುಬಿಟ್ಟೆ...! ಆ ರಾತ್ರಿ ನಿದ್ದೆ ಅಷ್ಟಕ್ಕಷ್ಟೇ.

ಶ್ಯಾಮರಾಯರು ನ್ಯಾಯಾಧೀಶರು. ಅವರಿಗೆ ಜಮಖಂಡಿಯಿಂದ ಬೆಂಗಳೂರಿಗೆ ವರ್ಗವಾಗಿತ್ತು, ಬಡತಿಯೂ ಸಿಕ್ಕಿತ್ತು! ಈ ಪಶು-ಪಕ್ಷಿಗಳನ್ನೆಲ್ಲ ಕಟ್ಟಿಕೊಂಡು ಬೆಂಗಳೂರಿಗೆ ನಡೆದಿದ್ದರು. ತಮ್ಮ ಸಂಸಾರದ ಜೊತೆಗೆ ಇವುಗಳ ಸಂಸಾರವನ್ನೂ ಕಟ್ಟಿಕೊಂಡ ಆಶ್ಚರ್ಯಕರ ಸಂಗತಿಯ ಬಗ್ಗೆ ನಾನು ಶ್ಯಾಮರಾಯರನ್ನು ಕೇಳಿದಾಗ, ಪಶು-ಪಕ್ಷಿಗಳು ತಮ್ಮ ಹತ್ತಿರ ಇದ್ದುದಕ್ಕೆ ಅವರು ಅತ್ಯಂತ ಸಂತೋಷವನ್ನೇ ಅನುಭವಿಸಿದ್ದರು. ಅವರು ನಗು-ನಗುತ್ತ "ವಿದ್ಯಾರ್ಥಿಗಳಿಗಂತೂ ನಮ್ಮ ಮನೆ ದೇವಾಲಯವೇ" ಎಂದರು. ಜಮಖಂಡಿಯಲ್ಲಿ ಹಲವಾರು ವಿದ್ಯಾರ್ಥಿಗಳು, ಇನ್ನುಳಿದ ಜನರು ಇವರ ಮನೆಯ ಮುಂದೆ ಬೇಕೆಂದೇ ಹಾಯ್ದು, ನರಿಯ ಮುಖವನ್ನು ಬೆಳಿಗ್ಗೆ ನೋಡುತ್ತಿದ್ದರಂತೆ. ಅದು ಶುಭ ಲಕ್ಷಣವಂತೆ! ಅದನ್ನು ನೋಡಿದ ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಯಶ ನಿಶ್ಚಿತ!

ಗದಗಿನಲ್ಲಿ ಶ್ಯಾಮರಾಯರಿಗೆ ತಮ್ಮ ಸ್ನೇಹಿತರಾದ ಇನ್ನೊಬ್ಬ ನ್ಯಾಯಾಧೀಶರನ್ನು ಕಾಣಬೇಕಾಗಿತ್ತು. ನಮ್ಮ ಮನೆಯಿಂದ ಸ್ವಲ್ಪ ದೂರವೇ ಆ ಮನೆ ಇತ್ತು. ಬೇಸಿಗೆಯ ದಿನ; "ರಾತ್ರಿ ಊಟವಾದ ಮೇಲೆಯೇ ಹಾಯಾಗಿ ತಿರುಗಾಡಿ ಬರೋಣ ಎಂದು ಶ್ಯಾಮರಾಯರು ಹೇಳಿದರು. ಅವರ ಈ ಸ್ನೇಹಿತರು ಹಾಗು ಅವರ ಸೋದರರಲ್ಲಿ ಆಸ್ತಿಯ ಹಕ್ಕಿಗಾಗಿ ಜಗಳ - ವಿಪರೀತ ಜಗಳ!! ಶ್ಯಾಮರಾಯರಿಗೆ ಅವರದು ವಿಶೇಷ ಪರಿಚಯ. ಇಬ್ಬರ ಜಗಳವನ್ನು ಹೇಗಾದರೂ ಬಗೆಹರಿಸಬೇಕೆಂಬ ಮನಸ್ಸು ಶ್ಯಾಮರಾಯರದು. ರಾತ್ರಿ ಹೆಚ್ಚು ಕಡಿಮೆ ಕುಳಿತು, ಎಲ್ಲವನ್ನೂ ನಿರ್ಣಯಿಸಲು ಅನುಕೂಲ ಎಂಬುದು ಅವರ ವಿಚಾರ.

ಊಟವಾದ ಕೂಡಲೇ ನಾನು ಮತ್ತು ಶ್ಯಾಮರಾಯರ ರಾತ್ರಿ ಒಂಬತ್ತರ ಹೊತ್ತಿಗೆ ಮನೆಯಿಂದ ಹೊರಡಲು ಸಿದ್ಧರಾದೆವು. ಹೆಬ್ಬಾಗಿಲ ಹೊಸ್ತಿಲ ಹೊರಗೆ ಕಾಲಿಡುತ್ತಲೇ, ಪರಮ ನಿಷ್ಠಾವಂತ ಪ್ರಾಣಿಯಾದ ನಾಯಿ ಅವರ ಬೆನ್ನು ಹಿಡಿದೇ ಬಿಟ್ಟಿತು. ಶ್ಯಾಮರಾಯರ ಉಪದೇಶದ ಮಾತುಗಳೆಲ್ಲ ಬೋರ್ಗಲ್ಲ ಮೇಲೆ ನೀರು ಸುರಿದಂತೆ ವ್ಯರ್ಥವಾದವು. ಉಳಿದ ಪ್ರಾಣಿಗಳೆಲ್ಲ ತಮ್ಮ ತಮ್ಮ ಪಾಡಿಗೆ ಮನೆಯಲ್ಲೇ ಕುಳಿತಾಗ, ನಾಯಿ ಅದಕ್ಕೆ ಅಪವಾದ.. ತನ್ನ ಯಜಮಾನನ ಪ್ರಾಣ ರಕ್ಷಕ ತಾನೇ ಎಂದು ಆ ಟೈಗರ್ (ನಾಯಿಯ ಹೆಸರು) ಭಾವಿಸಿರಬೇಕು. ಕೊನೆಗೆ ಶ್ಯಾಮರಾಯರು ಟೈಗರಿನ ಆರ್ಭಟೆಗೆ ತಲೆಬಾಗಿದರು.

ಅದೇ ಸಮಯಕ್ಕೆ ಒಳಗೆ ಹೋಗಿ ಅವರು ತಮ್ಮ ವಾಕಿಂಗ್ ಸ್ಟಿಕ್ ಹಿಡಿದುಕೊಂಡು ಬಂದರು. ಬಡಿಗೆಯನ್ನು ಬೀಸುತ್ತ ಠೀವಿಯಿಂದ ಹೊರಬಿದ್ದ ಶ್ಯಾಮರಾಯರನ್ನು ಕಂಡು "ಈಗ ನೀವು ದೊಡ್ಡ ನ್ಯಾಯಾಧೀಶರು! ತಪ್ಪಿತಸ್ಥರಿಗೆ ಬೆತ್ತ ಪ್ರಹಾರವಾಗಬೇಕಲ್ಲಾ...!" ಎಂದು ಚೇಷ್ಟೆಯಿಂದ ನಗುತ್ತ ನುಡಿದೆ. ನಾವು ಮಾತನಾಡುತ್ತ ದಾರಿ ತುಳಿಯುತ್ತಿದ್ದಾಗ ನಡುನಡುವೆ ನಾಯಿಗಳು ಬೊಗಳುತ್ತಿದ್ದವು; ಆದರೆ ನಮ್ಮ ಶ್ಯಾಮರಾಯರು ಬೆತ್ತವನ್ನು ಎತ್ತಿದ ಕೂಡಲೆ, ಅವು ಓಂದೋಟ ಹಾಕುತ್ತಿದ್ದವು. ಟೈಗರ್ ಮಾತ್ರ ಆಕಾರದಲ್ಲಿ ಹುಲಿಯಂತೆಯೇ ಇತ್ತು. "ಉಳಿದ ನಾಯಿಗಳ ಸಲುವಾಗಿಯೇ ಈ ಬಡಿಗೆ ತಂದದ್ದು.." ಎಂದು ಅಭಿಮಾನದಿಂದ ಶ್ಯಾಮರಾಯರು ಉದ್ಗರಿಸಿದರು.

ಒಂದು ಕಿಲೋಮೀಟರಿನಷ್ಟು ದಾರಿಯನ್ನು ನಡೆದು, ರೈಲು ನಿಲ್ದಾಣದ ಸಮೀಪವಿದ್ದ ಶ್ಯಾಮರಾಯರ ಸ್ನೇಹಿತರ ಮನೆಗೆ ಬಂದಾಗ ಸ್ನೇಹಿತರ ನಾಯಿಯ ಬೊಗಳುವಿಕೆಯಿಂದಲೇ ಸ್ವಾಗತ. ಬಾಗಿಲು ತೆರೆದಿತ್ತು, ದೀಪವಿತ್ತು. ಶ್ಯಾಮರಾಯರೂ ನಾನೂ ಮನೆಯೊಳಗೆ ಕಾಲಿಡಬೇಕಾಗಿತ್ತು.

ಅಷ್ಟರಲ್ಲಿ ಟೈಗರ್ ಆತಿಥೇಯ ನಾಯಿಯ ಆಹ್ವಾನ ಸ್ವೀಕರಿಸಿತ್ತು. ಎರಡೂ ನಾಯಿಗಳ ಬೊಗಳುವಿಕೆ ಹೆಚ್ಚಾಯಿತು. ಶ್ಯಾಮರಾಯರ ಸ್ನೇಹಿತರಾದ ನ್ಯಾಯಾಧೀಶರೂ ಹೊರಗೆ ಬಂದರು. ತಮ್ಮ ನಾಯಿಯ ಮೇಲೆ ಅವರ ಉಪದೇಶ, ಆರ್ಡರ್ ಎಲ್ಲ ಪ್ರಯೋಗವೂ ನಡೆಯಿತು. ಅದು ಟೈಗರ್‌ನಷ್ಟೇ ಹಟಮಾರಿ ಮೊದಲು ಬೊಗಳುವಿಕೆ... ಆಮೇಲೆ ಜಗಳಾಟ. ಆಮೇಲೆ [illegible] ಸ್ನೇಹಿತರು ಒಳಗೆ ಹೋಗಿ ಬೆತ್ತವನ್ನು ತೆಗೆದುಕೊಂಡು

ಬಂದರು. ಶ್ಯಾಮರಾಯರೂ ಬೆತ್ತವನ್ನು ಎತ್ತಿದರು.

ನ್ಯಾಯಾಧೀಶರ ಇಂಥ ಕೃತಿಗಳಿಂದ ಎರಡೂ ನಾಯಿಗಳಿಗೆ ಉತ್ಸಾಹ ನೂರ್ಮಡಿಯಾಯಿತು. ಅವು ಮೈಯುಬ್ಬಿ, ಎಲ್ಲ ಹಲ್ಲುಗಳನ್ನು ತೆಗೆದು ಗುದ್ದಾಡತೊಡಗಿದವು. ಏನೇ ಆದರೂ ಶಾಂತವಾಗಲಿಲ್ಲ. ನೆರೆಹೊರೆಯ ಜನ ಕಿಡಕಿಗಳಲ್ಲಿ ಹಣಿಕಿಕ್ಕಿ ನೋಡತೊಡಗಿದರು. ಇಬ್ಬರು ನ್ಯಾಯಾಧೀಶರಿಗೂ ಹೇಗೆ ಹೇಗೋ ಅನಿಸುತ್ತಿರಬೇಕು.

"ನಾಳೆ ಬೆಳಿಗ್ಗೇನೇ ಭೆಟ್ಟಿಯಾಗೋಣ. ಈ ನಾಯಿಗಳು ನಮಗೆ ಮಾತನಾಡಲೂ ಅವಕಾಶ ಕೊಡತ್ತಿಲ್ಲ.." ಎಂದು ಶ್ಯಾಮರಾಯರು ತಮ್ಮ ಸ್ನೇಹಿತರಿಗೆ ವಿದಾಯ ಹೇಳುತ್ತ ಹೊರಗೆ ನಡೆದೇಬಿಟ್ಟರು.

ಆಗ ಎಲ್ಲವೂ ಮೌನ... ಸ್ನೇಹಿತರು ಬಾಗಿಲು ಹೊರಗೇ ನಿಂತುಕೊಂಡು, "ಕಚ್ಚಾಡುವ ಈ ನಾಯಿಗಳಿಗೆ ಬುದ್ಧಿವಾದ ಹೇಳುವುದು ಸಾಧ್ಯವಾಗಲಿಲ್ಲ. ಇವುಗಳ ಜಗಳ ಬಿಡಿಸಲಾಗದ ನಾವು ಜನಜನಗಳಲ್ಲಿಯ ಜಗಳವನ್ನು ಅದೆಂತು ಬಿಡಿಸಬಲ್ಲೆವೊ!" ಎಂದು ನಿಡುಸುಯ್ದರು. ●

ವಿಚಿತ್ರ ಜನ ಈ ಡಾನಿಗಳು

ನ್ಯೂಗಿನಿ ದ್ವೀಪಸಮೂಹಕ್ಕೆ ಸೇರಿದ ಪಶ್ಚಿಮ ಇರಿಯನ್ ಗ್ರಾಂಡ್ ವ್ಯಾಲಿಯಲ್ಲಿ ಜೀವಿಸುತ್ತಿರುವ 'ಡಾನಿ' ಎಂಬ ಬುಡಕಟ್ಟಿನ ಜನಾಂಗದವರಲ್ಲಿ ಮದುವೆಯಾಗಿ ಮೊದಲ ಎರಡು ವರ್ಷಗಳವರೆಗೆ ಲೈಂಗಿಕ ಸಂಬಂಧ ನಿಷಿದ್ಧ. ಹಾಗೆಯೇ ಮಗುವಾದ ನಾಲ್ಕರಿಂದ ಆರು ವಾರಗಳವರೆಗೆ ಗಂಡ ಹೆಂಡತಿಯಿಂದ ದೂರವಿರುತ್ತಾನೆ. ವಿವಾಹಪೂರ್ವ ಹಾಗೂ ವಿವಾಹಾತೀತ ಲೈಂಗಿಕ ಸಂಬಂಧ ಅವರಿಗೆ ತಿಳಿಯದು. ಬೇರೆ ಯಾವುದೇ ಲೈಂಗಿಕ ವಿಲಕ್ಷಣತೆಯೂ ಇವರಲ್ಲಿ ಕಂಡುಬರುವುದಿಲ್ಲ. ದಾಂಪತ್ಯ ಜೀವನದಲ್ಲಿ ಅವರು ಆಚರಿಸುವ ಲೈಂಗಿಕ ಉಪವಾಸಗಳೇ ಇದಕ್ಕೆ ಸಾಕ್ಷಿ.

ಸದಾ ನಗ್ನರಾಗಿಯೇ ಇರುವ ಇವರಲ್ಲಿ ಗಂಡುಗಳು ಜನನಾಂಗದ ಮೇಲೆ ಸೋರೆಯಂಥ ಒಂದು ಬಗೆಯ ಬುರುಡೆಯನ್ನು ಧರಿಸುತ್ತಾರೆ. ಇದು ಅವರ ಪದ್ಧತಿಯಷ್ಟೆ. ಡಾನಿಗಳು ಭಾವೋದ್ರೇಕಗೊಳ್ಳುವುದು ತೀರಾ ಅಪರೂಪ.

ಡಾನಿ ಜನಾಂಗದ ಸಮಗ್ರ ಅಧ್ಯಯನ ನಡೆಸಿರುವ ಕಾರ್ಲ್ ಹಿಡರ್ ಎಂಬ ಮಾನವ ಶಾಸ್ತ್ರಜ್ಞ ಬರೆದಿರುವಂತೆ ಡಾನಿಗಳ ಮಧ್ಯ ಮನಸ್ತಾಪವುಂಟಾದಾಗ ಎರಡೂ ಗುಂಪಿನವರು ಬಹಳ ಹೊತ್ತು ಚರ್ಚಿಸುತ್ತಾರೆ. ಬಳಿಕ ತುಸು ಹೊತ್ತು ಹೋರಾಟಕ್ಕಿಳಿಯುತ್ತಾರೆ. ಮತ್ತೆ ವಿಶ್ರಮಿಸಿ ಸಂಧಾನ ಮಾತುಕತೆಯಾಡುತ್ತಾರೆ. ಉಗ್ರ ಕೋಪ ಅಥವಾ ದ್ವೇಷಾಸೂಯೆಗಳಿಂದಾಗಿ ಈ ಜನರು ಮತಿ ಕಳೆದುಕೊಳ್ಳುವುದು ಬಹಳ ಕಡಿಮೆ. ಆದಷ್ಟು ಬೇಗ ಜಗಳ ಮುಗಿಸಿ ತಮ್ಮ ಆರಾಧ್ಯ ದೈವಗಳನ್ನು ಸಂತುಷ್ಟಗೊಳಿಸಲು ಅವರು ಬಯಸುತ್ತಾರೆ. ಎಲ್ಲಕ್ಕಿಂತ ಆಶ್ಚರ್ಯಕರ ಸಂಗತಿಯೆಂದರೆ ಡಾನಿಗಳು ಎಂದೂ ಮುಜಿತರಾದಂತೆ ಅಥವಾ ಅಸಂತುಷ್ಟರಾದಂತೆ ಕಾಣಿಸುವುದಿಲ್ಲ.

ಈ ಜನಾಂಗದವರ ಕುಗ್ಗಿದ ಜೀವನೋತ್ಸಾಹಕ್ಕೆ ಕಾರಣವೇನೆಂದು ಇನ್ನೂ ತಿಳಿದುಬಂದಿಲ್ಲ. ಅವರ ಆಹಾರ ಸೇವನೆಯ ಅಭ್ಯಾಸಗಳೇನೂ ಜಗತ್ತಿನ ಇತರ ಜನಾಂಗಗಳಿಗಿಂತ ಬೇರೆಯಾಗಿಲ್ಲ. ಡಾನಿಗಳಲ್ಲಿ ಮಕ್ಕಳ ಸಾವಿನ ಪ್ರಮಾಣ ಅತಿ ಕಡಿಮೆ. ಗಂಭೀರ ಸ್ವರೂಪದ ಯಾವ ರೋಗ ರುಜಿನಗಳೂ ಇವರನ್ನು ಪೀಡಿಸಿದ್ದು ತಿಳಿದುಬಂದಿಲ್ಲ. ಇದಕ್ಕೆ ಜನ್ಮಾರಭ್ಯ ಒದಗಿ ಬಂದ ಜೈವಿಕ ಚರ್ಯೆಗಳೇ ಕಾರಣವಿರಬಹುದು. ಅಥವಾ ಅವರ ಅಲ್ಪ ಜೀವನೋತ್ಸಾಹ ಸಾಂಸ್ಕೃತಿಕವಾಗಿ ತಲೆತಲಾಂತರದಿಂದ ರೂಢಿಯಾಗಿಬಂದಿರಬಹುದು.

ವಿ.ಎಸ್.ಪಿ.

(ಆಧಾರ)

ಮುತ್ತುಗಳು


● ಸಂಜೀವ ●

ಪ್ರಾಣಿಯ ದೇಹದಲ್ಲೇ ತಯಾರಾಗುವ ಮುತ್ತು ಸೃಷ್ಟಿಯ ಒಂದು ವೈಚಿತ್ರ್ಯ. ಬಹಳ ಹಿಂದಿನ ಕಾಲದಿಂದಲೂ ಇವುಗಳನ್ನು ಆಭರಣಗಳೆಂದು ಉಪಯೋಗಿಸಲಾಗುತ್ತಿದೆ. ದೀರ್ಘಾಯುಷ್ಯದ ಸಂಕೇತವೆಂದು ಭಾವಿಸಲಾದ ಮುತ್ತುಗಳನ್ನು ಮಾಟ ಮಂತ್ರಗಳ ವಿರುದ್ಧ ರಕ್ಷಣೆಗೆಂದೂ ಬಳಸುತ್ತಾರೆ.

ಆದರೆ ಹಿಂದಿನ ಕಾಲದಲ್ಲಿ ಮುತ್ತುಗಳು ಅಷ್ಟು ಸುಲಭವಾಗಿ ದೊರೆಯುತ್ತಿರಲಿಲ್ಲವಾದ್ದರಿಂದ ಸಾಮಾನ್ಯ ಜನರಿಗೆ ಅವುಗಳನ್ನು ಕೊಳ್ಳುವುದು ಕಷ್ಟಕರವಾಗಿತ್ತು. ಪರ್ಶಿಯನ್ ಕೊಲ್ಲಿಯಲ್ಲಿ ಮೊದಲ ಬಾರಿಗೆ ಮುತ್ತುಗಳು ಕಾಣಿಸಿದಾಗ ಪರ್ಶಿಯನರು ಅವು ಚಂದ್ರನ ಬಿಂದುಗಳೆಂದು ತಿಳಿದಿದ್ದರಂತೆ! 19ನೇ ಶತಮಾನದ ಅಂತ್ಯದವರೆಗೆ ಎರಡು ಮುತ್ತುಗಳನ್ನು ತಯಾರಿಸಲು ಒಂದು ಸಾವಿರ ಸಿಂಪಿಮುಳುಗಳು ಬೇಕೆಂದು ಸಾಮಾನ್ಯ ನಂಬುಗೆಯಾಗಿತ್ತು.

ಆದರೆ 1888ರ ವೇಳೆಗೆ ಜಪಾನದ ಆಗೋಕೊಲ್ಲಿಯ ದಡದ ಮೇಲಿನ ಗ್ರಾಮ ಟೋಬಾದಲ್ಲಿ ವ್ಯಾಪಾರಿಯೊಬ್ಬನ ಮಗನಾದ ಕೋಕಿಚಿ ಮಿಕಿಮೋಟೋ ಭಾರಿ ಸಂಖ್ಯೆಯಲ್ಲಿ ಮುತ್ತುಗಳನ್ನು ತಯಾರಿಸಿ ಅದನ್ನೊಂದು ಉದ್ದಿಮೆಯನ್ನಾಗಿ ಪರಿವರ್ತಿಸುವ ಕನಸು ಕಾಣುತ್ತಿದ್ದ. 30 ವರ್ಷ ವಯಸ್ಸಿನ ಕೋಕಿಚಿಗೆ ಮುತ್ತಿನ ಸಾಗುವಳಿ ಮಾಡುವ ಮಹದಾಸೆ. ಆಗ ಮುತ್ತಿಗೆ ಬಹಳ ಬೇಡಿಕೆಯಿತ್ತು. ಆದರೆ ಸಿಂಪಿಮುಳುಗಳ ಸಂಖ್ಯೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿತ್ತು. ಅಮೂಲ್ಯ "ಐಸ್" ಮುತ್ತಿನ ಸಿಂಪಿಮುಳುಗಳ ಸಂತತಿ ನಾಶವಾಗುವ ಭೀತಿಯುಂಟಾಗಿತ್ತು.

ಕೋಕಿಚಿ ಮಿಕಿಮೋಟೋ 1890ರಲ್ಲಿ ಕಾಕಿಚಿ ಮಿತ್ಸುಕುರಿ ಎಂಬ ಸಮುದ್ರ ಜೀವಶಾಸ್ತ್ರಜ್ಞನನ್ನು ಭೇಟಿಯಾದ. ಆಗ ಮಿತ್ಸುಕುರಿ ಸಿಂಪಿಮುಳುವಿನ ದೇಹದಲ್ಲಿ ಹೊರಗಿನ ವಸ್ತುವಿನ ಕಣವೊಂದನ್ನು ಸೇರಿಸಿದಾಗ ಆ ವಸ್ತುವಿನಿಂದ ರಕ್ಷಿಸಿಕೊಳ್ಳಲು ಅದರ ಸುತ್ತ ಮುತ್ತಿನ ಚಿಪ್ಪು ನಿರ್ಮಾಣವಾಗುತ್ತದೆ ಎಂದು ವಿವರಿಸಿ ಹೇಳಿದ. ಈ ಕಾರ್ಯವೈಖರಿ ಮಾನವ ದೇಹದಲ್ಲಿ ಹೊರ



ಸಾಮ್ರಾಜ್ಯ


ಗಿನ ವಸ್ತುಗಳು ಪ್ರವೇಶವಾದಾಗ ಉಂಟಾಗುವ ರಕ್ಷಣಾ ವ್ಯವಸ್ಥೆಯನ್ನು ಹೋಲುತ್ತದೆ.

ಇನ್ನಿತರ ಜಪಾನಿ ವಿಜ್ಞಾನಿಗಳು ಹಾಗೂ ಸಮುದ್ರ ಜೀವಶಾಸ್ತ್ರಜ್ಞರೊಂದಿಗೆ ವ್ಯಾಪಕ ಚರ್ಚೆ ನಡೆಸಿದ ನಂತರ ಮಿಕಿಮೋಟೋ ಮುತ್ತಿನ ಉದ್ದಿಮೆ ಸ್ಥಾಪಿಸುವತ್ತ ಮುನ್ನಡೆಯಲು ನಿರ್ಧರಿಸಿದ.

ಉಚ್ಚಮಟ್ಟದ ಮುತ್ತುಗಳನ್ನು ತಯಾರಿಸುವ ಕಲೆಯನ್ನು ರೂಢಿಸಿಕೊಳ್ಳಲು ಅವನಿಗೆ ಹದಿನೇಳು ವರ್ಷಗಳು ಬೇಕಾದವು. ಆದರೆ ಕೊನೆಗೂ ಅವನ ಪ್ರಯತ್ನಕ್ಕೆ ಯಶ ದೊರೆಯಿತು. ಅವನು ತಯಾರಿಸಿದ ಮುತ್ತುಗಳು ಜಗತ್ಪ್ರಸಿದ್ಧವಾದವು. ಸ್ವತಃ ಮಿಕಿಮೋಟೋ 'ಮುತ್ತುಗಳ ರಾಜ'ನೆಂದು ಖ್ಯಾತನಾದ.

ಮಿಕಿಮೋಟೋ ಮುತ್ತುಗಳಿಂದ ಕೇವಲ ಆಭರಣಗಳನ್ನಷ್ಟೇ ಅಲ್ಲ, ಮನೆ ಪಗೋಡಾಗಳಂಥ ಕಟ್ಟಡಗಳ ಚಿಕ್ಕ ಚಿಕ್ಕ ಪ್ರತಿರೂಪಗಳನ್ನು ತಯಾರಿಸಲಾರಂಭಿಸಿದ.

ಮಿಕಿಮೋಟೋ 1954ರಲ್ಲಿ ತನ್ನ 96ನೆ ವಯಸ್ಸಿನಲ್ಲಿ ತೀರಿಕೊಂಡ. ಆದರೆ ಅವನು



ಹಾಕಿಕೊಟ್ಟ ಮುತ್ತಿನ ಉದ್ಯಮದ ಪರಂಪರೆ ಮುಂದುವರೆಯುತ್ತಲೇ ಇದೆ. 1986 ಜೂನಿನಲ್ಲಿ ಪ್ಯಾರಿಸ್‌ನಲ್ಲಿ ಒಂದು ಮಿಕಿ ಮೋಟೊ 'ಆಭರಣಗಳ ವ್ಯಾಪಾರ ಮಳಿಗೆ' ಆರಂಭವಾಯಿತು. ಜಪಾನದಲ್ಲಿರುವ ಮಿಕಿ ಮೋಟೊ ಕಂಪನಿಯ ಮುತ್ತುಗಳು ಇಂದಿಗೂ ಜಗದ್ವಿಖ್ಯಾತವಾಗಿವೆ. ಮಿಕಿಮೋಟೋ 1899 ರಲ್ಲಿ ಟೋಕಿಯೋದಲ್ಲಿ ಆರಂಭಿಸಿದ ಪ್ರಪಂಚದ ಪ್ರಥಮ ಮುತ್ತಿನ ವ್ಯಾಪಾರದ ಅಂಗಡಿ ಇನ್ನೂ ವ್ಯವಹಾರ ನಡೆಸುತ್ತಿದೆ.

ಹಿಂದೆ ಅವನು ಮೊದಲಿಗೆ ಸಿಂಪಿಮುಳುಗಳ ಸಾಗುವಳಿ ಆರಂಭಿಸಿ ಮುತ್ತು ತಯಾರಿಸಿದ ಸ್ಥಳ ಅತಿ ಪವಿತ್ರವಾದ, ಜಾಗೋಕು ಜಿಮಾ ಎಂಬ ದ್ವೀಪದಲ್ಲಿ. ಈಗ ಆ ಕಾರ್ಯ ಮುಂದುವರಿಯುತ್ತಿದೆ. ಉತ್ಪಾದನೆಯ ಪ್ರತಿಶತ 80ರಷ್ಟು ಶುದ್ಧ ಮುತ್ತುಗಳನ್ನು ಮಿಕಿ ಮೋಟೊ ಕಂಪನಿ ತಯಾರಿಸುತ್ತಿದೆ. ಈ ಕಂಪನಿಯ ಪ್ರತಿಶತ 60ರಷ್ಟು ಒಡೆತನ ಇನ್ನೂ ಮಿಕಿಮೋಟೋ ಕುಟುಂಬದ ಕೈಯಲ್ಲಿದೆ. [illegible] ಈಗ ಈ ಕಂಪನಿಯ ಅಧ್ಯಕ್ಷ.

ಮಿಕಿ ಮೋಟೊ ಬಳಸಿದ ತಂತ್ರಜ್ಞಾನದಿಂದಲೇ ಈ ಕಂಪನಿ ಪ್ರತಿವರ್ಷ 3ರಿಂದ 4 ಕೋಟಿ ಸಿಂಪಿಮುಳುಗಳ ಸಾಗುವಳಿ ಮಾಡುತ್ತದೆ. ತಾಯಿ ಸಿಂಪಿಮುಳುಗಳ ದೇಹವನ್ನು ಸೂಕ್ಷ್ಮವಾಗಿ ಬಿಡಿಸಿ ಇನ್ನೊಂದು ತಾಯಿ ಮುಳುವಿನ ಹೊರ ಮೈಯ ಪುಟ್ಟ ಭಾಗವೊಂದನ್ನು ಅದರ ಅಂತಃಕರಣದೊಳಗೆ ಸೇರಿಸಲಾಗುತ್ತದೆ. ನಂತರ ಆ ಸಿಂಪಿಮುಳುವನ್ನು ಎರಡು ವರ್ಷ ನೀರಿನೊಳಗೆ ಬಿಡಲಾಗುತ್ತದೆ. ಈ ಅವಧಿಯಲ್ಲಿ ಅದರ ದೇಹದಲ್ಲಿ ಸೇರಿಸಲಾದ ಇನ್ನೊಂದು ತಾಯಿ ಮುಳುವಿನ ಪುಟ್ಟ ಭಾಗದ ಸುತ್ತ ಮುತ್ತಿನ ಚಿಪ್ಪು [illegible]ವಾಗುತ್ತದೆ. ಈ ಪ್ರಕ್ರಿಯೆಯ ಕೊನೆಯ ಹಂತವಾಗಿ ಅಲ್ಲಿ ಮುತ್ತುಗಳು ತಯಾರಾಗಿರುತ್ತವೆ.

ಈ ರೀತಿ ತಯಾರಾದ ಮುತ್ತಿನ ಸುತ್ತ ಘನೀಭವಿಸಿದ ಕ್ಯಾಲ್ಸಿಯಂ ಮತ್ತು ಪ್ರೋಟೀನ್ ಪದರುಗಳಿರುತ್ತವೆ. ಅದರಿಂದ ಆ ಮುತ್ತು

ಭಾರತ ಬಹಳ ಹಿಂದಿನ ಕಾಲದಿಂದಲೂ ನೈಸರ್ಗಿಕ ಮುತ್ತುಗಳಿಗೆ ಹೆಸರುವಾಸಿ. ಸುಮಾರು ಎರಡು ಸಾವಿರ ವರ್ಷಗಳಷ್ಟು ಹಿಂದೆ ಗ್ರೀಕರು ಹಾಗೂ ರೋಮನರೊಡನೆ ಅದು ಮುತ್ತಿನ ವ್ಯಾಪಾರ ಮಾಡುತ್ತಿತ್ತು.

ತಮಿಳುನಾಡಿನ ಆಗ್ನೇಯದಲ್ಲಿರುವ ಮನ್ನಾರ ಕೊಲ್ಲಿಯಲ್ಲಿ ಮುತ್ತಿನ ಸಿಂಪಿಮುಳುಗಳು ದೊರೆಯುತ್ತವೆಯಾದರೂ ಅವುಗಳಿರುವುದು ಸಂಖ್ಯೆಯಲ್ಲಿ [illegible]. ಅದರಿಂದಲೇ 1916 ರಷ್ಟು ಹಿಂದೆಯೇ ಅಲ್ಲಿನ ಮೀನುಗಾರಿಕೆ ವಿಭಾಗದ ನಿರ್ದೇಶಕರಾಗಿದ್ದ ಜೇಮ್ಸ್ ಹಾರ್ನೆಲ್ ಜಪಾನ್ ಪದ್ಧತಿಯಲ್ಲಿ ಮುತ್ತಿನ ಸಿಂಪಿಮುಳುಗಳ ಸಾಗುವಳಿ ಮಾಡಬೇಕೆಂದು [illegible]. ಜಪಾನ್ ಆಗ ತಾನೇ ಸಿಂಪಿ ಮುಳುಗಳ ಸಾಗುವಳಿ ತಂತ್ರಜ್ಞಾನದ ಮೂಲಕ ಮುತ್ತು ತಯಾರಿ[illegible] [illegible]

[illegible] 1933 ರಿಂದ ಮುಂದೆ 30 ವರ್ಷಗಳ ವರೆಗೆ [illegible] ಮುತ್ತಿನ ಸಾಗುವಳಿ ಅಭಿವೃದ್ಧಿಗೆ ಸಾಕಷ್ಟು ಪ್ರಯತ್ನ ಮಾಡಿತು. ಅದರ [illegible] 1973 ರಲ್ಲಿ ಆಗ ಕೊಚ್ಚಿಯಲ್ಲಿದ್ದ ಕೇಂದ್ರ ಸಾಗರ ಮೀನುಗಾರಿಕೆ [illegible] ತುತುಕುಡಿಯ ಬಳಿಯ ವೀರಪಾಂಡಿಯನ್‌ಪಟ್ಟಣದಲ್ಲಿ ಪ್ರಾಯೋಗಿಕವಾಗಿ [illegible] ಕೈಗೊಂಡಿತು. ಆದರೆ 1945 ರಿಂದ 1961ರ ವರೆಗೆ [illegible] ಮನ್ನಾರ ಕೊಲ್ಲಿಯ ಮುತ್ತಿನ ಸಿಂಪಿಮುಳುಗಳ ತಾಣಗಳು [illegible]. ಮುತ್ತಿನ ಸಿಂಪಿಮುಳುಗಳ ಸಾಗುವಳಿಯ [illegible] ಈ [illegible] ಉಪಯುಕ್ತತೆ ಬಗೆಗೇ ಶಂಕೆಗಳು [illegible]

ನಂತರ ಶುದ್ಧಗೊಳಿಸಲಾಗುತ್ತದೆ.

ಸಿಂಪಿಮುಳುಗಳ ಸಾಗುವಳಿ ಆರಂಭವಾಗುವುದು ನವೆಂಬರ್ ತಿಂಗಳಲ್ಲಿ. ಮುತ್ತಿನ ಮಾರುಕಟ್ಟೆಗಳು ಸಾಮಾನ್ಯವಾಗಿ ಡಿಸೆಂಬರಿನಿಂದ ಫೆಬ್ರವರಿಯವರೆಗೆ ಕಾರ್ಯನಿರತವಾಗಿರುತ್ತವೆ. ಮಿಕಿಮೋಟೋ ಮುತ್ತುಗಳು ತಯಾರಾಗುವ ಪ್ರದೇಶದಲ್ಲಿ ಸಾರ್ವಜನಿಕರಿಗೆ ಪ್ರವೇಶವಿಲ್ಲ.

ಒಂದು ಮುತ್ತನ್ನು ತಯಾರಿಸಲು ಎಷ್ಟೋ ಬಾರಿ ನಾಲ್ಕು ವರ್ಷ ಬೇಕಾಗಬಹುದು. ಮಿಕಿಮೋಟೋ ಕಂಪನಿಯಲ್ಲಿ ತಯಾರಾದ ಮುತ್ತುಗಳನ್ನು ಅವುಗಳ ಗಾತ್ರ ಬಣ್ಣ ಮುಂತಾದವುಗಳ ಆಧಾರದ ಮೇಲೆ ವಿಂಗಡಿಸಲಾಗುತ್ತದೆ. ಅವುಗಳ ಪೈಕಿ ಪ್ರತಿಶತ ಐದರಷ್ಟು ಮಾತ್ರ ಉತ್ಕೃಷ್ಟ ಮಟ್ಟದವುಗಳಾಗಿರುತ್ತವೆ. ಆದರೆ ಪ್ರತಿಶತ 28ರಷ್ಟು ಮಾರಬಲ್ಲಂಥವುಗಳು. ಕೋಕಿಚಿ ಕಾಲದಲ್ಲಿದ್ದಂತೆ ಈಗಲೂ ಸರಾಸರಿ ಒಂದು ಅತಿ ಉತ್ಕೃಷ್ಟ ಮಟ್ಟದ ಮುತ್ತು ದೊರಕುವ ಸಾಧ್ಯತೆ ಹತ್ತು ಲಕ್ಷಕ್ಕೆ ಒಂದು ಮಾತ್ರ. ಈ ಕಂಪನಿಯಲ್ಲಿ ಗುಲಾಬಿ, ಬಿಳಿ ಮತ್ತು ಹಳದಿ ಬಣ್ಣದ ಮುತ್ತುಗಳನ್ನು ತಯಾರಿಸಲಾಗುತ್ತದೆ. ಆದರೆ ಸಾಗುವಳಿ ಮಾಡಿದ ಅರ್ಧದಷ್ಟು ಸಿಂಪಿಮುಳುಗಳು ಪ್ರತಿ ವರ್ಷ ಸಮುದ್ರದ ಅಲೆಗಳಿಗೆ ಸಿಕ್ಕು ಅಥವಾ ರೋಗಕ್ಕೆ ಬಲಿಯಾಗಿ ಸಾಯುತ್ತವೆ. ಇದನ್ನು ತಡೆಗಟ್ಟುವಲ್ಲಿ ಯಾವುದೇ ಆಧುನಿಕ ತಂತ್ರಜ್ಞಾನವೂ ಇದುವರೆಗೆ ಯಶಸ್ವಿಯಾಗಿಲ್ಲ.

ಕೋಕಿಚಿ ಮಿಕಿಮೋಟೋ 1888ರಲ್ಲಿ ಸಿಂಪಿಮುಳುಗಳ ಸಾಗುವಳಿ ಆರಂಭಿಸಿದಾಗ ಅನೇಕ ನೈಸರ್ಗಿಕ ಘಟನೆಗಳು ಅವನ ಪ್ರಯತ್ನಕ್ಕೆ ಅಡ್ಡಿಯಾಗಿದ್ದವು. ನಕ್ಷತ್ರ ಮೀನು, ಆಕ್ಟೋಪಸ್, ಪ್ರವಾಹ ಮುಂತಾದವುಗಳ ಮೂಲಕ ಸಿಂಪಿಮುಳುಗಳ ಜೀವ ಉಳಿಯುವುದೇ ಕಠಿಣವಾಗಿತ್ತು. 1892ರಲ್ಲಿ ಅವನು ಸಾಗುವಳಿ ಮಾಡಿದ ಬಹಳಷ್ಟು ಸಿಂಪಿಮುಳುಗಳು ಪ್ರವಾಹಕ್ಕೆ ಸಿಕ್ಕು ನಾಶವಾದವು.

ಅದರಿಂದ ಚೇತರಿಸಿಕೊಂಡ ಮಿಕಿಮೋಟೋ 1905ರಲ್ಲಿ ಟಾಟೋಕು ಬಂದರಲ್ಲಿ ಸಂಪೂರ್ಣ

ಆಗ ಕೊಚ್ಚಿಯ ಸಂಸ್ಥೆ ಸಿಂಪಿಮುಳುಗಳ ಮರಿಗಳನ್ನು ಬೆಳೆಸುವ ಕಾರ್ಯಕ್ರಮ ಹಾಕಿಕೊಂಡಿತು. ಇದು 1981 ರಲ್ಲಿ ಫಲ ನೀಡಿತು. ಒಂದೇ ಬಾರಿಗೆ ಹತ್ತು ಲಕ್ಷಕ್ಕೂ ಹೆಚ್ಚು ಸಿಂಪಿಮುಳುಗಳ ಮೊಟ್ಟೆಗಳ ಉತ್ಪಾದನೆಯಾಯಿತು. ನಂತರ ಕೊಚ್ಚಿ ಸಂಸ್ಥೆ ದೇಶದಲ್ಲಿ ಸಿಂಪಿಮುಳುಗಳ ಸಾಗುವಳಿಯ ಬಗೆಗಿನ ಸಂಶೋಧನೆ ಹಾಗೂ ಅಭಿವೃದ್ಧಿಯ ಕಾರ್ಯದಲ್ಲಿ ಮುಖ್ಯ ಪಾತ್ರ ವಹಿಸಲಾರಂಭಿಸಿತು. ಸಿಂಪಿಮುಳುಗಳ ಮೊಟ್ಟೆಗಳ ಉತ್ಪಾದನೆ ಹಾಗೂ ಸಾಗುವಳಿಯ ಬಗ್ಗೆ ತರಬೇತಿ ಶಿಬಿರಗಳನ್ನು ಏರ್ಪಡಿಸಿತು.

ಈ ಸಂಸ್ಥೆ ಅಭಿವೃದ್ಧಿಪಡಿಸಿದ ತಂತ್ರಜ್ಞಾನದ ಮೂಲಕ ದೊರೆತ ಮೊದಲ ಗೋಲಾಕಾರದ ಮುತ್ತನ್ನು 1973 ಜುಲೈ 25 ರಂದು ಸಾಗುವಳಿ ಮಾಡಲಾಗಿತ್ತು. ನಂತರ 1973ರ ಅಕ್ಟೋಬರ್ ಹಾಗೂ 1978ರ ಸಪ್ಟೆಂಬರ್ ಮಧ್ಯ ಒಂದೇ ಬಾರಿಗೆ ಅನೇಕ ಗೋಲಾಕಾರದ ಮುತ್ತುಗಳನ್ನು ಉತ್ಪಾದಿಸಲಾಯಿತು. ಸಾಗುವಳಿಯ ಅಭಿವೃದ್ಧಿ ಹಾಗೂ ಸಮಸ್ಯೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಟ್ರುಸಾದಾಯಿಯಲ್ಲಿ ಸಿಂಪಿಮುಳುಗಳ ಫಾರ್ಮನ್ನು ಸ್ಥಾಪಿಸಲಾಯಿತು.

ಆದರೆ ಉಸುಕಿನ ಸ್ಥಾನಪಲ್ಲಟ, ಮಿತಿ ಮೀರಿದ ಮೀನುಗಾರಿಕೆ, ರೋಗ ಪ್ರಸಾರ ಮುಂತಾದ ಕಾರಣಗಳ ಮೂಲಕ ಮನ್ನಾರ ಕೊಲ್ಲಿಯಲ್ಲಿನ ಸಿಂಪಿಮುಳುಗಳ ತಾಣಗಳು ಮಾಯವಾಗಿವೆ. ಕೊಲ್ಲಿಯಲ್ಲಿ ಹೆಚ್ಚುತ್ತಿರುವ ಹಡಗುಗಳ ಓಡಾಟ, ಅವುಗಳಿಂದ ಸೋರುವ ಎಣ್ಣೆ, ದಂಡೆಗುಂಟ ಸ್ಥಾಪಿಸಲಾಗಿರುವ ಉದ್ದಿಮೆಗಳ ಕಶ್ಮಲಗಳು ಕೂಡ ಈ ಪರಿಸ್ಥಿತಿ ಉಂಟಾಗಲು ಕೆಲ ಮುಖ್ಯ ಕಾರಣಗಳು.

1988ರ ಮೇ 28 ರಂದು ಪಶ್ಚಿಮ ಬಂಗಾಲ ಸರಕಾರಿ ಅಧಿಕಾರಿಯೊಬ್ಬನ ಮಗನಾದ ಪಾರ್ಥೀದಾಸ್ ಕಲಕತ್ತಾದ ವಿದ್ಯಾಸಾಗರ ಸರೋವರದ ಬಳಿ ಕೆಲ ಕಪ್ಪೆಚಿಪ್ಪುಗಳನ್ನು ಆಯ್ದುಕೊಂಡ. ಅಂಗವಿಕಲನಾಗಿರುವ 13ರ ಹರೆಯದ ಈ ಬಾಲಕ ಮನೆಗೆ ಬಂದು ಅವುಗಳನ್ನು ಒಡೆದಾಗ ಕೆಲ ಚಿಪ್ಪುಗಳಲ್ಲಿ ಹೊಳೆಯುತ್ತಿರುವ ವಸ್ತುಗಳನ್ನು ಕಂಡು ಅಚ್ಚರಿಪಟ್ಟ. ಅವು ಮುತ್ತುಗಳಾಗಿದ್ದವು.

ಸುದ್ದಿ ಹಬ್ಬುತ್ತಿದ್ದಂತೆಯೇ ಜನರು ಧಾವಿಸಿ ಬರಲಾರಂಭಿಸಿದರು. ಕೊನೆಗೆ ಪೋಲೀಸರ ಸಹಾಯದಿಂದ ಆ ಪ್ರದೇಶವನ್ನು ಸಾರ್ವಜನಿಕರಿಗೆ ನಿರ್ಬಂಧಿಸಲಾಯಿತು.

ನಂತರ ತಜ್ಞರು ತನಿಖೆ ನಡೆಸಿದಾಗ ಪ್ರಾಣಿ ಸಮತೋಲನವನ್ನು ಕಾಯ್ದುಕೊಳ್ಳಲೆಂದು ಕೆಲ ಜೋಡು ಚಿಪ್ಪಿನ ಮೃದ್ವಂಗಿಗಳನ್ನು ಈ ಮೊದಲು ಸರೋವರದೊಳಗೆ ಬಿಡಲಾಗಿದೆಯೆನ್ನುವುದು ಬೆಳಕಿಗೆ ಬಂತು. ಈ ಮೃದ್ವಂಗಿಗಳು ಜಲಪರಿಚಲನೆಯನ್ನು ಹೆಚ್ಚಿಸುತ್ತವೆ. ಸಿಂಪಿಮೀನುಗಳ ಬೆಳವಣಿಗೆಗೆ ಇದು ಅತ್ಯಗತ್ಯ. ಒಳ್ಳೆಯ ಮಣ್ಣು ಮತ್ತು ನೀರು ಸಹ ವಿದ್ಯಾಸಾಗರ ಸರೋವರದಲ್ಲಿ ಸಿಂಪಿಮೀನುಗಳ ಬೆಳವಣಿಗೆಗೆ ಸಹಾಯಕವಾಗಿರಬಹುದು.

ಈಗ ಸರಕಾರಿ ಸಂಸ್ಥೆಗಳು ಈ ಬಗ್ಗೆ ಸಂಶೋಧನೆಯಲ್ಲಿ ತೊಡಗಿವೆ. ಆದರೆ ಸರೋವರಗಳಂಥವುಗಳಲ್ಲಿ ದೊರೆತ ಮುತ್ತುಗಳಿಗಿಂತ ಸಮುದ್ರದ ಮುತ್ತುಗಳು ಹೆಚ್ಚು ಹೊಳಪುಳ್ಳವು ಮತ್ತು ದೊಡ್ಡದಾಗಿರುತ್ತವೆ ಎಂದು ಹೇಳಲಾಗುತ್ತದೆ.

ಸಿದ್ಧತೆಯೊಂದಿಗೆ ಹೊಸದಾಗಿ ಸಾಗುವಳಿ ಆರಂಭಿಸಿದ. ಆದರೆ ಮತ್ತೆ ಪ್ರವಾಹದ ದಾಳಿ ಆರಂಭವಾಗಿ 8,50,000ದಷ್ಟು ಸಿಂಪಿಮೀನುಗಳು ನಾಶಹೊಂದಿದವು. ಆಗ ಮಿಕಿಮೋಟೋ ತನ್ನ ಉಳಿದಿರುವ ಸಿಂಪಿಮೀನುಗಳನ್ನು ಶೋಧಿಸಲು ನಿರ್ಧರಿಸಿದ. ಆಗ ಅವನಿಗೆ ಭಾರಿ ಬೆಲೆಯುಳ್ಳ ಗೋಲಾಕಾರದ ಐದು ಉತ್ತಮ ಮುತ್ತುಗಳು ದೊರೆತವು. ಅವುಗಳನ್ನು ಪರಿಶೀಲಿಸಿದ ನಂತರ ಅವನು ಗೋಲಾಕಾರದ ಮುತ್ತುಗಳನ್ನು ಸಾಗುವಳಿ ಮಾಡುವ ವಿಧಾನವನ್ನು ರೂಪಿಸಿಕೊಂಡ. 1908ರಲ್ಲಿ ಈ ವಿಧಾನದ ಹಕ್ಕುಗಳನ್ನು ಕಾನೂನುಬದ್ಧವಾಗಿ ತನ್ನದಾಗಿಸಿಕೊಂಡ. ಈ ಗೋಲಾಕಾರದ ಮುತ್ತುಗಳನ್ನು ಇಂದು ವಿವಿಧ ಹಾಗೂ [illegible] ಬೆಲೆ [illegible]ಗಳಿಗೆ ಬಳಸಲಾಗುತ್ತದೆ.

ಕೆಲವು ಮುತ್ತುಗಳ ಸಾಗುವಳಿಯನ್ನು ಮಿಕಿಮೋಟೋ [illegible]. ಅವುಗಳನ್ನು ಜಗತ್ತಿನಾದ್ಯಂತ ಕೊಂಡೊಯ್ದು ಪ್ರದರ್ಶಿಸಿದ. 1910ರಲ್ಲಿ ಲಂಡನ್ನಲ್ಲಿ ನಡೆದ ಆಂಗ್ಲೋ-ಜಪಾನೀಸ್ ಉತ್ಸವದಲ್ಲಿ ಸಿಂಪಿಮೀನುಗಳ ಸಾಗುವಳಿಯ ಪ್ರದರ್ಶನ ನೀಡಿದ. 1200 ವರ್ಷ ಹಳೆಯದಾದ ಮೊದಲ ನಗೋಯಾದ [illegible] ದೇವಾಲಯ [illegible]. 1926ರಲ್ಲಿ ಅವನ ಹೆಸರಲ್ಲಿ ಪ್ರದರ್ಶಿಸಿದ. ಅವನನ್ನು ಜಪಾನಿನ [illegible] ಜನ ಕರಾವಳಿ [illegible] ಗೌರವಿಸಿದರು.

ಇಂದು ನಮ್ಮ ಅನೇಕ ಸುಂದರ ಮುತ್ತುಗಳ [illegible]ಗಳನ್ನು [illegible] ಮುತ್ತಿನ ಮಾರುಕಟ್ಟೆಯಿಂದಲೇ [illegible]ಲಾಗುತ್ತದೆ.

ತನ್ನ ಮೊದಲ ಐದು ವರ್ಷಗಳಲ್ಲಿ ಮಗು ಕಲಿಯಬೇಕಾದ್ದು ಏನೂ ಇಲ್ಲವೆಂಬ ಭ್ರಮೆಯಲ್ಲಿ ನಾವೆಲ್ಲ ಇದ್ದೇವೆ. ಆದರೆ ಮಗು ತನ್ನ ಮೊದಲ ಐದು ವರ್ಷಗಳ ನಂತರ ಏನನ್ನೂ ಕಲಿಯುವುದಿಲ್ಲ ಎಂಬುದು ವಸ್ತುಸ್ಥಿತಿ. ಮಗುವಿನ ಶಿಕ್ಷಣ ಆರಂಭವಾಗುವುದು ತಾಯಿ ಗರ್ಭಧರಿಸಿದ ಕ್ಷಣದಿಂದಲೇ.

— ಮಹಾತ್ಮಾ ಗಾಂಧಿ

ಉಪಗ್ರಹಗಳು ಗಗನ ಕುಸುಮಗಳು


ಧರೆಯಿಂದ ಆಕಾಶಕ್ಕೆ...
...ಆಕಾಶದಿಂದ ಧರೆಗೆ

★ ವಂದನಾ ಶಾನಭಾಗ ★

ನಾವು ದೂರದಲ್ಲಿರುವ ನಮ್ಮ ಆಪ್ತರನ್ನು ಕಾಣಲಾರೆವು. ನೇರವಾಗಿ ಮಾತನಾಡಲಾರೆವು. ಸನ್ನೆಯನ್ನೂ ಮಾಡ ಲಾರೆವು. ನಮ್ಮ ಮತ್ತು ನಮ್ಮ ಆಪ್ತರ ನಡುವಿನ ಅಂತರ ಕಡಿಮೆ ಇದ್ದಾಗಲೂ, ಅವರನ್ನು ನೇರ ವಾಗಿ ಕಾಣಬೇಕಾದರೆ ಎತ್ತರವಾದ ಕಟ್ಟಡ, ಗಿಡ ಮರ, ಗುಡ್ಡಗಳು ಮುಂತಾದ ಹಲ ವಾರು ಆತಂಕ ಗಳು. ಆದರೆ ಬಾನಿನಲ್ಲಿರುವ ಚಂದಿರ ದೂರ ಇದ್ದರೂ ನಮ್ಮನ್ನು ನೋಡಬಲ್ಲ, ಅದೇ ಸಮಯಕ್ಕೆ ನಮ್ಮ ಆಪ್ತರನ್ನೂ ಕಾಣಬಲ್ಲ. ಹಾಗಾದರೆ ಅವನು ನಾವು ಮಾಡಿದ ಸನ್ನೆ ಯನ್ನು ಅರ್ಥಮಾಡಿಕೊಂಡು, ನಮ್ಮ ಆಪ್ತರಿಗೆ ಅರ್ಥವಾಗುವಂತೆ ಹೇಳಬಾರದೇ? ಇದು ತಾರಮ್ಮಯ್ಯ ಎನ್ನುವ ಮಗುವಿನ ಕಲ್ಪನೆಯಲ್ಲ. 1954ರಲ್ಲಿ ಅಮೆರಿಕದ ನೌಕಾದಳವು ಒಂದು ಕಡೆಯಿಂದ ಸಂಜ್ಞೆಗಳನ್ನು ಚಂದ್ರನಿಗೆ ಕಳುಹಿಸಿ ಇನ್ನೊಂದು ಕಡೆಗೆ ಮರಳಿ ಪಡೆಯಿತು. 1945ರಲ್ಲಿ ವಿಜ್ಞಾನ ಕಥಾಲೇಖಕ ಆರ್ಥರ್ ಕ್ಲಾರ್ಕ್‌ನು ಕೃತಕ ಉಪಗ್ರಹದ ಮುಖಾಂತರ ಕ್ರಿಯಾತ್ಮಕ ದೂರ ಸಂಪರ್ಕ ಸಾಧಿಸುವ ಕಲ್ಪನೆ ಯನ್ನು ತನ್ನ ಕಥೆಯಲ್ಲಿ ಬಳಸಿದ್ದ. 1962ರಲ್ಲಿ ಬೆಲ್ ಸಂಸ್ಥೆಯ ಕೃತಕ ಉಪಗ್ರಹದ ಮುಖಾಂತರ ಸಂಪರ್ಕ ಸಾಧಿಸಿ ಈ ಕಲ್ಪನೆ ಯನ್ನು ನಿಜಗೊಳಿಸಿತು. ಇಂದು ಕೃತಕ ಉಪ ಗ್ರಹದ ಉಪಯೋಗಗಳು ಅರಿವಿಗೆ ಬಾರದಷ್ಟು ನಮ್ಮ ಬದುಕಿನಲ್ಲಿ ಹೆಣೆದು ಕೊಂಡಿದೆ.

ಉಪಗ್ರಹದಿಂದ ಸಂಪರ್ಕ ಸಾಧಿಸುವುದು ತಂತ್ರಜ್ಞಾನದ ಎರಡು ವಿಭಿನ್ನ ಶಾಖೆಗಳನ್ನೊಳ ಗೊಂಡಿದೆ. ಕೃತಕ ಉಪಗ್ರಹವನ್ನು ಹಾರಿಸಿ ಕಕ್ಷೆ ಸೇರಿಸುವುದು ಒಂದು ಶಾಖೆಯಾದರೆ. ಒಂದು ಕಡೆಯಿಂದ ಧ್ವನಿಯನ್ನು ಉಪಗ್ರಹಕ್ಕೆ ಸಾಗಿಸಿ ಇನ್ನೊಂದು ಕಡೆಗೆ ಮರಳಿ ಪಡೆಯುವುದು ಇನ್ನೊಂದು ಶಾಖೆ. ದೂರ ಸಂಪರ್ಕದ ಈ ಶಾಖೆಯಲ್ಲಿ ಅಂತರಿಕ್ಷದಲ್ಲೇ ಸಾಧಿಸಬೇಕೆನ್ನುವ ಹೊಸತನವೇನೂ ಇಲ್ಲ. ಭೂಕೇಂದ್ರದಲ್ಲಿರುವಂತಹ ಸಂಪರ್ಕ ಉಪ ಕರಣಗಳನ್ನೇ ಉಪಗ್ರಹದಲ್ಲೂ ಇರಿಸಲಾಗು ತ್ತದೆ.

ಭೂಮಿಯ ಮೇಲೆ ತಂತಿಯ ಮುಖಾಂತರ ಸಾಧಿಸುವ ದೂರಸಂಪರ್ಕ ಆಕಾಶದಲ್ಲಿ ತಂತಿ ರಹಿತವಾದುದು ಹೇಗೆ? ಇದನ್ನು ಸಾಧ್ಯ ಗೊಳಿ ಸಿದ್ದು ವಿದ್ಯುತ್ ಕಾಂತೀಯ ಅಲೆಗಳ ಆವಿ ಷ್ಕಾರ. ತಂತಿಯ ಮೂಲಕ ಧ್ವನಿಯ ಸಂಜ್ಞೆ ಗಳನ್ನು ಸಾಗಿಸಲು ವಿದ್ಯುತ್ತು ನೆರವಾದರೆ ಆಕಾಶದಲ್ಲಿ ಧ್ವನಿಯ ಸಂಜ್ಞೆಗಳನ್ನು ಒಂದೆಡೆ ಯಿಂದ ಇನ್ನೊಂದೆಡೆಗೆ ಸಾಗಿಸಲು ವಿದ್ಯುತ್ ಕಾಂತೀಯ ಅಲೆಗಳು ನೆರವಾಗುತ್ತವೆ. ವಿದ್ಯುತ್ತು ಯಾವುದೇ ಒಂದು ಮಾಧ್ಯಮದ ಸಹಾಯವಿಲ್ಲದೇ ವಿದ್ಯುತ್ ಕಾಂತೀಯ ತರಂಗಗಳೆಂಬ ರೂಪದಲ್ಲಿ ಪ್ರಸಾರಗೊಳ್ಳ ಬಲ್ಲವೆಂಬುದನ್ನು 1864ರಲ್ಲಿ ಕ್ಲಾರ್ಕ್ ಮ್ಯಾಕ್ಸ್‌ವೆಲ್ ಎಂಬ ವಿಜ್ಞಾನಿಯು ಪ್ರತಿ ಪಾದಿ ಸಿದನು. 1896ರಲ್ಲಿ ಇಟಲಿಯ ಗೂಗ್ಲಿ



ಚಿತ್ರ 1. ಉಚ್ಚ ಆವರ್ತದ ವಾಹಕ ಅಲೆ ತರಂಗ ರೂಪಗಳು


ಇಟಲಿಯ ಮಾರ್ಕೋನಿಯು ವಿದ್ಯುತ್ ಕಾಂತೀಯ ತರಂಗಗಳನ್ನು ತಂತಿಗಳ ಸಹಾಯವಿಲ್ಲದೇ ಒಂದೆಡೆಯಿಂದ ಇನ್ನೊಂದೆಡೆಗೆ ಸಮಾಚಾರಗಳನ್ನು ಕಳುಹಿಸಲು ಉಪಯೋಗಿಸಬಹುದೆಂಬುದನ್ನು ಕಂಡುಹಿಡಿದ. ಅವನು ಬ್ರಿಟಿಷ್ ಕಡಲ್ಗಾಲುವೆಯ ಹಾಗೂ ಅಟ್ಲಾಂಟಿಕ್ ಸಾಗರದ ಮುಖಾಂತರ ಸಮಾಚಾರಗಳನ್ನು ಕಳುಹಿಸಿ ನಿಸ್ತಂತು (wireless) ವಿನ ಜನಕ ಎಂದು ಖ್ಯಾತನಾದ.

ದೃಷ್ಟಿರೇಖೆಯುಗುಂಟ ದೂರಸಂಪರ್ಕ

ಪರ್ಯಾಯ ವಿದ್ಯುತ್ತು ಹರಿಯುವ ಯಾವುದೇ ವಿದ್ಯುನ್ಮಂಡಲದಿಂದ ವಿದ್ಯುತ್ ಕಾಂತೀಯ ಅಲೆಗಳು ಹೊರಹೊಮ್ಮುತ್ತವೆ. ಪರ್ಯಾಯ ವಿದ್ಯುತ್ತಿನ ಆವರ್ತನಾಂಕ ಹೆಚ್ಚಾದಾಗ ವಿಕಿರಣಗೊಳ್ಳುವ ವಿದ್ಯುತ್ ಕಾಂತೀಯ ಅಲೆಗಳ ವರ್ತನೆಯು ಬೆಳಕಿನ ವರ್ತನೆಯಂತೆ ಇರುತ್ತವೆ. ಬೆಳಕಿನ ಕಿರಣ ನಡುವೆ ಯಾವುದೇ ಅಡೆತಡೆ ಇಲ್ಲದಿದ್ದಲ್ಲಿ ಹೇಗೆ ಒಂದದೆಡೆಯಿಂದ ಇನ್ನೊಂದೆಡೆಗೆ ಚಲಿಸುತ್ತವೆ. ಎತ್ತರವಾದ ಗೋಪುರಕ್ಕೆ ಕಟ್ಟಿದ ಆಕಾಶತಂತಿ (Areal) ಯಲ್ಲಿ ಉನ್ನತ ಆವರ್ತನಾಂಶದ ಪರ್ಯಾಯ ವಿದ್ಯುತ್‌ನ್ನು ಹರಿಸಿದಾಗ ಆ ತಂತಿಯಿಂದ ವಿದ್ಯುತ್‌ಕಾಂತ ತರಂಗಗಳು ಹೊರಟು ಸುತ್ತಲೂ ಪಸರಿಸುತ್ತವೆ. ಖಾಲಿ ಆಕಾಶದಲ್ಲಿ ಪ್ರತಿ ಸೆಕೆಂಡಿಗೆ ಮೂವತ್ತು ಕೋಟಿ ಮೀಟರ್ ವೇಗದಿಂದ ಇವು ಸಂಚರಿಸುತ್ತವೆ. ಈ ಅಲೆಗಳನ್ನು ಒಂದೇ ದಿಕ್ಕಿಗೆ ಕೇಂದ್ರೀಕರಿಸಿದಲ್ಲಿ ಎತ್ತರವಾದ ಗೋಪುರಕ್ಕೆ ಬಿಗಿದ, ವಿದ್ಯುತ್ ಕಾಂತೀಯ ಅಲೆಗಳ ಚಲನೆಯ ದಿಕ್ಕಿನಲ್ಲಿರುವ ಇನ್ನೊಂದು ಆ್ಯಂಟಿನಾ ಗ್ರಹಿಸಬಲ್ಲದು.

ಎತ್ತರವಾದ ಗೋಪುರಕ್ಕೆ ಕಟ್ಟಿದ ಒಂದು ಪ್ರಖರವಾದ ಬೆಳಕಿನ ಆಕರದಿಂದ ಕತ್ತಲಲ್ಲಿ ಬೆಳಕನ್ನು ಹೊರಡಿಸಲಾಗಿದೆ ಎಂದು ಭಾವಿಸೋಣ. ಬೆಳಕಿನ ಚಲನೆಯ ದಿಕ್ಕಿಗೇ ದೂ
ದಲ್ಲಿ ಸ್ಥಾಪಿಸಿದ ಎತ್ತರವಾದ ಗೋಪುರ
ಮೇಲೆ ನಿಂತ ವ್ಯಕ್ತಿಯು ಈ ಬೆಳಕನ್ನು ಕಾ
ಬಲ. ಬೆಳಕಿನ ಆಕರದಿಂದ ನೋಡು
ವ್ಯಕ್ತಿಯ ಕಣ್ಣನ್ನು ಜೋಡಿಸುವ ಅಗೋಚ
ರೇಖೆಯೇ ದೃಷ್ಟಿರೇಖೆ (Line of sigh
ವಿದ್ಯುತ್ ಕಾಂತೀಯ ಅಲೆಗಳೂ ಈ ರೇಖೆ
ಗುಂಟ ಚಲಿಸುತ್ತವೆ. ವಿದ್ಯುತ್‌ಕಾಂತೀಯ ಅ
ಗಳನ್ನು ಹೊರಟಿಸುವ ಆ್ಯಂಟೆನಾ ಬೆಳಕಿನ ಆ
ವಂತೆ ವರ್ತಿಸಿದರೆ ಅಲೆಗಳನ್ನು ಗ್ರಹಿಸು
ಆ್ಯಂಟಿನಾ ವ್ಯಕ್ತಿಯ ಕಣ್ಣಿನಂತೆ ವರ್ತಿಸುತ್ತ
ಈ ವಿದ್ಯುತ್ ಕಾಂತೀಯ ಅಲೆಗಳ ಮೇ
ಸಂಕೇತಗಳ ರೂಪದಲ್ಲಿರುವ ಧ್ವನಿಯ ಸಂ
ಗಳನ್ನು ಹೇರಿ ಒಂದು ಕಡೆಯಿಂದ ಇನ್ನೊಂ
ಕಡೆಗೆ ಸಾಗಿಸಲಾಗುತ್ತದೆ. ಹೀಗೆ ನಡೆಸು
ಸಂಪರ್ಕಕ್ಕೆ Line of sight commu
cation ಎನ್ನುತ್ತಾರೆ. ಇದರಲ್ಲಿ ಬಳಸಿ
ವಿದ್ಯುತ್‌ಕಾಂತೀಯ ಅಲೆಗಳನ್ನು ವಾಹಕ ಅ
ಎನ್ನುತ್ತಾರೆ. ವಾಹಕ ಅಲೆಯ ಮೇಲೆ ಧ್ವನಿ
ವಿಶೇಷತೆಯನ್ನು ಹೇರಿದಲ್ಲಿ ಆ ವಾಹ
ಅಲೆಯಲ್ಲಿ ತದ್ರೀತಿಯ ಬದಲಾವಣೆಯಾ
ತ್ತವೆ. ಹೀಗೆ ಧ್ವನಿಯ ಪ್ರೇರಣೆಯನ್ನು ಹೊ
ವಾಹಕ ಅಲೆಯು ಒಂದು ಆ್ಯಂಟೆನಾದಿಂ
ಇನ್ನೊಂದು ಆ್ಯಂಟಿನಾಕ್ಕೆ ತಲುಪುತ್ತದೆ. ಗ್ರ
ಸುವ ಕೇಂದ್ರದಲ್ಲಿ ವ್ಯತ್ಯಾಸವನ್ನು ಗುರುತಿ
ಧ್ವನಿಯ ಅಲೆಗಳನ್ನು ತಿರುಗಿ ಪಡೆಯುತ್ತಾ
(ಚಿತ್ರ 1.) ವಾಹಕ ಅಲೆ
ಆವರ್ತನಾಂಕವನ್ನವಲಂಬಿಸಿ ಒಂದು ವಾಹ
ಅಲೆಯ ಮೇಲೆ ಒಂದರಿಂದ ಹಿಡಿದು ಹ
ಸಹಸ್ರಕ್ಕೂ ಹೆಚ್ಚು ಧ್ವನಿಯ ಸಂಕೇತಗಳ
ಒಂದೇ ಬಾರಿಗೆ ಸಂವಹಿಸಬಹುದು. ವೈ
ಲೆಸ್‌ನಲ್ಲಿ ಆಕಾಶವಾಣಿಯಲ್ಲಿ, ಒಂ
ವಾಹಕ ಅಲೆಯ ಮೇಲೆ ಒಂದು ದಿಕ್ಕಿನ ಒಂ
ಸಂಕೇತವನ್ನು ಮಾತ್ರ ಕಳುಹಿಸಬಹುದು
ಆದರೆ ದೂರವಾಣಿಯಲ್ಲಿ ಒಂದು ದಿಕ್ಕಿನ
ನಡೆಯುವ ಬೇಕಾದಷ್ಟು ಸಂಕೇತಗಳ
ಒಂದೇ ಬಾರಿಗೆ ವಾಹಕ ಅಲೆಯ ಮೇಲೆ ಹೇ
ಬಹುದು.

ನೆಲದ ಮೇಲೆ ದೃಷ್ಟಿರೇಖೆಯುಗುಂಟ ನ
ಸುವ ದೂರಸಂಪರ್ಕದಲ್ಲಿ ಅಡ್ಡಿ ಆತಂಕಗ
ಹಲವಾರು. ಎರಡು ಕೇಂದ್ರಗಳ ನಡು



ಚಿತ್ರ ೨. ಪೃಥ್ವಿಯ ವಕ್ರತೆಯಿಂದ ದೃಷ್ಟಿರೇಖೆಗೆ ಬಂದ ಅಡ್ಡಿ

ಗಗನಚುಂಬಿಗಳು, ಗಿಡ ಮರಗಳು, ಗುಡ್ಡಗಳು ದೃಷ್ಟಿರೇಖೆಗೆ ಅಡ್ಡಿಯಾಗುತ್ತವೆ. ಎರಡು ಸ್ಥಳ ಗಳ ನಡುವಿನ ಅಂತರವು ಇಪ್ಪತ್ತು ಕಿಲೋ ಮೀಟರ್‌ಗಳಿಗಿಂತ ಹೆಚ್ಚಾದಾಗ ಪೃಥ್ವಿಯ ವಕ್ರತೆಯೇ ದೃಷ್ಟಿರೇಖೆಗೆ ಅಡ್ಡಿಯಾಗಿ ಪರಿ ಣಮಿಸುತ್ತದೆ (ಚಿತ್ರ2) ವಿದ್ಯುತ್‌ಕಾಂತೀಯ ಅಲೆಗಳು ಪ್ರತಿಫಲ ವಕ್ರೀಭವನ ಮುಂತಾದ ಎಲ್ಲ ಬೆಳಕಿನ ನಿಯಮಗಳನ್ನು ಪಾಲಿಸುತ್ತವೆ. ಈ ಅಲೆ ಒಂದೇ ಒಂದು ಕಿರಣವಲ್ಲ. ಇದು ಕಿರಣಾವಳಿ. ಈ ಕಿರಣಾವಳಿಯ ಅಂಚಿನ ಕಿರಣ ಗಳು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗು ವಾಗ ಶಾಂತ ಸರೋವರ, ಬಂಡೆಗಲ್ಲುಗಳಿಗೆ ತಾಗಿ, ಪ್ರತಿಫಲಿಸಿ, ನೇರವಾಗಿ (ಚಿತ್ರ 3) ತಲು ಪಿದ ಅಲೆಗಳಿಗೆ ಅಡ್ಡಿಯಾಗುತ್ತವೆ. ಈ ಎಲ್ಲ ಅನಾನುಕೂಲಗಳನ್ನು, ಗೋಪುರದ ಎತ್ತರವನ್ನು ಹೆಚ್ಚಿಸುವ ಮೂಲಕ ನಿವಾರಿಸ ಬಹುದು. ಆದರೂ ದೂರದ ಎರಡು ಸ್ಥಳ ಗಳನ್ನು ಒಂದೇ ಒಂದು ಸರಳರೇಖೆಯಿಂದ ಕೂಡಿಸಲು ಸಾಧ್ಯವಾಗದು. ಅಲ್ಲಲ್ಲಿ ಬರುವ ಅಡ್ಡಿಯಿಂದ ತಪ್ಪಿಸಿಕೊಳ್ಳಲು ಅಂಕುಡೊಂಕಿನ ಪಥ ಅಗತ್ಯ. ಹೀಗಾಗಿ ಪ್ರತಿ ಐವತ್ತು ಕಿಲೋ ಮೀಟರುಗಳ ಸುಮಾರಿಗೆ ಪ್ರತ್ಯುತ್ಪಾದಕ ಗೋಪುರವನ್ನು ಸ್ಥಾಪಿಸಿ. ಅಲೆಗಳನ್ನು ಗ್ರಹಿಸಿ, ವರ್ಧಿಸಿ ಮುಂದಿನ ಗೋಪುರದ ಕಡೆಗೆ ಸಾಗಿಸ ಬೇಕಾಗುತ್ತದೆ. ಭೂಮಿಯ ಮೇಲೆ ಉದ್ದಕ್ಕೂ ನೂರಾರು ಗೋಪುರಗಳನ್ನು ಸ್ಥಾಪಿಸುವ ಬದಲು ಬಾಹ್ಯಾಕಾಶದಲ್ಲಿರುವ ಉಪಗ್ರಹ ದಲ್ಲಿ ಈ ಪ್ರತ್ಯುತ್ಪಾದಕ ಉಪಕರಣವನ್ನಿರಿಸ ಬಹುದು (ಚಿತ್ರ 4) ನಾವು ಎತ್ತರವಾದ ಗುಡ್ಡದ ಮೇಲೆ ನಿಂತು ನೋಡಿದುದಕ್ಕಿಂತಲೂ ಹೆಚ್ಚಿನ ವಿಸ್ತಾರವಾದ ಭಾಗವನ್ನು ಈ ಉಪ ಗ್ರಹವು ವೀಕ್ಷಿಸುವುದು. ಹೀಗಾಗಿ ಅತಿ ದೂರ ದಲ್ಲಿರುವ ಎರಡು ಸ್ಥಳಗಳನ್ನು ಇದು ಸಹಜ ವಾಗಿ ಜೋಡಿಸಬಲ್ಲದು. ಪೃಥ್ವಿಯಷ್ಟೇ ವೇಗ ದಿಂದ ತಿರುಗುವ ಉಪಗ್ರಹವು ಪೃಥ್ವಿಯಿಂದ ನೋಡಿದಾಗ ಒಂದೇ ಕಡೆಗೆ ನಿಂತಂತೆ ಕಾಣು ತ್ತದೆ. ಭೂಮಧ್ಯ ರೇಖೆಗೆ ಸರಿಯಾಗಿ ಬಾಹ್ಯಾ ಕಾಶದಲ್ಲಿ ಕಕ್ಷೆ ಯಲ್ಲಿರಿಸಿದ ಉಪಗ್ರಹವು ನೂರಕ್ಕೂ ಹೆಚ್ಚು ದೇಶಗಳಿಗೆ ಕಾಣಿಸುತ್ತಲೇ ಇರುತ್ತದೆ. ಅತಿ ಹೆಚ್ಚಿನ ಶಕ್ತಿಯಿಂದ ಕಳುಹಿಸಿದ ಅಗಲವಾದ ಆವರ್ತನಾಂಕಗಳ ಕಿರಣಾವಳಿಗೆ ಇದು ಪ್ರತಿ ಫಲಕದಂತೆಯೆ ವರ್ತಿಸುತ್ತದೆ. ಉಪಗ್ರಹದ ಆ್ಯಂಟೆನಾ ಯಾವಾಗಲೂ ಪೃಥ್ವಿಯಲ್ಲಿಯ ತನ್ನ ಕಾರ್ಯಕ್ಷೇತ್ರದ ಕಡೆಗೆ ಮುಖಮಾಡಿರಬೇಕು. ಉಪಗ್ರಹಕ್ಕೆ ತಲುಪಿದ ಅಲೆಗಳು ತುಂಬ ಕ್ಷೀಣ ವಾಗಿದ್ದು. ಅವುಗಳನ್ನು ಗುರುತಿಸಲು ವಿಶೇಷ ರೀತಿಯ ಆ್ಯಂಟೆನಾವನ್ನು ಅಳವಡಿಸಲಾಗಿರು ತ್ತದೆ. ಪ್ರಬಲ ಶಕ್ತಿಯ ಅಲೆಗಳು ಉಪಗ್ರಹ ವನ್ನು ತಲುಪುವ ಸಲುವಾಗಿ ಅತಿ ದೊಡ್ಡ ತಟ್ಟೆ ಯಾಕಾರದ ಪ್ಯಾರಾಬೊಲಿಕ್ ಡಿಶ್ ಆ್ಯಂಟೆನಾ ವನ್ನು ಭೂಕೇಂದ್ರದಲ್ಲಿ ಬಳಸುತ್ತಾರೆ.

ಇಂತಹ ಉಪಗ್ರಹದ ವೆಚ್ಚ ಬಹಳ ಹೆಚ್ಚು ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ ಭವಿಷ್ಯ ತ್ತಿನಲ್ಲಿ ಆಗುವ ವಿಸ್ತರಣೆಗೆ ಕೇವಲ ಒಂದೇ ಒಂದು ಭೂಕೇಂದ್ರ ಸ್ಥಾಪಿಸಿದರೆ ಸಾಕು. ಉಪ ಗ್ರಹವು ಈ ಕೇಂದ್ರವನ್ನು ದೂರ ಸಂಪರ್ಕ ಜಾಲದ ಇತರ ಎಲ್ಲ ಕೇಂದ್ರಗಳೊಡನೆ ಜೋಡಿಸಬಲ್ಲದು. ಬೇರೆ ಬೇರೆ ಭೂಕೇಂದ್ರಗಳಿಗೆ ಬೇರೆ ಬೇರೆ ಆವರ್ತ ನಾಂಶದ ವಾಹಕ ಅಲೆಯನ್ನು ಬಳಸಲಾಗು ತ್ತದೆ. ಗ್ರಾಹಕ ಆ್ಯಂಟೆನಾದ ಮೇಲೆ ಅವೇ ಆವರ್ತನಾಂಕದ ವಾಹಕ ಅಲೆಗಳು ಪರಿಣಾಮ ಕಾರಿಯಾಗುವಂತೆ ಅದರ ಬಿಡಿ ಭಾಗಗಳನ್ನು ಪ್ರತಿಗೊಳಿಸಿರುತ್ತಾರೆ. ಹೀಗಾಗಿ ಉಪಗ್ರಹವು ಪ್ರತಿಫಲಿಸಿದ ಬೇರೆ ಬೇರೆ ಕೇಂದ್ರಗಳ ವಿದ್ಯುತ್



ಧ್ವನಿಯ ಅಲೆಗೆ ಅನುರೂಪವಾದ ವಿದ್ಯುತ್ ಅಲೆ

ಕಾಂತೀಯ ಅಲೆಗಳು ಇನ್ನೊಂದು ಕೇಂದ್ರವನ್ನು ತಲುಪಿದರೂ ಆ ಆ್ಯಂಟೆನಾ ಈ ಅಲೆಗಳನ್ನು ಗ್ರಹಿಸುವುದಿಲ್ಲ.

ಇಂಟೆಲ್‌ಸ್ಯಾಟ್ ಸಂಸ್ಥೆಯೂ (International Telecom Satellite Organisation) 12 ಉಪಗ್ರಹಗಳನ್ನು ಬಳಸಿ 144 ದೇಶಗಳ ನಡುವೆ ಸಂಪರ್ಕವನ್ನು ಸಾಧಗೊಳಿಸುತ್ತಿದೆ. ರಶಿಯ ಮತ್ತು ಕೆಲವು ಐರೋಪ್ಯ ದೇಶಗಳ ನಡುವಣ ಸಂಪರ್ಕಕ್ಕೆ ಒಂದು ಉಪಗ್ರಹವು ಕೊಂಡಿಯಾಗಿದೆ. ಭಾರತ, ಫ್ರಾನ್ಸ್, ಜಪಾನ್, ಚೀನಾ, ಬ್ರಾಜಿಲ್ ಮುಂತಾದ ದೇಶಗಳು ತಮ್ಮವೇ ಆದ ಪ್ರಾದೇಶಿಕ ಅಥವಾ ಅಂತರ್‌ದೇಶಿಯ (Domestic) ಉಪಗ್ರಹ ವ್ಯವಸ್ಥೆಯನ್ನು ಹೊಂದಿವೆ. 1979ರವರೆಗೂ ಭಾರತವು ಇಂಟಲ್‌ಸ್ಯಾಟ್ ಸಂಸ್ಥೆಯೊಡನೆ, ಹಿಂದೂ ಮಹಾಸಾಗರ ಕಡೆಗಿರುವ ಉಪಗ್ರಹದ ಒಂದು ಭಾಗವನ್ನು ಬಳಸುವ ಕರಾರು ಮಾಡಿಕೊಂಡು, ತೀರ ಒಳಗಿನ ಗ್ರಾಮಾಂತರ ಪ್ರದೇಶಗಳಿಗೆ ಅತ್ಯಗತ್ಯದ ದೂರವಾಣಿ ಸೇವೆ ಒದಗಿಸುತ್ತಿತ್ತು. ಈಗ ಭಾರತವು ಇನ್‌ಸ್ಯಾಟ್ ಉಪಗ್ರಹವನ್ನು ಹಾರಿಸಿದ್ದು ಇದು ದೂರವಾಣಿ, ದೂರದರ್ಶನ ಹವಾಮಾನ ಶಾಸ್ತ್ರ, ಭೂಸಂಪನ್ಮೂಲ ಸಮೀಕ್ಷೆ ಇತ್ಯಾದಿ ಕ್ಷೇತ್ರದಲ್ಲಿ ಬಳಸಲ್ಪಡುತ್ತದೆ. ಈ ಉಪಗ್ರಹವನ್ನು ಏಳು ವರ್ಷ ಚೇತನಪೂರ್ಣವಾಗಿರುವಂತೆ ರಚಿಸಲಾಗಿದೆ. ಭಾರತದಲ್ಲಿ ಈಗಾಗಲೇ 30ಕ್ಕೂ ಹೆಚ್ಚು ಭೂಕೇಂದ್ರಗಳಿವೆ. ಈ ಉಪಗ್ರಹವನ್ನು ಭಾರತದಲ್ಲೇ ನಿರ್ಮಿಸಿ ಅಮೇರಿಕಾದ ನಾಸಾ ಅಂತರಿಕ್ಷಯಾನ ಕೇಂದ್ರದಿಂದ ಬಾಹ್ಯಾಕಾಶ ಪಥಕ್ಕೆ ಉಡಾಯಿಸಲಾಗಿದೆ. ಅಮೇರಿಕ, ರಶಿಯಾ, ಜಪಾನ್, ಯುರೋಪಿಯನ್ ಸ್ಪೇಸ್ ಏಜನ್ಸಿ ಮುಂತಾದೆಡೆಗಳಲ್ಲಿ ಉಪಗ್ರಹವನ್ನು ಆಕಾಶಕ್ಕೆ ಹಾರಿಸುವ ವ್ಯವಸ್ಥೆಯಿದೆ.


ಸಾವಿರಾರು ಸೌರ ವಿದ್ಯುತ್‌ಕೋಶಗಳು ಉಪಗ್ರಹದ ಹೊರಮೈಯನ್ನು ವ್ಯಾಪಿಸಿರುತ್ತವೆ. ಉಪಗ್ರಹಕ್ಕೆ ಬೇಕಾಗುವ ವಿದ್ಯುತ್‌ಶಕ್ತಿಯನ್ನು ಇವು ಒದಗಿಸಿಕೊಡುತ್ತವೆ. ಸೂರ್ಯನ ಕಿರಣಗಳನ್ನು ವಿದ್ಯುತ್‌ಗಾಗಿ ಮಾರ್ಪಡಿಸಿ ಸೌರ ಕೋಶಗಳು ವಿದ್ಯುತ್ತನ್ನು ಸಂಚಯಿಸುತ್ತವೆ. ಉಪಗ್ರಹವು ಚಲನೆಯಲ್ಲಿರುವಾಗ ಅದಕ್ಕೆ ಸಾಮರ್ಥ್ಯವು ಸೌರಕೋಶದಿಂದ ದೊರಕುತ್ತದೆ. ಗ್ರಹಣದ ಸಮಯದಲ್ಲಿ ಅದಕ್ಕೆ ಸೌರಶಕ್ತಿ ದೊರಕುವದಿಲ್ಲವಾದ್ದರಿಂದ ಆ ಸಮಯದಲ್ಲಿ ಉಪಗ್ರಹದಲ್ಲಿ ಜೋಡಿಸಿದ ನಿಕೆಲ್ ಕ್ಯಾಡ್ಮಿಯಂ ಕೋಶಗಳು ಶಕ್ತಿಯನ್ನು ಪೂರೈಸುತ್ತವೆ .

ಉಪಗ್ರಹಗಳು ಕೇವಲ ವೀಕ್ಷಣೆ ಮಾಡುವ ವೇದಿಕೆಗಳಿದ್ದಂತೆ. ಇವುಗಳಿಗೆ ಸಂಬಂಧಿಸಿದ ಎಷ್ಟೋ ಉಪಕರಣಗಳು ಭೂಮಿಯ ಮೇಲೆ ಕೆಲಸ ಮಾಡುವುದು ಅಗತ್ಯ. ದೂರ ನಿಯಂತ್ರಣ ವ್ಯವಸ್ಥೆಯನ್ನು ಇವುಗಳಲ್ಲಿ ಅಳವಡಿಸಲಾಗಿದ್ದು. ಭೂಕೇಂದ್ರದ ಆದೇಶದ ಮೇರೆಗೆ ಉಪಗ್ರಹದಲ್ಲಿರುವ ಉಪಕರಣಗಳು ಕೆಲಸ ಮಾಡುತ್ತವೆ. ಉಪಗ್ರಹದಲ್ಲಿ ಒಂದೇ ಮಾದರಿಯ ಎರಡೆರಡು ಉಪಕರಣಗಳುಳ್ಳ ವ್ಯವಸ್ಥೆಯಿದೆ. ಒಂದು ಉಪಕರಣ ಕೆಲಸ ನಿಲ್ಲಿಸಿದಾಗ ಇನ್ನೊಂದು ಕೆಲಸ ನಿರ್ವಹಿಸುತ್ತದೆ. ಹೀಗಾಗಿ ಅಡೆತಡೆ ಇಲ್ಲದ ದೂರವಾಣಿ ಚಾನೆಲ್ಲುಗಳನ್ನು ಕೊಡಲು ಉಪಗ್ರಹಕ್ಕೆ ಸಾಧ್ಯ

ವಾಗಿದೆ.


ಭೂಮಿಯ ಮೇಲಿರುವ ವಾರ್ತಾವಾಹಕ ತಂತಿಗಳಿಗೆ ಅನೇಕ ಅಡೆತಡೆಗಳಿವೆ. ದೂರದ ಪ್ರದೇಶಗಳನ್ನು ಸಂಪರ್ಕಿಸಲು ಈ ತಂತಿಗಳಿಗೆ ಬಹಳ ಸಮಯ ಹಿಡಿಯುತ್ತದೆ. ಆದರೆ ಉಪ ಗ್ರಹವು ಈ ಸ್ಥಳಗಳನ್ನು ಒಂದೇ ಬಾರಿಗೆ ಸಂಪ ರ್ಕಿಸುತ್ತದೆ. ಅತಿ ದೂರದ ಎರಡು ಸ್ಥಳಗಳೂ, ತೀರ ಒಳಗಿನ ಗ್ರಾಮಗಳೂ ಉಪಗ್ರಹ ದಿಂದಾಗಿ ಅತಿ ಸುಲಭವಾಗಿ ದೂರವಾಣಿ ಸೌಲಭ್ಯವನ್ನು ಪಡೆಯಬಹುದು. ನೌಕಾದಳ, ವಾಯುದಳ, ಸಂಚಾರಿ ಭೂಕೇಂದ್ರ, ದೂರದರ್ಶನ ಉಪಗ್ರಹದಿಂದ ತುಂಬ ಪ್ರಯೋಜನ ಪಡೆಯುತ್ತವೆ.

ದೂರದರ್ಶನದಲ್ಲೂ ದೂರಸಂವೇದಿ ಉಪ ಗ್ರಹದ ಪಾತ್ರ ಹಿರಿದು. ದೂರವಾಣಿ ಯಲ್ಲಿ ಧ್ವನಿಯ ಸಂಜ್ಞೆಗಳನ್ನು ವಿದ್ಯುತ್ ಕಾಂತೀಯ ಅಲೆಗಳನ್ನಾಗಿ ಪರಿವರ್ತಿಸಿದರೆ ದೂರದರ್ಶನ ದಲ್ಲಿ ದೃಶ್ಯವನ್ನು ವಿದ್ಯುತ್ ಕಾಂತೀಯ ಅಲೆ ಗಳನ್ನಾಗಿ ಪರಿವರ್ತಿಸುತ್ತಾರೆ. ಒಂದು ದೃಶ್ಯ



ಚಿತ್ರ 3. ನೇರ ಅಲೆ ಪ್ರತಿಫಲನಗೊಂಡು ಬಂದ ಅಲೆ

ಸಾವಿರಾರು ಅಡ್ಡ ರೇಖೆಗಳಿಂದಾಗಿದೆ ಎಂದು ಭಾವಿಸಿದರೆ, ಪ್ರತಿ ರೇಖೆಯೂ ಒಂದು ದೃಶ್ಯಕ್ಕೆ ಸಂಬಂಧಿಸಿದ ಅನೇಕ ವಿವರಗಳನ್ನು ಒಳ ಗೊಂಡಿರುತ್ತದೆ. ಒಂದು ಬಣ್ಣದ ದೃಶ್ಯ ಪೂರ್ಣವಾಗಲು 1800 ದೂರವಾಣಿ ಚಾನೆಗಲ್ಲುಗಳಿಗೆ ಬೇಕಾದಷ್ಟು ಆವರ್ತ ನಾಂಕದ ಅಗಲಳತೆಯ ಅಲೆಗಳು ಬೇಕಾಗು ತ್ತವೆ. ಅಂದರೆ ಒಂದು ಬಣ್ಣದ ದೃಶ್ಯವನ್ನು



ಚಿತ್ರ 4. ಉಪಗ್ರಹ

ನೆಮ್ಮದಿಯ ಬದುಕಿಗೆ ಕರ್ನಾಟಕ ಸನ್ನದ್ಧ

ಆಶೋತ್ತರಗಳು ಈಡೇರುತ್ತಿರುವ ನಾಡು ಕರ್ನಾಟಕ. 32ನೆಯ ರಾಜ್ಯೋತ್ಸವದ ಈ ಶುಭ ಸಂದರ್ಭದಲ್ಲಿ ನಾವೆಲ್ಲರೂ ಒಟ್ಟಿಗೆ ಮುಂದುವರಿಯುವ ಸಂಕಲ್ಪ ಮಾಡೋಣ.

ನಾವು ಪರಸ್ಪರ ಕಲೆತು ಪ್ರಾಮಾಣಿಕವಾಗಿ ಪ್ರಯತ್ನ ಪಟ್ಟರೆ ಮಾತ್ರ ಎಲ್ಲ ಹಂತಗಳಲ್ಲಿಯೂ ನಿಜವಾದ ಪ್ರಗತಿಯನ್ನು ಕಾಣಲು ಸಾಧ್ಯ. ಕನ್ನಡ ನಾಡಿನ ಪುರೋಭಿವೃದ್ಧಿಗಾಗಿ ನಾವೆಲ್ಲರೂ ಸೇರಿ ಒಟ್ಟಿಗೆ ಶ್ರಮಿಸೋಣ.

ಹಸನಾದ ಬದುಕು: ಬಡವ ಬಲ್ಲಿದ ಎನ್ನುವ ಭೇದವಿಲ್ಲದೆ ಎಲ್ಲರೂ ಹಸನಾದ ಬದುಕು ಸಾಗಿಸಬೇಕು ಎಂದು ಕರ್ನಾಟಕ ಸರ್ಕಾರ ಬಯಸುತ್ತದೆ. ಅಂದರೆ ಎಲ್ಲರಿಗೂ ಕುಡಿಯುವ ನೀರು. ಪೌಷ್ಟಿಕ ಆಹಾರ. ನೆಮ್ಮದಿಯ ನೆರಳು. ಉಪಯುಕ್ತ ಶಿಕ್ಷಣ. ಸುಭದ್ರ ಉದ್ಯೋಗ ಮತ್ತು ಕೆಳಹಂತದಲ್ಲಿ ಪ್ರಜಾತಂತ್ರ ಇವೆಲ್ಲ ಲಭ್ಯವಾಗಬೇಕು.

ಮೂಲ ಅಗತ್ಯಗಳು: ಈ ಸರ್ಕಾರ ಪರಿಹರಿಸಿದ ಮೊದಲ ಸಮಸ್ಯೆ ಕುಡಿಯುವ ನೀರಿನದು. ಒಟ್ಟು 1870 ಗ್ರಾಮಗಳಿಗೆ ಕೊಳಾಯಿ ನೀರು ಲಭಿಸಿತು. 54000 ಕೊಳವೆ ಬಾವಿಗಳನ್ನು ತೋಡಿಸಲಾಯಿತು. ಕಳೆದ 30 ವರ್ಷಗಳಲ್ಲಿ ಇಷ್ಟೊಂದು ಬಾವಿಗಳನ್ನು ತೋಡಿಸಿರಲಿಲ್ಲ. ಗ್ರಾಮೀಣ ನೀರು ಪೂರೈಕೆಯಲ್ಲಿ ಕರ್ನಾಟಕ ರಾಷ್ಟ್ರದಲ್ಲೇ ಮೊದಲು. ಇದೊಂದು ಹೆಗ್ಗಳಿಕೆ.

ಗ್ರಾಮಗಳಿಗೆ ಸ್ವಯಂ ಆಡಳಿತ: ಜಿಲ್ಲಾ ಪರಿಷತ್ ಶಾಸನದಿಂದ ಅಧಿಕಾರ ವಿಕೇಂದ್ರೀಕರಣಗೊಂಡಿತು. ಇದರ ಫಲವಾಗಿ ಜನರಿಗೆ ನಿಜವಾದ ಅಧಿಕಾರ ಸಿಕ್ಕಿತು. ಈ ಕ್ರಮಕ್ಕೆ ಇಡೀ ದೇಶ ಪ್ರಶಂಸಿಸಿತು. ಇದರಿಂದ ಶೇ. 25 ರಷ್ಟು ಸ್ಥಾನ ಮಹಿಳೆಯರಿಗೆ ಮೀಸಲು. ಶೇ. 18 ರಷ್ಟು ಸದಸ್ಯತ್ವ ಪರಿಶಿಷ್ಟ ವರ್ಗದವರಿಗೆ ಲಭ್ಯ.

ಅಗತ್ಯ ವಸ್ತುಗಳ ನ್ಯಾಯಯುತ ಪೂರೈಕೆ: ಗ್ರಾಮಗಳಲ್ಲಿ ಈಗ ಕೊಳವೆ ಬಾವಿ. ಶಾಲೆ. ಆಸ್ಪತ್ರೆ. ಏನೇ ಆಗಬೇಕಾದರೂ ಸ್ಥಳೀಯರೇ ಆ ಕಾರ್ಯ ಕೈಗೆತ್ತಿಕೊಳ್ಳಲು ಸಾಧ್ಯ. ಎಲ್ಲ ಅಧಿಕಾರ ಅವರದೇ.

ರಾಜ್ಯದಲ್ಲಿ 58 ಲಕ್ಷ ಹಸಿರು. ಕೇಸರಿ ಕಾರ್ಡುಗಳ ಮೂಲಕ ಬಡವರಿಗೆ ಅಗತ್ಯ ವಸ್ತುಗಳ ಪೂರೈಕೆ. ಕೃಷಿ ಕಾರ್ಮಿಕ, ಗರ್ಭಿಣಿ ಮಹಿಳೆಯರಿಗೆ ವಿಶೇಷ ಭತ್ಯೆ ಮಂಜೂರು. ಆಶ್ರಯ ಹೀನ ವಿಧವೆಯರಿಗೆ ರೂ. 50 ಮಾಸಾಶನ. ವೃದ್ಧರಿಗೂ. ಅಂಗವಿಕಲರಿಗೂ ಈ ಸೌಲಭ್ಯ.

ವಿಶೇಷ ಪ್ರೋತ್ಸಾಹ ಕ್ರಮಗಳು: ಒಂದನೇ ಮತ್ತು ಎರಡನೇ ತರಗತಿ ಮಕ್ಕಳಿಗೆ ಉಚಿತ ಸಮವಸ್ತ್ರ. ಸರ್ಕಾರಿ ಶಾಲೆಗಳಲ್ಲಿ ಏಳನೇ ತರಗತಿ ತನಕ ಉಚಿತ ಪಠ್ಯ ಪುಸ್ತಕ ನೀಡಿದೆ.

ಉದ್ಯಮಿಗಳಿಗೆ ಅವಕಾಶ: ಪ್ರಸ್ತುತ ಉದ್ಯಮ ವಾತಾವರಣ ಉತ್ತಮವಾಗಿರುವುದರಿಂದ ಬೇರೆ ರಾಜ್ಯಗಳ ಉದ್ಯಮಿಗಳು ರಾಜ್ಯಕ್ಕೆ ಬರುವುದು ಹೆಚ್ಚಾಗಿದೆ. ಒಂದೇ ಕಡೆ ಉದ್ಯಮಕ್ಕೆ ಅಗತ್ಯವಾದ ಪರವಾನಗಿ ಮಂಜೂರಾತಿ ನೀಡುವ ಕ್ರಮ ಫಲ ನೀಡಿದೆ. ಇದರಿಂದಾಗಿ ಪ್ರತಿ ವರ್ಷ ಸಹಸ್ರಾರು ಸಣ್ಣ ಉದ್ಯಮ ಘಟಕಗಳ ಸ್ಥಾಪನೆ.


ಲೋಕಾಯುಕ್ತ: ಭ್ರಷ್ಟಾಚಾರ ನಿರ್ಮೂಲನೆಗೆ ಮುಖ್ಯಮಂತ್ರಿಗಳನ್ನೊಳಗೊಂಡಂತೆ ಉನ್ನತ ಅಧಿಕಾರಿಗಳ ಮೇಲಿನ ಆರೋಪ ವಿಚಾರಣೆಗೆ ಲೋಕಾಯುಕ್ತ ಸ್ಥಾಪನೆ. ಇಂತಹ ಕ್ರಮ ದೇಶದಲ್ಲೇ ಮೊದಲು.

ವಚನ ಪಾಲನೆ: ಈ ಸರ್ಕಾರದ ಮೇಲೆ ಜನತೆಗೆ ಅಪರಿಮಿತ ವಿಶ್ವಾಸ. ಅದರಿಂದಲೇ ಭ್ರಷ್ಟಾಚಾರ ಹತ್ತಿಕ್ಕಿ ಆಡಳಿತ ಚುರುಕು ಮಾಡುವ ಕ್ರಮ ಕೈಗೊಂಡಿದೆ. ಕಳ್ಳ ಸಾಗಾಣಿಕೆ. ಅಕ್ರಮ ದಾಸ್ತಾನು ಮತ್ತು ತೆರಿಗೆ ವಂಚನೆ ವಿರುದ್ಧ ಕ್ರಮಗಳು ಬಿಗಿಗೊಂಡಿವೆ.

ನಮ್ಮ ಎಲ್ಲ ಪ್ರಯತ್ನಗಳು ಫಲಿಸುತ್ತಿವೆ. ಸಾಧಿಸಬೇಕಿರುವುದು ಇನ್ನೂ ಬಹಳವಿದೆ. ಆ ಗುರಿ ಸಾಧನೆಗಾಗಿ ನಾವು ಪರಸ್ಪರ ಕೈಕೂಡಿಸೋಣ. ಒಟ್ಟಿಗೆ ದುಡಿಯೋಣ.

- ಕರ್ನಾಟಕದಲ್ಲಿ ಪ್ರತಿಯೊಬ್ಬರ ಬದುಕು ಹಸನು.
- ಆಶೋತ್ತರಗಳು ಈಡೇರುತ್ತಿರುವ ನಾಡು ಕರ್ನಾಟಕ

"ಕರ್ನಾಟಕ ವಾರ್ತೆ"



ಧ್ವನಿಯುಪ್ರೇರಣೆ ಹೊತ್ತು ವ್ಯತ್ಯಸ್ತಗೊಂಡ ವಾಹಕ ಅಲೆ

ತಲುಪಿಸಿದರೆ 1800 ದೂರವಾಣಿ ಸಂಭಾಷಣೆಗಳನ್ನು ಒಂದೇ ಬಾರಿಗೆ ನಡೆಸಬಹುದು. ತೀರ ಒಳಗಿನ ಗ್ರಾಮಗಳಲ್ಲಿ ಒಂದು ಡಿಶ್ ಆಂಟೆನಾ ಸ್ಥಾಪಿಸಿದರೆ, ಉಪಗ್ರಹದಿಂದ ಪ್ರತಿಫಲಿಸಿದ ಅಲೆಗಳನ್ನು ಇದು ಗ್ರಹಿಸಿ, ಈ ಗ್ರಾಮಗಳಲ್ಲಿರುವವರಿಗೂ ದೂರದರ್ಶನ ನೋಡಲು ಅನುವು ಮಾಡಿಕೊಡುತ್ತದೆ. ಯಾವುದೇ ಅನಾಹುತದಿಂದ ಒಂದು ಸ್ಥಳಕ್ಕೆ ಬಾಹ್ಯ ಜಗತ್ತಿನ ಸಂಪರ್ಕ ಕಡಿದುಹೋದಾಗ, ಸಂಪರ್ಕ ಉಪಗ್ರಹದ ಮುಖಾಂತರ ಸಂಚಾರಿ ಭೂಕೇಂದ್ರಗಳು ಪತ್ರ ಮತ್ತು ಧ್ವನಿಯ ಸಂಪರ್ಕ ಒದಗಿಸಿಕೊಡಬಲ್ಲವು. ಈ ಸಂಚಾರಿ ಕೇಂದ್ರಗಳು ಸಹ ದೂರದರ್ಶನ ಕೇಂದ್ರದಂತೆಯೇ ಕೆಲಸ ಮಾಡುತ್ತವೆ. ಈ ಭೂಕೇಂದ್ರಗಳು ಉಪಗ್ರಹಕ್ಕೆ ಕಳುಹಿಸಿದ ಮಾಹಿತಿಯು ಪ್ರತಿಫಲನಗೊಂಡು ದೂರದರ್ಶನ ಕೇಂದ್ರಕ್ಕೆ ತಲುಪುತ್ತದೆ. ಮುಂದೆ ದೂರದರ್ಶನ ಕೇಂದ್ರವು ಈ ಮಾಹಿತಿಗಳನ್ನು ತನ್ನ ಸಮಾಚಾರದಲ್ಲಿ ಬಳಸಿಕೊಳ್ಳಬಹುದು. ಅನೇಕ ಪ್ರಮುಖ ಘಟನೆ, ಕ್ರೀಡೆ ಇತ್ಯಾದಿಗಳನ್ನು ನಡೆಯುತ್ತಿರುವಾಗಲೇ ನೋಡಬಲ್ಲ ಲೈವ್ ಟೆಲಿಕಾಸ್ಟನ್ನು ದೂರದರ್ಶನದ ಮೂಲಕ ಜಗತ್ತಿನಾದ್ಯಂತ ಬಿಂಬಿಸುವಲ್ಲಿ ಸಂಪರ್ಕ ಉಪಗ್ರಹ ಸಹಾಯ ಮಾಡುತ್ತದೆ. ಒಟ್ಟಿನಲ್ಲಿ ಈ ಗಗನ ಕುಸುಮವು ಜಗತ್ತಿನ ಎಲ್ಲ ಭಾಗಗಳನ್ನು ನಮ್ಮ ಕಿವಿಗೆ, ಕಣ್ಣಿಗೆ ಎಟುಕುವಂತೆ ಮಾಡಿದೆ. ★

ಚುಟುಕುಗಳು

'ಮಕ್ಕಳ ದಿನಾಚರಣೆ'ಯಂದು ನೆಹರೂಜಿಯವರು ಒಂದು ಶಾಲೆಗೆ ಭೇಟಿ ಇತ್ತಿದ್ದರು. ಶಾಲೆಯ ಮಕ್ಕಳು ಆ ದಿನದ ಸಮಾರಂಭದ ನಂತರ ಅವರ ಹಸ್ತಾಕ್ಷರಕ್ಕಾಗಿ ಅವರನ್ನು ಮುತ್ತಿದರು. ಒಬ್ಬ ಹುಡುಗ ಅವರ ಕೈಗೆ ಒಂದು ಪುಸ್ತಕವನ್ನಿತ್ತು "ದಯವಿಟ್ಟು ಇದರಲ್ಲಿ ಸೈನ್ ಮಾಡಿ" ಎಂದು ಹೇಳಿದ. ನೆಹರೂ ಇಂಗ್ಲಿಷಿನಲ್ಲಿ ತಮ್ಮ ಸಹಿ ಹಾಕಿದರು. "ತಾರೀಖನ್ನೂ ಹಾಕಿಕೊಡಿ" ಎಂದು ಗೋಗರೆದ ಆ ಹುಡುಗ. ನೆಹರೂಜಿ ನಸುನಗುತ್ತಾ ಹಿಂದಿಯಲ್ಲಿ ತಾರೀಖನ್ನೂ ಬರೆದುಕೊಟ್ಟರು.

"ಇದೇನು ಇಂಗ್ಲೀಷಿನಲ್ಲಿ ಸೈನ್ ಮಾಡಿ ಹಿಂದಿಯಲ್ಲಿ ತಾರೀಖು ಹಾಕಿದಿರಿ !" ಎಂದು ಕೇಳಿದ ಆ ಹುಡುಗ ಸಲುಗೆಯಿಂದ.

ಅದಕ್ಕೆ ನೆಹರೂಜಿ, "ನೋಡು! ಸೈನ್ ಎಂಬುದು ಇಂಗ್ಲಿಷ್ ಶಬ್ದ. ಆದರೆ ತಾರೀಖು ಎಂಬುದು ಹಿಂದೀ ಶಬ್ದ" ಎಂದು ಹೇಳಿ ಮುಗುಳ್ನಕ್ಕರು.

ಜೀವನಜಲ

ಡಾ|| ಕರವೀರಪ್ರಭು, ಕ್ಯಾಲಕೊಂಡ

ಪ್ರತಿ ವರ್ಷ 50 ಕೋಟಿ ಮಕ್ಕಳೊಡನೆ ತಾಂಡವ ನೃತ್ಯಗೈಯುವ ಅತಿಸಾರ, ಕನಿಷ್ಠ 50 ಲಕ್ಷ ಮಕ್ಕಳ ಪ್ರಾಣಪಕ್ಷಿಯನ್ನು ತನ್ನ ಬಲಿಷ್ಠವಾದ ಕೊಕ್ಕಿನಿಂದ ಕುಕ್ಕಿ ಕುಕ್ಕಿ ಹೆಕ್ಕುತ್ತದೆ. ಭಾರತದಲ್ಲೇ ಸುಮಾರು 10-15 ಮಕ್ಕಳು ಅತಿಸಾರಕ್ಕೆ ಬಲಿಯಾಗುತ್ತಾರೆಂದರೆ ಈ ಸಮಸ್ಯೆಯ ಗಂಭೀರತೆಯ ಅರಿವು ಆಗಬಹುದು. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ತಿಂಗಳಿಗೊಮ್ಮೆಯಾದರೂ ಕಂದಮ್ಮಗಳನ್ನು ಮಾತನಾಡಿಸಿ ಮೆತ್ತಗೆ ಮಾಡುವ ಅತಿಸಾರ 20% ರಿಂದ 40% ರಷ್ಟು ಐದು ವರ್ಷದೊಳಗಿನ ಮಕ್ಕಳ ಪ್ರಾಣ ಹತ್ಯೆ ಮಾಡುತ್ತದೆ.

ನಮ್ಮ ದೇಶದಲ್ಲಿ ಐದು ವರ್ಷದೊಳಗಿನ ಮಕ್ಕಳ ಸಂಖ್ಯೆ ಪ್ರತಿಶತ 15 ರಷ್ಟು ಇರುವುದರಿಂದ ಅವರತ್ತ ಗಮನಹರಿಸುವುದು ಸೂಕ್ತ. ಮಕ್ಕಳ ಪ್ರಾಣಹತ್ಯೆಗೆ ಪ್ರಬಲ ಹಾಗೂ ಪ್ರಥಮ ಸ್ಥಾನದಲ್ಲಿರುವ ಅತಿಸಾರ. ಆಕಸ್ಮಾತ್ ಅವರ ಬಾಹುಬಂಧನದಿಂದ ಜಾರಿಕೊಂಡ ಮಕ್ಕಳಲ್ಲಿ ಅಪೌಷ್ಟಿಕತೆಯನ್ನು ಬಳುವಳಿಯಾಗಿ ಕೊಟ್ಟು, ನೋವು ಬಳಲಿಕೆಗಳ ಕಗ್ಗಂಟಿನ ಬಲೆಯಲ್ಲಿ ಬಂಧಿಸಿ ಸಾವಿನ ದವಡೆಯಲ್ಲಿರಿಸಿ ಅಟ್ಟಹಾಸದ ನಗುನಗುತ್ತದೆ. ಮಕ್ಕಳು ಅತಿಸಾರ ಅಪೌಷ್ಟಿಕತೆ ಅತಿಸಾರಗಳ ವೃತ್ತದಲ್ಲೇ ಸುತ್ತಿ ಸುತ್ತಿ ತತ್ತರಿಸಿ [illegible] ಗುತ್ತವೆ. ಅತಿಸಾರ ಅಪೌಷ್ಟಿಕತೆಗಳು ಒಂದಕ್ಕೊಂದು ಪೂರಕ. [illegible] ಗಾಣದ ಸುತ್ತ ಗಿರ್ಕಿ ತಿರುಗುವಂತೆ ಮಾಡುತ್ತವೆ.

ಐವತ್ತೈದು ವರ್ಷಗಳ ಹಿಂದೆ ನ್ಯೂಯಾರ್ಕಿನಲ್ಲಿ ಅತಿಸಾರದಿಂದ ಅಸುನೀಗಿದವರ ಸಂಖ್ಯೆ ಪ್ರತಿ ಸಾವಿರಕ್ಕೆ 56 ರಷ್ಟಿತ್ತು (56/1000) ಇಂದು ಅದು ಭಾರತದಲ್ಲಿ ಸಾಧಿಸಿರುವ ಪ್ರಭುತ್ವದಷ್ಟು. ಆದರೆ ಅದರ ಹಾವಳಿ ಇಂದು ನ್ಯೂಯಾರ್ಕಿನಲ್ಲಿ ಹೇಳ ಹೆಸರಿಸದಷ್ಟು ಕಡಿಮೆಯಾಗಿದೆ. ಇದಕ್ಕೆ ಕಾರಣಗಳೇನು ಎಂಬುದನ್ನು ಕೆದಕಿ ಕೆದಕಿ ನೋಡಿದಾಗ-ಶುದ್ಧ ಕುಡಿಯುವ ನೀರಿನ ಪೂರೈಕೆ, ಅತ್ಯುತ್ತಮ ಒಳಚರಂಡಿ ಯೋಜನೆ, ವೈದ್ಯಕೀಯ ಅನುಕೂಲತೆಗಳು ಎಂಬುದು ಸ್ಪಷ್ಟ. 1981ರ ಅರ್ಥಶಾಸ್ತ್ರಜ್ಞರ ತರ್ಕದ ಪ್ರಕಾರ ಭಾರತೀಯರಲ್ಲಿ ಪ್ರತಿಶತ 49ರಷ್ಟು ಜನರು ಬಡತನದ ರೇಖೆಯ ಕೆಳಗಡೆಯಲ್ಲಿಯೇ ಹೋರಾಟದ ಬಾಳು ಸಾಗಿಸುತ್ತಿದ್ದಾರೆ. ಪ್ರತಿಶತ 10 ರಷ್ಟು ಜನರು ಮಾತ್ರ ಕುಡಿಯಲು ಯೋಗ್ಯವಾದಂತಹ ನೀರನ್ನು ಪಡೆಯುತ್ತಿದ್ದಾರೆ. ಪ್ರತಿಶತ 2ಕ್ಕಿಂತಲೂ ಕಡಿಮೆ ಜನರು ಶೌಚಗೃಹದ ಸೌಲಭ್ಯ ಹೊಂದಿರುತ್ತಾರೆ.


ಅಂದಾಗ ನಾವು ನ್ಯೂಯಾರ್ಕಿನಲ್ಲಿಯಂತೆ ಅತಿಸಾರದ ಹಾವಳಿಯನ್ನೂ, ಅದರಿಂದಾಗುವ ದುಷ್ಪರಿಣಾಮಗಳನ್ನೂ ಹೋಗಲಾಡಿಸಲು ಸಾಧ್ಯವೇ? ಲಭ್ಯವಿರುವ ಸೌಲಭ್ಯ, ಮುತ್ತಿರುವ ಮೂಢನಂಬಿಕೆಗಳು, ಅಜ್ಜ-ಮುತ್ತಜ್ಜನ ಕಾಲದಿಂದಲೂ ಅನುಸರಿಸುತ್ತಿರುವ ಧಾರ್ಮಿಕ ಕಟ್ಟುನಿಟ್ಟುಗಳು, ಕಂದಾಚಾರಗಳು, ಪದ್ಧತಿಗಳು, ದೇವರು ದಿಂಡರ ಕಾಟ, ಮಾಟ, ಮಂತ್ರಗಳಲ್ಲಿಟ್ಟಿರುವ ನಂಬಿಕೆಗಳು, ವೈಜ್ಞಾ-

ನಿಕ ಜ್ಞಾನದ ಕುಂದು ಕೊರತೆಗಳು, ವೈದ್ಯಕೀಯ ಅನಾನುಕೂಲತೆಗಳು ಕೈಗಾರಿಕಾ ನಾಡುವ ನಮ್ಮ ನಾಡಿನಲ್ಲಿ ಗಾಂಭೀರ್ಯವುವರು ಕಂಡ ರಾಮರಾಜ್ಯ ಕಟ್ಟುವ ಕನಸನ್ನೇ ಇವರ ನಾಧಾ ಸಾಧ್ಯತೆಗಳಿವೆ ಎಂದರೆ ಅತಿಶಯೋಕ್ತಿ ಯಾಗಲಿಕ್ಕಿಲ್ಲ, ಹಾಗೆಂದು ಕೈ ಕಟ್ಟಿ ಕೂಡು ವುದು ಸಾಧ್ಯವಿಲ್ಲ. ಊರಿಗೆ ನೂರು ದಾರಿ. ಬಲಿ ಪಶುಗಳಾಗುತ್ತಿರುವ ಬಾಲಕರನ್ನು ರಕ್ಷಿಸುವ ಬೇರೆ ಹಾದಿಯಾವುದು? ಅದೇ, ಈ ದಶಕದ ಮಹತ್ವದ ಸಂಶೋಧನೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಸಿಕ್ಕ ಸಂಜೀವಿನಿ - ಬಾಯಿಂದ ಸಜಲೀಕರಣ ಚಿಕಿತ್ಸೆ (Ort Oral Rehydration therapy)

ನಡೆದು ಬಂದ ಹಾದಿ.

ನಿಸರ್ಗದ ಲೀಲಾಜಾಲಗಳ ಗುಟ್ಟನ್ನು ರಟ್ಟಾಗಿಸುತ್ತಿರುವ ವೈಜ್ಞಾನಿಕ, ವೈದ್ಯಕೀಯ ಜ್ಞಾನವು ಅತಿಸಾರದಿಂದ ಬಳಲುವ ರೋಗಿಯ ಶರೀರದಿಂದ ಹೊರಹೋಗುವ ನೀರು ಮತ್ತು ಲವಣಾಂಶಗಳನ್ನು ಶಿರಗಳ (veins) ಮೂಲಕ ನೀಡುವ ಲವಣದ್ರವ ಚಿಕಿತ್ಸೆಯ ಪ್ರಾರಂಭದಿಂದ ಈ ದಿಶೆಯಲ್ಲಿ ದಿಟ್ಟ ಪ್ರಥಮ ಹೆಜ್ಜೆಯನ್ನು 1932ರಲ್ಲಿಟ್ಟಿತ್ತಾದರೂ ಸಾವಿನ ಸಂಖ್ಯೆಯಲ್ಲಿ ಇಳಿಮುಖವಾಗಲಿಲ್ಲ. ಬಿಟ್ಟು ನಂತರ 1946ರಲ್ಲಿ ಹಾರ್ಟ್ ರಕ್ತನಾಳಗಳ ಮೂಲಕ ಕೊಡುವ ನಾದ್ರಾವಣವು ನೀರು ಮತ್ತು ಲವಣಾಂಶಗಳ ಅಸಮತೋಲನವನ್ನು ಹೋಗಲಾಡಿಸುವುದರ ಮೂಲಕ ಸಾವಿನ ಸಂಖ್ಯೆಯಲಿ ಗಮನಾರ್ಹ ಇಳಿಮುಖವಾದದು. ವೈದ್ಯಕೀಯ ರಂಗಕ್ಕೊಂದು ಮಹತ್ವದ ತಿರುವನ್ನು ಕೊಟ್ಟಿತು.

ಸಮತೋಲನದ ಸಮರ್ಪಕ ಲವಣಾಂಶ ಭರಿತ ಗ್ಲೂಕೋಜ್ ಬಾಟ್ಲುಗಳ ತಯಾರಿಕೆ ಅತ್ಯಂತ ಜಟಿಲ ಹಾಗೂ ದುಬಾರಿಯಾಗಿರುವುದರಿಂದ, ಅವಶ್ಯಕತೆಗೆ ತಕ್ಕ ಪ್ರಮಾಣದಲ್ಲಿ ಪೂರೈಸುವುದು ಅಸಾಧ್ಯವಾಗಿರುವುದರಿಂದ, ಈ ಪದ್ಧತಿಯಿಂದ ಸಹ ನೀಯ ಸೋಂಕುಗಳು ಆಗುವುದಕ್ಕೆ ಆಸ್ಪದವಿರುವುದರಿಂದ, ತೊಡಕು ತೊಂದರೆಗಳಿಗೆ ಅವಕಾಶವಿರದ ಸರಳ ಚಿಕಿತ್ಸಾ ವಿಧಾನವೊಂದನ್ನು ಪ್ರಾಯೋಗಿಕವಾಗಿ 1960ರ ಆದಿಯಲ್ಲಿ ಪ್ರಾರಂಭಿಸಿದರು. ಬಾಯ ಮೂಲಕ ಜೀವನಾವಶ್ಯಕ ಲವಣಾಂಶ ಹಾಗೂ ಗ್ಲೂಕೋಜನ್ನು ಅತಿಸಾರದ ಸುಳುಹು ಸಿಕ್ಕಕೂಡಲೇ ಪ್ರಾರಂಭಿಸುವುದರಿಂದ



ನಿರ್ಜಲೀಕರಣ (Dehydration) ಎಂತಹ ದುಷ್ಪರಿಣಾಮಕ್ಕೆ ಕಡಿವಾಣ ಹಾಕಲು ಸಾಧ್ಯವಷ್ಟೇ ಅಲ್ಲ, ಇದು ಸಿರಗಳ ಮೂಲಕ ಕೊಡುವ ಚಿಕಿತ್ಸೆಯಷ್ಟೇ ಪರಿಣಾಮಕಾರಿಯಾಗಿರುತ್ತದೆ ಎಂಬುದು ಕಳೆದ ಹಲವು ವರ್ಷಗಳ ಅನುಭವದಿಂದ ಸ್ಪಷ್ಟವಾಯಿತು. ಅತಿಸಾರದ ಸಮಸ್ಯೆಗಳನ್ನು ಶಮನಮಾಡುವ ಶಕ್ತಿಯುತ ಉಪಾಯವಾಗಿದೆ ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಮಾರುಕಟ್ಟೆಯಲ್ಲಿ ಹೇರಳವಾಗಿ ಸಿಗುವ ಜೀವಿರೋಧಕ ಗುಂಡುಗಳನ್ನು ಪ್ರಯೋಗಿಸಿ ಗುಂಡಿಗೆ ಗದಗುಡುವಂತೆ ಮಾಡುವುದನ್ನು ಬಿಟ್ಟು, ಜೀವನಾವಶ್ಯಕ ನೀರು, ಲವಣಾಂಶಗಳನ್ನು ಕೊಟ್ಟು, ಪ್ರಾಣ ಉಳಿಸುವಲ್ಲಿ ಎಲ್ಲರೂ ಸಹಕರಿಸಬೇಕು

ಅಂತಾರಾಷ್ಟ್ರೀಯ ಅತಿಸಾರ ಸಂಶೋಧನಾ ಕೇಂದ್ರವು ಬಂಗ್ಲಾದೇಶದ ಹಳ್ಳಿಯೊಂದರಲ್ಲಿ ಕಾರ್ಯೋನ್ಮುಖವಾಗಿ 2000 ರೋಗಿಗಳಿಗೆ ಬಾಯಿಂದ ಸಜಲೀಕರಣ ಚಿಕಿತ್ಸೆ ನೀಡಿ ಪ್ರತಿಶತ 95 ರೋಗಿಗಳನ್ನು ಗುಣಪಡಿಸುವಲ್ಲಿ ಜಯಶಾಲಿಯಾಗಿ ಜಗತ್ತೇ ಕಣ್ತೆರೆದು ಅತ್ತ ನೋಡುವಂತೆ ಮಾಡಿತು. ಈ ಚಿಕಿತ್ಸೆಯಲ್ಲಿ ಉಪಯೋಗಿಸಿದ ವಸ್ತುಗಳೆಂದರೆ ತಿನ್ನುವ ಉಪ್ಪು, ಅಡಿಗೆ ಸೋಡಾ, ಸಕ್ಕರೆ ಅಥವಾ ಗ್ಲೂಕೋಜ್ ಇವೆಲ್ಲವುಗಳನ್ನು ನಿಗದಿತ ಪ್ರಮಾಣದಲ್ಲಿ ಕಾಸಿ ಆರಿಸಿ ಸೋಸಿದ ನೀರಲ್ಲಿ ಕರಗಿಸಿ ಮೇಲಿಂದ ಮೇಲೆ ಕುಡಿಯುವಂತೆ ಮಾಡಿದಾಗ, ಎಷ್ಟೋ ಜನರ ಜೀವ ಉಳಿಸುವಲ್ಲಿ ಸಹಾಯ ಮಾಡಿದ ಈ ದ್ರಾವಣ 'ಜೀವನ ಜಲ'ವೆಂದೇ ಹೆಸರುಗಳಿಸಿತು. ಅತ್ಯಂತ ಕಡಿಮೆ ವೆಚ್ಚದಲ್ಲಿ ಎಲ್ಲರ ಮನೆಯಲ್ಲೂ ಸರ್ವ ಸಾಮಾನ್ಯವಾಗಿ ಸಿಗುವ ಸಾಮಗ್ರಿಗಳಿಂದ ತಯಾರು ಮಾಡಿದ ಈ ದ್ರಾವಣದಿಂದ ಅತಿಸಾರದಿಂದ ಅಸುನೀಗುತ್ತಿದ್ದ ಮಕ್ಕಳಿಂದ ಮುದುಕ ವಯಸ್ಸಿನವರ ಪ್ರಾಣ ಉಳಿಸುವಲ್ಲಿ ಸಂಜೀವಿನಿಯಂತೆ ಕೆಲಸ ಮಾಡಿದ್ದರಿಂದ 'ಲಾನ್ಸೆಟ್' ವೈದ್ಯಕೀಯ ನಿಯತಕಾಲಿಕವು "ಶತಮಾನದ ಸಂಜೀವಿನಿ, [illegible] [illegible]


[illegible]

ಎಂತೆ. ಆಕಸ್ಮಾತ್ ತಗಲುವವರ ಉಪಶಮನ ಚಿಕಿತ್ಸೆಯ ಬಗೆಗೆ ಅವಿರತ ಹೋರಾಡುತ್ತಿರುವ ಜಾಗತಿಕ ಆರೋಗ್ಯ ಸಂಸ್ಥೆ ಈ ಸರಳ ಚಿಕಿತ್ಸಾ ಪದ್ಧತಿಯನ್ನು ಪ್ರಪಂಚದೆಲ್ಲೆಡೆ ಕಾರ್ಯಾಚರಣೆಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ.

ಕಾರ್ಯನಿರ್ವಹಣೆ:

ಅತಿಸಾರವಾದಾಗ ಕರಳುಗಳಲ್ಲಿ ನೀರು ಮತ್ತು ಲವಣಾಂಶಗಳ ಹೀರಿಕೆಯಲ್ಲಿ ಏರುಪೇರುಗಳಾದರೂ, ಗ್ಲೂಕೋಜಿನ ಹೀರಿಕೆಯಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ. ಗ್ಲೂಕೋಜ್ ಹೀರಿಕೆಯು ಅದೇ ಹೊತ್ತಿಗೆ ನೀರು ಮತ್ತು ಲವಣಾಂಶಗಳ ಹೀರಿಕೆಯ ಮೇಲೆ ಮಹತ್ವಪೂರ್ಣ ಪ್ರಭಾವ ಬೀರುತ್ತದೆ ಎಂಬ ತತ್ವವನ್ನು ಈ ಸರಳ ಚಿಕಿತ್ಸಾ ಪದ್ಧತಿಯ ಕಾರ್ಯನಿರ್ವಹಣೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. "ಸೋಡಿಯಂ ಮತ್ತು ಸಕ್ಕರೆಯ ಸಾಗಾಣಿಕೆ ಸಣ್ಣಕರುಳಿನಲ್ಲಿ ಕೂಡಿಯೇ ಆಗುತ್ತದೆ. ಸಕ್ಕರೆಯ ಪ್ರಮಾಣವು ಲವಣಾಂಶ ಹಾಗೂ ನೀರಿನ ಹೀರಿಕೆಯಲ್ಲಿ ಹೆಚ್ಚಳವನ್ನು ಮಾಡುತ್ತದೆ. ಸಕ್ಕರೆಯ ಪ್ರಮಾಣವು ನೇರವಾಗಿ ಲವಣಾಂಶ ಹಾಗೂ ನೀರಿನ ಹೀರಿಕೆಯ ಮೇಲೆ ಪ್ರಭಾವ ಬೀರುತ್ತದೆಯಾದರೂ, ಬೇಕಾದ ಪ್ರಮಾಣಕ್ಕಿಂತ ಸಕ್ಕರೆಯ ಪ್ರಮಾಣವು ದ್ರಾವಣದಲ್ಲಿ ಹೆಚ್ಚಾದರೆ, ಲವಣಾಂಶ ಹಾಗೂ ನೀರಿನ ಹೀರಿಕೆಯು ಕುಗ್ಗುತ್ತದೆ ಎಂಬುದು ವೈದ್ಯಕೀಯ ಕ್ಷೇತ್ರದಲ್ಲೊಂದು ಮಹತ್ವಪೂರ್ಣ ಸಂಶೋಧನೆ" ಎಂಬ ಅಂಶವು ಪ್ರಮುಖ ಲೇಖನವಾಗಿ ಲ್ಯಾನ್ಸೆಟ್ (1985, 2,300)ನಲ್ಲಿ ದಪ್ಪಕ್ಷರದಲ್ಲಿ ಅಚ್ಚಾದಾಗ ವೈದ್ಯರ ಚಿತ್ತಕ್ಕೆ ಚೇತನ ದೊರೆಯಿತು.

ಅತಿಸಾರದಿಂದ ಜೀವನಾವಶ್ಯಕ ಲವಣಗಳು - ಸೋಡಿಯಂ ಪೊಟ್ಯಾಸಿಯಂ ನೀರಿನೊಡನೆ ಶರೀರದಿಂದ ಹೊರಹಾಕಲ್ಪಡುತ್ತವೆ. ಮೊದಮೊದಲು ಶರೀರವು, ತನ್ನ ಕಾರ್ಯನಿರ್ವಹಣೆಯಲ್ಲಿ ಹೊಂದಾಣಿಕೆ ಮಾಡಿಕೊಂಡು ಹೊರಹಾಕಲ್ಪಟ್ಟ ಲವಣಾಂಶಗಳ ಅಸಮತೋಲನವನ್ನು ಹೋಗಲಾಡಿಸಲು ಹವಣಿಸಿ, ನಿಷ್ಪ್ರಯೋಜನವಾದಾಗ ನಿರ್ಜಲೀಕರಣ ನಿರ್ಮಾಣವಾಗಿ, ಉಳಿವು-ಅಳಿವುಗಳ ನಡುವೆ ಹೋರಾಡುವ ಸ್ಥಿತಿ ತಲೆದೋರುತ್ತದೆ. ಅತಿಸಾರದ ಸಮಯದಲ್ಲಿ ಲವಣಾಂಶಗಳು



ಹೆಚ್ಚಿನ ಪ್ರಮಾಣದಲ್ಲಿ ಹೊರಹಾಕಲ್ಪಟ್ಟರೂ, ಗ್ಲೂಕೋಜ್ ಮಾತ್ರ ಯಥಾಪ್ರಕಾರವಾಗಿ ಯಾವುದೇ ವ್ಯತ್ಯಾಸವಾಗದೇ ರಕ್ತಗತವಾಗುತ್ತಿರುತ್ತದೆ. ಅತಿಸಾರದಿಂದಾಗಿ ಶರೀರದಲ್ಲುಂಟಾಗುವ ಲವಣಾಂಶಗಳ ಕುಂದು ಕೊರತೆಗಳನ್ನು ಬಾಯಿಂದ ಸಜಲೀಕರಣ ಚಿಕಿತ್ಸೆಯ ದ್ರಾವಣವನ್ನು ಮೇಲಿಂದ ಮೇಲೆ ಕುಡಿಸಿದಾಗ ರಕ್ತಗತವಾಗುತ್ತಿರುವ ಗ್ಲೂಕೋಜ್ ಜೊತೆಗೆ ಜೀವನಾವಶ್ಯಕ ಲವಣಾಂಶಗಳೂ ಸಾಕಷ್ಟು ಪ್ರಮಾಣದಲ್ಲಿ ಹೀರಲ್ಪಡುವುದರಿಂದಾಗಿ ಪೋಗಲಾಡಿಸಲು ಸಾಧ್ಯವೆಂಬುದನ್ನು ಪ್ರಯೋಗಗಳು ಸಿದ್ಧಪಡಿಸಿವೆ. ಅತಿಸಾರದಿಂದ ತಲೆದೋರಬಹುದಾದ ನೀರು ಹಾಗೂ ಜೀವನಾವಶ್ಯಕ ಲವಣಾಂಶಗಳ ಕುಂದು ಕೊರತೆಗಳ ಪ್ರಮಾಣಗಳನ್ನು ಗಮನದಲ್ಲಿಟ್ಟುಕೊಂಡು ಜಾಗತಿಕ ಆರೋಗ್ಯ ಸಂಸ್ಥೆಯ ಪರಿಣಿತರ ಸಮಿತಿಯು ವಿವಿಧ ಲವಣಾಂಶಗಳ ಪ್ರಮಾಣ ಯೋಗ್ಯ ರೀತಿಯ ಹಾಗೂ ಹೆಚ್ಚಿನ ಮಟ್ಟದ ನಾಗಾಣಿಕೆ ಎಷ್ಟಿರಬೇಕೆಂಬುದನ್ನು ನಿಗದಿ ಪಡಿಸಿದೆ.

1) ಸೋಡಿಯಂ ಕ್ಲೋರೈಡ್ -3. 5 ಗ್ರಾಂ.
2) ಸೋಡಿಯಂ ಬೈಕಾರ್ಬೊನೇಟ್ -2. 5 ಗ್ರಾಂ
3) ಪೋಟ್ಯಾಸಿಯಂ ಕ್ಲೋರೈಡ್ -1. 5 ಗ್ರಾಂ.
4) ಗ್ಲೂಕೋಜ್ -20 ಗ್ರಾಂ.

ಇವೆಲ್ಲವನ್ನೂ ಒಂದು ಲೀಟರ್ ಕಾಸಿ, ಆರಿಸಿ, ಸೋಸಿದ ನೀರಿನಲ್ಲಿ ಕರಗಿಸಬೇಕು. ಜಾಗತಿಕ ಆರೋಗ್ಯ ಸಂಸ್ಥೆಯು ನಿಗದಿಪಡಿಸಿದ ಪ್ರಮಾಣಗಳನ್ನು ಬಳಸಿಕೊಂಡು ಹಲವಾರು ಕಂಪನಿಗಳು O.R.S (Oral Rehydration Salt) ಪೊಟ್ಟಣಗಳನ್ನು ತಯಾರಿಸುತ್ತಿವೆ. ಬೇರೆ ಬೇರೆ ಕಂಪನಿಯ ಪೊಟ್ಟಣಗಳು ಬೇರೆ ಬೇರೆ ಹೆಸರುಗಳನ್ನು ಹೊತ್ತು ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿವೆ. ಇದರ ಉಪಯೋಗ ಜನಸಾಮಾನ್ಯರ ಮನೆ, ಮನಕ್ಕೂ ಮುಟ್ಟಲಿ ಎಂಬ ಉದ್ದೇಶದಿಂದ 'ಜೀವನ ಜಲ'ದ ಭಿತ್ತಿ ಪತ್ರಗಳನ್ನು ಆರೋಗ್ಯ ಇಲಾಖೆಯ ಕಾರ್ಯಕರ್ತರ ಮುಖಾಂತರ ಹಳ್ಳಿಹಳ್ಳಿಗೂ ಮುಟ್ಟಿಸಲು ಪ್ರಯತ್ನ ನಡೆದಿದೆ, ನಡೆಯುತ್ತಿದೆ. ಇದರ ಉಪಯೋಗಕ್ಕೆ ಎಲ್ಲರೂ ಕೈ ಜೋಡಿಸಿದ್ದೇ ಆದಲ್ಲಿ ಅತಿಸಾರದ ಹಾವಳಿ, ಹಾಹಾಕಾರ ಹತ್ತಿಕ್ಕುವಲ್ಲಷ್ಟೇ ಅಲ್ಲ, ಅದರಿಂದಾಗುವ ತೊಡಕು ತೊಂದರೆಗಳನ್ನು ನಿವಾರಿಸಿ ಬತ್ತುವ ಬದುಕುಗಳನ್ನು ಎತ್ತಿ ಹಿಡಿಯಲು ಸಹಾಯಕವಾಗುತ್ತದೆ ಎಂದು ಘಂಟಾಘೋಷವಾಗಿ ಹೇಳಬಹುದು.



M. K. Publicity

ಚಿಕಿತ್ಸೆಗೆ ನಿಗದಿಪಡಿಸಿದ ಪ್ರಮಾಣ:

ವಯಸ್ಸು	ತೂಕ	ಕೊಡಬೇಕಾದ ಪ್ರಮಾಣ
6 ತಿಂಗಳ ಒಳಗೆ	0-6 ಕೆ.ಜಿ.	200-400 ಮಿ.ಲೀ.
7 ರಿಂದ 17 ತಿಂಗಳು	7-10ಕೆ.ಜಿ.	400-600 ಮಿ.ಲೀ.
1½ ವರ್ಷದಿಂದ 3 ವರ್ಷ	11-13 ಕೆ.ಜಿ.	600-800 ಮಿ.ಲೀ
4 ರಿಂದ 7 ವರ್ಷ	14-19 ಕೆ.ಜಿ.	800-1000 ಮಿ.ಲೀ
8 ರಿಂದ 15 ವರ್ಷ	20-40 ಕೆ.ಜಿ.	1000-2000 ಮಿ.ಲೀ.
ವಯಸ್ಕರು	40 ಕೆ.ಜಿ. ಮೇಲೆ	2000-4000 ಮಿ.ಲೀ.

ಎಲ್ಲರ ಮನೆಯಲ್ಲೂ ಸರ್ವಸಾಮಾನ್ಯವಾಗಿ ಸಿಗುವ ಸಾಮಗ್ರಿಗಳಿಂದ ಸುಲಭದ ಅಳತೆಯ ವಿಧಾನದಿಂದ 'ಜೀವನಜಲ'ವನ್ನು ಕಡಿಮೆ ಖರ್ಚಿನಲ್ಲಿಯೇ ತಯಾರಿಸಬಹುದು.

1) ಅಡಿಗೆಯ ಉಪ್ಪು -3/4 ಚಮಚೆ
2) ಅಡಿಗೆಯ ಸೋಡಾ -1/2 ಚಮಚೆ
3) ಗ್ಲೂಕೋಜ್, ಸಕ್ಕರೆ -4 ಚಮಚೆ/8 ಚಮಚೆ

ಇವುಗಳನ್ನು ಒಂದು ಲೀಟರ್ ಕಾಸಿ, ಆರಿಸಿ, ಸೋಸಿದ ನೀರಿನಲ್ಲಿ ಕರಗಿಸಿ ಅದಕ್ಕೆ 1/2 ನಿಂಬೆ ಹಣ್ಣಿನ ರಸವನ್ನು ಕೂಡಿಸಿದಲ್ಲಿ ದೇಹಕ್ಕೆ ಅಗತ್ಯವಿರುವ ಪೋಟ್ಯಾಸಿಯಂ ಪೂರೈಕೆಯಾಗುತ್ತದೆ. ಹೀಗೆ ತಯಾರಿಸಿದ 'ಜೀವನ ಜಲ'ವನ್ನು 24 ಗಂಟೆಗಳಲ್ಲಿಯೇ ಉಪಯೋಗಿಸಬೇಕು. ಒಮ್ಮೆ ತಯಾರಿಸಿದ ದ್ರಾವಣವನ್ನು ಮತ್ತೆ ಕಾಯಿಸಬಾರದು. ದ್ರಾವಣವನ್ನು ತಯಾರಿಸುವಾಗ ಶುಚಿತ್ವದ ಕಡೆಗೆ ಹೆಚ್ಚು ಲಕ್ಷ್ಯಕೊಡಬೇಕು.

ಚಿಕಿತ್ಸಾ ವಿಧಾನ:

ನಿರ್ಜಲೀಕರಣದ ಲಕ್ಷಣಗಳು ಕಾಣಿಸಿಕೊಳ್ಳುವ ಮೊದಲೇ, ಅತಿಸಾರದ ಎಲ್ಲಾ ರೋಗಿಗಳೂ ಆರಂಭದಿಂದಲೇ ನೀರು ಮತ್ತು ಲವಣಾಂಶಗಳನ್ನು ಕಳೆದುಕೊಳ್ಳಲಾರಂಭಿಸುತ್ತಾರೆ. ಬಾಯಿಂದ ಸಜಲೀಕರಣ ಚಿಕಿತ್ಸೆಯನ್ನು ಅತಿಸಾರದ ಸುಳಿವು ಸಿಕ್ಕ ಕೂಡಲೇ ಪ್ರಾರಂಭಿಸುವುದರಿಂದ 'ನಿರ್ಜಲೀಕರಣ'ದಂತಹ ತೊಡಕಿಗೆ ಕಡಿವಾಣ ಹಾಕಲು ಸಾಧ್ಯ. ಈ ಪಾನೀಯವನ್ನು ಶಿಶುಗಳು ಹಾಗೂ ಸಣ್ಣ ಮಕ್ಕಳಿಗೆ ಪ್ರತಿ 5 ರಿಂದ 10 ನಿಮಿಷಕ್ಕೊಮ್ಮೆ 2 ರಿಂದ 4 ಚಮಚೆಯಷ್ಟು ಕೊಟ್ಟಲ್ಲಿ ಶಿಶುಗಳ ಶರೀರದಲ್ಲಿಯ ನೀರು ಹಾಗೂ ಲವಣಾಂಶಗಳ ನಷ್ಟವನ್ನು ಹೋಗಲಾಡಿಸಬಹುದು. ಅಕಸ್ಮಾತ್ ಆಗೊಮ್ಮೆ ಈಗೊಮ್ಮೆ ವಾಂತಿಯಾಗುತ್ತಿದ್ದಲ್ಲಿ ಚಿಕಿತ್ಸೆಯನ್ನು ನಿಲ್ಲಿಸಬಾರದು. ಬೆಳೆದ ಮಕ್ಕಳು ಹಾಗೂ ವಯಸ್ಕರು ಗಾಜಿನ ಲೋಟ ಅಥವಾ ಬಟ್ಟಲಿನಲ್ಲಿ ಎಷ್ಟು ಬೇಕಾದರೂ ಈ ಪಾನೀಯವನ್ನು ಕುಡಿಯಬಹುದು. ತಾಯಂದಿರು ಅತಿಸಾರ ಪೀಡಿತ ಶಿಶುಗಳಿಗೆ ಎದೆಹಾಲನ್ನು ಕುಡಿಸುತ್ತಲೇ ಇರಬೇಕು.

ವಯಸ್ಸು, ತೂಕ, ಕೊಡಬೇಕಾದ ಪ್ರಮಾಣಗಳನ್ನು ನೆನಪಿಟ್ಟುಕೊಂಡು ಲೆಕ್ಕಾಚಾರ ಕೊಡುವುದು ತಲೆ ಚಿಟ್ಟು ಹಿಡಿಸಬಹುದು. ಚಿಕಿತ್ಸೆಗಾಗಿ ಜೀವನಜಲದ ಪ್ರಮಾಣವನ್ನು ನಿರ್ಧರಿಸುವ ಸುಲಭ ಸರಳ ವಿಧಾನವೊಂದಿದೆ. ಪ್ರತಿ ಪೌಂಡ್ ತೂಕಕ್ಕೆ 60-75 ಮಿ.ಲೀ. ನಂತೆ ಲೆಕ್ಕ ಮಾಡಿದ ಪ್ರಮಾಣಕ್ಕೆ ಅತಿಸಾರದ ಸ್ವರೂಪಕ್ಕೆ ತಕ್ಕಂತೆ 300-500 ಮಿ.ಲೀ. ಕೂಡಿಸಿ 24 ಗಂಟೆಯೊಳಗೆ ಕುಡಿಸಬೇಕು.

ಸಜಲೀಕರಣ ಚಿಕಿತ್ಸೆ ಪ್ರಾರಂಭ ಮಾಡಿದ ಮೇಲೆ ಪ್ರತಿ 4 ರಿಂದ 6 ತಾಸಿಗೊಮ್ಮೆ ರೋಗಿಯ ಸ್ಥಿತಿಗತಿಯ ಬಗ್ಗೆ ತಪಾಸಣೆ ಮಾಡಿ ಮರು ನಿರ್ಧಾರ ಕೈಕೊಂಡು ಚಿಕಿತ್ಸೆಯನ್ನು ಮುಂದುವರಿಸಬೇಕು. 'ಜೀವನಜಲ'


ಸೇವನೆಯ 12 ರಿಂದ 24 ಗಂಟೆಗಳೊಳಗೆ ಅತಿಸಾರ ಹಿಡಿತಕ್ಕೆ ಬಾರದಿದ್ದಲ್ಲಿ, ವಾಂತಿ ಹೆಚ್ಚಾದಲ್ಲಿ ತಜ್ಞವೈದ್ಯರ ಸಲಹೆ ಪಡೆಯುವುದು ಸೂಕ್ತ.

ಚಿಕಿತ್ಸೆಯ ಇತಿಮಿತಿಗಳು:

1) ಬಿಟ್ಟೂಬಿಡದ ವಿಪರೀತ ವಾಂತಿ.

2) ಕುಸಿತದ (Collapse) ಚಿನ್ಹೆಗಳೊಡಗೂಡಿದ ಮೂರನೆಯ ಹಂತದ ನಿರ್ಜಲೀಕರಣದ ಸ್ಥಿತಿ.

3) ಬಹಳ ವೇಳೆಯಿಂದ ಬಳಲುತ್ತಿರುವ ತುಸು ಮೂತ್ರ (Oliguria) ಅಥವಾ ಮೂತ್ರರಹಿತೆ (Anuria)



4) ಸುಸ್ತು: ಅರೆಪ್ರಜ್ಞೆ ಅಥವಾ ಪ್ರಜ್ಞಾ...
...ತೆಯ ಸ್ಥಿತಿ.

5) ಅಪಕ್ವ ಹಾಗೂ ತಿಂಗಳೊಳಗಿನ ಪಸು...
ಗಳಲ್ಲಿ ಈ ಚಿಕಿತ್ಸೆಯ ಮೌಲ್ಯಮಾಪನ ಈ...
ರೆಗೆ ಮಾಡಿಲ್ಲ.

ಈ ಎಲ್ಲ ಸಂದರ್ಭಗಳಲ್ಲಿ ಬಾಯಿಂ...
ಸಜಲೀಕರಣ ಚಿಕಿ...
ಪ್ರಯೋಜನವಾಗಲಾರದು.

ನೆನಪಿಡಬೇಕಾದ ಪಂಚ ಸೂತ್ರಗಳು:

1) ಅತಿಸಾರದ ಪ್ರಾರಂಭದ ಹಂತದಲ್ಲಿ ಚಿಕಿ...
ಕೊಟ್ಟಲ್ಲಿ ಇದೊಂದು ಜೀವ ಉಳಿಸು...
ಸಂಜೀವಿನಿ.

2) ವಿಪರೀತ ನಿರ್ಜಲೀಕರಣದವರಿಗೆ ಶಿರಗ...
ಮೂಲಕ ದ್ರಾವಣ ನೀಡಿ ಸಜಲೀಕರ...
ಮಾಡಿದ ಹಂತ ಮುಂದುವರೆಯುವಲ್ಲಿ ಆಸ...
ಕೆಯ ಚಿಕಿತ್ಸೆಯಾಗಿ ಚೇತನ ನೀಡುತ್ತದೆ.

3) ಅತಿಸಾರದ ಮೊದಲ 12 ರಿಂದ 2...
ಗಂಟೆಗಳವರೆಗೆ ಸಣ್ಣವರಿಗೆ ಒಂದು ಕಪ್...
ದೊಡ್ಡವರಿಗೆ ಒಂದು ಗ್ಲಾಸು ದ್ರಾವಣವನ್ನು...
ಭೇದಿಮಾಡಿದಾಗೊಮ್ಮೆ ಕೊಡುತ್ತಿರಬೇಕು.

4) ಶಿಶುಗಳಿಗೆ ಅತಿಸಾರವಾದಾಗ ತಾಯಿ...
ದಿರು ಎದೆ ಹಾಲು ಕೊಡುವುದನ್ನು ಯಾ...
ಕಾರಣಕ್ಕೂ ನಿಲ್ಲಿಸಬಾರದು.

5) ತಜ್ಞರ ಸಲಹೆ ಅತ್ಯವಶ್ಯ.

ಅ) ಅತಿಸಾರ 24 ಗಂಟೆಗಳ ನಂತರವೂ ಮುಂದುವರೆದರೆ.

ಬ) ಬಾಯಿಂದ 'ಜೀವನಜಲ' ತೆಗೆದುಕೊಳ್ಳುವುದು ಸಾಧ್ಯವಾಗದಿದ್ದಲ್ಲಿ.

ಕ) 'ಜೀವನಜಲ' ಕೊಟ್ಟ ನಂತರವೂ ಅತಿಸಾರ ಹೆಚ್ಚಾದರೆ.

ಒಂದೇ ಮಾತಿನಲ್ಲಿ ಹೇಳುವುದಾದರೆ ಅತಿ...
ಸಾರವಾದಾಗ ಅಪಾರ 'ಜೀವನಜಲ' ಕುಡಿಸು...
ವುದು ಔಷಧ ಕೊಡುವದಕ್ಕಿಂತಲೂ ಹೆಚ್ಚು...
ಮುಖ್ಯವಾಗಿರುತ್ತದೆ. ಈ ಅತ್ಯಂತ ಸರಳ...
ವಿಧಾನವನ್ನು ಅರಿತು, ಆಚರಣೆಗೆ ತಂದಲ್ಲಿ...
ಇದು ಮನುಕುಲ ಸಂರಕ್ಷಣೆಯ ಸಂಜೀವಿನಿ...
ಯಾಗಲಿದೆ.

ಸಿಕಂದರ್ ಸತ್ತ ನಂತರ...

ಪುಸ್ತಕ ವಿಭಾಗ

ಮೂಲ: ಮೇರಿ ರೋನಾಲ್ಡ್

ರೂಪಾಂತರ: 'ಕೋಡಿ'



ಸಿಕಂದರ್ ಸತ್ತ ನಂತರ.....

ಇತಿಹಾಸದ ಪುಟಗಳನ್ನು ಒಂದೊಂದಾಗಿ ತೆರೆಯುತ್ತ ನಡೆದರೆ ಜಗತ್ತಿನ ರಾಗರಂಜಿತ ಪರಿಣಾಮ [illegible] ಚಿತ್ರಗಳು ಕಣ್ಣೆದುರು ಹಾಯ್ದು ಹೋಗುತ್ತವೆ. ಅಲ್ಪಾವಧಿಯಲ್ಲೇ ಅಂದಿನ ಜ್ಞಾತ ಜಗತ್ತಿನ ಬಹು ಭಾಗವನ್ನು ತೋಳ್ ಬಲದಿಂದಲೇ ಗೆದ್ದು ವಿಜಯ ಪತಾಕೆ ಹಾರಿಸಿದ್ದ ಸಿಕಂದರ್ ಕೂಡ ಪರಾಜಯಗೊಳ್ಳುವುದು ಮೃತ್ಯುವಿನೆದುರು. ತನ್ನದೆಲ್ಲ ವ್ಯರ್ಥ ಹಾಹಾಕಾರವೆಂಬ ಅರಿವು ಕೂಡ ಕೊನೆಯ ಕ್ಷಣದಲ್ಲಿ ಅವನಿಗಾಗಿತ್ತಂತೆ.... ಆ ಮಹತ್ವಾಕಾಂಕ್ಷಿಯ ನಂತರದಲ್ಲಿ ಅವನು ಕಟ್ಟಿದ್ದ ಸಾಮ್ರಾಜ್ಯ ಕಂಡದ್ದೇನು ಗೊತ್ತೆ? ಇಲ್ಲಿ ಓದಿ ನೋಡಿ....

ವಿಶ್ವವಿಜೇತ, ಗ್ರೀಸ್‌ನ ಇತಿಹಾಸದಲ್ಲಿ ಸುವರ್ಣ ಅಧ್ಯಾಯವನ್ನೊಂದನ್ನು ಸೃಷ್ಟಿಸಿದ, ಮತ್ತು ಗ್ರೀಕ್ ಜನತೆಯ ಪ್ರತಿಷ್ಠೆಯನ್ನು ಜಗತ್ತಿನ ಮೂಲೆ ಮೂಲೆಗೂ ಸ್ಥಾಪಿಸಿದ, ಅದಮ್ಯ ಸಾಹಸಿ, ಧೀಮಂತ ವ್ಯಕ್ತಿ ಅಲೆಕ್ಸಾಂಡರ್ ಇಂದು ಬ್ಯಾಬಿಲೋನ್‌ನಲ್ಲಿ ಮರಣ ಶಯ್ಯೆಯಲ್ಲಿ ಮೃತ್ಯುವಿನೊಡನೆ ಕೊನೆಯ ಹೋರಾಟದಲ್ಲಿ ತೊಡಗಿದ್ದಾನೆ!

ಜಗದೇಕವೀರನ ಅಧಿಕಾರ ಮೆಲ್ಲಮೆಲ್ಲನೆ ಸಂಕುಚಿತಗೊಳ್ಳುತ್ತಿದೆ. ಈಗ ಬ್ಯಾಬಿಲೋನ್! ಅದರಲ್ಲಿಯ ರಾಜಭವನ! ಅಲ್ಲಿಂದ ಆ ಕೊಠಡಿ ಮಟ್ಟಿಗೆ! ಈಗ ಆ ಕೊಠಡಿಯಲ್ಲಿನ ಪರ್ಷಿಯಾ ಸಮ್ರಾಟ ಡೇರಿಯಸ್‌ನ ಭವ್ಯವಾದ ಪಲ್ಲಂಗದವರೆಗೆ!! ಮತ್ತೀಗ ಆ ಪಲ್ಲಂಗದ ಮೇಲೆ ಶಾಲಿನಿಂದ ಹೊದ್ದಿಕೊಂಡಿಟ್ಟ ತನ್ನ ಸ್ವಂತ ಶರೀರ ಕೆಲವು ಅವಯವಗಳ ಮೇಲೆ ಕೂಡ ಅವನಿಗೆ ಅಧಿಕಾರ ಉಳಿದಿಲ್ಲ.

ಅರೆಮುಚ್ಚಿದ ಕಣ್ಣುಗಳು, ನಡುಗುತ್ತಿರುವ ಶುಷ್ಕ ಅಧರಗಳು!! ಯಾವಾಗ ಈ ಪ್ರಾಣ ಶರೀರದಿಂದ ಹೊರಟು ಅನಂತ ಆಕಾಶದಲ್ಲಿ ಲೀನವಾಗುವುದೋ? ಇನ್ನು ಜಗಜ್ಜೇತ ಉಳಿಯುವುದಿಲ್ಲ. ಈ ಮಾತು ಎಲ್ಲರಿಗೂ ಗೊತ್ತಾಗಿದೆ.

ಸಿಕಂದರನ ಮಲತಮ್ಮ ಟಾಲೆಮಿ ತನ್ನ ಮಹಲಿನಲ್ಲಿ ಉದ್ವಿಗ್ನತೆಯಿಂದ [illegible] ವಾತಾವರಣದಲ್ಲಿ, ರಾಜಕಾರಣದಲ್ಲಿ ತಾನು ಯಾವ ಹೆಜ್ಜೆ [illegible] ತುರನಾಗಿದ್ದಾನೆ.

ಮೂವತ್ತಾರು ವರ್ಷಗಳಷ್ಟು [illegible] ಟಾಲೆಮಿ [illegible] ಗಳಿಸಿದ. ವಾತಾವರಣ ಅವನ ಮುಂದೆ ಮೇಲೆ ತನ್ನ [illegible] ಗೊಳಿಸಿತ್ತು.

ಅವನ ಮನಸ್ಸಿನಲ್ಲಿ ಸಾಮ್ರಾಜ್ಯಾಧಿಕಾರದ ಬಗ್ಗೆ [illegible]

ಸಿಕಂದರ್ ತನ್ನ [illegible] ಗ್ರೀಕ್ ಸೇನಾಧಿಪತಿ [illegible] ದರ [illegible]

ಏನೆಂದು ವ್ಯಕ್ತಪಡಿಸಿದ ಎಂಬುದನ್ನು ಯಾರೂ ಹೇಳುವಂತಿಲ್ಲ.

ಬೆಕ್ಟ್ರಿಯಾ ಯುದ್ಧದ ಸಮಯದಲ್ಲಿ ವಿವಾಹ ಮಾಡಿಕೊಂಡಿದ್ದ ಸಿಕಂದರನ ಪತ್ನಿ ರುಕ್ಸಾನಾ ಈಗ ನಾಲ್ಕು ತಿಂಗಳ ಗರ್ಭಿಣಿ. ಕೆಲವು ಜನ ಆಶ್ವಾಸನೆಯ ದೃಷ್ಟಿ ಭಾವಿ ಉತ್ತರಾಧಿಕಾರಿಯ ಮೇಲೆ ಇದೆ. ಆದರೆ ಹೆಣ್ಣು ಕೂಸು ಜನಿಸಿದರೆ!?....?!

ಸಿಕಂದರ್ ಮಹಾರಾಜನ ದ್ವಿತೀಯ ಪತ್ನಿ ಪರ್ಷಿಯಾದ ಸಮ್ರಾಟ ಡೇರಿಯಸ್‌ನ ಮುದ್ದಿನ ಮಗಳು ಸ್ಟಾತಿರಾ. ಆಕೆ ಕೂಡ ಗರ್ಭಿಣಿ. ಸುಸಾ ಎಂಬುದು ಸ್ಥಳದಲ್ಲಿದ್ದಾಗ ಸಿಕಂದರ್ ಅವಳನ್ನು ವಿವಾಹ ಮಾಡಿಕೊಂಡಿದ್ದ.

ಮೆಸಿಡೋನಿಯಾದಿಂದ ದಿಗ್ವಿಜಯಕ್ಕೆ ಹೊರಟಾಗ ಸಿಕಂದರ್ ಅವಿವಾಹಿತನಾಗಿದ್ದ. ಆ ವೇಳೆ ಮದ್ವೆ ಲಗ್ನವಾಗಿದ್ದರೆ. ಈ ಹೊತ್ತಿಗೆ ಸುಮಾರು 13-14 ವಯಸ್ಸಿನ ಪುತ್ರನನ್ನು ಪಡೆದಿರಬಹುದಾಗಿತ್ತು. ಹಾಗಾಗಿದ್ದರೆ ಈಗಿನ ಉತ್ತರಾಧಿಕಾರದ ಸಮಸ್ಯೆ ಉದ್ಭವವಾಗುತ್ತಿರಲಿಲ್ಲ.

“ಇಬ್ಬರೂ ರಾಣಿಯರು ಗಂಡು ಮಕ್ಕಳನ್ನು ಹೆತ್ತರೆ ಉತ್ತರಾಧಿಕಾರಿ ಯಾರು?” “ಮೊದಲು ಉತ್ತರಾಧಿಕಾರಿಯಾದವನು ಜನಿಸಲಿ, ಅರಸನಾಗುವ ವಯಸ್ಸಿಗೆ ಬೆಳೆಯಲಿ!”

ಉತ್ತರಾಧಿಕಾರಿಯನ್ನು ಆರಿಸುವ ಮಹತ್ವದ ಹೊಣೆಯನ್ನು ಸಿಕಂದರ್ ಬಹುಶಃ ಮೆಸಿಡೋನಿಯಾದ ಜನತೆಯ ತಲೆಯ ಮೇಲೆ ಹೊರೆಸಿರಬೇಕು.

ಒಂದು ಕಾಲದಲ್ಲಿ ಅಸ್ಸೀರಿಯಾದ ಚಕ್ರವರ್ತಿ ನೆಬುಚಾಡ್ನೆಜರ್ ವಾಸಿಸುತ್ತಿದ್ದ ಭವ್ಯ ಮಹಲು, ಕಾಲಾಂತರದಲ್ಲಿ ಪರ್ಷಿಯಾದ ವಶವಾಗಿ, ಒಬ್ಬರಿಂದೊಬ್ಬರಂತೆ ಬೇರೆ ಬೇರೆ ರಾಜರ ಕೈಗಳಿಗೆ ವರ್ಗವಾಗುತ್ತಾ ಬಂದು ರಾಜಭವನದ ಈ ಕೋಣೆಯಲ್ಲಿ ಜಗಜ್ಜೇತ ತನ್ನ ಕೊನೆಯ ಘಳಿಗೆಗಳನ್ನೆಣಿಸುತ್ತಿದ್ದಾನೆ. ಡೇರಿಯಸ್‌ನ ಸಲುವಾಗಿಯೇ ವಿಶೇಷವಾಗಿ ತಯಾರಿಸಿದ ಏಳು ಅಡಿ ಉದ್ದದ ಭವ್ಯವಾದ ಪರ್ಯಂಕದ ಮೇಲೆ, ಸಿಕಂದರ್‌ನ ನಿಶ್ಚೇತಪ್ರಾಯ ಶರೀರ ಪವಡಿಸಿದೆ. ಉಸಿರಾಡಲು ತೊಂದರೆಯಾಗಬಾರದೆಂದು ದಿಂಬುಗಳನ್ನಾನಿಸಿ, ಕುಳಿತಿರುವ ಭಂಗಿಯಲ್ಲಿ ಮಲಗಿಸಿದ್ದಾರೆ. ಅಚೇತನವಾದ ಶರೀರ. ಕೇವಲ ಉಸಿರಾಡುವುದರಿಂದ ಪ್ರಾಣ ಇನ್ನೂ ಹೋಗಿಲ್ಲ ಎನ್ನುವ ಭರವಸೆ.

ರಾಜವೈದ್ಯ ಕಳೆಗುಂದಿದವನಾಗಿ, ಕೈ ಹಿಡಿದು ನಾಡಿಯ ಮಿಡಿತವನ್ನು ನೋಡಿದ. ಯಾವುದೇ ಔಷಧಿಯನ್ನು ಕೊಡದೆ, ತಲೆ ಅಲ್ಲಾಡಿಸುತ್ತಾ ಹೊರ ನಡೆದ.

“ಔಷಧಿ ಕೊಟ್ಟರೂ ಉಳಿಯುವುದಿಲ್ಲ. ಮುಂದೆ ಕುತಂತ್ರಿ ರಾಜಕಾರಣಿಗಳು ವೈದ್ಯನೇ ವಿಷ ಕೊಟ್ಟಿದ್ದಾನೆಂದು ಆರೋಪ ಹೊರಿಸಬಹುದು.”ಎಂದವರು ಭಾವಿಸಿರಬೇಕು.

ರಾಜಭವನದ ಅಂತಃಪುರದಲ್ಲಿ ಮಾತ್ರ ಗೊಂದಲ. ಮಹಿಳೆಯರ ನಿವಾಸದಲ್ಲಿ ಪುರುಷರ ಹೆಸರಿನಲ್ಲಿ ಕಾವಲು ಕಾಯುವ ನಪುಂಸಕರು ಮಾತ್ರ. ಅಂತಃಪುರದ ಗೋಡೆಗಳಲ್ಲಿ ಕಿವಿಗಳನ್ನಿಡಗಿಸಿ ಕಟ್ಟಿಸಿರಬೇಕು. ಎಷ್ಟೋ ಕಾರಸ್ಥಾನಗಳು ಅಸಂಖ್ಯಾತ ಸಂಚುಗಳನ್ನು ಬಯಲಿಗೆಳೆದ ಈ ನಿವಾಸದಲ್ಲಿಂದು ಶೋಕ ಛಾಯೆ ಆವರಿಸಿತ್ತು. ಮುಂದೇನು? ಮುಂದೇನು? ಎಂಬುದು ಬಹು ದೊಡ್ಡ ಪ್ರಶ್ನೆ. ಸಿಕಂದರನಿಂದ ಅಗಣಿತ ಸೌಲಭ್ಯಗಳನ್ನು ಪಡೆಯುತ್ತಿದ್ದ ಈ ಮಹಿಳೆಯರಲ್ಲಿ ಎಷ್ಟೋ ಜನ, ಸಿಕಂದರನನ್ನು ತಮ್ಮ ಕಣ್ಣುಗಳಿಂದ ನೋಡಿರಲಿಲ್ಲ ಕೂಡ!

ಡೇರಿಯಸ್, ಗುಗಾಮೇಲ್‌ನಲ್ಲಿ ಸಿಕಂದರನೊಡನೆ ಅಂತಿಮ ಸಮರಕ್ಕೆಂದು ಶಿಬಿರ ಹೂಡಿದಾಗ ಈ ಅಸಂಖ್ಯಾತ ಅಂತಃಪುರ ನಿವಾಸಿಗಳನ್ನು ಇಲ್ಲಿಯೇ ಬಿಟ್ಟು ಕೇವಲ ಅತಿ ಪ್ರಿಯರಾದ ಪರಿವಾರದ ಜನರನ್ನು ತನ್ನ ಸಂಗಡ ಕರೆದುಕೊಂಡು ಹೋಗಿದ್ದ.

ಯುದ್ಧದಲ್ಲಿ ವಿಜಯದ ವರಮಾಲೆಯನ್ನು ಧರಿಸುವುದರೊಂದಿಗೆ ಬಾಬಿಲೋನ್ ನಗರವನ್ನು ಪ್ರವೇಶಿಸಿ ರುಕ್ಸಾನಾಳನ್ನು ಅಂತಃಪುರಕ್ಕೆ ಕಳಿಸಿಕೊಟ್ಟ.

ಸಿಕಂದರ್ ಮರಣಶಯ್ಯೆಯಲ್ಲಿ ಮಲಗಿ, ಅಂತಿಮ ಘಳಿಗೆಗಳನ್ನೆಣಿಸುತ್ತಿದ್ದಾನೆ ಎನ್ನುವ ಸಂಗತಿ

ರುಕ್ಸಾನ್‌ಳಿಗೆ ತಿಳಿದ ಕೂಡಲೆ ಆಕೆ ಮೇಲು ಮುಸುಕನ್ನು ಹಾಕಿಕೊಂಡು ಧಾವಿಸಿದಳು.

ಮುಂದೆ ಮುಂದೆ ದಾರಿ ತೋರಿಸಲು ಬಿಜಾ (ನಪುಂಸಕ) ನಡೆದ. ಹಿಂದೆ ರುಕ್ಸಾನಾ. ರಾಣೀವಾಸದ ಪರಂಪರೆಯ ಪರಿವೆ ಇಂದು ರುಕ್ಸಾನಾಳಿಗಿರಲಿಲ್ಲ.

ಪರ್ಯಂಕದ ಮೇಲೆ ದಿಂಬುಗಳನ್ನೆತ್ತರಿಸಿ ಮಲಗಿದ್ದ ಸಿಕಂದರನ ಬಿಳಿಚಿಕೊಂಡ ಕಣ್ಣುಗಳು, ಬಾಗಿದ ತುಟಿ, ಕಂದುಹೋದ ಮುಖ, ಉಸಿರಾಡಲು ಪಡುತ್ತಿದ್ದ ತೊಂದರೆಗಳನ್ನು ಗಮನಿಸಿದ ಆಕೆ ಚಿಟ್ಟನೆ ಚೀರಿದಳು "ಸಿ...ಕಂ...ದರ್...!"

ಮುಚ್ಚಿದ್ದ ರೆಪ್ಪೆಯ ಕೆಳಗೆ ಕಣ್ಣು ಗುಡ್ಡೆಗಳು ಅತಿ ಕಷ್ಟದಿಂದ ಸ್ವಲ್ಪ ಸರಿದಾಡಿದವು. ನಂತರ ಮತ್ತೆ ಸ್ಥಿರವಾದವು. ಅದೇ ಕೊನೆಯ ದೃಷ್ಟಿ!

ತನ್ನ ತಲೆಗೂದಲುಗಳನ್ನು ಕಿತ್ತುಕೊಳ್ಳುತ್ತಾ ನೆಲದ ಮೇಲೆ ಹೊರಳಾಡಿ ಅಳುತ್ತಿದ್ದಳು ರುಕ್ಸಾನಾ-ಅಲ್ಲಿ ನೆರೆದ ಜನರ ಪರಿವೆಯಿಲ್ಲದೆಯೆ! ಪರಿಚಾರಕರು ಹೇಗೋ ರಮಿಸಿ ರುಕ್ಸಾನಾಳನ್ನು ಅಂತಃಪುರಕ್ಕೆ ಕಳಿಸಿಕೊಟ್ಟರು.

ತನ್ನನ್ನು ತಾನು ಸಂತೈಸಿಕೊಂಡ ರುಕ್ಸಾನಾ ಅವಸರದ ಪತ್ರವೊಂದನ್ನು ಬರೆಯಿಸಿದಳು. ಇನ್ನು ತಡ ಮಾಡುವಂತಿರಲಿಲ್ಲ. ಆಕೆಯ ಕಂಬನಿ ಆರಿಹೋಗಿತ್ತು. ಭವಿಷ್ಯದ ಬಗ್ಗೆ ಏನನ್ನಾದರೂ ನಿರ್ಧರಿಸಬೇಕಿತ್ತು. ಸಮಯವಿರಲಿಲ್ಲ. ಆದರೂ ಅಧೀರಳಾಗಲಿಲ್ಲ.

★ ★ ★

ಸೋಲನ್ನೇ ಕಾಣದ ಜಗದೇಕವೀರನಿಗಿಂದು ಕಾಲ ಯಮನ ಕೈಯಿಂದ ಸೋಲು ತಪ್ಪಿಸಿಕೊಳ್ಳಲಾಗಲಿಲ್ಲ!

ಆಸರೆಗೆಂದು ಇಟ್ಟಿದ್ದ ದಿಂಬುಗಳನ್ನು ತೆಗೆದು ಹಾಕಿದರು. ಇನ್ನು ಆಸರೆಯ ಅವಶ್ಯಕತೆಯಿಲ್ಲ!!

ಯಾವ ಕಾಲದಲ್ಲೂ ಚಟುವಟಿಕೆಗಳಲ್ಲಿಯೇ ತೊಡಗಿರುತ್ತಿದ್ದ ಮಹತ್ವಾಕಾಂಕ್ಷೆಯ ಶರೀರ ಇಂದು ಚೇತನಾಶೂನ್ಯವಾಗಿ ಬಿದ್ದುಕೊಂಡಿದೆ.

ಸಿಕಂದರ್ ಮರಣಶಯ್ಯೆಯಲ್ಲಿದ್ದಾಗ ಹೀಗೆ ಹೇಳಿದ: "ನಾನು ಬಂದೆ! ನನ್ನದೆಂದೆ!! ಮಹತ್ವಾಕಾಂಕ್ಷೆಯ ಬಯಕೆಯಲ್ಲಿ ಎಷ್ಟೋ ಜನರನ್ನು ಕೊಚ್ಚಿ ಹಾಕಿದೆ. ಎಷ್ಟೋ ಜನ ತಾಯಂದಿರನ್ನು ವಿಧವೆಯರನ್ನಾಗಿಸಿದೆ. ಅಸಂಖ್ಯಾತ ಮಕ್ಕಳನ್ನು ಅನಾಥರನ್ನಾಗಿಸಿದೆ. ಸಂಪತ್ತನ್ನು ಸೂರೆ ಮಾಡಿದೆ. ಆದರೆ ನಾನಿಂದು ಬರಿಗೈಯಲ್ಲಿ ತೆರಳುತ್ತಿದ್ದೇನೆ! ಈ ಮಾತನ್ನು ಮುಂದಿನ ಪೀಳಿಗೆ ಅರಿತುಕೊಳ್ಳಲಿ ಎಂದು ನಾನು ಸತ್ತನಂತರ ನನ್ನ ಎರಡೂ ಬರಿಗೈಗಳನ್ನು ಜನ ನೋಡಲಿ!" ಈಗ ಆತನ ಕೈಗಳನ್ನು ಹೊರಗೆ ಇಟ್ಟು ಶವದ ಮೇಲೆ ಶ್ವೇತವಸ್ತ್ರವೊಂದನ್ನು ಹೊದಿಸಲಾಗಿತ್ತು.

ಸಿಕಂದರ್ ಸತ್ತುಹೋಗಿದ್ದ. ಆದರೆ ಆತ ಸೃಷ್ಟಿಸಿದ ಇತಿಹಾಸ....ಸಿಕಂದರನ ಮರಣದ ಸಮಾಚಾರ ಕಾಳ್ಗಿಚ್ಚಿನಂತೆ ಬಾಬಿಲೋನ್‌ನಲ್ಲೆಲ್ಲಾ ಹರಡಿತು. ಮಂದಿರಗಳಲ್ಲಿ ಉರಿಯುತ್ತಿದ್ದ ಪವಿತ್ರ ಅಗ್ನಿಕುಂಡಗಳು ಒಂದೊಂದಾಗಿ ಆರತೊಡಗಿದವು.

ಬಾಬಿಲೋನ್‌ನ ರಾಜಭವನದ ಸಭಾಗಾರದಲ್ಲಿ ಸಾಮಂತರ ಚಕ್ರಾಧಿಪತ್ಯದ ಇತರ ಉನ್ನತ ಅಧಿಕಾರಿಗಳ ಭಾರೀ ಸಭೆ ಸೇರಿತು. ಮೆಸಿಡೋನಿಯಾದಿಂದ ಸಿಕಂದರನ ಸಂಗಡವೇ ಬಂದ ಆತನ ಆತ್ಮೀಯರು, ಅಧಿಕಾರಿಗಳೆಲ್ಲಾ ಮಂತ್ರಾಲೋಚನೆಗೆ ತೊಡಗಿದರು. ಜನಸಂದಣಿ ಅತಿಯಾಗಬಾರದೆನ್ನುವ ದೃಷ್ಟಿಯಿಂದ ರಾಜಭವನದ ಮುಖ್ಯ ದ್ವಾರವನ್ನು ಮುಚ್ಚಲಾಯಿತು

ಸಿಕಂದರನ ತಂದೆ ಫಿಲಿಪ್ ಮರಣ ಹೊಂದಿದಾಗ ಇಷ್ಟೊಂದು ಗೊಂದಲವಿರಲಿಲ್ಲ. ಯಾವುದೇ ಸಮಸ್ಯೆಗೆ ಆಸ್ಪದವಿರಲಿಲ್ಲ. ಮೆಸಿಡೋನಿಯಾದ ಸಾಮಂತರು [illegible]

ಕಾರದ ಬಗ್ಗೆ ಜನತೆಯಲ್ಲಿ ಆಡಳಿತಗಾರರಲ್ಲಿ ಮತ್ತು ಸೈನ್ಯದಲ್ಲಿ ಒಮ್ಮತವಿತ್ತು. ಎಲ್ಲರ ಅಭಿಪ್ರಾಯ ವೊಂದೇ... ಸಿಕಂದರ್...ಸಿಕಂದರ್!!...ಸಿಕಂದರ್!!!

ಆದರೆ ಇಂದಿನ ಪರಿಸ್ಥಿತಿಯೇ ಬೇರೆ. ಮೆಸಿಡೋನಿಯಾ ಸೈನ್ಯದ ಬಹುಭಾಗ, ಮಧ್ಯ ಏಷಿಯಾದ ವಿವಿಧ ಪ್ರಾಂತ್ಯಗಳಲ್ಲಿ ಮತ್ತು ಗ್ರೀಕ್ ಉಪನಿವೇಶನಗಳಲ್ಲಿ ಉಳಿದುಕೊಂಡಿತ್ತು.

ಈಗ ಉತ್ತರಾಧಿಕಾರಿಯ ಬಗ್ಗೆ ನಿರರ್ಗಳ ಚರ್ಚೆಯಾಗಬೇಕು. ಉತ್ತರಾಧಿಕಾರಿಯ ಬಗ್ಗೆ ಭಿನ್ನ ಅಭಿಪ್ರಾಯಗಳಿದ್ದರೆ ಆ ಬಗೆಗೆ ನಿಸ್ಸಂಕೋಚವಾಗಿ, ನಿರ್ಭೀತಿಯಿಂದ ಚರ್ಚೆ ನಡೆಯಬೇಕು. ಸಾಮ್ರಾಜ್ಯದ ಗರಿಮೆ, ಘನತೆಗೆ ಧಕ್ಕೆಯಾಗದಂತೆ ಎಲ್ಲ ವಿಷಯಗಳನ್ನೂ ಅಭ್ಯಸಿಸಿ ಸಮಾಲೋಚಿಸಿ ಆ ಬಗ್ಗೆ ಸಭೆ ತಾನು ಆರಿಸಿದ ಉತ್ತರಾಧಿಕಾರಿಯ ಬಗ್ಗೆ ಇರುವ ಸಂದೇಹ, ಸಮಸ್ಯೆಗಳಿಗೆ ಬಾಧ್ಯತೆಯಿಂದ ಉತ್ತರಿಸಬೇಕು; ಸಂಶಯವನ್ನು ನಿವಾರಿಸಬೇಕು.

ಈಗ ಎಲ್ಲ ಸಮಸ್ಯೆಗಳನ್ನು ಬ್ಯಾಬಿಲೋನ್‌ನಲ್ಲಿರುವ ಮೆಸಿಡೋನಿಯಾದ ಸೈನಿಕರೇ ಬಗೆಹರಿಸಬೇಕು.

ವಿಶಾಲವಾದ ಸಭಾಗಾರದಲ್ಲೆಲ್ಲಾ ಗುಜು ಗುಜು ನಡೆದಿತ್ತು. ಉನ್ನತ ಸ್ಥಾನದಲ್ಲಿ ಬ್ಯಾಬಿಲೋನ್‌ನ ರಾಷ್ಟ್ರೀಯ ಲಾಂಛನ - ಸೆಣಸಾಡುತ್ತಿರುವ ಎರಡು ಅಸ್ಸೀರಿಯನ್ ಗೂಳಿಗಳು ಅಂಕಿತವಾಗಿದ್ದ ಭವ್ಯ ಸಿಂಹಾಸನ ತನ್ನ ಸ್ವಾಮಿಯನ್ನು ಬೇಗ ಚುನಾಯಿಸಿ ಎಂದು ಮೂಕವಾಗಿ ಹೇಳುತ್ತಿತ್ತು.

ಸಭಾಗಾರದ ವೇದಿಕೆಯ ಮೇಲೆ ಸೇನಾಧಿಪತಿ ಪೆರಾಡಿಕ್ಕಸ್ ಒಂದು ಸಭೆಯನ್ನುದ್ದೇಶಿಸಿ ಹೇಳತೊಡಗಿದ: "ಸಿಕಂದರ್ ಸಾಯುವ ಮೊದಲು ನನ್ನ ಬೆರಳಿಗೆ ರಾಜಮುದ್ರೆಯ ಉಂಗುರ ತೊಡಿಸಿದ್ದಾನೆ. ಈ ಬಗ್ಗೆ ಈ ಸಭೆಯಲ್ಲಿ ನೆರೆದಿರುವ ಸಾಮಂತರು, ಹಾಗೂ ಉನ್ನತ ಆಡಳಿತಗಾರರು ಸಾಕ್ಷಿಯಾಗಿದ್ದಾರೆ. ಸಿಕಂದರ್ ಮಾತಾಡುವ ಸ್ಥಿತಿಯಲ್ಲಿರಲಿಲ್ಲವಾದುದರಿಂದ ಸಿಕಂದರನ ಇಚ್ಛೆ ಏನಿತ್ತು? ಮತ್ತು ಸಾಮ್ರಾಜ್ಯದ ಉತ್ತರಾಧಿಕಾರದ ಬಗ್ಗೆ ಸಿಕಂದರನ ನಿಲುವು ಏನಿತ್ತು? ಎನ್ನುವ ಬಗ್ಗೆ ಯಾವುದೇ ನಿರ್ದಿಷ್ಟ ಕಲ್ಪನೆಯಿಲ್ಲ. ಈ ಬಗ್ಗೆ ನಿಖರವಾಗಿ ಏನನ್ನೂ ಹೇಳಲು ಸಾಧ್ಯವಿಲ್ಲ. ರಾಜಮುದ್ರೆಯೊಡನೆ ನನಗೆ ಯಾವ ಹೊಣೆಯನ್ನು ಹೊರಿಸುವ ಉದ್ದೇಶವಿತ್ತೋ ನಾನರಿಯೆ. ಮೆಸಿಡೋನಿಯಾದ ವೀರರೆ, ಈ ಬಗ್ಗೆ ನಾನು ನಿಮ್ಮೆಲ್ಲರ ಬಯಕೆ ಏನು ಎನ್ನುವ ಬಗ್ಗೆ ಸಮಾಲೋಚಿಸಲು ಬಯಸುತ್ತೇನೆ. ಮುಖ್ಯವಾದುದೊಂದು ಮಾತು. ರಾಣಿ ರುಕ್‌ಸಾನಾ ಅವರು ಈಗ ಗರ್ಭಿಣಿ. ಆಕೆ ಈ ಸಾಮ್ರಾಜ್ಯ ಸಿಂಹಾಸನದ ಶೂನ್ಯ ನಿವಾರಿಸುವಂಥ ಭಾವೀ ಉತ್ತರಾಧಿಕಾರಿಯಾಗುವಂತಹ ಗಂಡು ಮಗುವನ್ನು ಪಡೆಯಲಿ ಎಂದು ದೇವರಲ್ಲಿ ಪ್ರಾರ್ಥಿಸುವುದೊಂದೇ ಈಗ ಉಳಿದಿರುವ ಮಾರ್ಗ. ಅಲ್ಲಿಯವರೆಗೆ ಸಾಮ್ರಾಜ್ಯದ ಆಡಳಿತ ಸೂತ್ರವನ್ನು ಯಾರ ಕೈಯಲ್ಲಿ ಕೊಡಬೇಕು ಎನ್ನುವ ಬಗ್ಗೆ ನಿರ್ಣಯಿಸುವ ಜವಾಬ್ದಾರಿ ನಿಮ್ಮ ತಲೆಯ ಮೇಲಿದೆ!"

ಗ್ರೀಕ್ ಸೇನಾಧಿಪತಿ ಪೆರಾಡಿಕಸನ ಮಾತು ಮುಗಿಯುತ್ತಿರುವಂತೆಯೇ ಸಭಿಕರ ಮಧ್ಯದಿಂದ ನೌಕಾಧಿಪತಿ ನಿಯಾರ್‌ಕಸ್ ಎದ್ದು ವೇದಿಕೆಯ ಕಡೆಗೆ ಗಂಭೀರವಾದ ಹೆಜ್ಜೆಗಳನ್ನಿಡುತ್ತಾ ನಡೆದ.

ಸಭಿಕರ ಗಮನವೆಲ್ಲಾ ನೌಕಾಧಿಪತಿಯ ಮೇಲೆಯೇ ನೆಟ್ಟಿತ್ತು. "ಗ್ರೀಕ್ ಸಾಮ್ರಾಜ್ಯದ ಆಧಾರಶಿಲ್ಪಿಗಳೇ, ಇಂದು ನಮ್ಮ ಮಧ್ಯದಿಂದ ನಮ್ಮೆಲ್ಲರ ಪ್ರೀತಿಗೆ ಪಾತ್ರರಾದ, ನಮಗಾಗಿ ಮತ್ತು ನಮ್ಮ ಮುಂದಿನ ಪೀಳಿಗೆಗಾಗಿ ಬಹು ದೊಡ್ಡ ಸಾಮ್ರಾಜ್ಯವನ್ನು ಸಂಪಾದಿಸಿ ಕೊಟ್ಟ ನಮ್ಮ ಮಹಾನಾಯಕರು ಇಲ್ಲವಾಗಿದ್ದಾರೆ. ಅವರು ಗಳಿಸಿಕೊಟ್ಟ ಸಂಪತ್ತನ್ನು ಕಾಪಾಡಿಕೊಳ್ಳುವುದೇ ಬಹು ದೊಡ್ಡ ಸಮಸ್ಯೆಯಾಗಿದೆ. ಈಗ ಮಹಾದಂಡನಾಯಕರಾದ ಪೆರಾಡಿಕಸ್ ಅವರು ನಮಗೆ ನಮ್ಮ ಮೇಲಿರುವ ಗುರುತರವಾದ ಹೊಣೆಯ ಅರಿವನ್ನು ಮೂಡಿಸಿದ್ದಾರೆ. ಆದರೆ ಅವರು ತಮ್ಮ ಮಾತಿನಲ್ಲಿ ಇನ್ನೊಂದು ಪ್ರಮುಖ ವಿಷಯವನ್ನು ತಿಳಿದೋ ಅಥವಾ ತಿಳಿಯದೆಯೋ ನಿಮ್ಮಿಂದ ಮರೆಮಾಚಿದ್ದಾರೆ. ಅದು ಏಕಾಗಿರಬಹುದೆಂದು ನನಗೆ ಅರ್ಥವಾಗುತ್ತಿಲ್ಲ. ಸೂಸಾದಲ್ಲಿರುವಾಗ ನಿಮಗೆಲ್ಲರಿಗೂ ತಿಳಿದಂತೆ ಶಾಹ ಡೇರಿಯಸ್ ಅವರ ತೃತೀಯ ಪುತ್ರಿಯಾದ ಸ್ಟಾತೆರಾಳನ್ನು ಸಿಕಂದರ್ ವಿವಾಹ ಮಾಡಿಕೊಂಡ.

"ಈಗ ಸ್ಟಾತೆರಾಳ ಗರ್ಭದಲ್ಲಿ ಸಿಕಂದರನ ವಂಶದ ಕುಡಿ ಬೆಳೆಯುತ್ತಿದೆ. ಸಿಕಂದರ್ ಅವರು ಜೀವಿಸಿದ್ದರೆ ಈ ಇಬ್ಬರು ರಾಣಿಯರ ಈರ್ವರೂ ಮಕ್ಕಳಿಗೆ ತಮ್ಮ ತಮ್ಮ ಬಲವನ್ನು ಪ್ರದರ್ಶಿಸಲು ಹಾಗೂ ಅರ್ಹತೆಯನ್ನು ಜನರಿಗೆ ಮನದಟ್ಟು ಮಾಡಿಕೊಡುವ ಅವಕಾಶವನ್ನೀಯುತ್ತಿದ್ದರು. ಆದರೆ ಏನು ಮಾಡುವುದು... ಉತ್ತರಾಧಿಕಾರಿ ಯಾರಾಗಬೇಕು...?"

ಪೆರಾಡಿಕಸ್ ಅವಡುಗಚ್ಚಿದ; ಪರೋಕ್ಷವಾಗಿ ತನ್ನನ್ನೇ ಈ ಸಾಮ್ರಾಜ್ಯದ ಸಂರಕ್ಷಕನನ್ನಾಗಿ ಆರಿಸಲಿ ಎನ್ನುವ ಬಯಕೆಯನ್ನು ಸಭಿಕರ ಮುಂದೆ ಮಂಡಿಸಿಯಾಗಿತ್ತು. ಆದರೆ ಈಗ ಉತ್ತರಾಧಿಕಾರಿಯ ಪ್ರಶ್ನೆಯನ್ನು ನೌಕಾಧಿಪತಿ ನಿಯಾರ್ಕಸ್ ಸಭೆಯ ಮುಂದೆ ತಂದಿದ್ದನು.

ಸಭಿಕರು ಸಣ್ಣ ಸಣ್ಣ ಗುಂಪುಗಳಲ್ಲಿ ಚರ್ಚೆಗೆ ತೊಡಗಿದರು. ನೀರಾಡುವ ಕಣ್ಣುಗಳಿಂದ ಟಾಲೆಮಿ ಉತ್ತರಾಧಿಕಾರಿಯ ಬಗ್ಗೆ ಹಾಗೂ ಸಂರಕ್ಷಕರಾಗುವ ಸ್ವಾರ್ಥದಿಂದ ಜನ ನಡೆಸುತ್ತಿದ್ದ ಷಡ್ಯಂತ್ರಗಳನ್ನು ನೋಡುತ್ತಿದ್ದ. ಮನ ಮಮ್ಮಲ ಮರುಗಿತು. ತಿಳುವಳಿಕೆಯಿಲ್ಲದ, ಅಸೆಬುರುಕರಾದ ಈ ಜನರ ಮಧ್ಯೆ ಇರುವುದಕ್ಕೆ ಆತನಿಗೆ ಹೇಸಿಗೆಯಾಯಿತು. ಇಜಿಪ್ತಿಗೆ ಹೋಗಬೇಕೆನ್ನಿಸಿತು.

ಪಾರಸೀಕರ ಕೈಯಿಂದ ಇಜಿಪ್ತನ್ನು ಬಿಡಿಸಿದಾಗ ಟಾಲೆಮಿ ಕೂಡ ಸಿಕಂದರನ ಜೊತೆಯಿದ್ದ. ಅಲ್ಲಿಯ ವಾತಾವರಣ ಬಹು ಅಹ್ಲಾದಕರವಾಗಿತ್ತು. ಟಾಲೆಮಿ ವೇದಿಕೆಯ ಮೇಲೆ ಹೋಗಿ ಅಶ್ರುಪೂರಿತ ಕಣ್ಣುಗಳಿಂದ ಸಭಿಕರನ್ನು ನೋಡುತ್ತಾ ಭಾರವಾದ ಹೃದಯದಿಂದ "ರಾಜಮಂಡಲ ರಚಿಸಿ ಆಡಳಿತ ನಡೆಸಿದರೆ ಅಧಿಕಾರ ಯಾರದೇ ಕೈಯಲ್ಲಿ ಕೇಂದ್ರಿಕೃತವಾಗುವುದಿಲ್ಲ" ಎಂಬ ತನ್ನ ವಿಚಾರ ಹೇಳಿದ.

ಆಡಳಿತದ ಹೆಸರಿನಲ್ಲಿ ದರ್ಪ ನಡೆಸುವ ಇಚ್ಛೆಯಿರುವ ಪ್ರಮುಖ ಜನರು ಈ ಮಾತುಗಳನ್ನು ಕಿವಿಗೆ ಹಾಕಿಕೊಳ್ಳಲಿಲ್ಲ.

ಸಭಿಕರ ಮಧ್ಯದಿಂದ ಮಿಲೇಗರ್ ಎದ್ದು ವೇದಿಕೆಯ ಮುಂದೆ ಬಂದು ಒದರಿದ: "ಇವರಿಗೆ ಸಿಕಂದರನ ಮುದ್ರೆಯುಂಗರವನ್ನು ಕೊಟ್ಟುಬಿಡಿ! ಇವರು ಕೂಡ ಸಿಕಂದರನ, ಇನ್ನೂ ಭೂಮಿಗೆ ಬಾರದ ಉತ್ತರಾಧಿಕಾರಿಯ ಸಂರಕ್ಷಕನ ರೂಪದಲ್ಲಿ ಕೆಲವು ದಿನ ಮೋಜು ಮಾಡಲಿ!"

ಆಗಿನ ಪರಿಸ್ಥಿತಿಯ ಲಾಭ ಪಡೆಯುವವರ ವಿಷಯದಲ್ಲಿ ಮಿಲೇಗರ್ ವಾಸ್ತವಿಕವಾಗಿ ಸತ್ಯವನ್ನೇ ನುಡಿದಿದ್ದ. ಸಭಿಕರು ಮತ್ತೆ ಸಮಸ್ಯೆಯಲ್ಲಿ ಸಿಲುಕಿದರು. ಪೆರಾಡಿಕಸ್ ಹೇಳಿದಂತೆ ತಾವು ಸಂರಕ್ಷಕರಾಗಬಯಸುವುದು ಯಾರಿಗಾಗಿ? ಎಲ್ಲಿವೆ ಆ ಹಸುಳೆಗಳು!? ಅವು ಗಂಡೋ ಹೆಣ್ಣೋ ಕೂಡ ಗೊತ್ತಿಲ್ಲ!!!

ಮಿಲೇಗರನ ಕಣ್ಣಲ್ಲಿ ವ್ಯಂಗ್ಯವಿದ್ದುದನ್ನು ಪೆರಾಡಿಕಸ್ ಗಮನಿಸದಿರಲಿಲ್ಲ.

ಪೆರಾಡಿಕಸ್ ಮತ್ತು ಮಿಲೇಗರ್ ಇಬ್ಬರೂ ಸಹಪಾಠಿಗಳು, ಬಾಲ್ಯ ಸ್ನೇಹಿತರು. ಅಲ್ಲದೆ ಇಬ್ಬರೂ ಸಿಕಂದರನ ಸೈನ್ಯದಲ್ಲಿ ಒಂದೇ ದಿನ ಯೋಧರಾಗಿ ಸೇರಿಕೊಂಡವರು. ಆದರೆ ಈ ನಡುವೆ ಪೆರಾಡಿಕಸ್ ಬಹಳ ಮುಂದೆ ನಡೆದಿದ್ದ. ಸಿಕಂದರನ ವಿಶ್ವಾಸಕ್ಕೆ ಪಾತ್ರನಾಗಿ ಆಪ್ತನೆನಿಸಿದ್ದ. ಆತ ತನ್ನ ಧೂರ್ತತನದಿಂದ ಸಾಕಷ್ಟು ಜನರನ್ನು ತುಳಿದು ಮೇಲೇರಿ ಬಂದಿದ್ದ.

"ನಾವು ಅರಿಡಾವೋಸರವರನ್ನು ಮರೆಯಬಾರದು. ಅವರು ಸಿಕಂದರನ ಮಲತಮ್ಮ ಎನ್ನುವ ವಿಷಯ ನಿಮ್ಮೆಲ್ಲರಿಗೂ ತಿಳಿದ ಸಂಗತಿ. ನಾವು ಅವರನ್ನೇ ನಾಯಕರನ್ನಾಗಿ ಆರಿಸಿ, ಮೆಸಿಡೋನಿಯಾ ಸಾಮ್ರಾಜ್ಯದ ಸಿಂಹಾಸನದ ಅಧಿಕಾರ ಸೂತ್ರಗಳನ್ನು ಕೊಡುವುದು ಸೂಕ್ತ"- ಮಿಲೇಗರ್ ತನ್ನ ವಾದ ಮಂಡಿಸಿದ.

ಅರಿಡಾವೋಸ್ ಹುಡುಗನಾಗಿದ್ದಾಗ ತಲೆಗೆ ಪೆಟ್ಟು ಬಿದ್ದು ಅರೆಹುಚ್ಚನಾಗಿದ್ದ. ಒಮ್ಮೊಮ್ಮೆ ಆತನ ಹುಚ್ಚುತನ ಅತಿರೇಕವಾಗುತ್ತಿತ್ತು. ಸಿಕಂದರ್ ತನ್ನ ಈ ಹುಚ್ಚ ತಮ್ಮನನ್ನು ಬಹಳ ಮಮತೆಯಿಂದ ನೋಡಿಕೊಳ್ಳುತ್ತಿದ್ದ. ತನ್ನ ಸಂಗಡ ರಣರಂಗಕ್ಕೆ ಕೂಡ ಕರೆದುಕೊಂಡು ಹೋಗುತ್ತಿದ್ದ ಅರಿಡಾವೋಸನ ರೂಪದಲ್ಲಿ ತನ್ನ ತಂದೆಯನ್ನು ಕಾಣುತ್ತಿದ್ದ.

ಸಿಕಂದರನು ಎಲ್ಲಿದ್ದಾನೆ, ಏನು ಮಾಡುತ್ತಿದ್ದಾನೆ ಎನ್ನುವ ಅರಿವೇ ಇರಲಿಲ್ಲ ಅರಿಡಾವೋಸನಿಗೆ. ತನ್ನ ನಿವಾಸದ ಕಿಟಕಿಯಿಂದ ಜನ ಓಡಾಡುವುದನ್ನು ನೋಡುತ್ತಾ ಹೊತ್ತು ಕಳೆಯುತ್ತಿದ್ದ. ವಿವಿಧ ನಮೂನೆಯ ಕಲ್ಲುಗಳನ್ನು ಸಂಗ್ರಹಿಸಿ ಅವುಗಳೊಡನೆ ಆಡುತ್ತಿದ್ದ. ಆಗಾಗ ಬಣ್ಣಬಣ್ಣದ ಕಲ್ಲುಗಳನ್ನು ನೋಡುವುದರಲ್ಲಿ ತನ್ಮಯನಾಗುತ್ತಿದ್ದ.

"ಸಮ್ರಾಟರೆ! ನಿಮ್ಮನ್ನು ಸಿಕಂದರನ ಉತ್ತರಾಧಿಕಾರಿಯೆಂದು ಜನತೆ ತೀರ್ಮಾನಿಸಿದೆ. ಸಾಮ್ರಾಜ್ಯದ ಅಧಿಕಾರಿಗಳು, ಪ್ರಜೆಗಳು ನಿಮ್ಮ ದರ್ಶನಕ್ಕೆ ಕಾದಿದ್ದಾರೆ. ತಾವು ದಯಮಾಡಿಸಬೇಕು."-ಮಿಲೇಗರ್ ಅತಿ ವಿನಯದಿಂದ ಅರಿಡಾವೋಸನನ್ನು ಸ್ವಾಗತಿಸಿದ.

ಅರಿಡಾವೋಸ್ ಮಿಲೇಗರನನ್ನು ನೋಡುತ್ತಾ ಹೇಳಿದ: "ಸಮ್ರಾಟರೆಂದರೆ ನಮ್ಮ ಅಣ್ಣ ಸಿಕಂದರ್ ಮಾತ್ರ. ನಾನಲ್ಲ! ಅಲ್ಲವೇ ಅಲ್ಲ!!"

ಅರಿಡಾವೋಸನ ಕಣ್ಣಲ್ಲಿ ಭಯವಿತ್ತು. ಈ ಮಾತನ್ನಾತ ಅಂಜುತ್ತಲೇ ಹೇಳಿದ್ದ. ಆದರೆ ಮಿಲೇಗರ್ ಅರಿಡಾವೋಸನನ್ನು ರಾಜನನ್ನಾಗಿಸಿ ಅವನ ಸಂರಕ್ಷಕನ ಹೆಸರಿನಲ್ಲಿ ತಾನು ಅಧಿಕಾರ ಸೂತ್ರಗಳನ್ನು ಪಡೆದುಕೊಳ್ಳುವ ಬಗ್ಗೆ ಸಂಚು ನಡೆಸಿಯಾಗಿತ್ತು.

ಮಿಲೇಗರ್ ಬಹಳ ಚುರುಕುತನದಿಂದ ಕಾರ್ಯ ಸಾಧಿಸಿದ. ಜನತೆ ಇನ್ನೂ ವಿಚಾರ ವಿಮರ್ಶೆಯಲ್ಲಿ ಮುಳುಗಿರುವಾಗಲೇ ಆತ ಅರಿಡಾವೋಸನೊಡನೆ ಸಭಾಂಗಣ ಪ್ರವೇಶಿಸಿದ.

ಅರಿಡಾವೋಸನನ್ನು ಹೆಚ್ಚಿನ ಜನತೆ ಏಕೆ, ಆಡಳಿತದ ಉನ್ನತಾಧಿಕಾರಿಗಳು ಕೂಡ ನೋಡಿರಲಿಲ್ಲ.

ಇಲ್ಲಿ ಅರಿಡಾವೋಸನ ಭವ್ಯ ನಿಲುವು ಮತ್ತು ಸಿಕಂದರನ ತಂದೆ ಫಿಲಿಪ್ಪನಂತೆಯೇ ಇರುವ ಮುಖ ಸಾಕಷ್ಟು ಕೆಲಸ ಮಾಡಿದವು. ಬಹಳ ದಿನಗಳ ಹಿಂದೆ ಮೆಸಿಡೋನಿಯಾವನ್ನು ತೊರೆದ ಗ್ರೀಕ್ ಸೈನಿಕರಿಗೆ ತಮ್ಮ ರಾಜ ಫಿಲಿಪ್ಪನ ನೆನಪು ಮರುಕಳಿಸಿದವು. ಆನಂದಾತಿರೇಕದಲ್ಲಿ ...

ಘೋಷ ತಂತಾನೆ ಹೊರಟಿತು. "ಫಿಲಿಪ್, ಫಿಲಿಪ್!"

ಜನತೆಯ ಭಾವೋದ್ರೇಕದ ಮನಸ್ಥಿತಿಯ ಸಂಪೂರ್ಣ ಲಾಭ ಪಡೆದ ಮಿಲೇಗರ್ ಘೋಷಿಸಿದ: "ಮೆಸಿಡೋನಿಯಾದ ಯೋಧರೇ, ಇವರೇ ನಮ್ಮ ಹಿಂದಿನ ಮಹಾರಾಜ ಫಿಲಿಪ್ ಅವರ ಪುತ್ರ ಮತ್ತು ಮರೆಯಲಾಗದ ಯುಗಪುರುಷ ಸಿಕಂದರನ ತಮ್ಮಂದಿರಾದ ಅರಿಡಾವೋಸ್. ಇವರೇ ನಮ್ಮ ನೂತನ ಮಹಾರಾಜರು."

ಮಿಲೇಗರ್ ಮತ್ತು ಆತನ ಸಂಗಡಿಗರು ಅರಿಡಾವೋಸನನ್ನು ಬ್ಯಾಬಿಲೋನ್ ಸಾಮ್ರಾಜ್ಯದ ಪ್ರಾಚೀನ ಸಿಂಹಾಸನದ ಮೇಲೆ ಕೂರಿಸಿ, ಅವನ ಮೈಮೇಲೆ ಸಿಕಂದರ ವಿಶಿಷ್ಟ ಸಮಾರಂಭಗಳಲ್ಲಿ ಧರಿಸುತ್ತಿದ್ದ ಉತ್ತರೀಯವನ್ನು ಹೊದಿಸಿ ಜಯಘೋಷ ಮಾಡಿದರು.

ಆದರೆ ಆಡಳಿತಾಧಿಕಾರದ ಪ್ರಶ್ನೆ ಸರಳವಾಗಿರಲಿಲ್ಲ.

ಸೇನೆಯಲ್ಲಿ ಸ್ಪಷ್ಟವಾಗಿ ಎರಡು ವಿಭಿನ್ನ ನಿಲುವಿನ ಗುಂಪುಗಳು ಕಾಣಿಸಿದವು. ಕೆಲ ಜನ ಸಾಮಂತರು ಒರೆಯಿಂದ ಖಡ್ಗ ಹಿರಿದು ಸಿಂಹಾಸನದತ್ತ ಧಾವಿಸಿದರು. ಮಿಲೇಗರ್ ಅರಿಡಾವೋಸನನ್ನು ಎಳೆದುಕೊಂಡು ಓಡಿಹೋದ. ಪ್ರತಿಭಟನೆ ಪ್ರಾರಂಭವಾಗಿತ್ತು. ಪೆರ್ಡಿಕಸನನ್ನು ಸುಲಭದಲ್ಲಿ ಸೋಲಿಸುವುದು ಅಥವಾ ಸಮಾಧಾನಪಡಿಸುವುದು ಕಠಿಣ ಎನ್ನುವುದು ಮಿಲೇಗರನಿಗೆ ಗೊತ್ತಿತ್ತು.

ಅರಿಡಾವೋಸನ ನಿವಾಸ ಸೇರಿದ ಮಿಲೇಗರ್ ಪೆರ್ಡಿಕಸನನ್ನು ಸೆರೆಹಿಡಿಯುವ ಬಗ್ಗೆ ಆಜ್ಞಾಪತ್ರದ ಮೇಲೆ ಅರಿಡಾವೋಸನ ಸಹಿ ಮಾಡಿಸಿಕೊಂಡ. ಆದರೆ ಪೆರ್ಡಿಕಸನನ್ನು ಬಂಧಿಸುವುದು ಮಿಲೇಗರನ ಸೈನಿಕರಿಂದ ಸಾಧ್ಯವಾಗಲಿಲ್ಲ.

ಅರಿಡಾವೋಸನನ್ನು 'ಫಿಲಿಪ್' ಎಂದೇ ಹೊಸದಾಗಿ ನಾಮಕರಣ ಮಾಡಿ, ಸೈನಿಕರ ಭಾವನೆಗಳನ್ನು ಸೆಳೆದುಕೊಂಡ ಮಿಲೇಗರ್ ಆಡಳಿತಸೂತ್ರಗಳನ್ನು ಹಿಡಿದುಕೊಳ್ಳಲು ಪೂರ್ಣ ಶಕ್ತಿಯಿಂದ ಹವಣಿಸತೊಡಗಿದ.

ಮಿಲೇಗರನ ಕಾರ್ಯಪದ್ಧತಿ ಮತ್ತು ವ್ಯಕ್ತಿತ್ವಗಳ ಪರಿಪೂರ್ಣ ತಿಳುವಳಿಕೆಯಿದ್ದ ಪೆರ್ಡಿಕಸ್ ಈ ನಡುವೆ ಬ್ಯಾಬಿಲೋನ್ ನಗರದ ಆಯಕಟ್ಟಿನ ಸ್ಥಳಗಳಲ್ಲೆಲ್ಲ ತನ್ನ ನೆಚ್ಚಿನ ಸೈನಿಕರನ್ನು ಪಹರೆ ಮಾಡಲು ಹಚ್ಚಿದ. ಕೆಲವು ಜನ ಸಾಮಂತರೊಡನೆ ಕೂಡಿಕೊಂಡು ಮಿಲೇಗರನ ಮೇಲೇರಿ ಹೋದ. ಅಂತಃಕಲಹ ಈಗ ಗೃಹಯುದ್ಧದ ರೂಪ ತಾಳಿತು.

ಈ ನಡುವೆ ಕೆಲವು ಜನ, ಗೃಹಯುದ್ಧ ನಡೆಯಬಾರದೆನ್ನುವ ದೃಷ್ಟಿಯಿಂದ ಎರಡೂ ಪಕ್ಷಗಳ ನಡುವೆ ಸಂಧಿಮಾಡಿಸಲು ಪ್ರಯತ್ನಿಸಿ ಸಫಲರಾದರು.

ಗ್ರೀಕ ಸೈನಿಕರೆಲ್ಲ ನಗರವನ್ನು ತ್ಯಜಿಸಿ ಹೊರಗಿನ ಮೈದಾನದಲ್ಲಿ ಶಿಬಿರ ಹೂಡಬೇಕು. ಹಿರಿಯ ರಾಜಕಾರಣಿಗಳೂ ಉನ್ನತಾಧಿಕಾರಿಗಳೂ ಸಾಮಂತರೂ ಸೇರಿ ಸರ್ವಸಮ್ಮತವಾದ ಅಧಿಪನನ್ನು ಆರಿಸಿ, ಸಾಮ್ರಾಜ್ಯದ ಭವ್ಯ ಪರಂಪರೆಯನ್ನುಳಿಸಲು ಪ್ರಯತ್ನಿಸಬೇಕು. ಅಲ್ಲಿಯವರೆಗೆ ಸೈನಿಕರು ನಗರ ಪ್ರವೇಶ ಮಾಡಬಾರದು ಎಂದೀಗ ಒಪ್ಪಿಕೊಳ್ಳಲಾಯಿತು.

ಹಿರಿಯರ ಆದೇಶದಂತೆ ಸೈನ್ಯವೆಲ್ಲಾ ನಗರವನ್ನು ಬಿಟ್ಟು ದೂರ ಹೊರಗಿನ ಮೈದಾನದಲ್ಲಿ ತಳವೂರಿತು.

ಪೆರ್ಡಿಕಸ್ ತಕ್ಷಶಿಲೆಯ ರಾಜ ಅಂಭಿಯವರು, ಸಿಕಂದರನಿಗೆ ಬಳುವಳಿಯಾಗಿ ಕೊಟ್ಟಿದ್ದ ಆನೆಗಳನ್ನು ಅಲಂಕರಿಸಿದ. ಮತ್ತು ಈ ಆನೆಗಳನ್ನು ಮಿಲೇಗರನ ಸಂಗಡಿಗ ಸೈನಿಕರು ಬೀಡುಬಿಟ್ಟಿದ್ದ ಸ್ಥಳವನ್ನು ಮುತ್ತಿ ಬಿಟ್ಟ. ಸೈನಿಕರು ಓಡದಂತೆ ಆನೆಗಳಿಂದ ತುಳಿಸಿ. ಸ್ವಲ್ಪವೇ ಕಾಲದಲ್ಲಿ ನೋಡುನೋಡುವಷ್ಟರಲ್ಲಿ ಮಿಲೇಗರನ ಸೈನ್ಯವೆಲ್ಲಾ ನಿರ್ನಾಮವಾಗಿಬಿಟ್ಟಿತು. ಮಿಲೇಗರ್ ಜೀವ ಉಳಿಸಿಕೊಳ್ಳಲು ಓಡಿಹೋಗಿ ದೇವಾಲಯವೊಂದರಲ್ಲಿ ಅಡಗಿಕೊಂಡ. ಆದರೆ ಪೆರ್ಡಿಕಸ್ ಮಿಲೇಗರನನ್ನು ಹಿಡಿದು ತರಿಸಿ, ನಿರ್ದಯವಾಗಿ ಚಿತ್ರಹಿಂಸೆ ಕೊಟ್ಟು ಕೊಲ್ಲಿಸಿದ.

★ ★ ★

ಈ ದಿನವೇ ಸಿಕಂದರನಿಂದ ಬಂದ ಪತ್ರವು ಸೂಸಾ ನಗರದಲ್ಲಿದ್ದ ಆತನ ಪತ್ನಿ ಸ್ಟಾತೆರಾಳ ಕೈ ಸೇರಿತು: "ನಾನು ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದೇನೆ. ಜನ ನಾನು ಸತ್ತಿರುವೆನೆಂದು ಹೇಳುತ್ತಾರೆ, ಹೇಳಬಹುದು. ನೀನು ಯಾವುದೇ ಗಾಳಿ ಮಾತನ್ನು ನಂಬದೇ ಅತಿ ಶೀಘ್ರ ಬರಬೇಕು."

ಸ್ಟಾತೇರಾ ತನ್ನ ತಂಗಿಯೊಡನೆ ಬಾಬಿಲೋನಿಗೆ ಪ್ರಯಾಣಿಸಿದಳು. ತನ್ನ ಇನಿಯನನ್ನು ಕಾಣುವ ಸಂಭ್ರಮ. ಜೊತೆಗೆ ತಾನು ಗರ್ಭದಲ್ಲಿ ಧರಿಸಿರುವ ಸಿಕಂದರನ ವಂಶದ ಕುಡಿಯ ಬಗ್ಗೆ ಆತನಿಗೆ ಹೇಳಲು ನಾಚಿಗೆಯೆನಿಸುತ್ತಿತ್ತು. 'ನಾನೇ ಸ್ವತಃ ಹೇಳಲೋ ಅಥವಾ ಇದನ್ನು ನನ್ನ ತಂಗಿ ಸಿಕಂದರನಿಗೆ ತಿಳಿಸಿದರೆ ಸರಿಯೇ' ಎನ್ನುವುದನ್ನೇ ಮೆಲುಕು ಹಾಕುತ್ತಾ ಸ್ಟಾತೆರಾ ಸಾಗಿದಳು.

ದಾರಿಯಲ್ಲಿ ಗುಡ್ಡ, ನದಿ ಹಾಗೂ ಹಳ್ಳಕೊಳ್ಳಗಳಿರುವ ದುರ್ಗಮ ಪ್ರದೇಶದಲ್ಲಿ ಪ್ರಯಾಣಿಸುವ ಸ್ಟಾತೆರಾಳ ಮನದಲ್ಲಿ ಏನೇನೊ ಭಾವನೆಗಳು.

ಹಾದಿಯಲ್ಲಿ ಒಂದು ಕಡೆ ರಾತ್ರಿ ಕಾಲದಲ್ಲಿ ಶಿಬಿರ ಹೂಡಿದರು. ಬೆಂಗಾವಲಾಗಿ ಸುಸಾದಿಂದಲೇ ಪ್ರಯಾಣಿಸಿದ್ದ ಸೈನ್ಯಾಧಿಕಾರಿ ಸ್ಟಾತೆರಾಳಿಗೆ ಹೇಳಿದ "ಬ್ಯಾಬಿಲೋನ್‌ನಲ್ಲಿ ಚಕ್ರವರ್ತಿಯ ದೇಹವಸಾನವಾಗಿದೆ ಎಂದು ಹಾಲು ಮಾರುವವರು ಮಾತನಾಡುತ್ತಿದ್ದರು" ಎಂದು. ಆದರೆ ಸ್ಟಾತೆರಾಳಿಗೆ ಸಿಕಂದರನ ಪತ್ರದಲ್ಲಿ ಒಕ್ಕಣಿಸಲಾದ, ಅಕ್ಷರಗಳಲ್ಲದೇ ಬೇರೇನೂ ಕಾಣುತ್ತಿರಲಿಲ್ಲ.

ಬ್ಯಾಬಿಲೋನ್ ನಗರದಲ್ಲಿಯೇ ಬೆಳೆದು ದೊಡ್ಡವಳಾಗಿದ್ದ ಸ್ಟಾತೆರಾಳಿಗೆ ಅದು ಹತ್ತಿರವಾದಂತೆಲ್ಲಾ ಹಳೆಯ ನೆನಪುಗಳು ಮರುಕಳಿಸತೊಡಗಿದವು.

ಅದೇ ರಾಜಭವನ, ಅದೇ ಅಂತಃಪುರ, ಉದ್ಯಾನವನಗಳು, ತಾನು ಸಖಿಯರೊಡನೆ ಆಟವಾಡುತ್ತಿದ್ದ ತಾವುಗಳು ಏನೆಲ್ಲಾ...!

ಬ್ಯಾಬಿಲೋನ್ ಮುಟ್ಟಿದ ಸ್ಟಾತೆರಾಳ ತಲೆಯ ಮೇಲೆ ಬೆಟ್ಟವೇ ಮಗುಚಿ ಬಿದ್ದಿತ್ತು. ಎಷ್ಟೊಂದು ಬದಲಾವಣೆ! ನಿಶ್ಶಬ್ದವಾದ ನಗರ, ಮುಖದಲ್ಲಿ ಕಳೆಯಿಲ್ಲದ ಜನತೆ. ಹಾಲು ಮಾರುವವರು ಆಡಿದ ಮಾತೆ ನಿಜವೇನೋ ಅನ್ನಿಸಿತು.

ಡೇರಿಯುಸನ ಮುದ್ದಿನ ಮಗಳಾಗಿ ಯಾವುದೇ ಚಿಂತೆಯಿಲ್ಲದೆ ಬೆಳೆದ ಬಾಲೆ...! ಡೇರಿಯಸ್ ಈಗಿಲ್ಲ... ಸೂಸಾದಲ್ಲಿ ವಿವಾಹ. ಕೈ ಹಿಡಿದ ಪತಿ ಸಿಕಂದರ್!... ಅವನೂ ಕಾಲವಶ!... ಮುಂದಿನ ಗತಿ? ತಲೆ ಗಿರುಗುಟ್ಟಿತು.

ಅಂದಿನ ರಾತ್ರಿ ಇಬ್ಬರೂ ಅಕ್ಕ-ತಂಗಿಯರು, ಹೊಟ್ಟೆಯಲ್ಲಿ ಅಸಹ್ಯ ನೋವು ಎಂದು ಗೋಳಾಡಿದರು. ಹಾಸಿಗೆ ತುಂಬಾ ಹೊರಳಾಡಿದರು. ಸಮಾಚಾರ ತಿಳಿದು ಪೆರಾಡಿಕಸ್ ಧಾವಿಸಿ ಬಂದು ನೋಡಿದ್ದ. ಹೊಟ್ಟೆ ಹಿಡಿದುಕೊಂಡು ಅಸ್ತವ್ಯಸ್ತವಾಗಿ ಬಿದ್ದುಕೊಂಡಿದ್ದ ಅಕ್ಕ ತಂಗಿಯರ ಜೋಡಿ-ಜೀವ ಇಲ್ಲದ ದೇಹಗಳು ಮಾತ್ರ!

ಕತ್ತಲಿನಲ್ಲಿ ರುಕ್‌ಸಾನಳ ಕಣ್ಣುಗಳು ಮಿನುಗುತ್ತಿದ್ದವು. ಸಿಕಂದರನ ಹೆಸರಿನಲ್ಲಿ ಪತ್ರ ಬರೆದು ಕಳುಹಿಸಿದ್ದಳು. ಪೈಶಾಚಿಕ ಸಂಭ್ರಮದಲ್ಲಿ ಓಲಾಡುತ್ತಿದ್ದಳು. ಮುಂದೆ?

ಪೆರಾಡಿಕಸ್ ದ್ವಂದ್ವದಲ್ಲಿ ಸಿಲುಕಿದ. ಏನು ಮಾಡುವುದು?

ಉತ್ತರಾಧಿಕಾರಿಯ ಪ್ರಶ್ನೆ ಬಗೆಹರಿಸಲು ಬೇರೆ ದಾರಿ ಇರಲಿಲ್ಲ. ರುಕ್‌ಸಾನಾ ಸಮಾಧಾನ ಹೇಳಿದಳು. "ಸಿಕಂದರನಿಗೆ ಈಗ ಒಬ್ಬನೇ ಪುತ್ರ, ಏಕಮೇವ ಉತ್ತರಾಧಿಕಾರಿ! ಸಾಮ್ರಾಜ್ಯದ ಅಂತಃಕಲಹ ನೀಗಲು ಪ್ರಯತ್ನಿಸಿದೆ. ಸ್ಟಾತೆರಾ ಮರಣಾವಸ್ಥೆಯಲ್ಲಿ ಪ್ರಸವಿಸುವ ನಾಲ್ಕು ತಿಂಗಳಿನ ಭ್ರೂಣವನ್ನು ಕೂಡ ಕತ್ತರಿಸಿ ಹಾಕಿದೆ. ಸಿಕಂದರ್ ಗಳಿಸಿದ ಸಾಮ್ರಾಜ್ಯ ಅಂತಃಕಲಹದಲ್ಲಿ ಸಿಲುಕಿ ಛಿದ್ರವಿಚ್ಛಿದ್ರವಾಗಿ ಹೋಗುವುದನ್ನು ತಪ್ಪಿಸಿದ್ದೇನೆ."

ಪೆರಾಡಿಕಸ್ ಶವಗಳನ್ನು ರಾಜಭವನದ ಹಾಳು ಬಾವಿಯೊಂದರಲ್ಲಿ ಹಾಕಿಸಿ, ರಾಜಭವನದಲ್ಲಿ ಏನೂ ನಡೆದಿರಲ್ಲವೇನೋ ಎನ್ನುವಂತೆ ನೋಡಿಕೊಂಡ.

[illegible] ಉತ್ತರಾಧಿಕಾರಿಯಾಗಬೇಕಾದ [illegible] [illegible] ಭವ್ಯ[illegible] ಆ ಭವ್ಯವಾದ [illegible] ಘಟ್ಟ [illegible]ಗೆ ಮುಗಿಯಿತು.

ಇನ್ನು ಎರಡನೆಯ ಘಟ್ಟ ಪ್ರಾರಂಭ.

[illegible] ಕಾಲವಶವಾದ [illegible]. [illegible] ಶೋಕದಲ್ಲಿ ಮುಳುಗಿತು.

[illegible] ರೀಜೆಂಟ್ [illegible] ಪೆರಾಡಿಕಸನಿಗೆ [illegible] [illegible] ಮರಗಿಸಿದ ಸಮಾಚಾರವನ್ನು [illegible] ಸಿಕಂದರನ ತಂಗಿ [illegible] ಕ್ಲಿಯೋಪಾತ್ರಳ ಮುಂದೆ [illegible]. [illegible] ಈ [illegible] ಉಸುರಿದಳು.

[illegible] ಅಜೇಯ [illegible]. ಮಹತ್ವಾಕಾಂಕ್ಷೆ [illegible] ಸಮಾಚಾರಗಳನ್ನೆ ಇದುವರೆಗೆ ಕೇಳಿ ಹರ್ಷಿಸುತ್ತಿದ್ದ ತಾಯಿಗೆ ಒಮ್ಮೆಂದೊಮ್ಮೆಲೇ ಸಿಕಂದರ್ [illegible] ನಂಬಲು ಆಗಲಿಲ್ಲ.

[illegible] ಸಾವರಿಸಿಕೊಂಡು, ಬ್ಯಾಬಿಲೋನ್‌ನಲ್ಲಿರುವ ಪೆರಾಡಿಕಸನಿಗೆ ಉತ್ತರಾಧಿಕಾರಿಯ ಬಗೆಗೆ ಪತ್ರ ಬರೆಯಿಸಿದಳು. ಪೆರಾಡಿಕಸನಿಗೆ ಪತ್ರ ಶೀಘ್ರವೇ ತಲುಪುವಂತೆ ಕಳುಹಿಸಿ. [illegible] ಕ್ಲಿಯೋಪಾತ್ರ ತಾನೇ ಅಲ್ಲಿಗೆ ಧಾವಿಸಿದಳು.

ಇಂದಿನವರೆಗೆ ಮೆಸಿಡೋನಿಯಾದ ಸಿಂಹಾಸನವನ್ನು ಯಾವ ಮಹಿಳೆಯೂ ಏರಿರಲಿಲ್ಲ. ಆದರೆ ಈಗಿನ ಪರಿಸ್ಥಿತಿಯೇ ಬೇರೆಯಾಗಿತ್ತು....

★ ★ ★

ಮೆಸಿಡೋನಿಯಾದಿಂದ ಕೆಲ ಮೈಲುಗಳ ಅಂತರದಲ್ಲಿರುವ ಭವ್ಯ ಮನೆಯೊಂದರಲ್ಲಿ ವಾಸವಾಗಿದ್ದ ಕಯಿನ್ನಾ ಕೂಡ ಕ್ಲಿಯೋಪಾತ್ರಳಂತೆ ಫಿಲಿಪ್ಪನ ಮಗಳು. ಒಬ್ಬ ಸಾಮಾನ್ಯ ಸ್ತ್ರೀಯಿಂದ ಫಿಲಿಪ್ಪನಿಗೆ ಜನಿಸಿದವಳು. ಕಯಿನ್ನಾಳ ಪತಿ ಅಮಿಂಟಾಸನನ್ನು ರಾಜದ್ರೋಹಿಯೆಂದು ಸಿಕಂದರ್ ಕೊಲ್ಲಿಸಿದ. ಅಮಿಂಟಾಸನ ಮೇಲೆ ಸಿಕಂದರನ ತಂದೆ ಫಿಲಿಪ್ಪನನ್ನು ಹತ್ಯೆ ಮಾಡಿದ ಆರೋಪ ಹೊರಿಸಲಾಗಿತ್ತು.

ನಂತರ ಕಯಿನ್ನಾಳನ್ನು ಸಮಾಧಾನಪಡಿಸಲು ಸಿಕಂದರನು ತನ್ನ ಅರೆಹುಚ್ಚ ಮಲತಮ್ಮ ಅರಿಡಾಯ್ಗೋಸನಿಗೆ ಕಯಿನ್ನಾಳ ಮಗಳು ಯೂರಿಡಾಯಿಕಳನ್ನು ತಂದುಕೊಂಡು ವಿವಾಹ ನಿಶ್ಚಯದ ಸಮಾರಂಭ ಮಾಡಿದ್ದ.

ಯೂರಿಡಾಯಿಕಳಿಗೆ ಅರಿಡಾಯ್ಗೋಸನನ್ನು ಕಂಡರೆ ಜಿಗುಪ್ಸೆ. ಸಿಕ್ಕಂದರನಿದ್ದಾಗ [illegible] ಯೂರಿಡಾಯಿಕ್ ಅರೆಹುಚ್ಚನೊಂದಿಗೆ ವಿವಾಹ ಮಾಡಿಕೊಳ್ಳುವುದು ಸಾಧ್ಯವಿರಲಿಲ್ಲ.

ಆದರೆ ಇಂದಿನ ಪರಿಸ್ಥಿತಿ?....

ಅರೆಹುಚ್ಚ ಅರಿಡಾಯ್ಗೋಸನನ್ನು ಸಿಕಂದರನ ಉತ್ತರಾಧಿಕಾರಿಯೆಂದು ನಿರ್ಧರಿಸಲಾಗಿತ್ತು. [illegible] ಈ ಸಂದರ್ಭವನ್ನು ಉಪಯೋಗಿಸಿಕೊಳ್ಳಲು [illegible] ಮರೆಮಾಚುವರೇ ಏನು!...

ಈಗ ಅರೆಹುಚ್ಚನನ್ನು ವಿವಾಹವಾಗುವುದು [illegible] ಕಯಿನ್ನಾ [illegible] ಬಿಂಬಿಸತೊಡಗಿದ್ದಳು.

ಅಧಿಕಾರದ [illegible] ಬಗೆಗೆ [illegible] ಅರಿಡಾಯ್ಗೋಸನ [illegible] ಫಿಲಿಪ್ಪನನ್ನೇ [illegible] [illegible] ಮಗಳನ್ನು ಮದುವೆಗೆ [illegible] ಅರಿಡಾಯ್ಗೋಸನ [illegible] ಸಿಕಂದರನಿಗೆ

ಸ್ವಸ್ಥನೂ, ಸುಂದರನೂ ಆಗಿದ್ದ. ಏಪಾಯ! ಒಲಿಂಪಿಯಾಸ್ ತನ್ನ ಮಗ ಸಿಕಂದರನ ಪ್ರತಿಸ್ಪರ್ಧಿಯಾಗಬಾರದೆಂದು ಅರಿಡಾವ್ಹೋಸನಿಗೆ ಮದ್ದು ಹಾಕಿದ ಸಂಗತಿ! ಬೇರಾರೋ ಅರಿಡಾವ್ಹೋಸನನ್ನು ಮುಂದೆ ಮಾಡಿಕೊಂಡು ತನ್ನ ಹಾದಿಗೆ ಕಂಟಕವಾಗಬಾರದೆಂದು ಸಿಕಂದರ ಅತನನ್ನು ಮಗುವಿನಂತೆ ಜೋಪಾನ ಮಾಡುತ್ತಿದ್ದ ಕಥೆ- ಇನ್ನೇನೋ ರಾಜ ರಹಸ್ಯಗಳನ್ನು ಮಗಳಿಗೆ ಹೇಳಿ ಯೂರಿಡಾಯಿಕಳನ್ನು ಮದುವೆಗೆ ಒಪ್ಪಿಸಿದಳು.

ಯೂರಿಡಾಯಿಕಳ ಮನಸ್ಸಿನಲ್ಲಿ ಮಹತ್ವಾಕಾಂಕ್ಷೆಯು ಚಿಗುರು ಹಾರತೊಡಗಿತು.

ಅರೆಹುಚ್ಚ ಅರಿಡಾವ್ಹೋಸನ ರಾಣಿಯ ಸೋಗಿನಲ್ಲಿ ಸಿಕಂದರ್ ಗಳಿಸಿದ ಸಾಮ್ರಾಜ್ಯದ ನಿರಂಕುಶಾಧಿಕಾರಿಣಿ ಏಕಾಗಬಾರದು?

ಅಧಿಕಾರದ ಲಾಲಸೆ ಅಧಿಕವಾಗಿ ತಾಯಿ ಮಗಳು ಕೂಡಿಕೊಂಡು ಕೆಲವು ಜನರ ಬೆಂಗಾವಲಿನಲ್ಲಿ ಬ್ಯಾಬಿಲೋನ್ ದಾರಿ ಹಿಡಿದರು.

ತಾವು ಹೋಗುತ್ತಿರುವ ಉದ್ದೇಶ ಮತ್ತು ನಡೆಯುವ ಹಾದಿ ಯಾರಿಗೂ ಗೊತ್ತಾಗಬಾರದೆಂದು ಅತಿ ಎಚ್ಚರಿಕೆಯಿಂದ ಇಬ್ಬರೂ ಪುರುಷ ವೇಷ ಧರಿಸಿದ್ದರು.

ಆದರೇನು? ಪೆರಾಡಿಕಸನ ಮಾವ ಎಂಟಿಪೆತ್ರೋಸನ ಹದ್ದಿನ ಕಣ್ಣುಗಳು ಎಲ್ಲ ಪತ್ತೆ ಹಚ್ಚಿ ಯಾಗಿತ್ತಲ್ಲದೆ ಪೆರಾಡಿಕಸನಿಗೆ ಈ ಬಗ್ಗೆ ಸೂಚನೆಯನ್ನು ಕಳಿಸಿಯೂ ಆಗಿತ್ತು.

ಪೆರಾಡಿಕಸ್ ದೂರದೃಷ್ಟಿಯ ಚತುರ ರಾಜಕಾರಣಿ.

ಬ್ಯಾಬಿಲೋನ್ ಸಮೀಪಿಸುತ್ತಿರುವಾಗ, ಕಯಿನ್ನಾಳ ಮೇಲೆ ಯಾರೋ ದಾಳಿ ಮಾಡಿದರು.

ನಡೆದ ಕಿರು ಕಾಳಗದಲ್ಲಿ ಕಯಿನ್ನಾ ಹೋರಾಡುತ್ತಾ ವೀರ ಮರಣವನ್ನಪ್ಪಿದಳು. ಯೂರಿಡಾಯಿಕ್ ಪರಿಸ್ಥಿತಿಯನ್ನರಿತು ತಾನು ಅರಿಡಾವ್ಹೋಸನ ಭಾವೀ ಪತ್ನಿಯೆನ್ನುವ ಸಂಗತಿ ಬಯಲು ಮಾಡಿದಳು. ರಾಜಾ ಫಿಲಿಪ್ಪ(ಅರಿಡಾವ್ಹೋಸ)ನ ಭಾವೀ ಪತ್ನಿಯೆನ್ನುವ ಸಂಗತಿಯನ್ನು ತಿಳಿದು ದಾಳಿ ಮಾಡಿದ ಸೈನಿಕರು ನಮ್ರರಾಗಿ, ಅತ್ಯಂತ ಗೌರವದಿಂದ ಯೂರಿಡಾಯಿಕಳನ್ನು ನಗರಕ್ಕೆ ಕರೆತಂದರು.

ಒಬ್ಬ ಸೈನಿಕ ಮುಂದೆ ಹೋಗಿ ರಾಜಾ ಫಿಲಿಪ್ಪನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಬಂದ. ಬ್ಯಾಬಿಲೋನ್ ನಗರದ ಮಹಾದ್ವಾರದಲ್ಲಿ ಅತಿ ಸಂಭ್ರಮದಿಂದ ಸ್ವಾಗತಿಸಿ, ಭಾವೀ ರಾಜ ರಾಣಿಯರನ್ನು ಮೆರವಣಿಗೆಯಲ್ಲಿ ಕರೆತರಲಾಯಿತು.

ಮೆರವಣಿಗೆ ನಡೆದುಬರುವುದನ್ನು ಮಂತ್ರಾಲೋಚನೆಯಲ್ಲಿ ತೊಡಗಿದ್ದ ಪೆರಾಡಿಕಸ ಮತ್ತು ಕ್ಲಿಯೋಪಾತ್ರ ಆಶ್ಚರ್ಯದಿಂದ ವೀಕ್ಷಿಸಿದರು. ತಮ್ಮ ಯೋಜನೆಯನ್ನು ಮಣ್ಣುಗೂಡಿಸಿದ ಮೆರವಣಿಗೆಯ ಬಳಿ, ಕೆರಳಿ ಕೆಂಡವಾಗಿ ಧಾವಿಸಿದ ಪೆರಾಡಿಕಸ್.

ರಥ ಸಮೀಪಿಸುತ್ತಿದ್ದಂತೆ ಹಬ್ಬದ ವಾತಾವರಣವನ್ನು ಗಮನಿಸಿದ ಪೆರಾಡಿಕಸ್ ಪರಿಸ್ಥಿತಿಗೆ ಒಗ್ಗಿಕೊಳ್ಳುವುದರಲ್ಲಿಯೇ ತನ್ನ ಹಿತವಡಗಿದೆ ಎಂಬುದನ್ನು ಕಂಡುಕೊಂಡ.

ಮಿಲೇಗರನನ್ನು ಕೊಲ್ಲಿಸಿಯಾಗಿತ್ತು....

ಆದರೆ ಮಿಲೇಗರ್ ತನ್ನ ಬೇಳೆ ಬೇಯಿಸಿಕೊಳ್ಳಲು ಅರೆಹುಚ್ಚ ಅರಿಡಾವ್ಹೋಸನನ್ನು ರಾಜನನ್ನಾಗಿಸಿದ್ದ ಮಾತು ಬೇರು ಬಿಟ್ಟಿತ್ತು.

ಮಿಲೇಗರನ ಹಿಂಬಾಲಕರನ್ನೂ ಕ್ರೂರವಾಗಿ ಕೊಲ್ಲಿಸಲಾಗಿತ್ತು. ಆದರೆ ಸಾಮ್ರಾಜ್ಯದ ಬಹಳಷ್ಟು ಸಾಮಂತರೂ ಸೇನಾಪಡೆಯ ವರಿಷ್ಠರೂ ಆದಷ್ಟು ಮಟ್ಟಿಗೆ ಗೃಹಯುದ್ಧವನ್ನು ತಪ್ಪಿಸಲು ಅರಿಡಾವ್ಹೋಸನನ್ನು ಮುಂದೆ ಮಾಡಿಕೊಳ್ಳಲು ಸಮ್ಮತಿಸಿದಂತೆಯೇ ಆಗಿತ್ತು.

ಯೂರಿಡಾಯಿಕ್ ಮತ್ತು ಫಿಲಿಪ್ಪನ ವಿವಾಹವನ್ನು ಸರಳವಾಗಿ ಸಾಂಪ್ರದಾಯಿಕ ರೀತಿಯಲ್ಲಿ ನೆರವೇರಿಸಲಾಯಿತು.

ಸಿಕಂದರ್ ಮೆಸಿಡೋನಿಯಾದ ಸೈನಿಕರ ಇಷ್ಟಮೂರ್ತಿಯಾಗಿದ್ದ. ಸೈನಿಕರ ಸ್ವಾಮಿನಿಷ್ಠೆಯ ಕೇಂದ್ರವಾಗಿದ್ದ.

. ಈಗ ಸೈನಿಕರ ಸ್ವಾಮಿಭಕ್ತಿಯ ಕೇಂದ್ರಬಿಂದುವಾಗುವ ಸಾಮರ್ಥ್ಯ ಅರಿಡಾಯೋಸ(ಫಿಲಿಪ್)ನಿಗೆ ಮಾತ್ರ ಇತ್ತು.

ಪೆರ್ಡಿಕಸ್ ಏನೂ ಮಾಡುವಂತಿರಲಿಲ್ಲ. ಈಗ ಅರಿಡಾಯೋಸನನ್ನು ಅವಲಂಬಿಸದೇ ವಿಧಿಯಿಲ್ಲ.

ಯೂರಿಡಾಯಿಕ್ ಚಿಕ್ಕಂದಿನಿಂದ ರಾಜಪರಿವಾರದಲ್ಲಿದ್ದು ಸಾಕಷ್ಟು ರಾಜಕೀಯ ಚದುರಂಗದಾಟದಲಿ ಪಳಗಿದಳು.

★ ★ ★

ಟಾಲೆಮಿಯನ್ನು ಉತ್ತರಾಧಿಕಾರದ ತಮುಲದಿಂದ ದೂರವಿರಿಸಲು ಆತ ಇಚ್ಛಿಸಿದಂತೆ ಇಜಿಪ್ತ್ ದೇಶದ ರಾಜ್ಯಪಾಲನನ್ನಾಗಿ ನಿಯಮಿಸಿ ಕಳಿಸಿಬಿಟ್ಟಿದ್ದ ಪೆರ್ಡಿಕಸ್.

ಆದರೆ ಅಲ್ಲಿಗೆ ಹೋಗುವ ಮೊದಲು ಟಾಲೆಮಿ ಸಿಕಂದರನ ವಿಶ್ವಾಸಪಾತ್ರನಾದ ಆತ್ಮೀಯ ಸೇವಕ ಬಾಗೋವಾಸನನ್ನು ಭೇಟಿಯಾಗಿದ್ದ.

ಟಾಲೆಮಿ ಹೇಳಿದ, ತೀರಿಹೋದ ರಾಜನನ್ನು ಆತನ ಉತ್ತರಾಧಿಕಾರಿಯೇ ಸಮಾಧಿ ಮಾಡುವ ಪರಂಪರೆ ಮಸಿಡೋನಿಯಾದಲ್ಲಿ ಪ್ರಾಚೀನ ಕಾಲದಿಂದಲೂ ಪ್ರಚಲಿತವಿದೆ. ಸಿಕಂದರ್ ಜೀವಂತವಾಗಿರುವಾಗಲೇ ತನ್ನ ಸಮಾಧಿ ಸಿಕಂದರಿಯಾದಲ್ಲಿ ಆಗಬೇಕೆಂದು ನಿರ್ಧರಿಸಿಬಿಟ್ಟಿದ್ದ. ಯಾವ ಸ್ಥಾನದಲ್ಲಿ ಆಗಬೇಕು, ಎಂಬುದನ್ನು ಗುರುತು ಮಾಡಲಾಗಿತ್ತು.

"ಸಿಕಂದರನ ಶವವನ್ನು ಮೆಸಿಡೋನಿಯಾಕ್ಕೆ ತೆಗೆದುಕೊಂಡು ಹೋದರೆ, ಗೃಹಯುದ್ಧ ನಡೆದು ಸಾಮ್ರಾಜ್ಯ ಛಿದ್ರವಿಚ್ಛಿದ್ರವಾಗುವುದಲ್ಲದೆ ಸಿಕಂದರನ ಶವಕ್ಕೆ ಕೂಡ ಧಕ್ಕೆಯಾಗುವ ಸಂಭವವನ್ನು ಅಲ್ಲಗಳೆಯುವಂತಿಲ್ಲ. ಸಿಕಂದರನ ಶವವನ್ನು ಮೆಸಿಡೋನಿಯಾಕ್ಕೆ ತೆಗೆದುಕೊಂಡು ಹೋಗುವ ಸಂಭವ ಘಟಿಸಿದರೆ, ಅದನ್ನು ಶೀಘ್ರ ನನಗೆ ಸೂಚನೆ ನೀಡಬೇಕು. ಉಳಿದುದನ್ನು ನಾನು ನೋಡಿಕೊಳ್ಳುತ್ತೇನೆ" ಎಂದು ಟಾಲೆಮಿ ಬಾಗೋವಾಸನಿಗೆ ಹೇಳಿದ.

ಸಿಕಂದರನ ಶವವನ್ನು ಮೆಸಿಡೋನಿಯಾಕ್ಕೆ ತಲುಪಿಸುವ ವ್ಯವಸ್ಥೆ ಮಾಡಲಾಯಿತು.

ಟಾಲೆಮಿ ನಡುದಾರಿಯಿಂದ ಸಿಕಂದರನ ಶವಪೆಟ್ಟಿಗೆಯನ್ನು ವಶಪಡಿಸಿಕೊಂಡು ಸಿಕಂದರಿಯಾಕ್ಕೆ ಮಿಂಚಿನ ಗತಿಯಲ್ಲಿ ಕಳುಹಿಸಿದ.

ಪೆರ್ಡಿಕಸನ ಯೋಜನೆಗಳು ಮಣ್ಣುಗೂಡಿದವು. ಫಿಲಿಪ್ ಮತ್ತು ಯೂರಿಡಾಯಿಕರನ್ನು ಜೊತೆಗೆ ಕರೆದುಕೊಂಡು ಪೆರ್ಡಿಕಸ್ ಇಜಿಪ್ತಿನ ಮೇಲೆ ದಾಳಿ ಮಾಡಿದ.

ರಾಜರಾಣಿಯರನ್ನು ಯುದ್ಧರಂಗಕ್ಕೆ ಕರೆದೊಯ್ಯುವ ವಿಷಯದಲ್ಲಿ ಪೆರ್ಡಿಕಸ್ ಎರಡು ವಿಧವಾಗಿ ಯೋಚಿಸಿದ. ಮೊದಲನೆಯದಾಗಿ, ರಾಜರಾಣಿಯರ ಮುಂದಿನ ಸ್ಥಿತಿ. ಅದು [illegible] ಸೈನಿಕರನ್ನು ಒಂದುಗೂಡಿಸುವ ಮತ್ತು ಸ್ಫೂರ್ತಿ ಕೊಡುವ ವಿಷಯವಾಗಿತ್ತಂದೇ. ಸಾಮ್ರಾಜ್ಯವನ್ನು ಬಲಗೊಳಿಸುವ ಸಲುವಾಗಿ ಕಾದಾಡುತ್ತಿದ್ದೇವೆ ಎನ್ನುವ ಭಾವನೆಯನ್ನು ಸೈನಿಕರಲ್ಲಿ ತುಂಬುತ್ತದೆ. ಎರಡನೆಯದಾಗಿ, ತಾನಿಲ್ಲದಿರುವ ವೇಳೆಯಲ್ಲಿ ಈ ಅರೆಹುಚ್ಚ ರಾಜನನ್ನು ಇತರರು ತಮ್ಮ ಕೈಗೊಂಬೆಯನ್ನಾಗಿಸಿಕೊಳ್ಳಬಹುದೆನ್ನುವ ಅಂಜಿಕೆ!

ಟಾಲೆಮಿಗೆ ಪೆರ್ಡಿಕಸನ ರಚನೆ, ಹಾಗೂ ಅವನು ಯಾವ ದಿಕ್ಕಿನಲ್ಲಿ ಯಾವ [illegible] ಮಾಡುವನೆಂಬುದು ತಿಳಿಯುತ್ತಿತ್ತು. ಅಲ್ಲದೆ ಪೆರ್ಡಿಕಸನ ವ್ಯಕ್ತಿತ್ವ, ಆತನ ಸ್ವಭಾವದ ಪರಿಪೂರ್ಣ ಪರಿಚಯ ಅವನಿಗಿತ್ತು.

ಟಾಲೆಮಿ ಸಿಕಂದರಿಯಾದಲ್ಲಿ ಜಗದ್ವಿಖ್ಯಾತನ ಸಮಾಧಿ ಮಾಡಿಸಿ [illegible] ಸಾಧನಗಳಲ್ಲಿ. ವಿಶ್ವಾಸಪಾತ್ರರಾದ [illegible] ಸಾಮ್ರಾಜ್ಯದ ಅಧಿಕಾರಸೂತ್ರ ಹಿಡಿಯಲು ಪೆರ್ಡಿಕಸ್ [illegible] ಉತ್ತರಾಧಿಕಾರಿಯಾಗುವುದು [illegible]

ಗಳನ್ನು ಸೈನಿಕರ ಮುಂದಾತ ವಿವರಿಸಿ, ತಾನು ನಡೆಸುತ್ತಿರುವ ಪ್ರಾಮಾಣಿಕ ಪ್ರಯತ್ನಗಳನ್ನು ಬಿಂಬಿಸಿದ.

ಯೂರಿಡಾಯಿಕ್ ಮೊದಲು ತಾನು ಅರೆಹುಚ್ಚನನ್ನು ವಿವಾಹವಾಗುವುದಿಲ್ಲವೆಂದು ಹೇಳಿದ್ದರೂ, ಈಗ ಅಧಿಕಾರ ಪಡೆಯಬಹುದೆನ್ನುವ ಸ್ವಾರ್ಥದಿಂದಲೇ ಮೆಸಿಡೋನಿಯಾದಿಂದ ತರಾತುರಿಯಾಗಿ ಬಂದು, ಅರಿಡಾವೋಸನನ್ನು ಸದ್ದುಗದ್ದಲವಿಲ್ಲದೆ ವಿವಾಹವಾದದ್ದು ಈಗ ಬಹಿರಂಗವಾಗಿತ್ತು. ಅವಳ ಉಚ್ಛಂಖಲ ನಿಲುವಿಗೆ ಕಡಿವಾಣ ಹಾಕಲು ರಾಜಮಂಡಲ ರಚಿಸಿ, ಆಡಳಿತವನ್ನೊಪ್ಪಿಸಬೇಕು. ಇಲ್ಲವೆ ಹಾಲಿ ಮತ್ತು ಭಾವೀ ಉತ್ತರಾಧಿಕಾರಿಗಳಿಗೆ ಸಂರಕ್ಷಕರನ್ನು ನಿಯಮಿಸಿ, ಅಧಿಕಾರ ಹಂಚಬೇಕೆಂದು ಟಾಲೆಮಿ ವಾದಿಸಿದ. ಅವನ ಈ ಪ್ರಾಮಾಣಿಕ ನಿಲುವಿನಿಂದ ಪ್ರೇರಣೆಗೊಂಡ ಸೈನಿಕರು ಪೆರಾಡಿಕಸ್ ಮತ್ತು ಯುರಿಡಾಯಿಕ್‌ರ ಸ್ವಾರ್ಥದಿಂದ ಕುಪಿತರಾದರು.

ಯುದ್ಧ ಸನ್ನದ್ಧನಾಗಿ ಬಂದ ಪೆರಾಡಿಕಸ್ ರಾಜರಾಣಿಯರನ್ನು ಶಿಬಿರದಲ್ಲಿ ಬಿಟ್ಟು ಸ್ವತಃ ಯುದ್ಧರಂಗದ ನೇತೃತ್ವ ವಹಿಸಿ, ಟಾಲೆಮಿಯ ಮೇಲೆ ಏರಿಹೋದ. ಶಿಬಿರದಲ್ಲಿ ಕಾಲ ಕಳೆಯದೇ ಯೂರಿಡಾಯಿಕ್ ಪುರುಷ ವೇಷಧರಿಸಿ ಸೈನಿಕರಲ್ಲಿ ಉತ್ಸಾಹ ತುಂಬಲು ರಣರಂಗದಲ್ಲೆಲ್ಲಾ ಸುತ್ತಾಡಿದಳು.

ನೈತಿಕ ಬಲದಿಂದ ಉತ್ಸಾಹಿತರಾಗಿದ್ದ ಟಾಲೆಮಿಯ ಸೈನಿಕರು ಭೀಕರವಾಗಿ ಹೋರಾಡುತ್ತಾ ಮೊದಲ ಏಟಿನಲ್ಲಿಯೇ ಪೆರಾಡಿಕಸನ ಸೈನ್ಯವನ್ನು ಸೋಲಿಸಿದರು. ನಾಚಿಕೆಯಿಲ್ಲದೆ ರಣರಂಗದಿಂದ ಪೆರಾಡಿಕಸ್ ಓಡಿಹೋದ.

ಪೆರಾಡಿಕಸ್‌ನ ವರ್ತನೆಯಿಂದ ರೋಸಿ ಉಳಿದುಳಿದ ಸೈನಿಕರು, ಅಧಿಕಾರಿಗಳು ಬೆನ್ನಟ್ಟಿ ಅವನನ್ನು ಕತ್ತರಿಸಿ ಹಾಕಿದರು.

ಟಾಲೆಮಿ ವಿಜಯ ಮಾಲೆ ಧರಿಸಿ ಸಿಂಹಾಸನಕ್ಕಾಗಿ ಆಸೆ ಪಡದೇ ಇಬ್ಬರು ವಿಶ್ವಾಸಪಾತ್ರರಾದ ಹಿರಿಯ ಸೇನಾಧಿಕಾರಿಗಳನ್ನು ಸಾಮ್ರಾಜ್ಯದ ಹಾಗೂ ಹಾಲಿ ಮತ್ತು ಭಾವೀ ಸಾಮ್ರಾಟರ ಸಂರಕ್ಷಕರೆಂದು ನಿಯಮಿಸಿ ಅವರನ್ನು ರಾಜರಾಣಿಯರ ಜೊತೆಗೆ ಬ್ಯಾಬಿಲೋನಿಗೆ ಕಳುಹಿಸಿಕೊಟ್ಟ.

★ ★ ★

ಯೂರಿಡಾಯಿಕ್ ಎದೆಗುಂದಲಿಲ್ಲ. ಬದಲು ಆಕೆಯ ಮಹತ್ವಾಕಾಂಕ್ಷೆ ಬೆಳೆಯುತ್ತಲೇ ಇತ್ತು. ಅಧಿಕಾರಲಾಲಸೆ, ಸ್ವಾರ್ಥ ಪರವಶತೆಗಳಿಂದಾಗಿ ಫಿಲಿಪ್ಪನ ಜೊತೆ ಕೂಡಿ ಬಾಳಲೇ ಬೇಕಾದ ಅನಿವಾರ್ಯ ಪರಿಸ್ಥಿತಿಯನ್ನು ಸಹಿಸಲೇಬೇಕಾಗಿತ್ತು.

ಸೈನಿಕರ ಪ್ರೀತಿ ಗಳಿಸಲು ಆಕೆ ಆಗಾಗ್ಗೆ ಫಿಲಿಪ್ಪನನ್ನು ಕರೆದುಕೊಂಡು ಸೈನಿಕರ ಮಧ್ಯೆ ಅವರ ಸುಖ-ದುಃಖ ವಿಚಾರಿಸುತ್ತಾ ಕಾಲ ಕಳೆಯುತ್ತಿದ್ದಳು. ಆಕೆ ಹೇಳಿಕೊಟ್ಟ ಹಾಗೆಯೇ "ನಿಮ್ಮ ಸ್ವಾಮಿಭಕ್ತಿ ಮತ್ತು ಸಾಮ್ರಾಜ್ಯದ ಮೇಲಿರುವ ನಿಷ್ಠೆ ನಮ್ಮ ಮೇಲಿರುವ ವಿಶ್ವಾಸಕ್ಕೆ ಧನ್ಯವಾದಗಳು" ಎಂದು ಹೇಳುತ್ತಿದ್ದ ಫಿಲಿಪ್ಪನಿಗೆ ಪ್ರತಿಯಾಗಿ ಸೈನಿಕರು "ಸಮ್ರಾಟ ಫಿಲಿಪ್ಪರಿಗೆ ಜೈ" ಎಂದು ಜಯಘೋಷ ಮಾಡುತ್ತಿದ್ದರು.

ಅಂದು ಬೆಳಗಿನ ಜಾವ ಪೂರ್ವದಲ್ಲಿ ಇನ್ನೂ ಸೂರ್ಯ ಮೂಡಿರಲಿಲ್ಲ. ಆಕೆಯ ಸಂಕೇತದಂತೆ ಕಹಳೆಯನ್ನೂದಲಾಯಿತು. ಸೈನಿಕರು ಅರಮನೆಯ ಮುಂದೆ ಲಗುಬಗೆಯಿಂದ ಬಂದು ಸೇರಿದರು.

ಸಭೆಯ ಮಧ್ಯದಿಂದ ಮಾಡಿಕೊಂಡು ಫಿಲಿಪ್ ಯೂರಿಡಾಯಿಕಳೊಡನೆ ಸೈನ್ಯಾಧಿಕಾರಿಗಳ ಅಭಿವಾದನೆ ಸ್ವೀಕರಿಸುತ್ತಾ ವೇದಿಕೆಯ ಮೇಲೇರಿದ.

ಟಾಲೆಮಿಯಿಂದ ನಿಯುಕ್ತರಾಗಿದ್ದ ಸಂರಕ್ಷಕರು ಮುಂದೇನು? ಎನ್ನುವ ಭಾವದಿಂದ ಕುತೂಹಲಗೊಂಡು ಆಲಿಸುತ್ತಿದ್ದರು.

ಯೂರಿಡಾಯಿಕ್ ಮುಂದೆ ಬಂದು ಸೈನಿಕರನ್ನುದ್ದೇಶಿಸಿ ಹೇಳಿದಳು: "ಈಗ ಫಿಲಿಪ್ ಅವರು ಸಾಮ್ರಾಜ್ಯದ ಸಾರ್ವಭೌಮರಾಗಿದ್ದು ಅಪರಿಮಿತ ಪರಮಾಧಿಕಾರವನ್ನು ಪಡೆದಿದ್ದಾರೆ. ಅವರಿಗೆ

ಸಂರಕ್ಷಕರ ಅವಶ್ಯಕತೆಯಿಲ್ಲ. ತಮ್ಮ ಪ್ರಜೆಗಳ ಮತ್ತು ಅಧಿಕಾರಿಗಳ ನೇರ ಸಂಪರ್ಕ ಹೊಂದಲು ಕಾತುರರಾಗಿದ್ದಾರೆ. ತಮ್ಮ ಅಧಿಕಾರದಲ್ಲಿ ಇತರರು ಮೂಗು ತೂರಿಸುವುದನ್ನು ಇನ್ನು ಮೇಲೆ ಸಹಿಸುವುದಿಲ್ಲ" ಎನ್ನುವ ಎಚ್ಚರಿಕೆಯನ್ನೂ ಪರೋಕ್ಷವಾಗಿ ಆಕೆ ಸಂರಕ್ಷಕರಿಗೆ ನೀಡಿದಳು.

ಫಿಲಿಪ್ ಆಕೆಯ ಸೂಚನೆಯಂತೆ ತನ್ನ ಬಲಗೈಯನ್ನೆತ್ತಿ ತನ್ನ ಧೀಮಂತಿಕೆಯನ್ನು ತೋರಿಸಿದ ಜನತೆ ಜಯಘೋಷ ಮಾಡಿತು.

ಚದುರಂಗದಾಟದಲಿ ತನ್ನ ದಾಳ ಉರುಳಿಸಿದಳು ಯೂರಿಡಾಯಿಕ್.

ಈಗ ಸೈನ್ಯಾಧಿಪತಿ ರಾಜಾ ಫಿಲಿಪ್ಪರನ್ನು ಸೈನಿಕರನ್ನುದ್ದೇಶಿಸಿ ಮಾತನಾಡಲು ವಿನಂತಿಸಿಕೊಂಡ.

ಯುರಿಡಾಯಿಕಳಿಗೆ ಕಾಲ ಕೆಳಗಿನ ಭೂಮಿ ಕುಸಿದ ಅನುಭವವಾಯಿತು. ಇಂತಹ ಸಂದರ್ಭ ಒದಗಬಹುದೆನ್ನುವುದನ್ನು ಆಕೆ ಊಹಿಸಿರಲಿಲ್ಲ.

ಫಿಲಿಪ್ ಮುಂದೇನು? ಎನ್ನುವಂತೆ ರಾಣಿಯ ಕಡೆ ನೋಡಿದ. ಆಕೆ ತಲೆ ತಗ್ಗಿಸಿ ನೆಲ ನೋಡುತ್ತಿದ್ದಳು.

ಫಿಲಿಪ್ ಉತ್ಸಾಹದಿಂದ ಹೇಳತೊಡಗಿದ: "ನಿಮ್ಮ ಸ್ವಾಮಿಭಕ್ತಿ ಮತ್ತು [illegible] ತೋರುವ ನಿಷ್ಠೆ ನಮ್ಮ ಮೇಲಿರುವ ವಿಶ್ವಾಸಕ್ಕೆ ಧನ್ಯವಾದಗಳು"- ಮುಂದೆ ಏನು ಹೇಳಬೇಕೆಂದು ಹೆಂಡತಿಯ ಕಡೆ ನೋಡಿದ. ಆಕೆ ಕಾಲ ಬೆರಳಿಂದ ನೆಲ ಕೆರೆಯುತ್ತಿದ್ದಳು.

ಆತ ತನ್ನ ಭಾಷಣ ಮುಂದುವರಿಸಿದ. "ನಾನು ರಾಜನಾಗಲು ಬಯಸಿದೆ. ರಾಜನಾಗಿದ್ದೇ ಈಗ ನಾನು ಸಾಕಷ್ಟು ದೊಡ್ಡವನಾಗಿಬಿಟ್ಟಿದ್ದೇನೆ. ಸಿಕಂದರ್ ಜನರ ಮುಂದೆ [illegible] ನೆಂದು ಹೇಳುತ್ತಿದ್ದ. [illegible] ನನ್ನ ಮಾತು ಕೇಳಿದ ಜನ ಚಪ್ಪಾಳೆ ತಟ್ಟುತ್ತಾರೆ. ಸೈನಿಕರು [illegible] ಮಾಡುತ್ತಾರೆ. ಇದರ ಮೇಲೆ ನನಗೆ [illegible] ದವನೆಂದು ಹೇಗೆ ಹೇಳುತ್ತೀರಿ"

ಹಿಂದಿನಿಂದ ಯೂರಿಡಾಯಿಕ್ ಚುಚ್ಚುತ್ತಿದ್ದರೂ ಉತ್ಸಾಹದಿಂದ ತನ್ನ ಮಾತು ಮುಂದುವರಿಸಿದ. "ನನಗೆ ತಿಳಿಯದ, ಅರ್ಥವಾಗದ ಮಾತುಗಳನ್ನು ಯೂರಿಡಾಯಿಕ್ ನನಗೆ ಹೇಳಿಕೊಡ್ತಾಳೆ!... ನನಗೆ ಆಡಳಿತದಲ್ಲಿ ಸಹಾಯ ಮಾಡುವಿಯಲ್ಲವೆ ಯೂರಿಡಾಯಿಕ್?" ರಾಣಿಯ ಕಡೆ ತಿರುಗಿದ.

ಸೈನಿಕರು ಬಾಯಿ ಮುಚ್ಚಿಕೊಂಡು ನಗತೊಡಗಿದರು.

ಯೂರಿಡಾಯಿಕಳ ಪರಿಶ್ರಮವೆಲ್ಲಾ ನೀರಿನಲ್ಲಿ ಹೋಮ ಮಾಡಿದಂತಾಯಿತು.

ಈ ನಡುವೆ ರುಕ್ಸಾನಾ ಗಂಡುಮಗುವಿಗೆ ಜನ್ಮವಿತ್ತಳು. ಆಕೆಗೆ ತನ್ನ ಮಗ ದೊಡ್ಡವನಾಗುವುದನ್ನು ನಿರೀಕ್ಷಿಸುವುದರ ಹೊರತು ಬೇರೆ ದಾರಿಯಿರಲಿಲ್ಲ. ನಂಬುಗೆಯ ಬಂಟ ಪೆರಾಡಿಕಸ್ ಕೊಲೆ ಮಾಡಲ್ಪಟ್ಟಿದ್ದ. ಈಗ ಆಕೆ ಪಲ್ಲಾ ಎನ್ನುವ ಸ್ಥಳದಲ್ಲಿ ಮೆಸಿಡೋನಿಯಾದ ರೀಜೆಂಟ್ ಎಂಟಿಪತ್ರೋಸನ ಸಂರಕ್ಷಣೆಯಲ್ಲಿ ಕಾಲ ನೂಕಬೇಕಾಗಿತ್ತು.

ರುಕ್ಸಾನಾಳ ಮಗನಿಗೆ ನಾಲ್ಕನೆಯ ಸಿಕಂದರ್ ಎಂದು ನಾಮಕರಣ ಮಾಡಿ ಗ್ರೀಸ್ ಸಾಮ್ರಾಜ್ಯದ ಉತ್ತರಾಧಿಕಾರಿಯನ್ನಾಗಿಸುವವರಲ್ಲಿ ಜನತೆ ಹಾಗೂ ಸೈನ್ಯದಲ್ಲಿ ಭಿನ್ನಾಭಿಪ್ರಾಯವಿರಲಿಲ್ಲ. ಎಲ್ಲರೂ ನಾಲ್ಕನೆಯ ಸಿಕಂದರನನ್ನೇ ನಿಜವಾದ ಉತ್ತರಾಧಿಕಾರಿ ಎಂದು ಒಪ್ಪಿಕೊಂಡಿದ್ದರು.

ಈ ನಡುವೆ ಎಂಟಿಪತ್ರೋಸ್ ಮೃತನಾದ. ಆತನ ಮಗ ಕಂಸಾದ್ರೋಸನನ್ನು ಮೆಸಿಡೋನಿಯಾದ ರೀಜೆಂಟ್ ಎಂದು ತಂದೆಯ ಸ್ಥಳದಲ್ಲಿ ನಿಯಮಿಸಲಾಯಿತು.

ಕಂಸಾದ್ರೋಸ್ ಸಿಕಂದರನ ಪರಮ ವಿರೋಧಿ.

ಸಿಕಂದರನ ಕೊನೆಗಾಲದಲ್ಲಿ ಕಂಸಾದ್ರೋಸ್ ಬ್ಯಾಬಿಲೋನಿನಲ್ಲಿಯೇ ಇದ್ದ! ಅವನೇ ಸಿಕಂದರನಿಗೆ ನಿಧಾನ ವಿಷಾ ಕೊಟ್ಟಿದ್ದನೆಂದು ಜನರು ಮಾತಾಡಿಕೊಳ್ಳುತ್ತಿದ್ದರು!

ರುಕ್ಸಾನಾಳಿಗೆ ತಾನು ಕೂಡ ಅಧಿಕಾರಲಾಲಸೆಯಿಂದ ಸ್ತಾತೆರಾಳನ್ನು ಗರ್ಭಸ್ಥ ಪಿಂಡದೊಡನೆ ಕೊಲ್ಲಿಸಿದ್ದು ನೆನಪಾಯಿತು. ತನಗೂ ಇದೇ ಗತಿ ಒದಗಿದರೆ ಎಂದು ಎದೆ ಡವಗುಟ್ಟಲಾರಂಭಿಸಿತು.

ಸಾಮ್ರಾಜ್ಯದ ಸಂರಕ್ಷಕರು ಕಂಸಾದ್ರೋಸನನ್ನು ಆಡಳಿತದ ಅನುಭವ ಗಳಿಸಿಕೊಳ್ಳಲು ಉಪ ರೀಜೆಂಟ್ ಎಂದು ಕೆಲಸ ಮಾಡಲು ತಿಳಿಸಿ ಬೇರೊಬ್ಬ ಸೈನಾಧಿಕಾರಿಯನ್ನು ಮೆಸಿಡೋನಿಯಾದ ರೀಜೆಂಟ್ ಎಂದು ನಿಯಮಿಸಿದರು. ಕಂಸಾದ್ರೋಸ್ ಬೇಟೆಯ ನೆಪದಿಂದ ರಾಜಧಾನಿಯನ್ನು ತ್ಯಜಿಸಿ ತನ್ನ ಸಂಗಡಿಗರೊಡನೆ ಸಾಮ್ರಾಜ್ಯವನ್ನು ವಶಪಡಿಸಿಕೊಳ್ಳುವ ಯೋಜನೆ ಹಾಕತೊಡಗಿದ.

★ ★ ★

ಸಿಕಂದರನ ತಾಯಿ ಒಲಿಂಪಿಯಾಸಳು ರುಕ್ಸಾನಾ ಬರೆದ ಪತ್ರ ನೋಡಿದಳು. ಕಂಸಾದ್ರೋಸನ ಬಗೆಗೆ ಭಯವಿರುವುದನ್ನು ತಿಳಿಸಿದ್ದಲ್ಲದೇ ತನ್ನ ಹಾಗೂ ತನ್ನ ಮಗುವನ್ನು ರಕ್ಷಿಸಬೇಕೆಂದು ಆಕೆ ಪ್ರಾರ್ಥಿಸಿದ್ದಳು. ಅದಕ್ಕೆ ಅನುಕೂಲವಾಗುವ ಹಾಗೆ ಒಲಿಂಪಿಯಾಸ್ ಕಂಸಾದ್ರೋಸನ ಪ್ರತಿಯೊಂದು ವಿದ್ರೋಹಿ ಚಲನವಲನದ ಮೇಲೆ ಕಣ್ಣಿರಿಸಿದಳು.

ಕಂಸಾದ್ರೋಸ್ ಯೂರಿಡಾಯಿಕಳನ್ನು ಕೂಡಿಕೊಂಡರೆ, ಅವನನ್ನು ಎದುರಿಸುವುದು ಕಷ್ಟವೇ!

ಯೂರಿಡಾಯಿಕಳ ಮಹತ್ವಾಕಾಂಕ್ಷೆ...! ಸಿಂಹಾಸನ ಖಾಲಿ ಇದೆ...! ಕಂಸಾದ್ರೋಸ್ ಪಿಶಾಚಿ....! ಸೈನ್ಯದಲ್ಲಿ ಒಗ್ಗಟ್ಟಿಲ್ಲ.!!!

ಒಲಿಂಪಿಯಾಸ್ ಈ ವಿಷಮ ಪರಿಸ್ಥಿತಿಯನ್ನೆದುರಿಸುವ ಸಂಕಲ್ಪ ಮಾಡಿದಳು.

ಮೆಸಿಡೋನಿಯಾದ ರೀಜೆಂಟ್ ಕಂಸಾಟ್ರೋಸ್ ದಂಗೆಯನ್ನಡಗಿಸಲು ಹೋದ ವೇಳೆಯಲ್ಲಿ ಯೂರಿಡಾಯಿಕ್ ಸಂದರ್ಭವನ್ನುಪಯೋಗಿಸಿಕೊಂಡು ರಾಜಾ ಫಿಲಿಪ್ಪನ ಪತ್ನಿಯ ರೂಪದಲ್ಲಿ ರೀಜೆಂಟನ ಸ್ಥಾನದಲ್ಲಿ ಅಧಿಕಾರ ನಡೆಸತೊಡಗಿದಳು.

ಇದ್ದು ಒಲಿಂಪಿಯಾಸ್ ಸಹಿಸುವಂತಿರಲಿಲ್ಲ. ತನ್ನ ಮಗನ ಜೀವವನ್ನೇ ಪಣವಾಗಿಟ್ಟು, ಕಟ್ಟಿದ ಸಾಮ್ರಾಜ್ಯವನ್ನು ಸ್ವಾರ್ಥಪರ ಜನರು ರಣಹದ್ದುಗಳಂತೆ ಕಿತ್ತು ತಿನ್ನಲು ಹವಣಿಸುವುದು ಆಕೆಗೆ ಸಹ್ಯವೆನಿಸಲಿಲ್ಲ.

ರಾಜಭವನದಿಂದ ಖಡ್ಗ ಹಿರಿದು ಹೊರನಡೆದಳು ಒಲಿಂಪಿಯಾಸ್. ನೋಡನೋಡುತ್ತಿದ್ದ ಪ್ರತಿಯೇ ರೊಚ್ಚಿಗೆದ್ದ ಜನ ಆಕೆಯನ್ನು ಬೆಂಬಲಿಸಿದರು.

ಅವಳು ಪೆಲ್ಲಾ ನಗರದ ಮೇಲೆ ಪಶ್ಚಿಮ ದಿಕ್ಕಿನಿಂದ ದಾಳಿ ಮಾಡಿದಳು. ಕಸಾಂಡ್ರೋಸನ ದಂಗೆ ಹುದುಗಿಸಲು ರೀಜಂಟ್ ಸೈನ್ಯದೊಡನೆ ತೆರಳಿದ್ದರಿಂದ ಯೂರಿಡೈಸ್ ಸ್ವತಃ ತಾನೇ ಸೇನಾ ನಾಯಕತ್ವವಹಿಸಿ, ಯುದ್ಧಕ್ಷೇತ್ರಕ್ಕೆ ತೆರಳಿದಳು.

ನೋಡನೋಡುತ್ತಿದ್ದಂತೆ ಯೂರಿಡೈಸಳ ಅಧಿಕಾರದ ಸೇನೆ ಒಲಿಂಪಿಯಾಸಳಿಗೆ ಶರಣಾಯಿತು. ಯೂರಿಡೈಸಳನ್ನು ಸೆರೆಹಿಡಿಯಲಾಯಿತು.

ಪೆಲ್ಲಾದಲ್ಲಿ ವಿಜಯೋತ್ಸವಗಳು ನಡೆದವು.

ಒಲಿಂಪಿಯಾಸ್ ಸಿಂಹಾಸನದ ಮೇಲೆ ಕುಳಿತು ರಾಜದರ್ಬಾರು ನಡೆಸಿದಳು.

ಕೈ ಕಾಲುಗಳಿಗೆ ಸರಪಳಿಯಿಂದ ಬಿಗಿದು ಕರೆತಂದ ಯೂರಿಡೈಸಳನ್ನು ಅಪರಾಧಿಯ ಸ್ಥಾನದಲ್ಲಿ ನಿಲ್ಲಿಸಿ ವಿಚಾರಣೆ ನಡೆಸಲಾಯಿತು. ವಿಚಾರಣೆಯನ್ನು ಶಾಂತಳಾಗಿ ಆಲಿಸಿದ ಒಲಿಂಪಿಯಾಸ್ "ಮಹಾರಾಣಿಯನ್ನು ಆಕೆಯ ಶೃಂಗಾರ ಗೃಹಕ್ಕೆ ಕರೆದೊಯ್ಯಿರಿ" ಎಂದು ತೀರ್ಪು ನೀಡಿದಳು.

ತಿರಸ್ಕಾರದಿಂದ ನೆಲದ ಮೇಲೆ ಕ್ಯಾಕರಿಸಿ ಉಗುಳಿದಳು ಒಲಿಂಪಿಯಾಸ್.

ಒಂದು ಸಣ್ಣ ಕೋಣೆಯಲ್ಲಿ ಯಾರೋ ಅಳುತ್ತಿರುವ ಶಬ್ದ ಕೇಳಿ ಬರುತ್ತಿತ್ತು. ಅದೇ ಕೊಠಡಿಯೊಳಗೆ ಯೂರಿಡೈಸಳನ್ನು ದೂಡಿ ರಕ್ಷಕ ಭಟರು ಬಾಗಿಲು ಹಾಕಿದರು.

ಫಿಲಿಪ್ ಕೂದಲು ಕೆದರಿಕೊಳ್ಳುತ್ತಾ ಮೂಲೆಯಲ್ಲಿ ಬಿದ್ದು ಅಳುತ್ತಿದ್ದ. ಯೂರಿಡೈಸಳನ್ನು ನೋಡಿದ ಕೂಡಲೇ ಆತನ ದುಃಖದ ಕಟ್ಟೆಯೊಡೆದು ಅಳು ಹೆಚ್ಚಾಯಿತು.

ಯೂರಿಡೈಸ್ ಶಾಂತಿಹೀನ ಕಣ್ಣುಗಳಿಂದ ಫಿಲಿಪ್ಪನನ್ನು ನೋಡಿದಳು. ಆತನನ್ನು ಏನೆಂದು ಸಮಾಧಾನಪಡಿಸಬೇಕು?

ಆ ಹೊಲಸು ಕೋಣೆಯಲ್ಲಿ ತಮ್ಮ ಮಲಮೂತ್ರಗಳ ಮಧ್ಯೆಯೇ ಇರಬೇಕಾದ ಅಸಹ್ಯ ಪರಿಸ್ಥಿತಿ!

ಕಸಾಂಡ್ರೋಸ್ ಬಂದು ತಮ್ಮನ್ನು ಮುಕ್ತಗೊಳಿಸುವನೆಂಬ ಆಶೆಯೊಂದರಿಂದಲೇ ಜೀವ ಹಿಡಿದುಕೊಂಡ ಹಾಗಿತ್ತು.

ಒಂದು ದಿನ ಕಾರಾಗೃಹದ ಫಿಲಿಪ್ ಇರುವ ಕೊಠಡಿಯ ಗೋಡೆಗೆ ಯಾರೋ ಹೊರಗಿನಿಂದ ಸುರಂಗ ತೋಡುವ ಶಬ್ದ ಕೇಳಿಸಿತು.

ಪಾರಾಗುವ ಸಂದರ್ಭ ದೇವರು ತಂದುಕೊಟ್ಟನೆಂದು ಯೂರಿಡೈಸ್ ಭಾವಿಸಿದಳು.

ಆದರೆ ಸುರಂಗ ತೋಡುವವರು ಒಲಿಂಪಿಯಾಸಳಿಂದ ನಿಯುಕ್ತರಾದ ಕಟುಕರೆಂದು [illegible] ಫಿಲಿಪ್ ಅವರೊಡನೆ ಹೋರಾಡಲು ಪ್ರಯತ್ನಿಸಿದ. ಆದರೆ ಆತನನ್ನು ಹಂತಕರು [illegible] ಕತ್ತರಿಸಿ ಹಾಕಿದರು.

ಯೂರಿಡೈಸಳ ಕಡೆ ತಿರುಗಿ, "[illegible]". ಎಂದು ಒಲಿಂಪಿಯಾಸಳ [illegible]

[illegible]

[illegible]

★ ★ ★

[illegible]

ಓಲಿಂಪಿಯಾಸಳ ಲೆಕ್ಕ ತೀರಿಸಬೇಕೆಂದು ಆತ ತನ್ನ ಸೈನ್ಯವನ್ನು ಮೆಸಿಡೋನಿಯಾದ ಕಡೆ ತಿರುಗಿಸಿದ.

ಕಂಸಾದ್ರೋಸನನ್ನು ಎದುರಿಸಲು ಓಲಿಂಪಯಾಸ್ ಯುದ್ಧ ಸನ್ನಾಹ ನಡೆಸಿದಳು. ಆಯಕಟ್ಟಿನ ಸ್ಥಾನಗಳನ್ನು ಭದ್ರಪಡಿಸಿದಳು.

ಕೊಟೆಯೊಂದರಲ್ಲಿ ರಕ್ಷಣಾ ವ್ಯೂಹವನ್ನು ರಚಿಸುವಾಗ ಅಕಸ್ಮಾತ್ ಕಂಸಾದ್ರೋಸನ ಸೈನ್ಯ ಓಲಿಂಪಿಯಾಸಳ ಕೋಟೆಗೆ ಲಗ್ಗೆ ಹಾಕಿತು.

ಭದ್ರವಾದ ಕೋಟೆ!ಕೆಲ ತಿಂಗಳುಗಳೇ ಗತಿಸಿದರೂ ಕೋಟೆ ಕೈವಶವಾಗುವ ಲಕ್ಷಣ ಕಾಣಲಿಲ್ಲ.

ಆದರೆ ಈ ಹೊತ್ತಿಗೆ ಕೋಟೆಯೊಳಗಿನ ಆಹಾರದ ಸಂಗ್ರಹ ಮುಗಿದು ಹೋಗಿ ಓಲಿಂಪಿಯಾಸಳ ಸೈನ್ಯ ಹಸಿವಿನಿಂದ ಕಂಗೆಟ್ಟಿತು. ಎಷ್ಟೋ ಜನ ಕೂಳಿಲ್ಲದೆ ಸತ್ತುಹೋದರು.

ಆದರೂ ಓಲಿಂಪಿಯಾಸ್ ಕೋಟೆಯ ಬಾಗಿಲು ತೆಗೆಯಲಿಲ್ಲ. ಜನ ಕಂಗೆಟ್ಟಿತು. ಓಲಿಂಪಿಯಾಸಳ ಆಜ್ಞೆ ಮೀರಿ ಕಂಸಾದ್ರೋಸನಿಗೆ ಸೈನ್ಯ ಶರಣಾಯಿತು.

ಓಲಿಂಪಿಯಾಸ್ ಏನೂ ಮಾಡುವಂತಿರಲಿಲ್ಲ; ಪರಿಸ್ಥಿತಿ ಕೈ ಮೀರಿತ್ತು.

ಕಂಸಾದ್ರೋಸ್ ರಾಜಧಾನಿಯಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು ಕರೆದು ಓಲಿಂಪಯಾಸಳ ವಿಚಾರಣೆ ನಡೆಸಿದ.

ಪ್ರಜಾಪ್ರತಿನಿಧಿ ಸಭೆ ಒಮ್ಮತದಿಂದ ಓಲಿಂಪಿಯಾಸಳಿಗೆ ಮರಣದಂಡನೆ ವಿಧಿಸಿತು.

ಓಲಿಂಪಿಯಾಸ್ ಸಿಕಂದರನ ಜೀವನ ಚರಿತ್ರೆಯನ್ನು ಓದುತ್ತಾ ಕುಳಿತಿದ್ದಳು. ಉದ್ರಿಕ್ತ ಜನ ಆಕೆಯನ್ನು ಹೊರಗೆಳೆದು ತಂದು ಸಿಕ್ಕಾಪಟ್ಟೆ, ಎಳೆದಾಡತೊಡಗಿದರು.

"ನೀನು ನನ್ನ ಮಗನನ್ನು ಕೊಲ್ಲಿಸಿರುವೆ!... ನೀನು ನನ್ನನ್ನು ವಿಧವೆಯನ್ನಾಗಿಸಿದೆ!... ಮಾಟಗಾತಿ!... ಹಸಿವಿನಿಂದ ಸಾಯುತ್ತಿದ್ದ ನಿನ್ನವರನ್ನು ಉಳಿಸಿಕೊಳ್ಳದೇ ಮಹಲಿನಲ್ಲಿ ಮೋಜು ಮಾಡಿದ ರಾಕ್ಷಸಿ!!.... ಪಾಪಿ! ಕೊಲೆಗಡುಕಿ!!...ಯಾರಿಗಾಗಿ ...?" ಆಕೆಯನ್ನು ಎಳೆದುಕೊಂಡು ಸಮುದ್ರ ದಂಡೆಗೆ ತಂದರು. ಸಮುದ್ರ ಅಬ್ಬರದಿಂದ ಗರ್ಜಿಸುತ್ತಿತ್ತು. ಸುತ್ತಲೂ ಮುತ್ತಿದ್ದ ಜನ ಹುಚ್ಚುನಾಯಿಯನ್ನು ಕೊಲ್ಲುವಂತೆ ಕಲ್ಲಿನಿಂದ, ಅವಳನ್ನು ಗಾಸಿಗೊಳಿಸುತ್ತಿದ್ದರು. ಕಲ್ಲೇಟು ತಾಳದೆ ಓಡಿದರೆ, ಭೀಕರ ಸಮುದ್ರ ಕೊನೆಗೂ ಓಲಿಂಪಿಯಾಸಳನ್ನು ನುಂಗಿಬಿಟ್ಟಿತು.!...

ರುಕ್‌ಸಾನಾಳ ಪುತ್ರ ನಾಲ್ಮಡಿ ಸಿಕಂದರನ ಹೆಸರಿನಲ್ಲಿ, ಕಂಸಾದ್ರೋಸ್ ಎಲ್ಲಾ ಅಧಿಕಾರಿ ಗಳನ್ನು ಹಿಡಿದುಕೊಂಡಿದ್ದ. ಸಾಮ್ರಾಜ್ಯ ಛಿದ್ರ-ವಿಚ್ಛಿದ್ರವಾಗಿತ್ತು.

ಎಳೆಯ ಸಿಕಂಧರ್ ಈಗ ಬೆಳೆದು ದೊಡ್ಡವನಾಗಿದ್ದ. ತಂದೆಗಿಂತಲೂ ಎತ್ತರವಾದ ಭವ್ಯ ನಿಲುವು. ಬಂಗಾರದ ಕೂದಲ ಕಾಂತಿಯುತ ಬಲಿಷ್ಠ ಶರೀಕ. ಕುದುರೆ ಸವಾರಿ ಮಾಡಿ, ಬೆವರಿಳಿಸುತ್ತಾ ಬಂದರೆ, ರುಕ್‌ಸಾನಾ ಅವನನ್ನೇ ನೋಡುತ್ತಾ ನಿಲ್ಲುತ್ತಿದ್ದಳು. ಪದೇ ಪದೇ ಸಿಕಂದರನದೇ ನೆನಪು.

ಒಂದು ದಿನ ಕುದುರೆ ಸವಾರಿಯಿಂದ ಮಗ ಮನೆಗೆ ಬಂದಾಗ, ರುಕ್‌ಸಾನಾ ಅವನನ್ನೇ ನೋಡುತ್ತಾ ನಿಂತಿದ್ದಳು ಮೂರ್ತಿಯಂತೆ!

"ನಾನು ಯಾವಾಗಲೂ ಬಂಧನದಲ್ಲಿರುವಂತೆ ಅನುಭವವಾಗುತ್ತಿದೆ. ನಾನು ಸ್ವತಂತ್ರನಾಗಿ ಎಲ್ಲೂ ಹೋಗುವಂತಿಲ್ಲ. ಒಂಟಿಯಾಗಿ ತಿರುಗಾಡುವಂತಿಲ್ಲ. ಯಾವಾಗಲೂ ಕಂಸಾದ್ರೋಸನ ಸೈನಿಕರು ನನ್ನನ್ನು ಕಾಯುತ್ತಾ ಇರುತ್ತಾರೆ. ನಾನು ಈ ದೇಶದ ರಾಜ. ನಾನು ಸ್ವತಂತ್ರವಾಗಿ ನಡೆದುಕೊಳ್ಳಬಾರದೇ? ನನ್ನನ್ನು ಹಿಡಿದಿಡಲು ಈ ಕಂಸಾದ್ರೋಸಗೇನು ಅಧಿಕಾರ?" ತಾಯಿಯ ಮುಂದೆ ಆಕ್ಷೇಪ ಮಾಡಿದ ನಾಲ್ಮಡಿ ಸಿಕಂದರ್.

ಇದಾದ ಎರಡು ದಿನಗಳ ಮೇಲೆ ಕಂಸಾದ್ರೋಸ್ ಮಹಲಿಗೆ ಬಂದಿದ್ದ. ಆಗ ಸಿಕಂದರ್ ಅವನಿಗೆ ಇವೇ ಮಾತುಗಳನ್ನು ಹೇಳಿದ.

ಕಂಸಾದ್ರೋಸ್ ಸುಮ್ಮನೇ, ಅರ್ಥವಾದವನಂತೆ ಸಿಕಂದರನನ್ನು ನೋಡಿದ.

"ಹಾಗಾದರೆ ನೀನು ಇನ್ನು ರಾಜನೇ ಸರಿ. ಇನ್ನು ಮೇಲೆ ನಿನ್ನ ಇಚ್ಛೆಯಂತೆ ನೀನು ನಡೆಯಬಹುದು. ನಾನು ನಿನಗೆ ಒಳ್ಳೆಯದಾಗಲಿ ಎಂದು ಪ್ರಾರ್ಥಿಸುತ್ತೇನೆ. ಒಳ್ಳೆಯದು ರುಕ್‌ಸಾನಾ, ಒಳ್ಳೆಯದು...."

ಆ ದಿನ ಸಂಜೆ ನಾಲ್ಮಡಿ ಸಿಕಂದರ್ ಬಹಳ ಹೊತ್ತಿನ ಮೇಲೆ ಕುದುರೆ ಸವಾರಿ ಮಾಡಿ ಸುಸ್ತಾಗಿ ಅರಮನೆಗೆ ಬಂದ. ಮೈಯಿಂದ ಬೆವರಿಳಿಯುತ್ತಿತ್ತು. ದಾಸಿಯೊಬ್ಬಳು ಮದ್ಯದ ಪಾತ್ರೆ ಹಿಡಿದು ತಂದಳು. ರಾಜಕುಮಾರ ಗಟ ಗಟನೆ ಮಧುಪಾತ್ರೆ ಬರಿದು ಮಾಡಿದ. ಒಮ್ಮೆಲೆ ಹೊಟ್ಟೆ ಹಿಡಿದುಕೊಂಡು ನೋವಿನಿಂದ ಹೊರಳಾಡತೊಡಗಿದ.

"ನಮ್ಮನ್ನು ಉಳಿಸಿಕೋ ಪ್ರಭು" ಎಂದು ರುಕ್‌ಸಾನಾ ಚೀರಿದಳು. ಆದರೆ ಪರಿಸ್ಥಿತಿ ಕೈಮೀರಿತ್ತು.

★ ★ ★

ಕ್ರಿಸ್ತಪೂರ್ವ 286ರಲ್ಲಿ ಟಾಲೆಮಿ, ಸಿಕಂದರನ ಜೀವನ ಚರಿತ್ರೆಯನ್ನು ಬರೆದು ಮುಗಿಸಿದ್ದ. 83 ವರ್ಷ ವಯಸ್ಸಿನ ಟಾಲೆಮಿ ಇಜಿಪ್ತ್ ದೇಶವನ್ನು ತನ್ನ ಕಿರಿಯ ಮಗನಿಗೆ ಒಪ್ಪಿಸಿ ಯಾವಾಗಲೂ ಅಧ್ಯಯನ ಕೋಣೆಯಲ್ಲಿಯೇ ದಿನಗಳನ್ನು ದೂಡುತ್ತಿದ್ದ. ಈಗೀಗ ದಾರ್ಶನಿಕವಾಗಿ ಬಿಟ್ಟಿದ್ದ.

ನಾಲ್ಮಡಿ ಸಿಕಂದರನ ಮರಣದ ಸಮಾಚಾರ ತಲುಪಿದಾಗ ಸಿಕಂದರ್ ನಮ್ಮೆಲ್ಲರಿಗೆ ಜಗತ್ತನ್ನು ಗೆಲ್ಲುವ ಕಲ್ಪನೆ ನೀಡಿದ್ದ. ಗ್ರೀಕ್ ಸಾಮ್ರಾಜ್ಯವನ್ನು ಏಷಿಯಾ ಮೈನ್‌ರವರೆಗೆ ಬೆಳೆಸಿದ್ದ. ಗ್ರೀಸಿನ ಗೌರವವನ್ನು ಜಗತ್ತಿಗೆ ಹೇಳಿ ಕೊಟ್ಟಿದ್ದ. ನಾವು ನಮ್ಮ ಕಣ್ಣನ್ನು ನಮ್ಮ ಕೈಗಳಿಂದಲೇ ಕಿತ್ತುಕೊಂಡೆವು! ಎಂದುಕೊಂಡ ಟಾಲೆಮಿ.

ಆಶೆಯಿಂದ ಗಳಿಸಿದ್ದ ಸಾಮ್ರಾಜ್ಯ ಮರುಗಳಿಗೆಯಲ್ಲಿ ಮಣ್ಣು ಪಾಲಾಯಿತು. ●

ಅಂತಿಮ ಪರೀಕ್ಷೆ

ಅಮೇರಿಕದ ಪ್ರಸಿದ್ಧ ನ್ಯಾಯಾಧೀಶ ಒಲಿವರ್ ವೆಂಡೆಲ್ ಹೋಮ್ಸರು ಯಾವಾಗಲೂ ಕಲಿಯುವುದರಲ್ಲಿ ನಿರತರು. ಒಮ್ಮೆ *70ನೇ* ವಯಸ್ಸಿನಲ್ಲಿ ಪ್ಲೇಟೋನ ಗ್ರಂಥವನ್ನು ಓದುತ್ತಿದ್ದಾಗ ಅವರನ್ನು ಕಂಡ ಮಿತ್ರನೊಬ್ಬ ಕೇಳಿದ: "ಎಪ್ಪತ್ತಾದರೂ ಇನ್ನೂ ಅಧ್ಯಯನವೆ?"

ಹೋಮ್ಸ್ ಹೇಳಿದರು: "ಹೌದು, ನಾನು ಅಂತಿಮ ಪರೀಕ್ಷೆಗಾಗಿ ಕಲಿಯುತ್ತಿದ್ದೇನೆ."

Printed and published by **M.H. BELGAUMKAR** on behalf of Lokashikshana Trust at "SAMYUKTA KARNATAKA PRESS" No. 2, Residency Road, Bangalore-560 025, Phone: 579265, Hubli Phone: 64303. Managing Editor K. SHAMA RAO. Rep: Bombay: V. Satyamurthi. Phone: 5510502, Madras, S.K. Murti Phone: 414870. New Delhi: V.K. Chopra Phone: 7114785. Hyderabad: S. Shankaranarayana, Phone: 65700.

Registered with the Registrar of Newspapers for India under No. 35/3957.

KASTURI PRICE Rs 3.00 Reg No KRNG 43
Licence No L2120/wpp No 33

